# ವೈರಾಗ್ಯ ಭಾವ

ಒಬ್ಬರು ಕೇಳಿದರು.

"ಮಹರಾಜ್! ಈಗ ಆಹಾರ ತೆಗೆದುಕೊಳ್ಳುವುದನ್ನು ನಿಲ್ಲಿಸಬೇಡಿ. ಚಾತುರ್ಮಾಸವಾದ ಕೂಡಲೇ ಮುನಿ ಆರ್ಯಿಕಾದಿ ಚತುಃಸಂಘ ನಿಮ್ಮ ದರ್ಶನ ಪಡೆಯುತ್ತದೆ. ಈಗ ಅವರಾರೂ ಬರುವಂತಿಲ್ಲ." ಆಗ ಅವರಿಂದ ಬಂದ ಉತ್ತರ ವೈರಾಗ್ಯದಲ್ಲಿ ಅದ್ದಿದಂತಿತ್ತು.

"ಈ ಜೀವ ಒಂದೇ ಬಂದಿತು. ಒಂದೇ ಹೋಗುತ್ತದೆ. ಯಾರಿಗೂ ಯಾರೂ ಸಂಗಾತಿಗಳಲ್ಲ. ನಾನು ಅನ್ಯರಿಗಾಗಿ ನನ್ನನ್ನು ನಾನು ತಡೆಯಲೆ? ನಾನು ಯಾರಿಗೂ ಬರಲು ಹೇಳಲಾರೆ. ಯಾರಿಗೂ ಹೋಗಲು ಹೇಳಲಾರೆ" ಆಗ ಸಂಘಪತಿ ಗೇಂದನ್‌ಮಲ್ ಹೇಳಿದರು.

"ನಿಮ್ಮ ಶಿಷ್ಯರಂತೂ ಅವಶ್ಯ ನಿಮ್ಮ ದರ್ಶನಕ್ಕೆ ಬಂದೇ ಬರುತ್ತಾರೆ. ಆಗ ಅವರೆಂದರು "ಅವರಿಗಾಗಿ ನನ್ನಾತ್ಮನಿಗೆ ನಾನೇಕೆ ಕೇಡು ಮಾಡಿಕೊಳ್ಳಲಿ"

ಇದಾದ ನಂತರವೇ ಅವರು ಕುಂಥಲಗಿರಿ ಏರಲು ನಿಶ್ಚಯಿಸಿದರು. ಅವರಂತೂ ಯಮ ಸಲ್ಲೇಖನಾ ತೆಗೆದುಕೊಳ್ಳಲು ನಿಶ್ಚಯಿಸಿ ಬಿಟ್ಟಿದ್ದರು. ಆಗ ಭಟ್ಟಾರಕ ಜಿನಸೇನರು ಹೇಳಿದರು–"ಮಹರಾಜ್ ಇಂದು ಒಳ್ಳೆಯ ದಿನವಲ್ಲ. ಇಂದು ಅಮವಾಸ್ಯೆ" "ಮಹಾವೀರ ಭಗವಾನರು ಮೋಕ್ಷಕ್ಕೆ ಹೋಗಿದ್ದು ಅಮವಾಸ್ಯೆಯ ದಿನವೇ ಅಲ್ಲವೇ? ಅದರಲ್ಲೇನಿದೆ? ಭವಿಷ್ಯ ಅಲಂಘನೀಯ". ಅವರಿಗೆ ಮಹಾವೀರ ಭಗವಾನರಲ್ಲಿ ಅತೀವ ಭಕ್ತಿ ಇತ್ತು. ಸಮಾಧಿ ಸ್ವೀಕರಿಸಲು ಮನಸ್ಸು ತವಕಿಸುತ್ತಿತ್ತು. ವೈರಾಗ್ಯ ಸಿಂಧು ಅವರ ಹೃದಯದಲ್ಲಿ ಘೋರ್ಗರೆದು ಹರಿಯುತ್ತಿತ್ತು. ಮಹಾವೀರರು ಇಂದು ನಮ್ಮೊಡನೆ ಇಲ್ಲದಿದ್ದರೇನು, ಅವರ ವಾಣಿ ನಮ್ಮೊಡನೆ ಇದೆ. ಅದು ಒಳ್ಳೆಯ ಪ್ರೇರಣೆ ಕೊಡುತ್ತಿದೆ ಎಂದು ಹೇಳುತ್ತಿದ್ದರು.

# ಪ್ರಾಯಶ್ಚಿತ್ತ

ಒಮ್ಮೆ ಅವರು ಬಾರಾಮತಿಯಲ್ಲಿದ್ದರು. ಒಬ್ಬ ಮಹಿಳೆಯ ಬಹಳ ಬೆಲೆ ಬಾಳುವ ನತ್ತು ಮಾಯವಾಗಿತ್ತು. ಅಲ್ಲಿ ಇಲ್ಲಿ ಹುಡುಕಾಟ ಪ್ರಾರಂಭವಾಯಿತು. ಯಾರ ಯಾರ ಮೇಲೋ ಶಂಕೆ ಮೂಡತೊಡಗಿತು. ಸಾವಧಾನಪೂರ್ವಕ ಹುಡುಕಿದ ಮೇಲೆ ಆ ನತ್ತು ಅವಳ ಬಳಿಯೇ ಇದ್ದುದು ಕಂಡು ಬಂತು.

ಈ ವಿಚಾರ ಅವರಿಗೆ ತಿಳಿಯಿತು.

ಆಗ ಅವರು ಆ ಮಹಿಳೆಯನ್ನು ಕರೆದು ಹೀಗೆಂದರು.

"ನೀನು ಪ್ರಾಯಶ್ಚಿತ್ತ ತೆಗೆದುಕೊಳ್ಳಬೇಕಾಗುತ್ತದೆ." ಏಕೆಂದರೆ ನೀನು ವ್ಯರ್ಥವಾಗಿ ಯಾರ ಯಾರ ಮೇಲೋ ದೋಷಾರೋಪಣೆಯ ಭಾವ ಮಾಡಿದ್ದೀಯ"

"ಯಾವ ಪ್ರಾಯಶ್ಚಿತ್ತವಿದೆಯೋ ಆಜ್ಞಾಪಿಸಿ ಎಂದು ಅಡ್ಡಬಿದ್ದಳು"

"ಇಲ್ಲಿರುವವರ ಮೇಲೆ ದೋಷಾರೋಪಣೆಯ ಭಾವ ಮಾಡಿದ್ದೀಯ. ಆದ್ದರಿಂದ ಇವರಿಗೆಲ್ಲಾ ಭೋಜನ ಮಾಡಿಸು" ಎಂದು ಆಜ್ಞಾಪಿಸಿದರು.

## ವರ್ಧಮಾನಸಾಗರರೊಡನೆ ಚರ್ಚೆ

ಸೇಡವಾಳಕ್ಕೆ ಹೋಗುವಾಗ ವರ್ಧಮಾನ ಸಾಗರರಿಗೆ ಆಚಾರ್ಯ ಶ್ರೀಯವರ ದರ್ಶನ ಲಾಭ ದೊರೆಯಿತು. ಅವರು ಪೂಜ್ಯ ಶ್ರೀಯವರಲ್ಲಿ ನಿವೇದಿಸಿದರು.

"ಮಹರಾಜ್! ನೀವು ೧೨ ವರ್ಷಗಳ ಸಮಾಧಿ ನಿಯಮ ತಗೆದುಕೊಂಡಿದ್ದೀರಿ. ನನಗೆ ನಿಮ್ಮ ಆದೇಶವೇನು?

ಅವರು : ನಮ್ಮಂತೆಯೇ ೧೨ ವರ್ಷಗಳ ನಿಯಮ ತೆಗೆದುಕೊಳ್ಳಿ. ಅದೇ ಪ್ರಕಾರ ವರ್ಧಮಾನಸಾಗರರು ೧೨ ವರ್ಷಗಳ ನಿಯಮ ತೆಗೆದುಕೊಂಡರು. ಆಗ ಆಚಾರ್ಯಶ್ರೀಯವರೆಂದರು

"ನೀವು ವಿಶೇಷ ಭ್ರಮಣೆ ಮಾಡಬೇಡಿರಿ. ಸಂಯಮವನ್ನು ಸರಿಯಾಗಿ ಪಾಲಿಸಿರಿ. ಎಲ್ಲಿ ಸಂಯಮಕ್ಕೆ ಅನುಕೂಲವಿದೆ ಅಲ್ಲೇ ಹೆಚ್ಚು ಕಾಲ ಕಳೆಯಿರಿ. ನೀವೀಗ ಹೆಚ್ಚು ವೃದ್ಧರಾಗಿದ್ದೀರಿ. ಸದಾ ಸಾವಧಾನವಾಗಿರಿ." ಆಗ ವರ್ಧಮಾನ ಸಾಗರರಿಗೆ ಸುಮಾರು ೯೩ ವರ್ಷ ವಯಸ್ಸಾಗಿತ್ತು. ಆಗ ಅವರಿಬ್ಬರೂ ಬಹಳ ಶ್ರದ್ಧೆಯಿಂದ ಧರ್ಮ ಚರ್ಚೆ ಮಾಡಿದರು. ಅವರ ಜೀವನನೇ ಧನ್ಯ!

## ಲೋಕ ಕಲ್ಯಾಣ ಭಾವನೆ

ಒಮ್ಮೆ ಅವರು ಬಾಹುಬಲಿ ಕ್ಷೇತ್ರ ತಲುಪಿದರು. ಅವರ ಪವಿತ್ರ ಹೃದಯದಲ್ಲಿ ಒಂದು ಶ್ರೇಷ್ಠ ಭಾವ ಹುಟ್ಟಿತು.



"ಈ ಕ್ಷೇತ್ರದಲ್ಲಿ ಬಾಹುಬಲಿಯ ಮೂರ್ತಿಯನ್ನು ವಿರಾಜಮಾನ ಮಾಡಿದರೆ ಈ ಸುತ್ತಮುತ್ತಲ ಗ್ರಾಮೀಣ ಕೃಷಿಕರಿಗೆ ಬಹಳ ಒಳ್ಳೆಯದಾದೀತು" ಈ ರೀತಿ ಅವರು ತಮ್ಮ ಭಾವನೆ ವ್ಯಕ್ತ ಮಾಡಿದರೋ ಇಲ್ಲವೋ ಕಾರ್ಯಗಳು ವಿದ್ಯುತ್ ವೇಗದಲ್ಲಿ ಆರಂಭಗೊಂಡವು. ಈ ಮೂರ್ತಿ ಸ್ಥಾಪನೆಗೊಂಡ ಮೇಲೆ ಹೀಗೆ ಹೇಳಿದರು.

"ದಕ್ಷಿಣದ ಶ್ರವಣಬೆಳಗೊಳಕ್ಕೆ ಹೆಚ್ಚು ಜನ ಹೋಗಲು ಸಾಧ್ಯವಾಗದು. ಆದ್ದರಿಂದ ಎಲ್ಲರಿಗೂ ಅನುಕೂಲವಾಗುವುದಕ್ಕಾಗಿ ೧೮ ಅಡಿ ಎತ್ತರದ ಬಾಹುಬಲಿ ಮೂರ್ತಿ ಇಲ್ಲಿ ವಿರಾಜಮಾನವಾಗಬೇಕೆಂದು ನಮ್ಮ ಹಾರ್ದಿಕ ಭಾವವಾಗಿತ್ತು. ಈಗ ಮೂರ್ತಿ ಸ್ಥಾಪನೆಗೊಂಡಿದೆ. ಇದು ಸಂತೋಷದ ಸಂಗತಿ" ಇದಕ್ಕೊಂದು ಕಾರಣವೂ ಇತ್ತು. ದಕ್ಷಿಣದಲ್ಲಿ ಮಿಥ್ಯಾತ್ವದ ಆರಾಧನೆ ಅಧಿಕವಾಗಿತ್ತು ಬೋಳೆ ಸ್ವಭಾವದ ಅಜ್ಞಾನಿ ಜೈನ ಬಾಂಧವರು ದೇವ ಗುರುಶಾಸ್ತ್ರ ಮೂಢಗಳಲ್ಲಿ ಮುಳುಗಿದ್ದರು. ಆದ್ದರಿಂದ ಅವರು ದಕ್ಷಿಣದ ವಿಹಾರದ ಕಾಲದಲ್ಲಿ ಮಿಥ್ಯಾತ್ವ ತ್ಯಾಗದ ಬಗ್ಗೆ ಅಧಿಕ ಗಮನ ಕೊಡುತ್ತಿದ್ದರು.

"ಕುದೇವ, ಕುಗುರು, ಕುಶಾಸ್ತ್ರಗಳ ಆಶ್ರಯ ಮಾಡಬಾರದು, ವಂದಿಸಬಾರದು. ಇದು ದೊಡ್ಡ ಪಾಪ. ಸಂಸಾರವೃದ್ಧಿಗೆ ಕಾರಣ. ಹಿಂಸೆ ಕಳವು ಇತ್ಯಾದಿ ಪಂಚಪಾತಕಗಳಿಂದ ಪಾಪ ಸಂಘಟನೆಯಾಗುತ್ತದೆ. ಇವೆಲ್ಲಕ್ಕೂ ಮಿಥ್ಯಾತ್ವವೇ ಮಹಾಪಾಪ. ಈ ವಿಶಾಲ ಮೂರ್ತಿಯ ಭಕ್ತಿಯ ಮೂಲಕ ಜನಗಳಿಗೆ ಮೋಕ್ಷ ಮಾರ್ಗದ ಬೋಧ ಆಗಲಿ. ಜನಗಳಿಗೆ ಕಲ್ಯಾಣವಾಗಲಿ ಎಂಬುದು ನಮ್ಮ ಆಶಯವಾಗಿತ್ತು.

ಅಂದಿನ ಅವರ ಹಾರ್ದಿಕ ಭಾವನೆ ಇಂದು ನಿಜವಾಗಿದೆ. ಬಹಳ ಧರ್ಮ ಜಾಗೃತಿಯಾಗಿದೆ.

## ಎಲ್ಲರಿಗೂ ಶುಭ ಭಾವನೆ

ಒಂದು ದಿನ ನಾನು ಅವರಲ್ಲಿ ಆಶೀರ್ವಾದ ಬೇಡಿದೆ. ಆಗ ಅವರೆಂದರು.

"ನಿನಗೇನು, ಯಾರು ದರ್ಮ ಮಾರ್ಗದಲ್ಲಿ ನಡೆಯುತ್ತಾರೋ ಅವರೆಲ್ಲರಗೂ ನಮ್ಮ ಆಶೀರ್ವಾದವಿದೆ. ನಮ್ಮನ್ನು ವಿರೋಧಿಸುವವರ ಬಗ್ಗೆಯೂ ನಮಗೆ ವಾತ್ಸಲ್ಯ ಭಾವವಿದೆ. ಏಕೆಂದರೆ ಅವರು ಸದ್ಬುದ್ಧಿ ಪ್ರಾಪ್ತಮಾಡಿಕೊಂಡು ಕಲ್ಯಾಣ ಮಾಡಿಕೊಳ್ಳಲಿ.

ಸಮಾಧಿ ದಿನಗಳು ಓಡೋಡಿ ಬರುತ್ತಿದ್ದವು. ಅವರ ಭಾವಗಳು ದಿನದಿಂದ ದಿನಕ್ಕೆ ವಿಶುದ್ಧವಾಗುತ್ತಾ ನಡೆದಿದ್ದವು. ಸದಾ ಆತ್ಮ ಧ್ಯಾನದಲ್ಲಿ ಮುಳುಗಿರುತ್ತಿದ್ದರು. ಶರೀರಾದಿ ಅನ್ಯ ಪದಾರ್ಥಗಳ ಮೋಹವನ್ನು ಸಂಪೂರ್ಣ ತ್ಯಜಿಸಿ ಅಂತರ್ಯದ ಅನಂತ ಶಾಂತಿಯಲ್ಲಿ ಮುಳುಗಿ ಹೋಗಿದ್ದರು.

ಏಕೋಮೆ ಶಾಶ್ವತಶ್ಚಾತ್ಮ ಜ್ಞಾನದರ್ಶನ ಲಕ್ಷಣಃ

ಶೇಷಾ ಬಹಿರ್ಭಾವಾಃ ಸರ್ವೇಸಂಯೋಗ ಲಕ್ಷಣಾಃ

ಜ್ಞಾನ ದರ್ಶನ ಸ್ವರೂಪಿಯಾದ ನನ್ನಾತ್ಮ ಒಬ್ಬನೇ ಇದ್ದಾನೆ. ಅನ್ಯ ಬಾಹ್ಯ ವಸ್ತುಗಳೆಲ್ಲಾ ನನ್ನಿಂದ ಸಂಪೂರ್ಣ ಭಿನ್ನವಾಗಿವೆ. ಅವು ನನ್ನೊಡನೆ ಸಂಯೋಗ ಮಾತ್ರವಾಗಿವೆ. ಅವು ನನ್ನವುಗಳು ಅಲ್ಲ.

ಸಲ್ಲೇಖನದ ೨೯ನೆ ದಿನ. ಎಲ್ಲರ ಮನಸ್ಸಿನಲ್ಲಿ ಉದ್ವೇಗ ಕಾತರಗಳೆದ್ದವು. ಅಂದು ಅವರು ಭಕ್ತರಿಗೆ ಕೆಲವು ಸಂದೇಶ ಕೊಟ್ಟರು.

"ಜೀವ ಒಬ್ಬನೇ, ಜೀವ ಒಬ್ಬನೇ, ಜೀವಕ್ಕೆ ಯಾರೂ ಇಲ್ಲಪ್ಪಾ. ಯಾರೂ ಇಲ್ಲ. ಮೋಕ್ಷಕ್ಕೆ ಜೀವ ಒಂದೇ ಹೋಗುತ್ತದೆ. ಪುದ್ಗಲದೊಡನೆ ಹೋಗುವುದಿಲ್ಲ."

ಅವರು ಆತ್ಮಭಾವದಲ್ಲಿ ಪೂರ್ಣ ಏಕತ್ವ ಭಾವ ಹೊಂದಿಬಿಟ್ಟಿದ್ದರು. ಅವರು ಮತ್ತೆ ಹೇಳಿದರು."ಜೀವದ ಪಕ್ಷ ಗ್ರಹಣ ಮಾಡಿದರೆ ಪುದ್ಗಲದ ಘಾತವಾಗುತ್ತದೆ. ಪುದ್ಗಲದ ಪಕ್ಷ ಗ್ರಹಣ ಮಾಡಿದರೆ ಜೀವದ ಘಾತವಾಗುತ್ತದೆ. ಆದರೆ ಜೀವ ಒಂಟಿಯಾಗಿಯೇ ಮೋಕ್ಷಕ್ಕೆ ಹೋಗುತ್ತದೆ. ಪುದ್ಗಲ ಜೊತೆಯಲ್ಲಿ ಮೋಕ್ಷಕ್ಕೆ ಹೋಗುವುದಿಲ್ಲ"

ಅಗ್ನಿಯಲ್ಲಿ ಚೆನ್ನಾಗಿ ಕಾಯಿಸಿದ ಬಂಗಾರದಂತೆ ಅವರ ಜೀವನ ವಿಶುದ್ಧಿ ಹೊಂದಿತ್ತು. ಅವರು ಕೇವಲ ಪ್ರಶಮ ಮೂರ್ತಿಯಂತೆ ಕಾಣುತ್ತಿದ್ದರು.

ಸಂಸಾರದಲ್ಲಿ ಮೃತ್ಯು ಮಹಾಭಯವನ್ನುಂಟು ಮಾಡುತ್ತದೆ

ಅತಿರಥ ಮಹಾರಥರೂ ಮೃತ್ಯುವಿನ ಮುಂದೆ ಭಯ ವಿಹ್ವಲರಾಗುತ್ತಾರೆ. ಆದರೆ ಆ ಮಹಾಯೋಗಿ ಮೃತ್ಯು ಮುಖದಲ್ಲಿ ಕೂತಿದ್ದರೂ ಶಾಂತವಾಗಿಯೇ ಇದ್ದರು. ಮೃತ್ಯುವನ್ನು ಜಯಿಸಲು ಮೃತ್ಯುವನ್ನು ಸ್ನೇಹಿತನಂತೆ ಸ್ವಾಗತಿಸಬೇಕು. ಪೂಜ್ಯ ಶ್ರೀಯವರು ತಮ್ಮ ಜೀವನ ಸಂಜೆಯಲ್ಲಿ ಪ್ರಾಣಗಳನ್ನು ಶಾಂತವಾಗಿ ವಿಸರ್ಜಿಸಲು ರತ್ನತ್ರಯ ಧರ್ಮದ ಆಶ್ರಯ ಪಡೆದಿದ್ದರು.



ಎರಡು ಮೂರು ತಿಂಗಳುಗಳಿಂದಲೇ ಆಹಾರದ ಪ್ರವೃತ್ತಿಯನ್ನು ಕಡಿಮೆಗೊಳಿಸತೊಡಗಿದ್ದರು. ೧೯೫೫ ಆಗಸ್ಟ್ ೨೪ ರಂದು ತೆಗೆದುಕೊಂಡ ಆಹಾರವೇ ಕೊನೆಯ ಆಹಾರ. ಅದರ ನಂತರ ಅವರು ಗರಿಷ್ಠ ಆಹಾರ ತ್ಯಜಿಸಿಬಿಟ್ಟರು. ನಂತರ ಜಲಗ್ರಹಣದ ನಿಯಮ ಇಟ್ಟುಕೊಂಡಿದ್ದರು. ಸೆಪ್ಟೆಂಬರ್ ೮ ರಂದು ಅಂತಿಮವಾಗಿ ಜಲಗ್ರಹಣ ಮಾಡಿ ಅದನ್ನೂ ತ್ಯಜಿಸಿ ಬಿಟ್ಟರು. ಎಣ್ಣೆ ಮುಂತಾದವುಗಳನ್ನು ಶರೀರಕ್ಕೆ ಹಚ್ಚಿಸಿಕೊಳ್ಳುವುದನ್ನೂ ತ್ಯಜಿಸಿದರು.

ಅವರು ಜಲಗ್ರಹಣವನ್ನು ನಿಂತುಕೊಂಡೇ ತೆಗೆದುಕೊಳ್ಳುತ್ತಿದ್ದರು. ಇನ್ನೊಬ್ಬರ ಆಶ್ರಯವಿಲ್ಲದೆ ಅಂಜಲಿ ಬದ್ಧರಾಗಿ ತೆಗೆದುಕೊಳ್ಳುತ್ತಿದ್ದರು. ಸೆಪ್ಟೆಂಬರ್ ೮ ರಂದು ಕೊನೆಯ ಬಾರಿ ನಾಲ್ಕಾರು ಅಂಜಲಿಯಷ್ಟು ಜಲ ಪಾನ ಮಾಡಿದರು ಶರೀರ ರೂಪಿ ಗಡಿಯಾರ ಕ್ರಮೇಣ ಶಕ್ತಿ ಕಳೆದುಕೊಳ್ಳತೊಡಗಿತು. ಆತ್ಮಬಲವೇ ಶರೀರವನ್ನು ಹಿಡಿದು ನಿಲ್ಲಿಸಿತ್ತು.

## ಚಿಂತಾಜನಕ ಸ್ಥಿತಿ

ತಾ.೧೩ ಸೆಪ್ಟೆಂಬರ್ ಅವರ ಶರೀರ ಸ್ಥಿತಿ ಚಿಂತಾಜನಕವಾಗಿತ್ತು. ಇನ್ನು ಈ ಆಧ್ಯಾತ್ಮಿಕ ಸೂರ್ಯನು ಅಸ್ತಂಗತನಾಗಲು ಹೆಚ್ಚುಕಾಲ ಇಲ್ಲ ಎಂದು ಅನ್ನಿಸುತ್ತಿತ್ತು. ಈಗ ಈ ಸೂರ್ಯನು ಪಶ್ಚಿಮ ಕ್ಷಿತಿಜವನ್ನು ಸ್ಪರ್ಶಿಸಲಾರಂಭಿಸಿದನು. ಶೈಲ ಶಿಖರಗಳಿಂದ ಈ ಸೂರ್ಯನ ಮಂದ ಕಿರಣಗಳು ಸ್ವಲ್ಪ ಸ್ವಲ್ಪವೇ ಇನ್ನೂ ಕಾಣಿಸುತ್ತಿದ್ದವು. ಇನ್ನು ಮುಂದೆ ಈ ಸೂರ್ಯ ಉದಯಿಸಲಾರ. ಇನ್ನು ದರ್ಶನವನ್ನು ಕೊಡಲಾರ. ಪರಮಪೂಜ್ಯ ಯೋಗಿ ವರೇಣ್ಯ, ಮಹಾವಿಭೂತಿಯ ಆ ಅಮೃತ ವಾಣಿ ಇನ್ನು ಕೇಳಲಾರದು ಎಂದು ತಿಳಿಯುತ್ತಿದ್ದಂತೆಯೇ ಜನತೆಯ ಕಣ್ಣೀರ ಕಟ್ಟೆ ಭೋರೆಂದು ಒಡೆಯತೊಡಗಿತು. ಮಹಾ ಶೋಕರವದಿಂದ ವಾತಾವರಣ ಸ್ಮಶಾನ ಭೀಷಣವಾಯಿತು.

ತಾ.೧೩ ರಂದು ಅವರ ದರ್ಶನ ದುರ್ಲಭವಾಯಿತು. ಸಾವಿರಗಟ್ಟಲೆ ಯಾತ್ರಿಗಳು ಕುಂಥಲಗಿರಿಗೆ ತಂಡೋಪತಂಡವಾಗಿ ಧಾವಿಸತೊಡಗಿದರು. ಎಲ್ಲರ ಮೈ ಮನಗಳು ಭಾರವಾದವು. ಕಣ್ಣುಗಳು ಅಸ್ರುತರ್ಪಣ ಕೊಡುತ್ತಿದ್ದವು. ಗಂಟಲು ನರಗಳು ಬಿಗಿದಿದ್ದವು. ಮೂಕ ವೇದನೆ ಎಲ್ಲರ ಮುಖದಲ್ಲಿ ಹೆಪ್ಪುಗಟ್ಟಿತ್ತು ವೇದನೆಯ ಕರಾಳ ರಾತ್ರಿ ಆವರಿಸಿತ್ತು. ಪೂಜ್ಯಶ್ರೀಯವರ ದೇಹ ಸ್ಥಿತಿ ಅತ್ಯಂತ ನಾಜೂಕಾಗಿ ಹೋಯಿತು. ಅವರು ದರ್ಶನಕ್ಕೆ ನಿಷೇಧ ಹೇರಲಾಯಿತು ಕೂಡಲೇ ಪರ್ವತದ ಬುಡದಲ್ಲಿದ್ದ ಜನಸಾಗರ ಒಕ್ಕೊರಲಿನಿಂದ ರೋಧಿಸತೊಡಗಿತು.

ನಾನು ಉತ್ತರದ ಬೇರೆ ಬೇರೆ ಕಡೆಗೆ ಟೆಲಿಫೋನ್ ಮೂಲಕ ಈ ಸುದ್ದಿ ತಿಳಿಸಿದೆ.

"ಮಹಾರಾಜರ ಪ್ರಕೃತಿ ಅತ್ಯಂತ ಕ್ಷೀಣವಾಗಿ ಹೋಗಿದೆ. ದರ್ಶನ ಅಸಂಭವ. ನಾಡಿ ಬಡಿತ ಮಂದವಾಗುತ್ತಿದೆ. ಭವಿಷ್ಯ ಬಹಳ ಹತ್ತಿರವಿದೆ. ನಿಮ್ಮ ಸುತ್ತಮುತ್ತಲಿನವರಿಗೂ ಫೋನ್ ಮೂಲಕ ತಿಳಿಸಿ. ದರ್ಶನಾರ್ಥಿಗಳು ಯಾರೂ ನಿರಾಶರಾಗಬಾರದು. ಧರ್ಮ ಸೂರ್ಯನು ಶೀಘ್ರವೇ ಅಸ್ತಂಗತನಾಗಲಿದ್ದಾನೆ."

ಈ ಸುದ್ದಿ ದೇಶದ ಮೂಲೆಮೂಲೆಗೂ ಕೂಡಲೆ ತಲುಪಿತು. ಭಾರಿ ಜನ ಸಮೂಹ ಕುಂಥಲಗಿರಿಯತ್ತ ಧಾವಿಸಿತು.ದಿನದಿಂದ ದಿನಕ್ಕೆ ಜನಸಂದಣಿ ನೆರೆ ನೀರಿನಂತೆ ಏರತೊಡಗಿತು. ಕುಂಥಲಗಿರಿ ಕ್ಷೇತ್ರ ಹಿಂದೆಂದೂ ಇಂತಹ ಜನದಟ್ಟಣೆಯನ್ನು ಎದುರಿಸಿರಲಿಲ್ಲ. ಎಲ್ಲಿ ನೋಡಿದರಲ್ಲಿ ಜನಗಳೇ ಜನಗಳು. ಅದೇ ಮಾತು. ಅದೇ ನೋವು. ಯಾರ ಬಾಯಲ್ಲೂ ವಿಷಾದದ ನುಡಿ. ನಿರಾಸೆಯಿಂದ ಕಂಗೆಟ್ಟ ಕಣ್ಣುಗಳು. ನಿಸ್ಸಾರ ಜಡ ಬದುಕು!

## ಅಂತಿಮ ದರ್ಶನ

ಸೆಪ್ಟೆಂಬರ್ ೧೯ ರಂದು ಮಹರಾಜರು ದರ್ಶನ ಕೊಡುವರೆಂದು ಸೂಚನೆ ಸಿಕ್ಕಿತು. ಜನಗಳು ಹರ್ಷದಿಂದ ಕೋಲಾಹಲ ಮಾಡತೊಡಗಿದರು. ಸಂಯಮ ಸೂರ್ಯನ ಕೊನೆಯ ಕಿರಣಗಳ ದರ್ಶನವದು! ಅಕ್ಕಪಕ್ಕದಲ್ಲಿ ಜನಗಳು ಕೈ ಹಿಡಿದು ನಿಂತಿದ್ದರು. ಪೂಜ್ಯಶ್ರೀಯವರನ್ನು ಬಹಳ ಎಚ್ಚರಿಕೆಯಿಂದ ನಾಜೂಕಾಗಿ ಎತ್ತಿ ತಂದರು. ಅವರ ಮುಖ ಕಮಲ ಆತ್ಮ ಧ್ಯಾನದ ಪ್ರಖರತೆಯಿಂದ ಬಾಲಸೂರ್ಯನಂತೆ ಕಂಗೊಳಿಸುತ್ತಿತ್ತು. ಅನ್ನಾಹಾರವಿಲ್ಲದೆ ಆ ಬಡಕಲು ಶರೀರ ಮತ್ತಷ್ಟು ಬಡಕಲಾಗಿ ಉತ್ತುತ್ತಿಯಂತೆ ಒಣಗಿ ಹೋಗಿತ್ತು. ಆದರೂ ಕಪ ಮೋಡಗಳ ಹಿಂದೆ ಹೊಳೆಯುವ ಸೂರ್ಯನಂತೆ ಆತ್ಮ ತೇಜ ಹೊರಹೊಮ್ಮುತ್ತಿತ್ತು. ಆ ಮಹಾ ಪುರುಷನ ಅಂತಿಮ ದರ್ಶನ ಮಾಡಿ ಜನ ಕೋಟಿ ಆಗಲಲಿರುವ ಜ್ಞಾನ ಜ್ಯೋತಿಗೆ ಅಶ್ರುತರ್ಪಣ ನೀಡಿತು. ಅವರು ಶಾಂತರಾಗಿದ್ದರು. ಆಗಾಗ ಹಸ್ತಚಾಲನೆ ಮಾಡುತ್ತಿದ್ದರು. ಅಖಂಡ ಮೌನ ಪ್ರಸರಿಸಿತ್ತು. ಮಹರಾಜರಿಗೆ ಶ್ರೇಷ್ಠ ಸಮಾಧಿ ನಿರ್ವಿಘ್ನವಾಗಿ ಆಗಲೆಂದು ಭಕ್ತಾದಿಗಳು ಜಪಮಾಡತೊಡಗಿದರು.

ನಾನು ಕುಟೀರದಲ್ಲಿ ಅವರ ಸಮೀಪದಲ್ಲೆ ಇದ್ದೆ. ಜೀವಿತ ಸಮ್ಯಗ್ದರ್ಶನ ಜ್ಞಾನ ಚಾರಿತ್ಯದ ಸಮೀಪದಲ್ಲಿರುವೆನೋ ಏನೋ ಎಂದು ಅನ್ನಿಸುತ್ತಿತ್ತು. ಶರೀರ ಮಾತ್ರ ಪರಿಗ್ರಹ ಉಳಿದಿತ್ತು. ಆ ಕ್ಷೀಣ ಶರೀರದಲ್ಲೂ ಎಂತಹ ಮಹಾನ್ ಆತ್ಮ



ಇದೆಯಲ್ಲಾ ಎಂದು ನನ್ನ ಮನಸ್ಸು ವಿಸ್ಮಯಪಡುತ್ತಿತ್ತು. ಈ ದಿವ್ಯಾತ್ಮ ಪ್ರತಿಕ್ಷಣವೂ ಅಸಂಖ್ಯಾತ ಗುಣ ಕರ್ಮ ನಿರ್ಜರೆ ಮಾಡುತ್ತಿತ್ತು. ಮೃತ್ಯುವಿನ ಮುಖದಲ್ಲಿ ಕೂತಿದ್ದರೂ ಶಾಂತಿಯ ಶಶಿಕಿರಣ ಮುಖಮಂಡಲದಿಂದ ಹೊರ ಹೊಮ್ಮುತ್ತಿದ್ದವು.

## ಮಹಾಬಲ ರಾಜನೊಡನೆ ಹೋಲಿಕೆ

ಆಚಾರ್ಯ ಶ್ರೀಯವರು ಇಂಗಿಣಿ ಮರಣ ಸ್ವೀಕರಿಸಿದ್ದರು. ಕಠಿಣ ತಪಸ್ಸಿನಿಂದ ಅವರ ಬಲಿಷ್ಠ ಶರೀರ ಸಂಪೂರ್ಣ ಜೀರ್ಣಗೊಂಡಿತ್ತು. ಅವರು ಅನ್ಯರಿಂದಲೂ ಸೇವೆ ಮಾಡಿಸಿಕೊಳ್ಳುವುದನ್ನೂ ತ್ಯಜಿಸಿದ್ದರು. ಜಿನಸೇನಾಚಾರ್ಯರು ಮಹಾಬಲ ರಾಜನ ಮಾನಸಿಕ, ಶಾರೀರಿಕ ಅವಸ್ಥೆ ಸಲ್ಲೇಖನ ಸಮಯದಲ್ಲಿ ಹೇಗಿತ್ತೆಂದು ವರ್ಣಿಸಿದ್ದಾರೆ.

ಮಹಾಬಲ ರಾಜನ ಬಲಿಷ್ಠ ಶರೀರ ಒಣಗಿಹೋಗಿತ್ತು. ಆದರೆ ಅಂತರ್ಯದಲ್ಲಿ ಣಮೋಕಾರ ಮಂತ್ರ ಪಠಣದಿಂದ ಅತ್ಯಧಿಕ ಭಾವಶುದ್ಧಿ ಬೆಳೆಯುತ್ತಿತ್ತು. ಶರೀರ ದುರ್ಬಲವಾಗಿದ್ದರೂ, ಮನಸ್ಸು ಸಡಿಲವಾಗಿರಲಿಲ್ಲ. ಮುಖ ರಕ್ತಹೀನವಾಗಿತ್ತು. ಶರೀರ ಮತ್ತು ಮುಖದ ಮಾಂಸಗಳು ಮಾಯವಾಗಿದ್ದವು. ಆತ್ಮನನ್ನು ಚೆನ್ನಾಗಿ ನೋಡಲೆಂದೋ ಏನೋ ಎನ್ನುವಂತೆ ಕಣ್ಣುಗಳು ಒಳಸೇರಿದ್ದವು.

ಮಹಾಬಲನ ಆ ಸಮಾಧಿಸ್ಥಿತಿಯನ್ನು ಆಚಾರ್ಯ ಶ್ರೀಯವರಿಗೆ ಸರಿಯಾಗಿ ಹೋಲಿಸಬಹುದಿತ್ತು. ಅವರ ಶರೀರದ ಸ್ಥಿತಿಯನ್ನು ವರ್ಣಿಸುವುದು ಹೇಗೆ ? ಕೇವಲ ಅಸ್ಥಿಪಂಜರ ಮಾತ್ರ ಶೇಷವಿತ್ತು. ಆದರೆ ಮುಖದ ಕಾಂತಿ ಅತ್ಯದ್ಭುತವಾಗಿತ್ತು.

## ಸಮಾಧಿಯ ದಿನ

ಮಹಾಬಲ ರಾಜ ೨೨ ದಿನ ಸಲ್ಲೇಖನ ಆಚರಿಸಿದ್ದ. ಆದರೆ ಆಚಾರ್ಯ ಶ್ರೀಯವರು ೩೬ ದಿನ ತೆಗೆದುಕೊಂಡಿದ್ದರು. ನಾನು ಅವರ ಸಮೀಪದಲ್ಲೇ ಕೂತಿರುತ್ತಿದ್ದೆ. ಅಂದು ೩೬ನೇ ದಿನ. ಹೀನ ಸಂಹನನವಿದ್ದರೂ ಇಂತಹ ಅಪೂರ್ವ ನಿರ್ಮಲತೆ, ಅತ್ಯಂತ ವಿಶುದ್ಧ ಪರಿಣಾಮವಿಟ್ಟುಕೊಂಡು ಸಮಾಧಿ ಧಾರಣೆ ಮಾಡುವ ಪ್ರಸಂಗಗಳು ಯುಗಯುಗಗಳಲ್ಲೂ ನೋಡಸಿಗಲಾರವು.

ಅವರಲ್ಲಿ ಆಗ ಅಖಂಡ ಶಾಂತಿ ಇತ್ತು. ಯಾವ ಶಬ್ದೋಚ್ಚಾರವೂ ಇರಲಿಲ್ಲ. ಶರೀರ ಚೇಷ್ಟಾರಹಿತವಾಗಿತ್ತು. ಪರೆಯಿಂದ ಕತ್ತಿ ಭಿನ್ನವಾಗಿರುವಂತೆ ತನ್ನಾತ್ಮನನ್ನು ಸಂಪೂರ್ಣ ಶರೀರದಿಂದ ಬೇರ್ಪಡಿಸಿ ನೋಡುತ್ತಿದ್ದರು.

ಸಮಾಧಿಯಲ್ಲಿ ಆತ್ಮಧ್ಯಾನದ ಆನಂದವನ್ನು ಆರ್ತ ರೌದ್ರ ಧ್ಯಾನದ ಜಂಝಾಟದಲ್ಲಿ ಬಿದ್ದಿರುವ ಗೃಹಸ್ಥರೇನು ಬಲ್ಲರು?

## ದೌರ್ಭಾಗ್ಯದ ದಿನ

ಸುಮಾರು ೨ ಗಂಟೆಯ ನಂತರ ನಾನು ಹೊರಬಂದೆ. ಮನಸ್ಸಿನಲ್ಲಿ ಬಹಳ ವೇದನೆ ತುಂಬಿತ್ತು. ಈಗ ಒಂದೊಂದು ಕ್ಷಣವೂ ಅಮೂಲ್ಯವಾಗಿದ್ದವು. ೩೫ನೇ ದಿನವೂ ನಿಧಾನವಾಗಿ ಉರುಳಿ ಹೋಗಲಿತ್ತು. ೩೬ನೇ ದಿನ ಹೆಜ್ಜೆ ಇಡತೊಡಗಿತು. ಆಗ ಕ್ಷಣಗಳ ಎಣಿಕೆ ನಡೆದಿತ್ತು. ಅವರ ಪರಲೋಕ ಪಯಣ ಯಾವ ಕ್ಷಣದಲ್ಲಾದರೂ ಆಗಬಹುದಿತ್ತು. ಮಹಾ ನೀರವತೆ ಆವರಿಸಿತ್ತು. ಶರೀರ ಮತ್ತು ಮನಸ್ಸು ಸಂಪೂರ್ಣ ಹತೋಟಿಯಲ್ಲಿದ್ದವು. ಮಾನಸಿಕ ಸ್ಥಿತಿ ಉತ್ತಮವಾಗಿತ್ತು. ಪೂರ್ಣ ಪ್ರಜ್ಞೆಯಿಂದ ಧ್ಯಾನ ಮಗ್ನರಾಗಿದ್ದರು. ಬಾಹ್ಯ ಜಗತ್ತಿನ ಅರಿವನ್ನು ಕತ್ತರಿಸಿ ಹಾಕಿದ್ದರು. ಆಗ ಒಂದೊಂದು ಕ್ಷಣವನ್ನೂ ಕಾತುರ, ಎದೆ ಬಡಿತದೊಡನೆ ಎಲ್ಲರೂ ಕಳೆಯತೊಡಗಿದರು. ೩೫ನೇ ರಾತ್ರಿಯೂ ಕಳೆಯುತ್ತಾ ಬಂತು. ಪೂಜ್ಯ ಶ್ರೀಯವರ ಇಹಲೋಕ ಯಾತ್ರೆಯ ಅಂತಿಮ ಕ್ಷಣಗಳೂ ಓಡೋಡಿ ಬರತೊಡಗಿದವು. ಜಗತ್ತಿಗೆ ಕವಿದ ಕತ್ತಲು ಹರಿಯತೊಡಗಿತ್ತು. ಮೂಡಣ ಬೆಟ್ಟಗಳ ಸಾನು ಪ್ರದೇಶಗಳಿಂದ ಬಾಲಸೂರ್ಯನ ಕಿರಣಗಳು ಕಾಣಿಸತೊಡಗಿದವು. ಹಕ್ಕಿಗಳು ಚಿಲಿಪಿಲಿ ನಾದದಿಂದ ಬಾನ ಅಂಗಳವನ್ನು ಗುಂಜಾಯಮಾನ ಮಾಡತೊಡಗಿದ್ದವು. ಬಾಲ ಸೂರ್ಯ ತನ್ನ ಕಂಗದಿರನ್ನು ಹೊರಸೂಸಿ ಮೂಡಣ ಬೆಟ್ಟದಂಚಿನಿಂದ ಮೇಲೆದ್ದು ಬಂದ. ಆದರೆ ಇತ್ತ ಜ್ಞಾನ ರವಿ ತನ್ನ ಜೀರ್ಣ ಶರೀರವನ್ನು ತ್ಯಜಿಸಿ ಪರಲೋಕ ಯಾತ್ರೆ ಕೈಗೊಂಡಿದ್ದ. ಆಗ ೬ ಗಂಟೆ ೫೦ ನಿಮಿಷಗಳಾಗಿದ್ದವು. ಚಾರಿತ್ರ ಚಕ್ರವರ್ತಿ, ಸಾಧು ಶಿರೋಮಣಿ, ಕ್ಷಪಕರಾಜ ಆಚಾರ್ಯ ಶಾಂತಿಸಾಗರ ದಿವ್ಯ ಆತ್ಮ ಸ್ವರ್ಗಕ್ಕೆ ಪ್ರಯಾಣ ಬೆಳೆಸಿತ್ತು.

ಇಲ್ಲಿ ಉಳಿದಿದ್ದು ಅವರ ಜಡದೇಹ ಮಾತ್ರ! ಅವರ ಯಶಶ್ಚಂದ್ರಿಕೆ ಮಾತ್ರ! ಅವರು ಬೆಳಗಿಸಿದ ಚೈತನ್ಯ ಜ್ಯೋತಿ ಮಾತ್ರ! ಲಕ್ಷ ಲಕ್ಷ ಸಂಖ್ಯೆಯ ಅವರ ಶಿಷ್ಯಗಣ ಮಾತ್ರ!



ಜೀವವು ರಾತ್ರಿಯೇ ಪ್ರಯಾಣ ಬೆಳೆಸುವ ಸಿದ್ಧತೆಯಲ್ಲಿದ್ದಂತೆ ಕಂಡುಬಂದಿತ್ತು. ಈ ಅಂಧಕಾರದಲ್ಲಿ ಪ್ರಯಾಣ ಮಾಡುವುದು ಅವರ ಚಿರಕಾಲೀನ ಪ್ರವೃತ್ತಿಯ ವಿರುದ್ಧವಿತ್ತು. ಆದ್ದರಿಂದ ಪ್ರಾಣವನ್ನು ತಡೆಹಿಡಿದು ಪ್ರಭಾತವಾಗತ್ತಿದ್ದಂತೆಯೇ ಶರೀರವನ್ನು ನಿರ್ಜೀವಗೊಳಿಸಿ ಸ್ವರ್ಗಕ್ಕೆ ಪ್ರಯಾಣ ಮಾಡಿದರು.

## ಧರ್ಮ ಸೂರ್ಯನ ಅಸ್ತ

ನಾನು ಲಗುಬಗೆಯಿಂದ ಪರ್ವತವೇರಿ ಹೋದೆ. ಕುಟೀರದ ಒಳಹೊಕ್ಕು ನೋಡಿದೆ. ಅಲ್ಲಿ ಆಚಾರ್ಯ ಮಹರಾಜರಿರಲಿಲ್ಲ. ಯಾವ ಮಹಾನ್ ಆತ್ಮ ನನ್ನನ್ನು ನೋಡುತ್ತಲೇ ಕರುಣಾರ್ದ್ರ ದೃಷ್ಟಿಯಿಂದ ನನ್ನನ್ನು ಸ್ವಾಗತಿಸುತ್ತಿತ್ತೋ ಆ ಆತ್ಮ ಅಲ್ಲಿರಲಿಲ್ಲ. ಚಾರಿತ್ರ ಚಕ್ರವರ್ತಿ ಶಾಂತಿಸಾಗರರಿರಲಿಲ್ಲ. ಧರ್ಮ ಸೂರ್ಯ ಅಲ್ಲಿರಲಿಲ್ಲ. ಅವರ ಪಾವನ ಆತ್ಮ ಯಾವ ಶರೀರದಲ್ಲಿ ೮೪ ವರ್ಷ ನಿವಾಸ ಮಾಡಿತ್ತೋ ಅಂತಹ ಕೇವಲ ಪೌದ್ಗಲಿಕ ಶರೀರ ಮಾತ್ರ ಅಲ್ಲಿತ್ತು. ಅವರ ಅಮರ ಜ್ಯೋತಿ ನಂದಿ ಹೋಗಿತ್ತು. ಹೃದಯವನ್ನು ಯಾರೋ ಹಿಂಡಿದಂತಾಯಿತು.

ಒಬ್ಬೊಬ್ಬರ ಹೃದಯವೂ ದುಃಖದಿಂದ ಭಾರವಾಗಿ ಹೋಗಿದ್ದವು. ಗಂಟಲು ನರಗಳು ದುಃಖದಿಂದ ಬಿಗಿದಿದ್ದವು.ಹೃದಯ ಮೌನ ವೇದನೆಯಿಂದ ಒಳಗೊಳಗೇ ರೋಧಿಸುತ್ತಿತ್ತು. ಪ್ರಕೃತಿಯೂ, ಗಿಡಮರಗಳೂ, ಪಶು ಪಕ್ಷಿಗಳೂ ಅಳುತ್ತಿರುವಂತೆ ಕಂಡಿತು. ಕುಂಥಲಗಿರಿ ಅನಾಥವಾಗಿತ್ತು. ಭಾರತ ವರ್ಷವೇ ಯುಗಪುರುಷನನ್ನು ಕಳೆದುಕೊಂಡು ಅನಾಥವಾಗಿತ್ತು. ಕಣ್ಣೀರ ಕೋಡಿ ಹರಿಯುತಿತ್ತು. ಎಲ್ಲಿ ನೋಡಿದರಲ್ಲಿ ಒತ್ತರಿಸಿ ಬರುವ ದುಃಖವನ್ನು ಹಿಡಿಯುವವರೇ ಗಿಡ ಮರಗಳೂಕುಂಥಲಗಿರಿಯ ಕಲ್ಲುಗಳೂ ಕಂಬನಿ ಗರಿಯುತ್ತಿರುವಂತೆ ಕಾಣುತ್ತಿತ್ತು. ಧರ್ಮದ ಅಮೂಲ್ಯ ನಿಧಿ ಲೂಟಿಯಾಗಿತ್ತು. ಭಾರತದೇಶದ ಭಾಗ್ಯ ತಾರೆ ಉರುಳಿ ಬಿದ್ದಿತ್ತು!

ಅವರ ಪದ್ಮಾಸನ ಯುಕ್ತ ಶರೀರವನ್ನು ಉನ್ನತ ಸ್ಥಾನದಲ್ಲಿಟ್ಟು ಸಾರ್ವಜನಿಕ ವೀಕ್ಷಣೆಗೆ ಅನುವು ಮಾಡಿಕೊಡಲಾಯಿತು. ದಶಭಕ್ತಿಪಠಣ ನಿರಂತರ ನಡೆಯುತ್ತಿತ್ತು. ಅವರ ತಪೋಮಯ ಶರೀರವನ್ನು ವಿಮಾನದಲ್ಲಿ ವಿರಾಜಮಾನಗೊಳಿಸಲಾಯಿತು.ಅವರೀಗ ಸಂಯಮದ ದೆಸೆಯಿಂದ ಶ್ರೇಷ್ಠ ಸ್ವರ್ಗದ ವಿಮಾನದಲ್ಲಿ ಹುಟ್ಟಿರಬಹುದು. ಆದರೆ ಅವರ ಪಾರ್ಥಿವ ಶರೀರವಿದ್ದ ಶಿಬಿಕೆಯೂ ದಿವ್ಯ ವಿಮಾನದಂತೆ ಗೋಚರಿಸುತ್ತಿತ್ತು.

## ನಿಗ್ರಂಥ ಶರೀರವೂ ಮಂಗಲಮಯ

ನಿಗ್ರಂಥ ಸಾಧುವಿನ ಶರೀರವೂ ಮಂಗಲಮಯವೆಂದು ಹೇಳಿದೆ. ಏಕೆಂದರೆ ಆ ಶರೀರದ ಕಣಕಣವೂ ಧರ್ಮಾರಾಧನೆಯ ದೆಶೆಯಿಂದ ಪವಿತ್ರವಾಗಿದೆ. ತಿಲೋಯ ಪಣ್ಣತ್ತಿಯಲ್ಲಿ ಹೀಗೆ ಹೇಳಿದೆ.

"ಸೂರಿ ಉವಜ್ಝಾಯಸಾಹೂ ದೇಹಾಣಿ ದವ್ವಮಂಗಲಂ"

ಆಚಾರ್ಯ ಉಪಾಧ್ಯಾಯ ಸಾಧುಗಳ ಶರೀರ ದ್ರವ್ಯ ಮಂಗಳವಾಗಿದೆ. ವಿಮಾನಸ್ಥ ದ್ರವ್ಯ ಮಂಗಲ ಶರೀರಕ್ಕೆ ನಾನು ವಂದಿಸಿದೆ. ಅನ್ಯರೊಡನೆ ನಾನೂ ಸ್ವಲ್ಪ ದೂರ ವಿಮಾನಕ್ಕೆ ಹೆಗಲು ಕೊಡುವ ಪುಣ್ಯಾವಸರ ನನಗೂ ಸಿಕ್ಕಿತು.

ಧರ್ಮ ಸೂರ್ಯನು ಅಸ್ತನಾದುದರಿಂದ ದುಃಖಿತಪ್ತ ಜನ ಸಮುದಾಯ ವಿಮಾನದೊಡನೆ ಓಂಸಿದ್ಧಾಯ ನಮಃ ಓಂ ಸಿದ್ಧಾಯ ನಮಃ ಎನ್ನುತ್ತಾ ಹೋಗುತ್ತಿತ್ತು. ಪರ್ವತದ ಪ್ರದಕ್ಷಿಣೆ ನಂತರ ಪರ್ವತದ ಮೇಲೆ ಒಯ್ಯಲಾಯಿತು.

ಕಳೇಬರವು ಧ್ಯಾನ ಮುದ್ರೆ ಯಲ್ಲಿರುವಂತೆ ಕಂಡಿತು. ಸುಮಾರು ೨ ಗಂಟೆಯ ಸಮಯಕ್ಕೆ ಮಾನಸ್ತಂಭದ ಸಮೀಪ ಕಳೇಬರವನ್ನು ಇರಿಸಲಾಯಿತು. ಅಂತಿಮ ಅಗ್ನಿ ಸಂಸ್ಕಾರವನ್ನು ಸುಮಾರು ೧೫ ಸಾವಿರ ಜನಗಳ ಸಮಕ್ಷಮ ಕೊಲ್ಲಾಪುರದ ಲಕ್ಷ್ಮೀಸೇನ ಭಟ್ಟಾರಕ ಸ್ವಾಮಿಗಳ ನೇತೃತ್ವದಲ್ಲಿ ನೆರವೇರಿಸಲಾಯಿತು. ಅವರ ಮೃತ ಶರೀರದ ಪೃಷ್ಠ ಭಾಗಕ್ಕೆ ತುಪ್ಪ, ಮೊಸರು ಇತ್ಯಾದಿ ರಸಗಳ ಅಭಿಷೇಕ ಮಾಡಲಾಯಿತು. ಈ ಅಭಿಷೇಕದ ಹಕ್ಕನ್ನು ಹರಾಜಿನಲ್ಲಿ ಸೇಠ್ ಗೋವಿಂದಜಿರವರು ಪಡೆದರು.

## ಅಂತಿಮ ಸಂಸ್ಕಾರ

ಕಳೇಬರದ ಪೃಷ್ಠ ಭಾಗಕ್ಕೆ ಮಾತ್ರ ಅಭಿಷೇಕ ಏಕೆ ಮಾಡಬೇಕು ಎನ್ನುವುದನ್ನು ಪೂಜ್ಯ ಶ್ರೀಯವರು ನನಗೆ ಮೊದಲೇ ತಿಳಿಸಿದ್ದರು. ಒಂದು ವೇಳೆ ಶರೀರದಲ್ಲಿ ಸೂಕ್ಷ್ಮ ರೂಪದಿಂದ ಜೀವ ಇದ್ದು ಮತ್ತೆ ಚೈತನ್ಯ ಮರುಕಳಿಸುವ ಸಂಭವವಿರುವ ಪಕ್ಷದಲ್ಲಿ ಮುನಿವೃತ್ತಿಗೆ ದೋಷ ಬರುತ್ತದೆ. ಮೂಗು ಬಾಯೊಳಗೆ ಅಭಿಷೇಕ ಜಲಗಳು ಹೊಕ್ಕು ಉಪದ್ರವವಾಗುವ ಸಂಭವವಿದೆ. ಈ ಕಾರಣದಿಂದಲೇ ಪೃಷ್ಠ ಭಾಗಕ್ಕೇ ಅಭಿಷೇಕ ಮಾಡುವ ವಿಧಾನವಿದೆ.



## ಪ್ರದೀಪ್ತ ಅಗ್ನಿ

ಅಭಿಷೇಕ ಆಗುತ್ತಿದ್ದಂತೆಯೇ ಕೊಬ್ಬರಿ ಕರ್ಪೂರ ಮುಂತಾದ ದ್ರವ್ಯಗಳೊಡನೆ ಪದ್ಮಾಸನದಲ್ಲಿ ಕುಳ್ಳಿರಿಸಿದ ಆ ದೇಹಕ್ಕೆ ಅಗ್ನಿಸಂಸ್ಕಾರ ಮಾಡಲಾಯಿತು. ನೋಡನೋಡುತ್ತಿದ್ದಂತೆಯೇ ಪೂಜ್ಯಶ್ರೀಯವರದ್ರವ್ಯ ಮಂಗಲಶರೀರ ಕ್ಷಣಾರ್ಧದಲ್ಲೇ ಜ್ವಾಲಾವೃತವಾಗಿ ಭೂತಕಾಲದನಿಗೂಢ ಗರ್ಭಕ್ಕೆ ಸೇರಿತು. ವಿಶೇಷ ಮಂತ್ರಪಠ ದೊಡನೆ ದಹನ ಕಾರ್ಯ ಸಾಯಂಕಾಲ ೪ ಗಂಟೆಗೆ ಪ್ರಾರಂಭಗೊಂಡಿತ್ತು. ಕರ್ಪೂರಾದಿ ಸಾಮಾಗ್ರಿಗಳೊಡನೆ ಅಗ್ನಿ ಉದ್ದೀಪನಗೊಂಡಿತು. ಅಗ್ನಿಯ ದೊಡ್ಡದೊಡ್ಡಜ್ವಾಲೆಗಳು ನಾಲ್ಕು ದಿಕ್ಕುಗಳನ್ನು ಆವರಿಸಿದವು.

## ನಮಗೂ ಸಮಾಧಿ ಪ್ರಾಪ್ತಿಯಾಗಲಿ

ಅದನ್ನು ನೋಡುತ್ತಿದ್ದಂತೆಯೇ ಜನಗಳ ಹೃದಯದಲ್ಲಿ ನಾನಾ ಭಾವನೆಗಳು ಉತ್ಪನ್ನವಾದವು. ನಿಮ್ಮಂತೆ ಸಫಲ ಸಂಯಮಜೀವನ ನಡೆಸಿ ಶ್ರೇಷ್ಠ ಸಮಾಧಿಯನ್ನು ಪಡೆಯುವ ಭಾಗ್ಯ ನಮಗೂ ಪ್ರಾಪ್ತವಾಗಲೆಂದು ಜ್ಞಾನಿಗಳು ಭಾವಿಸುತ್ತಿದ್ದರು.

ಸಂಜೆಯಾಗುತ್ತಿದ್ದಂತೆಯೇ ಜನರು ಚದುರತೊಡಗಿದರು. ನಿಧಾನವಾಗಿ ಪರ್ವತ ಇಳಿಯತೊಡಗಿದರು. ನಾವು ರಾತ್ರಿ ೮ ಕ್ಕೆ ಮತ್ತೆ ಪರ್ವತವನ್ನು ಹತ್ತಿದೆವು. ಅಗ್ನಿ ಇನ್ನೂ ಉರಿಯುತ್ತಲೇ ಇತ್ತು. ನಾನು ಅಲ್ಲಿಯೇ ೨ ಗಂಟೆ ಕುಳಿತಿದ್ದೆ. ಏಳಲು ಮನಸ್ಸೇ ಬರುತ್ತಿರಲಿಲ್ಲ. ಅವರೊಡನಿದ್ದ ದಿನಗಳು, ಚರ್ಚಿಸುತ್ತಿದ್ದ ವಿಷಯಗಳು ಅವರ ಹಿತವಚನಗಳು ಒಂದೊಂದಾಗಿ ಕಣ್ಮುಂದೆ ಸುಳಿಯುತ್ತಿದ್ದವು. ಅವರ ಶರೀರವನ್ನು ದಹಿಸಿದ ಜ್ವಾಲೆ ಇನ್ನೂ ಸ್ಫುಟವಾಗಿಯೇ ಉರಿಯುತ್ತಿತ್ತು. ಅಂತರಂಗದಲ್ಲೂ ಅವರ ನೆನಪಿನ ಜ್ವಾಲೆ ಉರಿಯಲಾರಂಭಿಸಿತು. ನನ್ನ ಹೃದಯವೇ ನೆನಪಿನ ಅಗ್ನಿ ಕುಂಡವಾಯಿತು. ಈ ಬಾರಿಯ ಪರ್ಯೂಷಣ ಪರ್ವ ಎಲ್ಲಿ ಕಳೆಯುವುದು? ಅವರ ಸತ್ಸಂಗವಂತೂ ಶಾಶ್ವತವಾಗಿ ದೂರಾಗಿ ಹೋಗಿತ್ತು. ಮನಸ್ಸು ಶೂನ್ಯವಾಗಿ ಹೋಯಿತು. ಭವಿಷ್ಯ ನಿರಾಶಾದಾಯಕವಾಗಿ ಕಾಣತೊಡಗಿತು. ಶರೀರ ಉತ್ಸಾಹ ಹೀನವಾಯಿತು. ಚೈತನ್ಯಹೀನ ಕಾಲುಗಳನ್ನು ಎಳೆಯುತ್ತಾ ಕೆಳಗಿಳಿದು ಬಂದೆ.

## ಸತ್ಸಂಗ ದೂರಾಯಿತು

ಪೂಜ್ಯಶ್ರೀಯವರ ಸತ್ಸಂಗ ಮತ್ತು ಮಾರ್ಗದರ್ಶನ ಸದಾ ಕಾಲವೂ ದೂರಾಗಿ ಹೋಗಿತ್ತು. ಇನ್ನು ಉಳಿದುದಾದರೂ ಏನು ? ಈ ಬದುಕಿನಲ್ಲಿ ಸತ್ಸಂಗಕ್ಕಿಂತ ಹಿರಿದಾದುದು ಯಾವುದು? ಕೂಡಲೇ ಆದಿಪುರಾಣದ ಒಂದು ಘಟನೆ ನೆನಪಿಗೆ ಬಂತು. ಆದಿನಾಥ ಪ್ರಭುವಿನ ಮೋಕ್ಷ ಗಮನವಾದ ಕೂಡಲೇ ಮಹಾಜ್ಞಾನಿಯೂ ತದ್ಭವ ಮೋಕ್ಷಗಾಮಿಯೂ ಆದ ಭರತನು ಪಿತೃ ವಿಯೋಗದಿಂದ ಪರಿತಪಿಸತೊಡಗಿದ. ಅವನ ದುಃಖವನ್ನು ನೋಡಿ ಕನಿಕರಗೊಂಡ ವೃಷಭಸೇನ 'ಗಣಧರರು ಸಾಂತ್ವನಗೊಳಿಸತೊಡಗಿದರು. "ಅರೇ!ಭರತ್ ಇದು ನಿರ್ವಾಣ ಕಲ್ಯಾಣದ ಆನಂದದ ಸಮಯ. ಶೋಕ ಮಾಡುವ ಸಮಯವಲ್ಲ." ಈ ಘಟನೆ ನಮಗೂ ಅನ್ವಯಿಸುತ್ತದೆ ಎಂದುಕೊಂಡೆ. ೩೬ ದಿನಗಳ ದೀರ್ಘ ಉಪವಾಸದ ಶ್ರೇಷ್ಠ ಫಲಪ್ರಾಪ್ತಿಯ ದಿನವಿದು. ಇದನ್ನು ಸಂತೋಷದ ದಿನವನ್ನಾಗಿ ತಿಳಿಯಬೇಕು. ದುಃಖಕ್ಕೆ ಕಾರಣವೇ ಇಲ್ಲ. ಈ ರೀತಿ ಭಾವನೆಗಳು ಬಂದ ಮೇಲೆ ಮನೋವೇದನೆ ಕಡಿಮೆಯಾಯಿತು. ನಹಿ ಸಮಾಧಿ ಮರಣಂ ಶೋಕಯೆ" ಸಮಾಧಿ ಮರಣಕ್ಕಾಗಿ ಶೋಕಿಸಬಾರದು.

## ಶಿಷ್ಯರಿಗೆ ಸೂಚನೆ

ಸ್ವರ್ಗವಾಸಕ್ಕೆ ಮೊದಲು ಆಚಾರ್ಯ ಶ್ರೀಯವರು ತಮ್ಮ ಪ್ರಮುಖ ಶಿಷ್ಯರಿಗೆ ಈ ರೀತಿ ಸಂದೇಶ ಹೇಳಿ ಕಳಿಸಿದ್ದರು."ನಾವು ಹೋದ ನಂತರ ಶೋಕ ಮಾಡಬಾರದು. ಆರ್ತಧ್ಯಾನಮಾಡಬಾರದು"

ಆಚಾರ್ಯ ಶ್ರೀಯವರ ಭೌತಿಕ ದೇಹ ಭೌತಿಕ ಚಕ್ಷುಗಳಿಗೆ ಕಾಣದೆ ಹೋಯಿತು ನಿಜ. ಆದರೆ ಅದು ಆಗಮ ಚಕ್ಷುಗಳಿಗೆ ಅವಶ್ಯ ಗೋಚರಿಸಲ್ಪಡುತ್ತದೆ. ಈ ಶರೀರವನ್ನು ಬಿಟ್ಟ ಮೇಲೆ ಜೀವವು ೪ ಸಮಯದೊಳಗೆ ಅನ್ಯ ಸ್ಥಾನಕ್ಕೆ ಹೋಗಿ ನವೀನ ಶರೀರ ನಿರ್ಮಾಣ ಯೋಗ್ಯ ಸಾಮಾಗ್ರಿಗಳನ್ನು ಪ್ರಾಪ್ತ ಮಾಡಿಕೊಳ್ಳುತ್ತದೆ ಎಂದು ಹೇಳಿದೆ. ಯಾರಿಗೆ ದೇವಾಯು ಬಂಧವಾಗಿದೆಯೋ ಆ ಜೀವ ಅಣುವ್ರತ ಮಹಾವ್ರತ ಧಾರಣೆ ಮಾಡಿಕೊಳ್ಳುತ್ತದೆ ಎಂದು ಗೋಮಟಸಾರದಲ್ಲಿ ಹೇಳಿದೆ. ಆದ್ದರಿಂದ ಮಹಾವ್ರತಿ ಆಚಾರ್ಯ ಶ್ರೀಯವರು ಸ್ವರ್ಗವಾಸಿಗಳಾಗಿರುವುದು ನಿರ್ವಿವಾದ. ತಿಲೋಯ ಪಣ್ಣತ್ತಿ ಗ್ರಂಥದ ಆಧಾರದಿಂದ ಹೇಳುವುದಾದರೆ ಸಂಭವತಃ ಅವರು ಲೌಕಾಂತಿಕ ದೇವತೆಗಳಾಗಿ ಹುಟ್ಟಿರಬಹುದು. ಅವರು ಜೀವನವನ್ನೆಲ್ಲಾ ನಿರ್ದೋಷ ವ್ರತ



ಪಾಲನೆಯಲ್ಲೇ ಕಳೆದಿದ್ದರು. ಸಂಪೂರ್ಣ ಜೀವನ ವೈರಾಗ್ಯದಿಂದ ತುಂಬಿಹೋಗಿತ್ತು.

## ಯಾರು ಲೌಕಾಂತಿಕ ದೇವತೆಗಳಾಗುತ್ತಾರೆ?

ತಿಲೋಯ ಪಣ್ಣತ್ತಿಯಲ್ಲಿ ಹೀಗೆ ಹೇಳಿದೆ

ಯಾವ ಸಮ್ಯಗ್ದೃಷ್ಟಿ ಶ್ರಮಣನು ಸ್ತುತಿ ಮತ್ತು ನಿಂದೆ ಸುಖ ಮತ್ತು ದುಃಖ ಬಂಧು ಮತ್ತು ವೈರಿಗಳಲ್ಲಿ ಸಮಾನತೆ ಹೊಂದಿರುವನೋ ಅವನೇ ಲೌಕಾಂತಿಕ ದೇವತೆಯಾಗುತ್ತಾನೆ. ಯಾರು ದೇಹದ ಬಗ್ಗೆ ನಿರಾಪೇಕ್ಷ, ನಿರ್ಮಮ, ನಿರಾಕುಲವಿರುತ್ತಾರೋ ಮತ್ತು ಲಾಭಾಲಾಭ ಜೀವಿತ-ಮರಣದಲ್ಲಿ ನಿರ್ವಿಕಲ್ಪರಾಗಿರುತ್ತಾರೋ ಅಂತಹ ಶ್ರೇಷ್ಠ ಶ್ರಮಣ ಲೌಕಾಂತಿಕ ದೇವತೆ ಆಗುತ್ತಾರೆ. ಸಂಯಮ, ಸಮಿತಿ, ಗುಪ್ತಿಯಾದಿ ಚರ್ಯೆಗಳಲ್ಲಿ ಯಾರು ಸದಾ ಉದ್ಯಮಶೀಲರಾಗಿರುತ್ತಾರೋ ಅಂತವರು ಲೌಕಾಂತಿಕ ದೇವತೆಗಳಾಗುತ್ತಾರೆ. ಪಂಚಮಹಾವ್ರತ, ಪಂಚಸಮಿತಿಗಳನ್ನು ಚಿರಕಾಲ ಆಚರಣೆ ಮಾಡುತ್ತಾ ಪಂಚೇಂದ್ರಿಯಗಳಲ್ಲಿ ವಿರಕ್ತನಾದ ಋಷಿ ಲೌಕಾಂತಿಕ ದೇವತೆ ಆಗುತ್ತಾನೆ.

ಆಚಾರ್ಯ ಶ್ರೀಯವರ ಸಾನಿಧ್ಯದಲ್ಲಿ ಬಹಳ ಕಾಲ ಕಳೆದಿದ್ದರಿಂದ ಮತ್ತು ಅವರ ಧೀಮಂತ ವ್ಯಕ್ತಿತ್ವವನ್ನು ಸನಿಹದಲ್ಲಿದ್ದು ವೀಕ್ಷಿಸಿರುವುದರಿಂದ ಅವರು ಅವಶ್ಯ ಲೌಕಾಂತಿಕ ದೇವತೆಯಾಗಿ ಹುಟ್ಟಿರಬಹುದೆಂದು ಊಹಿಸಬಹುದಾಗಿದೆ. ಅವರ ಅಭ್ಯಂತರ ವರ್ತನೆಯು ಲೌಕಾಂತಿಕ ದೇವತೆಯಾಗುವ ಸೂಚನೆಯನ್ನು ಸಂಪೂರ್ಣ ಬಿಂಬಿಸುತ್ತಿತ್ತು. ಅವರು ಹುಟ್ಟು ಮಹಾ ಪುರುಷರು. ತಾಯಿಯ ಗರ್ಭಕ್ಕೆ ಬಂದೊಡನೆ ತಾಯಿ ಸತ್ಯವತಿಗೆ ೧೦೦೮ ಕಮಲಗಳಿಂದ ಭಗವಂತನಿಗೆ 'ಅರ್ಚನೆ ಮಾಡಬೇಕೆಂಬ ಹೆಬ್ಬಯಕೆ ಹುಟ್ಟಿತಂತೆ.! ಇದು ಮಹಾಪುರುಷರು ಹುಟ್ಟುವ ಮುನ್ನ ಕಾಣುವ ಶುಭ ಚಿಹ್ನೆ. ಅವರು ದೇವಲೋಕದ ಲೌಕಾಂತಿಕ ಪದವನ್ನು ತ್ಯಜಿಸಿ ಧರ್ಮ ತೀರ್ಥಂಕರರಾಗುತ್ತಾರೆನ್ನುವುದು ನಮ್ಮ ಹಾರ್ದಿಕ ಭಾವನೆ!

## ಭಟ್ಟಾರಕ ಜಿನಸ್ವಾಮಿಯವರ ಸ್ವಪ್ನ

ಕೊಲ್ಲಾಪುರದ ಭಟ್ಟಾರಕ ಜಿನಸೇನ ಸ್ವಾಮಿಗೆ ೮.೮.೫೫ರಲ್ಲಿ ಬ್ರಾಹ್ಮೀ ಮುಹೂರ್ತದಲ್ಲಿ ಒಂದು ಸ್ವಪ್ನ ಬಿದ್ದಿತಂತೆ. ಆಚಾರ್ಯ ಶ್ರೀಯವರು ಇಲ್ಲಿಂದ ಮೂರನೇ ಭವದಲ್ಲಿ ತೀರ್ಥಂಕರರಾಗುತ್ತಾರೆ ಎನ್ನುವುದೇ ಆ ಸ್ವಪ್ನ. ಭಟ್ಟಾರಕ ಜಿನಸೇನರು ಆಚಾರ್ಯ ಶ್ರೀಯವರಲ್ಲಿ ಈ ವಿಚಾರ ನಿವೇದಿಸಿದರಂತೆ. "ನೀನು ಪುಷ್ಕರಾರ್ಧ ದ್ವೀಪದಲ್ಲಿ ತೀರ್ಥಂಕರನಾಗುವೆಯೆಂದು ೧೨ ವರ್ಷ ಪೂರ್ವದಲ್ಲಿ ನಮಗೂ ಇಂತಹದ್ದೇ ಕನಸು ಬಿದ್ದಿತ್ತು" ಎಂದು ಹೇಳಿದರು. ತೀರ್ಥಂಕರತ್ವ

————ತ್ರೈಲೋಕ ದುರ್ಛಲವಾದ ಮಾತು.

ಜೈನ ಧರ್ಮದಲ್ಲಿ ವರ್ಣಿಸಿರುವಂತೆ ಅಷ್ಟಾಂಗ ಮಹಾ ನಿಮಿತ್ತ ಜ್ಞಾನಗಳಲ್ಲಿ ಸ್ವಪ್ನವೂ ಒಂದು. ವಾತಾದಿ ಪ್ರಕೋಪರಹಿತ ಸ್ವಪ್ನ ಶಂಕಾತೀತ. ಅವರು ಶೋಡಷಭಾವನಾ ಪೂರ್ಣರಿದ್ದರು.

## ಒಂದು ಶಂಕೆ

ತೀರ್ಥಂಕರ ಪ್ರಕೃತಿ ಕೇವಲಿ, ಶೃತಕೇವಲಿಗಳ ಚರಣ ಮೂಲದಲ್ಲೇ ಬಂಧವಾಗುತ್ತದೆ. ಈಗ ಅವರಾರೂ ಇಲ್ಲ. ಯಾವ ಪ್ರಕಾರದ ತೀರ್ಥಂಕರತ್ವ ಅವರಿಗೆ ಕಟ್ಟಿರಬಹುದು ? ಸಮಾಧಾನ: ಈ ಸಂಶಯ ಸರಿಯಾಗಿದೆ. ಅವರು ಈ ಭವದಲ್ಲಿ ತೀರ್ಥಂಕರನಾಮ ಕರ್ಮ ಬಂಧಿಸಿಕೊಂಡಿರಲಾರರು. ಅವರು ಲೌಕಾಂತಿಕ ದೇವರಾಗಿ ಹುಟ್ಟಿ ಮಾನವ ಭವಕ್ಕೆ ಬಂದು ಅಂದೇ ಆ ಪ್ರಕೃತಿ ಬಂಧಿಸಿಕೊಳ್ಳಲಿದ್ದಿಯಿಲ್ಲ. ಭರತ ಐರಾವತ ಕ್ಷೇತ್ರಗಳಲ್ಲಿ ಆಗುವ ತೀರ್ಥಂಕರರುಗಳಿಗೆ ಈ ನಿಯಮಗಳೇನೂ ಇಲ್ಲ. ವಿದೇಹಸ್ಥ ತೀರ್ಥಂಕರರುಗಳಿಗೆ ಐದು, ಮೂರು, ಎರಡು ಕಲ್ಯಾಣಗಳೂ ಆಗಬಹುದು. ಅದೇ ಭವದ ಗೃಹಸ್ಥಾವಸ್ಥೆಯಲ್ಲಿ ಬಂಧವಾದರೆ ದೀಕ್ಷೆ, ಜ್ಞಾನ , ಮತ್ತು ಮೋಕ್ಷ ಹೀಗೆ ಮೂರು ಕಲ್ಯಾಣಗಳಾಗುತ್ತವೆ. ಒಂದು ವೇಳೆ ಮಹಾ ತಪಸ್ಸಿಗೆ ಆದರೆ ಜ್ಞಾನ ಮತ್ತು ಮೋಕ್ಷ ಎರಡೇ ಕಲ್ಯಾಣಗಳಾಗುತ್ತವೆ. ಭರತಐರಾವತಗಳಂತೆ ಐದೂ ಆಗಬಹುದು. ಈ ದೃಷ್ಟಿಯಿಂದ ವಿಚಾರಿಸುವುದಾದರೆ ಅವರು ಇಂದು ಬಂಧಿಸಿಕೊಂಡಿಲ್ಲವಾದರೂ ಮುಂದಿನ ಮನುಷ್ಯ ಪರ್ಯಾಯದಲ್ಲಿ ಅವಶ್ಯ ಬಂಧಿಸಿಕೊಳ್ಳುವರು. ಅವರಿಬ್ಬರಿಗೆ ಬಿದ್ದ ಕನಸುಗಳು ಇಂದೇ ಬಂಧವಾಗಿದೆ ಎಂದೇನೂ ಸೂಚಿಸಿಲ್ಲ. ಕೇವಲಿ ಶೃತಕೇವಲಿಗಳು ಈ ಕಾಲದಲ್ಲಿ ಇಲ್ಲದಿರುವ ಕಾರಣ ಅವರು ಮುಂದಿನ ಮಾನವ ಪರ್ಯಾಯದಲ್ಲೇ ತೀರ್ಥಂಕರತ್ವ ಬಂಧ ಮಾಡಿಕೊಳ್ಳಬಹುದು. ಅದ್ದರಿಂದ ಅವರು ಭರತ ಐರಾವತಗಳ ತೀರ್ಥಂಕರರಾಗಲು ಸಾಧ್ಯವಿಲ್ಲ. ವಿದೇಹ ಕ್ಷೇತ್ರವೊಂದರಲ್ಲಿ ಆಗಬಹುದಾಗಿದೆ. ಏಕೆಂದರೆ ವಿದೇಹಗಳಲ್ಲಿ ಸದಾ ಕೇವಲಿಶೃತ ಕೇವಲಿಗಳ ವಿಧ್ಯಮಾನವಿರುತ್ತದೆ. ಅವರ ಪಾದಮೂಲದಲ್ಲೇ ತೀರ್ಥಂಕರನಾಮಕರ್ಮ ಬಂಧವಾಗಬಹುದು.

## ದೇವ ಪರ್ಯಾಯದ ಕಥೆ

ಔದಾರಿಕ ಶರೀರ ತ್ಯಾಗದ ಅಂತರ್ಮುಹೂರ್ತದಲ್ಲೇ ವೈಕ್ರೀಯಕ ಶರೀರ ರಚನೆ ಪೂರ್ಣಗೊಳ್ಳುತ್ತದೆ. ಅವರು ಮಲಗಿದವರು ಮೇಲೇಳುವಂತೆ ಉಪಪಾದ ಶಯ್ಯೆಯಿಂದ ಏಳುತ್ತಾರೆ. ಈಗ ಅವರು ವಿಚಾರ ಮಾಡಿರಬಹುದು. ಈ ಆನಂದ



ಮತ್ತು ವೈಭವ ಹೇಗೆ ನನಗೆ ಪ್ರಾಪ್ತವಾಯಿತು! ಆಗ ತಟ್ಟನೆ ಅವಧಿಜ್ಞಾನ ಹುಟ್ಟುತ್ತದೆ. ಆಗ ಅವರು ಅವಧಿಜ್ಞಾನ ಪ್ರಯೋಗಿಸಿ ಎಲ್ಲಾ ತಿಳಿದುಕೊಳ್ಳುತ್ತಾರೆ.

ಓಹ್! ನಾನು ಕುಂಥಲಗಿರಿ ಸಿದ್ಧ ಕ್ಷೇತ್ರದಮೇಲೆ ಯಮಸಲ್ಲೇಖನದಿಂದ ಸಂಯಮ ಸಹಿತ ಶರೀರ ತ್ಯಾಗ ಮಾಡಿದ್ದೇನೆ. ಅದರ ಫಲವೇ ಈ ದೇವ ಪರ್ಯಾಯ. ಆಗ ಜಯಘೋಷ ಆಗುತ್ತದೆ. ಸರೋವರದಲ್ಲಿ ಸ್ನಾನ ಮಾಡಿ ಜಿನೇಂದ್ರನ ಅಕೃತಿಮ ಚೈತ್ಯಾಲಯಗಳಿಗೆ ಹೋಗಿ ಭಕ್ತಿಪೂರ್ವಕ ಅಭಿಷೇಕ ಪೂಜೆ ಮಾಡುತ್ತಾರೆ.

## ಆಗಮ ಕಥನ

ತಿಲೋಯ ಪಣ್ಣತ್ತಿಯಲ್ಲಿ ಹೀಗೆ ಬಂದಿದೆ.

ಆ ನವೀನ ದೇವ ಅಕೃತಿಮ ಚೈತ್ರಾಲಯಕ್ಕೆ ಹೋಗಿ ಮುಕ್ಕೊಡೆ, ಸಿಂಹಾಸನ, ಪ್ರಭಾಮಂಡಲ ಮುಂತಾದ ಅಷ್ಟಮಹಾ ಪ್ರಾತಿಹಾರ್ಯಗಳಿಂದ ಕೂಡಿದ ಸುಂದರ ಜಿನ ಪ್ರತಿಮೆಗಳ ಮುಂದೆ ಜಯಜಯಾಕಾರ ಮಾಡುತ್ತಾನೆ. ಭಕ್ತಿಪೂರ್ವಕ ಸ್ತುತಿ ಸ್ತೋತ್ರಗಳಿಂದ ಪೂಜಿಸುತ್ತಾನೆ.

ಕ್ಷೀರಸಾಗರದ ಜಲದಿಂದ ೧೦೦೮ ಕಲಶಗಳಿಂದ ಅಭಿಷೇಕ ಮಾಡುತ್ತಾನೆ. ಇಲ್ಲಿಯವರೆಗೆ ಅವರು ಬಹಳ ರುಚಿಯಿಂದ ಅಭಿಷೇಕ ಪೂಜೆ ನೋಡುತ್ತಿದ್ದರು. ಈಗ ಸುರರಾಜನಾಗಿ ರತ್ನಖಚಿತ ಜಿನಬಿಂಬಗಳಿಗೆ ಸ್ವಯಂ ಅಭಿಷೇಕ ಮಾಡುತ್ತಿರಬಹುದು. ಈ ವಿಚಾರವನ್ನು ತಿಲೋಯ ಪಣ್ಣತ್ತಿ ಗ್ರಂಥದಿಂದಲೂ ಊಹಿಸಬಹುದು.

"ಸಮ್ಯಗ್ದೃಷ್ಟಿ ಜೀವ ಕರ್ಮಕ್ಷಯ ನಿಮಿತ್ತ ಅತಿಶಯ ಭಕ್ತಿಯಿಂದ ಜಿನೇಂದ್ರ ಪೂಜೆ ಮಾಡುತ್ತಾನೆ. ಜಿನೇಂದ್ರ ಭಕ್ತಿ ಸ್ತುತಿ ಪೂಜಾಭಿಷೇಕದಿಂದ ಪುಣ್ಯ ಬಂಧ ಮತ್ತು ಕರ್ಮಕ್ಷಯ ಆಗುವುದೆಂದು ಹೇಳಿದೆ. ದೇವತೆಗಳು ನಾಲ್ಕನೆ ಅವಿರತ ಸಮ್ಯಗ್ದೃಷ್ಟಿಗಳಾಗಿರಲು ಸಾಧ್ಯ. ಆದ್ದರಿಂದ ಜಿನಪೂಜೆ ಅಭಿಷೇಕವನ್ನಷ್ಟೆ ಮಾಡಲುಬಹುದು. ಕರ್ಮ ನಿರ್ಜರೆಗೆ ಅಧಿಕ ಕಾರಣವಾಗುವ ಯಾವುದೇ ವ್ರತ ಉಪವಾಸಾದಿಗಳನ್ನು ಆಚರಿಸಲಾರರು. ದೇವತೆಗಳು ಶುದ್ಧಚಾರಿತ್ರಧಾರಿ ಮುನಿಗಳು, ಸಮವಸರಣ ಮುಂತಾದ ಕಡೆಗಳಲ್ಲಿ ಹೋಗಿ ಧರ್ಮೋಪದೇಶ ಗ್ರಹಿಸಿ ಸಮ್ಯಕ್ತ್ವ ಶುದ್ಧಿ ಆತ್ಮ ಸಿದ್ಧಿಯ ಸುಭ ಸಂಸ್ಕಾರದ ವೃದ್ಧಿ ಸದಾ ಪಡೆಯುತ್ತಿರುತ್ತಾರೆ. ಇದಕ್ಕಿಂತ ಹೆಚ್ಚೇನು ಅವರು ಮಾಡಲಾರರು.

ಮಿಥ್ಯಾದೃಷ್ಟಿ ಜೀವವೂ "ಇದು ಕುಲ ದೇವತೆ" ಎಂದು ಭಾವಿಸಿ ಜಿನಾಭಿಷೇಕದಲ್ಲಿ ಪಾಲ್ಗೊಳ್ಳುತ್ತದೆ.

## ದಿವ್ಯ ಜೀವನ

ಮಹಾ ಪುರಾಣದಲ್ಲಿ ಹೀಗೆ ಹೇಳಿದ್ದಾರೆ.

ಮಹಾಬಲನು ಸಮಾಧಿಯಿಂದ ಮುಡುಪಿ ಒಂದನೆ ಸೌಧರ್ಮ ಸ್ವರ್ಗದಲ್ಲಿ ಲಲಿತಾಂಗ ದೇವನಾಗಿ ಜನಿಸಿದ. ಶ್ರೀಪ್ರಭ ವಿಮಾನದ ಉಪಪಾದ ಶಯ್ಯೆಯಲ್ಲಿ ಆ ದೇವ ಕೋಲ್ಮಿಂಚಿನಂತೆ ಥೋಂಕನೆ ಮೈ ತಾಳಿದ. ಆಗ ಅವನ ಹುಟ್ಟು ಹೇಗಾಯಿತೆಂದರೆ ಅಂತರ್ಮುಹೂರ್ತದೊಳಗೇ ಸರ್ವಾಲಂಕಾರ ಸಮನ್ವಿತ ಸುಲಕ್ಷಣ ನವತಾರುಣ್ಯದ ದೇದೀಪ್ಯಮಾನ ಕುಂಡಲ ಕೇಯೂರ, ಮುಕುಟ, ಮಂದಾರ ಮಾಲೆ ಧರಿಸಿ ಮಸೆಯುವ ಮದನನ ಕೈದುವಂತೆ ಮಂದಸ್ಮಿತನಾಗಿ ಎದ್ದು ಬಂದ. ದೇವತೆಯ ಕಣ್ಣು ಮಾನವರಂತೆ ಮಿಟಕಿಸುವುದಿಲ್ಲ.

ಆಗ ಕಲ್ಪ ವೃಕ್ಷಗಳು ಹೂಮಳೆಗರೆದವು. ದೇವದುಂದುಬಿ ಧ್ವನಿಗೈಯಿತು. ಸುರಸಮುದಾಯ ಅತಿ ಉತ್ಸಾಹದಿಂದ ಬಂದು ಭಕ್ತಿಪೂರ್ವಕ ನಮಿಸಿತು. ಆ ದೇವ ಕ್ಷಣ ಚಕಿತನಾಗಿ ಯೋಚಿಸುತ್ತಾನೆ. ನಾನು ಯಾರು? ಈ ಸ್ಥಳ ಯಾವುದು? ಈ ದಿವ್ಯ ಶಯ್ಯೆ ಯಾರದು? ಕೂಡಲೇ ಭವ ಪ್ರತ್ಯಯ ಅವಧಿ ಜ್ಞಾನ ಹುಟ್ಟುತ್ತದೆ. ಆದ್ದರಿಂದ ಎಲ್ಲಾ ವೃತ್ತಾಂತವೂ ಕರತಲಾಮಲಕವಾಗುತ್ತದೆ.

ಅಯೆ ತಪಃ ಫಲಂ ದಿವ್ಯಂ ಅಯಂ ಸ್ವರ್ಗೋ ಮಹಾ ದ್ಯುತಿಃ

ಇಮೆ ದೇವಸ್ಸಾಮಸ್ತರ್ಪಾದ್ ದೇಹಿದ್ಯೋ ಪ್ರಣಾಮಿನಃ

ಅಹೋ! ಇದು ತಪಸ್ಸಿನ ಮನೋಹರ ಫಲ. ಈ ದೇದೀಪ್ಯಮಾನ ಸ್ಥಳ ಸ್ವರ್ಗ. ನಮಿಸುತ್ತಿರುವ ಈ ದಿವ್ಯ ದೇಹಧಾರಿಗಳು ಈ ಸ್ವರ್ಗದ ದೇವತೆಗಳು. ಈ ರೀತಿಯಾಗಿ ತಿಳಿಯುತ್ತಾರೆ. ಅಪ್ಸರಲ್ಲಿಯೇ ದೇವತಾಗಣ ಸ್ತುತಿಸುತ್ತಾ ಹೀಗೆ ಹೇಳುತ್ತದೆ.

ಪ್ರತೀಚ್ಛ ಪ್ರಥಮಂ ನಾಥ ಸಜ್ಜಂ ಮಜ್ಜನಂ ಮಂಗಲಂ

ತತಃ ಪೂಜಾ ಜಿನೇಂದ್ರಾಣಾಂ ಕುರು ಪುಣ್ಯಾನು ಬಂಧನಂ.



ಹೇ ನಾಥ! ಸ್ನಾನದ ಸಾಮಾಗ್ರಿ ತಯಾರಾಗಿದೆ. ಮೊದಲು ಮಂಗಲ ಸ್ನಾನ ಮಾಡಿರಿ. ತದನಂತರ ಪುಣ್ಯಾನು ಬಂಧಿನಿ ಜಿನೇಂದ್ರ ಭಗವಾನರ ಪೂಜೆ ಮಾಡಿರಿ.

ಈ ರೀತಿ ಶಾಂತಿಸಾಗರ ಮಹರಾಜರ ದೇವ ಪರ್ಯಾಯ ಮಹಾವೈಭವದಿಂದ ಆರಂಭವಾಗುತ್ತದೆ. ನಿಜವಾದ ದೇಹಾಂತ ಮೋಕ್ಷ ಪ್ರಾಪ್ತಿಯಲ್ಲಿ ಆಗುತ್ತದೆ. ಒಬ್ಬ ಮಡಿದಾಗ ದೇಹಾಂತವಾಯಿತೆಂದು ಹೇಳುತ್ತೇವೆ. ದೇಹಾಂತ ಯಾವುದಕ್ಕಾಯಿತು? ನಾವು ಧಾರಣೆ ಮಾಡಿದ ಪುದ್ಗಲ ಔದಾರಿಕ ಶರೀರಕ್ಕೆ ಆಯಿತು ಅಷ್ಟೆ. ಔದಾರಿಕ ದೇಹ ಬಿಟ್ಟು ಹೋಗುತ್ತದೆ. ಸ್ವರ್ಗದಲ್ಲಿ ವೈಕ್ರೀಯ ದೇಹ ಪ್ರಾಪ್ತವಾಗುತ್ತದೆ. ಆದರೆ ನಮ್ಮೊಡನೆ ಎಡೆಬಿಡದೆ ಬಂಧಿಸಿಕೊಂಡು ಬರುತ್ತಲೇ ಇರುವ ಕಾರ್ಮಣ ತೈಜಸ ಶರೀರಗಳಂತೂ ಮುಕ್ತಿ ಪ್ರಾಪ್ತವಾದಾಗಲೇ ಬಿಟ್ಟುಹೋಗುತ್ತವೆ.

ಜಿನೇಂದ್ರ ಪೂಜೆಯ ನಂತರ ತಮ್ಮ ಮನೋಹರ ಪ್ರಸಾದಕ್ಕೆ ವಾಪಾಸಾಗುತ್ತಾರೆ. ಸಿಂಹಾಸನದಲ್ಲಿ ಆಸೀನರಾಗಿ ಒಡ್ಡೋಲಗ ಮಾಡುತ್ತಾರೆ. ಈ ದೇವ ಸಭೆಯಲ್ಲಿ ಕೆಲಕಾಲ ನೃತ್ಯ ಸಂಗೀತದಲ್ಲಿ ಪರವಶರಾಗಿ ಪೂರ್ವ ಸಂಸ್ಕಾರ ವಶಾತ್ ದೇವಾದಿದೇವ ಭಗವಾನ್ ಶ್ರೀಮಂಧರ ಸ್ವಾಮಿಯ ಸಮವಸರಣಗಳಿಗೆ ಧಾವಿಸುತ್ತಾರೆ. ದಿವ್ಯ ಧ್ವನಿ ಆಲಿಸಿ ಪರಮಾನಂದ ಭರಿತರಾಗುತ್ತಾರೆ. ಆಗ ಆಚಾರ್ಯ ಶ್ರೀಯವರು ತಮ್ಮ ದೇವ ಪರ್ಯಾಯದೊಡನೆ ಸಮವರಸರಣದಲ್ಲಿ ಕುಳಿತು ಧರ್ಮಾಮೃತ ಪಾನ ಮಾಡುತ್ತಿರಬಹುದು. ಆದರೆ ಅವರ ಆತ್ಮ ಮತ್ತೊಂದು ದೇದೀಪ್ಯಮಾನ ಶರೀರಧಾರಿಯಾಗಿ ಪರಲೋಕದಲ್ಲಿ ವಿರಾಜಮಾನವಾಗಿದೆ. ಅವರು ಮುಂದೆ ಜರಾಮರಣೋಜ್ಝಿತ ಸಿದ್ಧ ಭಗವಾನರಾಗುತ್ತಾರೆ. ಆಗ ಮಾತ್ರ ಅವರು ನಿಜವಾಗಿಯೂ ಅಮರರಾದಾರು.

## ಸ್ವರ್ಗದಲ್ಲಿ ಆನಂದ

ಅವರು ಈ ಹಿಂದೆ ವ್ರತಗಳನ್ನು ಕೊಡುವಾಗ ಹೇಳುತ್ತಿದ್ದರು–"ಇದರಿಂದ ನಿಮಗೆ ಸ್ವರ್ಗದಲ್ಲಿ ಮಹಾನ್ ಆನಂದ ಸಿಗುತ್ತದೆ. ಇಂದ್ರಿಯಗಳ ಪರಿಪೂರ್ಣ ಸುಖ ಸ್ವಾದಾನುಭೂತಿ ಸ್ವರ್ಗದಲ್ಲೇ ಸಿಗುತ್ತದೆ"ಹೀಗೆ ಹೇಳುತ್ತಿದ್ದ ಅವರ ಮಾತನ್ನು ಅವರೇ ಅನುಭವದಲ್ಲಿ ಈಗ ತಂದುಕೊಳ್ಳುತ್ತಿದ್ದಾರೆ. ಪೂಜ್ಯಪಾದರು ಸ್ವರ್ಗದ ಸುಖದ ಬಗ್ಗೆ ಚುಟುಕಾಗಿ ಹೇಳಿದ್ದಾರೆ "ಅನಾತಂಕಮ್" ಆತಂಕವಿಲ್ಲದುದು. "ದೀರ್ಘಕಾಲೋಪಲಾಲಿತಮ್" ದೀರ್ಘ ಕಾಲದವರೆಗೆ ಇರುವಂತಹುದ್ದು. ಅಲ್ಲಿಯ ಕಾಲ ಒಂದು ವರ್ಷವಲ್ಲ, ಸಾವಿರ ವರ್ಷಗಳಲ್ಲ, ಸಾಗರೋಪಮ ವರ್ಷಗಳು.

ಅಲ್ಲಿರುವವರಿಗೆ ನಿರಾತಂಕ ಸುಖದ ಸೋನೆ ಸುರಿಯುತ್ತಲೇ ಇರುತ್ತದೆ. ಸ್ವರ್ಗದಲ್ಲಿ ಜನ್ಮ ತಾಳಿದ ಜೀವ ನಮ್ಮ ಭರತಖಂಡದ ಪಂಚಮ ಕಾಲದ ಶೇಷ ಭಾಗ ಮತ್ತು ಆರನೇ ಕಾಲದ ೨೧ ಸಾವಿರ ವರ್ಷ ಪ್ರಮಾಣದ ಭಯಂಕರ ಕಷ್ಟದ ದಿನಗಳಲ್ಲಿ ಹುಟ್ಟುವ ಅಪಾಯದಿಂದ ಪಾರಾಗಬಹುದು. ನಂತರ ತೀರ್ಥೋದಯದ ಕಾಲ ಬಂದಾಗ ಜನ್ಮ ತಾಳಿ ಮೋಕ್ಷಕ್ಕೆ ಹೋಗಬಹುದು.

## ಲೌಕಾಂತಿಕ ದೇವತೆಗಳು

ಲೌಕಾಂತಿಕ ದೇವತೆಗಳು ಐದನೆ ಸ್ವರ್ಗ ನಿವಾಸಿಗಳಾಗಿರುತ್ತಾರೆ. ಅವರ ಆಯು ಎಂಟುಸಾಗರ. ಎತ್ತರ ಐದುಹಸ್ತ. ಶುಕ್ಲಲೇಶ್ಯೆ. ಅವರ ಸಂಖ್ಯೆ ಅನಾದಿ ಕಾಲದಿಂದಲೂ ನಿರ್ದಿಷ್ಟ ಪ್ರಮಾಣ. ಅದು ೮೧,೩೦೦. ಬ್ರಹ್ಮಚಾರಿಗಳು ದೇವಾಂಗನೆಯರು ಅಲ್ಲಿರುವುದಿಲ್ಲ. ಹನ್ನೊಂದು ಅಂಗ ಹದಿನಾಲ್ಕು ಪೂರ್ವಗಳ ಪಾರಗಾಮಿಗಳು. ಈ ಜ್ಞಾನ ಆ ಸ್ವರ್ಗದಲ್ಲಿ ಅನಾದಿಕಾಲದಿಂದಲೂ ಅವಿಚ್ಛಿನ್ನವಾಗಿ ಅಲ್ಲಿ ಹುಟ್ಟುವ ದೇವತೆಗಳಿಗೆ ಇರುತ್ತದೆ. ಸ್ವರ್ಗದ ಮೈ ಮರೆಸುವ ಸುಖ ಭೋಗದ ಮಧ್ಯದಲ್ಲೂ ಈ ಜ್ಞಾನ ಜ್ಯೋತಿ ಮಾಸದೆ ಆ ಸ್ವರ್ಗದಲ್ಲಿ ಉಳಿದಿರುತ್ತದೆ. ಅವರು ಸದಾ ವೈರಾಗ್ಯ ಭೂಷಿತರಾಗಿ ಶಾಸ್ತ್ರ ಚರ್ಚೆಯಲ್ಲಿ ನಿಮಗ್ನರಾಗಿರುತ್ತಾರೆ. ಅನ್ಯಸ್ವರ್ಗದ ದೇವತೆಗಳಿಗೆ ಪೂಜ್ಯರೂ ವಂದ್ಯನೀಯರೂ ಆಗಿರುತ್ತಾರೆ. ಅವರನ್ನು ದೇವರ್ಷಿಗಳು ಎಂದು ಕರೆಯುತ್ತಾರೆ. ದೇವ ದೇವಾಂಗನೆಯರು ಮಹಾ ಭಕ್ತಿಯುತರಾಗಿ ಅವರನ್ನು ಸನ್ಮಾನಿಸುತ್ತಾರೆ. ಪೂಜಿಸುತ್ತಾರೆ. ತೀರ್ಥಂಕರ ಪ್ರಭುವನ್ನು ಪ್ರತಿಭೋಧಿಸುತ್ತಾರೆ. ಆ ಪರಿಪಾಟಿ ಅನಾದಿಕಾಲದಿಂದಲೂ ನಡೆದುಕೊಂಡು ಬಂದಿದೆ. ತೀರ್ಥಂಕರರ ಕೇವಲ ಜ್ಞಾನೋದಯದಲ್ಲಿ ಪರಮಹರ್ಷ ವ್ಯಕ್ತಮಾಡುತ್ತಾರೆ. ಹರಿವಂಶದಲ್ಲಿ ಹೀಗೆ ಹೇಳಿದೆ.

ಲೌಕಾಂತಿಕಾಃಪುರೋಃಯಾಂತ ಲೋಕಾಂತ ವ್ಯಾಪ್ತಿ ತೇಜಸಾಃ
ಲೋಕೇಸಸ್ವಯಥಾ ಲೋಕಾಃಪುರೋಗಾಮೂರ್ತಿ ಸಂಭವಾಃ

ಲೋಕಾಂತದವರೆಗೆ ವ್ಯಾಪಿಸಿದ ತೇಜಸ್ಸುಳ್ಳ ಲೋಕಾಂತಿಕ ದೇವ ಗಣ ಭಗವಂತನ ಮುಂದೆ ಮುಂದೆ ನಡೆಯುತ್ತಿರುತ್ತದೆ. ತ್ರಿಲೋಕ ಸ್ವಾಮಿಯ ಅಪ್ರತಿಮ ತೇಜಸ್ಸೇ ಹೀಗೆ ಲೋಕಾಂತಿಕ ದೇವತೆಗಳ ಆಕಾರ ಹೊಂದಿ ಮುಂದೆ ಮುಂದೆ ಹೋಗುವುದೇನೋ ಅನ್ನಿಸುತ್ತದೆ.

ಈ ಪಂಚಮಕಾಲದಲ್ಲೂ ರತ್ನತ್ರಯದಲ್ಲಿ ಅತಿಶಯ ಶ್ರದ್ಧೆಯಿಂದ ಮನುಷ್ಯನು ಲೋಕಾಂತಿಕ ದೇವತೆಯಾಗಿ ಹುಟ್ಟಿ ನಂತರ ಮೋಕ್ಷಕ್ಕೆ ಹೋಗುತ್ತಾನೆ.



## ವೈಕ್ರೀಯಕ ಶರೀರ

ಈಗ ಆಚಾರ್ಯ ಶ್ರೀಯವರಿಗೆ ದಿವ್ಯ ಶರೀರ ಪ್ರಾಪ್ತಿಯಾಗಿದೆ. ಅದನ್ನು ವೈಕ್ರೀಯಕ ಶರೀರವೆನ್ನುತ್ತಾರೆ. ಅದು ಅತ್ಯಂತ ಸುಂದರ ಸುವಾಸಿತ ಮತ್ತು ಪ್ರಕಾಶಮಾನ. ಆ ಶರೀರದ ವರ್ಣನೆ ಆಗಮದಲ್ಲಿ ಹೀಗೆ ಬಂದಿದೆ.

ದೇವತೆಯ ಶರೀರದಲ್ಲಿ ನಖ, ಕೇಶ ಮತ್ತು ರೋಮಗಳಿರುವುದಿಲ್ಲ. ರಕ್ತ ಮಾಂಸಗಳಿರುವುದಿಲ್ಲ. ಮಲಮೂತ್ರಬೆವರುಗಳ ಉತ್ಪತ್ತಿಯೂ ಇಲ್ಲ. ಎಂಟುಸಾಗರ ಪರಿಮಿತ ಆಯಸ್ಸುಳ್ಳ ದೇವತೆಯ ಆಹಾರ ಎಂಟುಸಾವಿರ ವರ್ಷಕ್ಕೊಮ್ಮೆ. ಆಹಾರದ ಸ್ಮರಣೆ ಬಂದ ಕೂಡಲೇ ಗಂಟಲಲ್ಲಿರುವ ಅಮೃತ ಪಿಂಡ ಸ್ರವಿಸುತ್ತದೆ. ಆದರಿಂದಲೇ ಅವರಿಗೆ ಸರ್ವಪ್ರಕಾರದ ಶಾಂತಿ ಮತ್ತು ಆನಂದ ಉಂಟಾಗುತ್ತದೆ. ಯಾವ ದೇವನು ಎಷ್ಟು ಸಾಗರ ಕಾಲ ಜೀವಿಸುವನೋ ಅಷ್ಟೇ ಸಾವಿರ ವರ್ಷಗಳಿಗೊಮ್ಮೆ ಆಹಾರ ಸ್ವೀಕರಿಸುವನು. ಪಲ್ಯಕಾಲ ಪರಿಮಿತ ಆಯಸ್ಸು ಜೀವಕ್ಕೆ ಐದು ದಿನಕ್ಕೊಮ್ಮೆ ಆಹಾರ, ಈ ರೀತಿ ತಿಲೋಯ ಪಣ್ಣತ್ತಿಯಲ್ಲಿ ಹೇಳಿದೆ.

ದೇವತೆಯ ಮೂಲ ಶರೀರ ಸ್ವರ್ಗದಲ್ಲಿರುತ್ತದೆ. ವೈಕ್ರೀಯಕ ಶರೀರ ಹೊರಗೆ ಹೋಗುತ್ತದೆ. ಗರ್ಭ, ಜನ್ಮ ಕಲ್ಯಾಣಗಳಲ್ಲಿ ಉತ್ತರ ಶರೀರ ಮಾತ್ರ ಹೋಗುತ್ತದೆ. ಮೂಲ ಶರೀರ ಸ್ವರ್ಗದಲ್ಲೇ ಸುಖಪೂರ್ವಕ ಚೇಷ್ಟೆ ಮಾಡುತ್ತಾ ಇರುತ್ತದೆ.

## ಲೌಕಾಂತಿಕ ದೇವತೆಗಳ ವಿಶೇಷತೆ.

ಅನ್ಯ ದೇವತೆಗಳಿಗೆ ಎಡಬಿಡದ ಭೋಗವಿಲಾಸವಿರುತ್ತದೆ. ಒಂದು ಕ್ಷಣವೂ ಭೋಗವಿಚ್ಛೇದವಿಲ್ಲ. ಬಯಸದೆ, ಅದಕ್ಕಾಗಿ ಹೋರಾಡದೆ, ಬಯಸಿ ಹಂಬಲಿಸದೆ ಸದಾ ದೊರೆಯುತ್ತದೆ.

ಆದರೆ ಲೌಕಾಂತಿಕ ದೇವತೆಗಳ ಮಾತು ಬೇರೆ. ಅನ್ಯ ದೇವತೆಗಳಿಂದ ಸದಾ ಪೂಜಿಸಲ್ಪಡುತ್ತಾರೆ. ಸದಾ ಜಿನಭಕ್ತಿ ಮತ್ತು ತತ್ವಾನುಸಂಧಾನದಲ್ಲಿ ನಿರತರಿರುತ್ತಾರೆ. ತ್ರಿಲೋಕ ಸಾರ ಕರ್ತೃ ನೇಮಿಚಂದ್ರರು ಹೀಗೆ ಹೇಳುತ್ತಾರೆ.

ತೇಹೀಣಹೀಯಾ ರಹಿಯಾ ವಿಷಯಾ ವಿತ್ತಾಯ ದೇವ ರಿಷೀಣಾಮ!
ಅಣುಪಿಕ್ಕ ದತ್ತಿ ಚಿತ್ತಾ ಸೇಸ ಸುರಾ ಚ್ಚೈಚ್ಚಾಹೂ!!

ಯಾರು ಹಿನಾಧಿಕ ರಹಿತರೋ ವಿಷಯ ವಿರಕ್ತರೋ ಅನುಪ್ರೇಕ್ಷಾ ಭಾವನೆಗಳಲ್ಲಿ ತಲ್ಲೀನರೋ ತತ: ಅನ್ಯದೇವತೆಗಳಿಂದ ಪೂಜನೀಯರೋ ಅವರನ್ನು ಲೌಕಾಂತಿಕ ದೇವತೆಗಳೆಂದು ಕರೆಯುತ್ತಾರೆ. ಅವರು ಮುಂದಿನ ನರ ಪರ್ಯಾಯದಿಂದ ಮುಕ್ತಿಗ ಹೋಗುತ್ತಾರೆ.

ಸಂಶಯ : ಅವರು ಮಹಾಜ್ಞಾನ ಸಂಪನ್ನರಾಗಿದ್ದರೂ ಅಲ್ಲಿಂದಲೇ ಏಕೆ ಮುಕ್ತಿಗೆ ಹೋಗುವುದಿಲ್ಲ.

ಸಮಾಧಾನ: ಜ್ಞಾನದ ಜೊತೆಗೆ ಗುಪ್ತಿತ್ರಯಗಳಬೇಕು. ಗುಪ್ತಿತ್ರಯಗಳ ಸಾಧನೆ ದಿಗಂಬರ ಮುನಿ ಅವಸ್ಥೆಯಲ್ಲೇ ಸಾಧ್ಯ. ಅಂತಹ ಮುನಿಧರ್ಮ ಮಾನವ ಪರ್ಯಾಯದಲ್ಲಿ ಮಾತ್ರ ಸಾಧ್ಯ. ಆದರೆ ಅವರು ಸದಾಕಾಲ ಶ್ರವಣ ಜೀವನಕಾಂಕ್ಷೆ ಮಾಡುತ್ತಾ ಕಾಲ ಕಳೆಯುತ್ತಾರೆ.

ಸ್ವರ್ಗದಲ್ಲಿ ಎಲ್ಲಾ ಇಂದ್ರಿಯ ಭೋಗಗಳು ಅಪರಿಮಿತವಾಗಿವೆ. ಆದರೆ ಸಮಾಧಿ ಗಮ್ಯಶಾಂತಿ ಮಾತ್ರ ಸಿಗದು. ಶಾಂತಿ ಸ್ವಯಂ ಆತ್ಮಜನಿತ. ಇಂದ್ರಿಯ ಭೋಗ ಜನಿತವಲ್ಲ. ಭೋಗಗಳ ಕ್ಷತಿ ಆದಾಗ ಜೀವ ದುಃಖಿ ಆಗುತ್ತದೆ. ಆದ್ದರಿಂದ ಇಂದ್ರಿಯ ಭೋಗ ನಾಶವಾಗಿ ಹೋಗುವಾಗ ದುಃಖವನ್ನು ಕೊಟ್ಟೇ ಹೋಗುತ್ತದೆ. ಆದ್ದರಿಂದ ಸಮ್ಯಗ್ದೃಷ್ಟಿ ಜೀವ ಸ್ವರ್ಗದ ಭೋಗದಲ್ಲಿ ಉತ್ಸಾಹಿತನಾಗುವುದಿಲ್ಲ.

ಶಕ್ರಚಕ್ರ ಧರಾದೀನಂ ಕೇವಲಂ ಪುಣ್ಯಂ ಶಾಲಿನಾಮ್

ತೃಷ್ಣಾ ಬೀಜಂ ರತಿಸ್ತೋಷಂ ಸುಖವಾಪ್ತಿಃತುತಾಸ್ತನೀ

ಮಹಾಪುಣ್ಯಶಾಲಿ ಇಂದ್ರ ಚಕ್ರಿ ಧರಣೇಂದ್ರ ಇವರೆಲ್ಲರ ಸುಖ ತೃಷ್ಣೆಯ ಬೀಜವಾಗಿದೆ. ಅವರಿಗೆ ನೈಜಸುಖ ಹೇಗೆ ದೊರೆತೀತು? ನೈಜಸುಖ ವೀತರಾಗಿ ಶುದ್ಧೋಪಯೋಗಿ ಯಥಾಖ್ಯಾತ ಚಾರಿತ್ರಧಾರಿ ಮುನೀಂದ್ರರಿಗ ಮಾತ್ರ ದೊರೆಯುತ್ತದೆ.

## ಭಕ್ತನ ಆಕಾಂಕ್ಷೆ

ಯಮಸಲ್ಲೇಖನ ಸಮಯದಲ್ಲಿ ಒಬ್ಬ ಭಕ್ತ ತನ್ನ ಅಪೇಕ್ಷೆ ತೋಡಿಕೊಂಡ.

"ಮಹರಾಜ್! ನೀವು ಮುಂದೆ ಸ್ವರ್ಗದಲ್ಲಿ ಹುಟ್ಟುತ್ತೀರಿ. ಅಲ್ಲಿಂದ ಯಾವಾಗಲಾದರೂ ಇಲ್ಲಿಗೆ ಬಂದು ಸ್ವಲ್ಪ ಉಪದೇಶ ಕೊಡಿ" ಈ ಕಾಲದಲ್ಲಿ ಕಲ್ಪ



ವಾಸಿದೇವತೆಗಳು ಇಲ್ಲಿಗೆ ಬರುವುದಿಲ್ಲವೆಂದು ಹೇಳಿದೆ ಎಂದು ಒಂದು ಚುಟುಕು ಉತ್ತರ ಕೊಟ್ಟು ಸುಮ್ಮನಾದರು.

## ಸಲ್ಲೇಖನದ ಸಂಕ್ಷಿಪ್ತ ವಿವರಣೆ.

ಕುಂಥಲಗಿರಿ ಸಿದ್ಧಕ್ಷೇತ್ರದಲ್ಲಿ ೧೪.೮.೧೯೫೫ ರಂದು ನಿಯಮ ಸಲ್ಲೇಖನದ ನಿಶ್ಚಯ. ಆ ನಿಯಮ ಸಲ್ಲೇಖನದ ಅವಧಿ ೮ ದಿನ ಇಟ್ಟುಕೊಂಡಿದ್ದರು. ಅಷ್ಟರ ಒಳಗೇ ಅಂದರೆ ೧೭.೮.೧೯೫೫ರಂದು ಯಮ ಸಲ್ಲೇಖನಾ ಪ್ರತಿಜ್ಞೆ ಮಾಡಿದರು. ತಾ.೨೦.೮.೧೯೫೫ ರಂದು ಜಲಗ್ರಹಣ. ತಾ.೧೩.೮.೧೯೫೫ ರಂದು ಪುನಃ ಜಲಗ್ರಹಣ. ನಂತರ ತಾ.೨೫ರಿಂದ ೨೮ರವರೆಗೆ ಜಲಗ್ರಹಣ. ತಾ.೨೮ರಂದು ಭರಮಪ್ಪನಿಗೆ ಕ್ಷುಲ್ಲಕ ದೀಕ್ಷೆ. ದೀಕ್ಷನಾಮ ಕ್ಷು. ಸಿದ್ಧಸಾಗರ. ಮತ್ತೆ ತಾ.೨೯ರಿಂದ ಸೆ.೧ರವರೆಗೆ ನಾಲ್ಕು ದಿನಗಳೂ ಜಲ ಗ್ರಹಣವಿಲ್ಲ. ನಂತರ ೨.೩.೪ನೇ ತಾರೀಖು ಜಲಗ್ರಹಣ. ಸೆ.೪ನೇ ತಾರೀಖು ಅಂತಿಮ ಜಲಗ್ರಹಣ. ಆಗಸ್ಟ್ ೧೪ನೇ ತಾರೀಖು ರವಿವಾರದಿಂದ ಆಹಾರ ತ್ಯಾಗವಾಗಿ ಸೆ.೪ ರವರೆಗೆ ಮಧ್ಯೆ ಮಧ್ಯೆ ವಿರಾಮ ಕೊಟ್ಟು ಜಲಗ್ರಹ ಮಾಡುತ್ತಿದ್ದರು. ಅಲ್ಲಿಂದ ಒಂದು ರವಿವಾರ ಕಳೆದು ಮುಂದಿನ ರವಿವಾರ ಸುರಕ್ಷಿತವಾಗಿ ಸ್ವರ್ಗಾರೋಹಣ ಮಾಡಿದರು.

## ಮೃತ್ಯುವಿನೊಡನೆ ಯುದ್ಧ ಸಿದ್ಧತೆ

ಅವರ ಜೀವನ ಬಹಳ ವ್ಯವಸ್ಥಿತ ಹಾಗೂ ನಿಯಮಿತ. ಅವರು ತಮ್ಮನ್ನು ಯಮ ಸಲ್ಲೇಖನಕ್ಕೆ ಸರಿಯಾಗಿ ತರಬೇತಿಗೊಳಿಸಿಕೊಂಡಿದ್ದರು. ಲೋಣಂದಾದಿಂದ ಪಲ್ಟನ್‌ಗೆ ಬಂದಾಗ ಆಜೀವ ಅನ್ನತ್ಯಾಗ ನಿಯಮ ಸ್ವೀಕರಿಸಿದ್ದರು. ಕುಂಥಲಗಿರಿಗೆ ಬಂದ ಮೇಲೆ ಅಧಿಕ ಉಪವಾಸ ಮಾಡಲಾರಂಬಿಸಿದರು. ಒಂದೊಂದೇ ಗ್ರಾಸ ಆಹಾರ ತೆಗೆದುಕೊಳ್ಳುವ ನಿಯಮವಿಟ್ಟುಕೊಂಡಿದ್ದರು. ಅವರೇ ಹೇಳುತ್ತಿದ್ದರು."ಒಂದು ವೇಳೆ ಪ್ರತಿದಿನ ಎರಡು ಗ್ರಾಸು ಆಹಾರ ಕೊಟ್ಟರೆ ಈ ಶರೀರ ಬಹಳ ಕಾಲ ನಿಂತೀತು. ಬರೀ ಹಾಲನ್ನು ತೆಗೆದುಕೊಂಡರೆ ವರ್ಷಗಟ್ಟಲೆ ನಿಂತೀತು"

## ಸಲ್ಲೇಖನಕ್ಕೆ ಮೂಲ ಕಾರಣ

ಯಾವಾಗ ಪ್ರಾಣಿ ಸಂಯಮ ಸಾಧ್ಯವಿಲ್ಲವೋ ಆಗ ಅಸಂಯಮದ ಪೋಷಣೆ ಏಕ ಮಾಡಬೇಕು. ಅಹಿಂಸಾಧರ್ಮದ ದೂಷಣೆ ಏಕೆ ಮಾಡಬೇಕು. ವ್ರತ ಭ್ರಷ್ಟತೆಯ ಬದುಕು ಮೃತ್ಯುವಿದ್ದಂತೆ. ವ್ರತ ರಕ್ಷಣೆಗಾಗಿ ಆದ ಸಾವು ಸಾವಲ್ಲ ; ಸೋಲಲ್ಲ; ಅದು ಆತ್ಮ ವಿಜಯ . ಈ ಭಾವನೆಯಿಂದ ಈ

ಉದ್ದೇಶದಿಂದ ಸಾಧು ಅಹಿಂಸಾಧರ್ಮ ರಕ್ಷಣಾರ್ಥ ಯಮ ಸಲ್ಲೇಖನ ಕೈಗೊಳ್ಳುತ್ತಾನೆ.

## ಆತ್ಮಧ್ಯಾನ

ಪ್ರಶ್ನೆ : ನೀವು ಹಿಂದೆ ಆತ್ಮಧ್ಯಾನ ಮಾಡಿರಿ ಎಂದು ಹೇಳುತ್ತಿದ್ದಿರಿ. ಆದರೆ ಇದು ಅತ್ಯಂತ ಕಠಿಣ ಕಾರ್ಯ ಎಂದು ತೋರುತ್ತದೆ. ನಾನು ಶುದ್ಧ ಬುದ್ಧ ಜ್ಞಾಯಕಸ್ವಭಾವಿ ಎಂದು ಭಾವಿಸುತ್ತಾ ಹೋದಂತೆ ಗಿಳಿ ಪಾಠದಂತಾಗಿ ಬಿಡುತ್ತದೆ. ಹೀಗಿರುವಾಗ ಆತ್ಮಧ್ಯಾನವನ್ನು ಹೇಗೆ ಮಾಡುವುದು?

ಉತ್ತರ : ಆತ್ಮ ಶರೀರದ ಪ್ರಮಾಣ ಇದ್ದಾನೆ. ಹೊರಗೆ ಆತ್ಮನ ಸದ್ಭಾವವಿಲ್ಲ. ಉಗುರಿಕ್ಕಿದರೆ ನೋವಿಲ್ಲದೆಡೆ ಬಿಟ್ಟು ಸರ್ವಾಂಗ ದೇಹದಲ್ಲಿದ್ದಾನೆ. ಅವನ ಚಿಂತನೆ ಮಾಡು. ಆತ್ಮನನ್ನು ಹೊರಗೆಲ್ಲೂ ಹುಡುಕಾಡಬೇಡ. ಒಳಗಿನ ಚಿಂತನೆಯಿಂದ ಹೊರಗಿನ ವಿಕಲ್ಪಗಳು ಅಳಿಯುತ್ತವೆ. ಆತ್ಮನ ಪ್ರಶಾಂತ ಚಿಂತನೆ ಸ್ವಲ್ಪ ಸಮಯ ಮಾತ್ರ ನಡೆದೀತು. ಪ್ರಾರಂಭದಲ್ಲಿ ಬಾಹ್ಯದ ಬೋಧೆ ಸ್ವಲ್ಪ ಸ್ವಲ್ಪವೇ ಹತ್ತುತ್ತದೆ. ಬರುಬರುತ್ತಾ ಅಂತರ್ಯದಲ್ಲಿ ರುಚಿ ಸಿಕ್ಕಮೇಲೆ ಮನಸ್ಸಿಗೆ ಬಾಹ್ಯದ ಸಂಪರ್ಕ ಕತ್ತರಿಸಿ ಹೋಗಿ ಆತ್ಮ ಸ್ವರೂಪದ ಅನುಭವ ಆರಂಭವಾಗುತ್ತದೆ.

ಚಿಂತನೆ ಮಾಡಬೇಕು. ಆತ್ಮನ ಗುಣಗಳ ಚಿಂತನೆ ಮಾಡಬೇಕು. ಬಾಹ್ಯದ ಸಂಪರ್ಕ ಕತ್ತರಿಸಿ ಹಾಕಿ ಸಂಶೋಧನೆಯಲ್ಲಿ ತನ್ಮಯನಾದ ಒಬ್ಬ ಒಳ್ಳೆಯ ಸಂಶೋಧಕನಂತೆ, ಆತ್ಮ ಚಿಂತನೆಯಿಂದ ಹೊರಟ ಆತ್ಮನ ಗುಣಗಳಲ್ಲಿ ತನ್ಮಯನಾಗಬೇಕು. ಆಗ ಆತ್ಮಾನುಭವ ಆಗ ತೊಡಗುತ್ತದೆ. ಅಂತಹ ಧ್ಯಾನಾವಸ್ಥೆ ತಲುಪಿದಾಗ ಬಾಹ್ಯದ ಅರಿವು ಬಹುಮಟ್ಟಿಗೆ ಕತ್ತರಿಸಿ ಹೋಗಿರುತ್ತದೆ"

"ಅರೇ! ಆತ್ಮನನ್ನು ಹುಡುಕುವುದು ಸರಳ" ಅವರು ಮತ್ತೆ ಆತ್ಮಾನುಭವದ ಬಗ್ಗೆ ವರ್ಣಿಸತೊಡಗಿದ್ದರು "ತಿಲದಲ್ಲಿ ತೈಲವಿರುವ ಹಾಗೆ ಶರೀರದಲ್ಲಿಆತ್ಮನಿದ್ದಾನೆ. ನಿನ್ನ ಆತ್ಮ ನಿನಗೆ ಸಿಗಲಾರನೇನು? ಸಮುದ್ರದಲ್ಲಿ ಮೀನನ್ನು ಹುಡುಕುವುದು ಸುಲಭವಲ್ಲ. ಆದರೆ ಒಂದು ಲೋಟ ನೀರಿನಲ್ಲಿ ? ಅದೇ ರೀತಿ ಈ ವಿಶಾಲ ಜಗತ್ತಿನಲ್ಲಿ ಹುಡುಕಿದರೆ ಎಲ್ಲಿ ಸಿಕ್ಕಾನು? ನಿನ್ನ ಶರೀರದಲ್ಲೇ ಇರುವ ಆತ್ಮನನ್ನು ಹುಡುಕುವುದು ಕಷ್ಟವಾಗದು. ಪ್ರತಿದಿನ ಆತ್ಮನ ಚಿಂತನೆ ಮಾಡು."

ಪ್ರಯತ್ನದಿಂದ ಫಲ ಸಿಗುತ್ತದೆ ಎನ್ನುವುದಕ್ಕೆ ಒಂದು ದೃಷ್ಟಾಂತ ಹೇಳತೊಡಗಿದರು.



ಒಬ್ಬ ರಾಜನಿದ್ದ. ಅವನಿಗೆ ವೃದ್ಧಾಪ್ಯದಲ್ಲಿಒಬ್ಬ ಮಗ ಹುಟ್ಟಿದ. ಮಗನನ್ನು ಅತ್ಯಂತ ಪ್ರೀತಿಯಿಂದ ಬೆಳೆಸಿದ ಆ ರಾಜ, ಮಗನಿಗೆ ಬಹಳ ಮೋಹದ ಕಾರಣ ವಿದ್ಯೆಯನ್ನು ಕಲಿಸಲಿಲ್ಲ. ಆಟಪಾಠಗಳಿಗೂ ಹೋಗಗೊಡುತ್ತಿರಲಿಲ್ಲ. ಒಂದು ದಿನ ಈ ರಾಜ ದೀಕ್ಷೆಗೆ ನಡೆದ. ರಾಜಕುಮಾರ ರಾಜನಾದ

"ಅನ್ಯ ರಾಜ್ಯದ ರಾಜ ಈ ರಾಜ್ಯದ ಮೇಲೆ ಆಕ್ರಮಣ ಮಾಡಿದ. ಆಗ ಅವನಿಂದ ಒಂದು ಪತ್ರ ಬಂದಿತು. ಒಂದು ಷರತ್ತು ಹಾಕಿದ್ದ. ಆ ಪತ್ರವನ್ನು ರಾಜನೇ ಗುಟ್ಟಾಗಿ ಓದಬೇಕು. ನಿರಕ್ಷರಕುಕ್ಷಿಯಾದ ರಾಜನಿಗೆ ಆ ಪತ್ರ ನೋಡುತ್ತಲೆ ದುಃಖ, ನೋವು, ಅವಮಾನ ಒಟ್ಟಿಗೇ ಒತ್ತರಿಸಿ ಬಂದವು. ಚತುರ ಮಂತ್ರಿ ರಾಜನ ಈ ಮಾನಸಿಕ ವೇದನೆ ಕಡಿಮೆ ಮಾಡುವ ಉದ್ದೇಶದಿಂದ ಸ್ವಲ್ಪ ತನ್ನೊಡನೆ ಹೊರಗೆ ಹೋಗಲು ವಿನಂತಿಸಿದ. ರಾಜ ಮತ್ತು ಮಂತ್ರಿಗಳಿಬ್ಬರೂ ಹೊರಗೆ ಹೋಗುತ್ತಿರುವಾಗ ಒಂದೆಡೆ ಕಲ್ಲುಬಂಡೆಯನ್ನೇ ಕತ್ತರಿಸಿಹಾಕಿ ನೀರಿನ ಜಲವನ್ನು ತೆಗೆದಿದ್ದುದು ಕಂಡುಬಂತು. ಆಗ ಮಂತ್ರಿ ತಡೆದು ರಾಜನಿಗೆ ಹೇಳಿದ. ಕಠಿಣ ಪರಿಶ್ರಮದಿಂದ ಕಲ್ಲು ಬಂಡೆಯಲ್ಲೂ ನೀರು ಹೊರಚಿಮ್ಮುವಂತೆ ಅಜ್ಞಾನಿಯೂ ಜ್ಞಾನಿಯಾಗಬಲ್ಲ. ಮಂತ್ರಿಯ ಭಾವವನ್ನರಿತ ರಾಜ ಅತ್ಯಂತ ಪರಿಶ್ರಮದಿಂದ ವಿದ್ಯೆಯನ್ನು ಸಂಪಾದಿಸುತ್ತಾನೆ.

ಸತತ ಪ್ರಯತ್ನದಿಂದ ಆತ್ಮ ದೊರೆಯಲಾರನೇನು ? ನಿರಂತರ ಆತ್ಮ ಚಿಂತನೆ ಹಿತಕಾರಿಯಾದುದು" .ಂದು ಅವರು ಹೇಳಿ ಮಾತಿಗೆ ಅರ್ಥ ಸಿಕ್ಕಿತ್ತು.

ಪ್ರಯತ್ನಶೀಲನಿಗೆ ಯಶಸ್ಸು ಸಿಗುತ್ತದೆ. ಶ್ರದ್ಧಾಪೂರ್ಣ ಪರಿಶ್ರಮ ಎಂದೂ ಬಂಜೆಯಾಗುವುದಿಲ್ಲ. ಬೆಂಕಿಯ ಒಂದೇ ಒಂದು ಕಿಡಿ ಕಾನನವನ್ನು ದಹಿಸುವ ಜ್ವಾಲಾಮುಖಿಯಾಗಿ ಬೆಳೆಯುವಂತೆ ಏಕಾಗ್ರಚಿಂತೆ ಅಷ್ಟಕರ್ಮಗಳನ್ನು ದಹಿಸುವ ದಳ್ಳುರಿಯಾಗಿ ಬೆಳೆಯದೆ ಇರದು.

# ಪಾವನ ಸ್ಮೃತಿ ೧೩

ಪ್ರಾತಃ ಸ್ಮರಣೀಯ ಆಚಾರ್ಯ ಮಹರಾಜರು ಸ್ವರ್ಗದ ನಿಧಿಯಾಗಿ ಹೋಗಿದ್ದರು. ಈಗ ಉಳಿದಿರುವುದು ಅವರ ನೆನಪಷ್ಟೆ. ಅವರ ಪುಣ್ಯಪ್ರದ ಸಂಸ್ಮರಣೆ ಬಹಳ ಮಧುರವೂ ಶಾಂತಿದಾಯಕವೂ ಆಗಿದೆ. ನಾನು ನನ್ನ ಸಂಸ್ಮರಣೆಯ ಜೊತೆಯಲ್ಲಿ ಅನೇಕ ಧರ್ಮಮೂರ್ತಿ ಮುನಿಗಳ ಶ್ರಾವಕರ ಮತ್ತು ತ್ಯಾಗಿಗಳ ಸಂಸ್ಮರಣೆಯನ್ನು ಸಂಕಲನ ಮಾಡಿದ್ದೇನೆ. ಈ ಸಂಸ್ಮರಣೆಯ ಮಾಧ್ಯಮದಿಂದ ಆ ಪುಣ್ಯಮೂರ್ತಿಯ ಅಲೌಕಿಕ ಜೀವನದ ಚಿತ್ರ ನಮಗೆ ಸಿಗುತ್ತದೆ. ಮೋಹ ಮಲಿನ ಆತ್ಮನಿಗೆ ವಿಶುದ್ಧಿಯೂ ಉಂಟಾಗುತ್ತದೆ.

## ಕುಂತಲಗಿರಿಯಲ್ಲಿ ಪರ್ಯೂಷಣ

ಕುಂಥಲಗಿರಿಯಲ್ಲಿ ೧೯೫೩ ರಲ್ಲಿ ಅವರ ಚಾತುರ್ಮಾಸವಿತ್ತು. ಆಗ ಅವರೊಡನಿರುವ ಯೋಗ ನನಗೆ ಸಿಕ್ಕಿತ್ತು. ಆಗ ಅವರಿಗೆ ೮೭ ವರ್ಷಗಳಾಗಿದ್ದವು. ಈ ಇಳಿವಯಸ್ಸಿನಲ್ಲಿ ಐದೈದು ಉಪವಾಸ ನಿಯಮ ತೆಗೆದುಕೊಳ್ಳುತ್ತಿದ್ದರು. ಅದಕ್ಕೆ ಪೂರ್ವದಲ್ಲೂ ಇಂತಹ ನಿಯಮ ತೆಗೆದುಕೊಂಡಿದ್ದರು. ಆಗ ಸುಮಾರು ೧೮ ದಿನಗಳ ಮೌನ ವ್ರತವಿಟ್ಟುಕೊಂಡಿದ್ದರು. ಬಾದ್ರಪದ ಮಾಸದಲ್ಲಿ ಹಾಲನ್ನು ಪೂರ್ಣ ತ್ಯಾಗ ಮಾಡಿಬಿಟ್ಟಿದ್ದರು. ಪಂಚರಸಗಳನ್ನು ತ್ಯಜಿಸಿ ೪೯ ವರ್ಷಗಳೇ ಆಗ ಹೋಗಿದ್ದವು.

ನಾನು ಒಂದು ಪ್ರಶ್ನೆ ಹಾಕಿದೆ. "ಮಹರಾಜ್! ಈ ರೀತಿ ಸರ್ವರಸಪರಿತ್ಯಾಗದಂತಹ ಘೋರ ತಪಕ್ಕೆ ಕೈಹಾಕಲು ಕಾರಣವೇನು?"

ನಾವು ಸಮಾಧಿ ಧಾರಣೆ ಮಾಡಲು ಸಿದ್ದತೆ ನಡೆಸಿದ್ದೇವೆ. ನಮ್ಮ ಕಣ್ಣಿನ ದೃಷ್ಟಿ ಮಂದವಾಗುತ್ತ ನಡೆದಿದೆ. ಈ ಸ್ಥಿತಿಯಲ್ಲಿ ಸಮಾಧಿ ಧಾರಣೆ ಮಾಡುವುದು ಆತ್ಯಗತ್ಯವಾಗಿದೆ. ಏಕೆಂದರೆ ಈಗ ಸಮಿತಿ ನಿರ್ದೋಷವಾಗಿ ಪಾಲಿಸಲ್ಪಡುತ್ತಿಲ್ಲ. ಜೀವರಕ್ಷೆ ಮಾಡಲಾಗುತ್ತಿಲ್ಲ. ನಾವು ಈಗ ಮನಸ್ಸಿಗೆ ಶಾಂತಿ ಆಗುವಷ್ಟೇ ತಪಸ್ಸನ್ನು ಆಚರಿಸುತ್ತಿದ್ದೇವೆ.

ಪ್ರಶ್ನೆ : 'ಮಹರಾಜ್! ಐದೈದು ಉಪವಾಸಗಳಿಂದ ಶರೀರಕ್ಕೇನಾದರೂ ಕಷ್ಟವಾದೀತೇ?



ಉತ್ತರ : 'ನಮಗೆ ಐದು ಉಪವಾಸಗಳು ಒಂದು ಉಪವಾಸದಂತೆ ತೋರುತ್ತದೆ. ಇದು ನಿರ್ವಾಣ ಭೂಮಿಯ ಪ್ರಭಾವ. ನಿರ್ವಾಣ ಭೂಮಿಯಲ್ಲಿ ತಪಸ್ಸು ಕಷ್ಟವೆನಿಸುವುದಿಲ್ಲ. ನಾವು ನಮ್ಮ ಶಕ್ತಿಗೆ ತಕ್ಕಷ್ಟ ತಪಸ್ಸನ್ನು ಆಚರಿಸುತ್ತದೇವೆ.

ಪ್ರಶ್ನೆ : "ಮಹರಾಜ್! ನೀವು ಉಪವಾಸದೊಡನ ಮೌನ ವ್ರತವನ್ನು ಧಾರಣೆ ಮಾಡುತ್ತಿದ್ದೀರ. ಮೌನದಿಂದ ನಿಮಗ ಯಾವ ಲಾಭ ಸಿಗುತ್ತದೆ?"

ಉತ್ತರ : ಮೌನ ಮಾಡುವುದರಿಂದ ಬಾಹ್ಯ ಜಗತ್ತಿನ ಅರ್ಥ ಸಂಬಂಧ ಕಡಿದು ಹೋಗುತ್ತದೆ. ಅದರಿಂದ ಮನಸ್ಸಿಗೆ ಬಹಳ ಶಾಂತಿ ಸಿಗುತ್ತದೆ. ಮನಸ್ಸು ಹೆಚ್ಚು ಹೆಚ್ಚು ಆತ್ಮನತ್ತ ಹೊರಳುತ್ತದೆ. ವಚನಾಲಾಪದಿಂದ ಸತ್ಯದ ಅತಿಚಾರವಾಗುವ ಸಂಭವವಿರುತ್ತದೆ. ಮೌನದಿಂದ ಸತ್ಯ ಸಂರಕ್ಷಣೆಯೂ ಆಗುತ್ತದೆ. ಮನಸ್ಸು ಹೊರಗಡೆ ಓಡುವುದೂ ತಪ್ಪುತ್ತದೆ.

ಪ್ರಶ್ನೆ : "ಈಗ ಹೇಳಿ ಉಪವಾಸದಿಂದ ನಿಮಗೆ ಯಾವ ರೀತಿ ಲಾಭವಿದೆ? ಅದರಿಂದ ಶರೀರಕ್ಕೆ ತೊಂದರೆಯೇನೂ ಆಗುವುದಿಲ್ಲವಷ್ಟೆ"

ಉತ್ತರ : "ಆಹಾರ-ತ್ಯಾಗದಿಂದ ಶರೀರಕ್ಕೆ ಅದೆಂತಹ ಕಷ್ಟದ ಮಾತಿದೆ? ದೀರ್ಘ ಉಪವಾಸದಿಂದ ಶರೀರದಲ್ಲಿ ಶಿಥಲತೆ ಬರುವುದು ಸ್ವಾಭಾವಿಕ. ಆದರೆ ಆಧ್ಯಾತ್ಮ ಲಾಭ ಬಹಳ. ಉಪವಾಸದಿಂದ ಮೋಹ ಮಂದತೆ ಉಂಟಾಗುತ್ತದೆ. ಆಗ ಆತ್ಮ ಶಕ್ತಿ ಜಾಗ್ರತವಾಗುತ್ತದೆ. ತನ್ನ ಶರೀರದ ಚಿಂತೆ ಬಿಟ್ಟವರಿಗೆ ಇನ್ನೇನು ಚಿಂತೆ ಹುಟ್ಟೀತು?"

ಈ ಬಗ್ಗೆ ಒಂದು ಸುಂದರ ದೃಷ್ಟಾಂತ ಕೊಟ್ಟರು.

"ಕೋತಿಗಳಿಗೆ ಮರಿಗಳ ಮೇಲೆ ಬಹಳ ಪ್ರೇಮವಿರುತ್ತದೆ. ಒಂದು ದಿನ ಒಂದು ಮರಿ ಕೋತಿ ಸತ್ತಿತು. ಆ ಸತ್ತ ಕೋತಿ ಮರಿಯನ್ನು ಮಡಿಲಲ್ಲಿ ಇಟ್ಟುಕೊಂಡು ತಾಯಿ ಕೋತಿ ಚಿಂತಿಸುತ್ತಾ ಕೂತಿತ್ತು. ಆಗ ನಾವು ನೋಡುತ್ತಿರುವಂತೆಯೇ . ಕೆಲವು ಕೋತಿಗಳು ಬಲವಂತವಾಗಿ ಸತ್ತ ಕೋತಿಮರಿಯನ್ನು ಕಿತ್ತುಕೊಂಡು ನೀರಿಗೆ ಎಸೆದವು. ಆದರೆ ತಾಯಿ ಕೋತಿಗೆ ಈಜಲು ಬರುತ್ತಿರಲಿಲ್ಲ. ಮೋಹ ಎಷ್ಟು ತೀಕ್ಷ್ಣವಾಗಿದೆ ನೋಡಿ"

ಇನ್ನೊಂದು ಘಟನೆ ಹೇಳಿದರು.

ಒಮ್ಮೆ ಒಂದು ಕೋತಿ ನೀರಿನಲ್ಲಿ ಮುಳುಗುತ್ತಿತ್ತು. ಆಗ ಅದು ತನ್ನ ಮರಿಯನ್ನು ಹೆಗಲ ಮೇಲೆ ಕೂರಿಸಿಕೊಂಡಿತು ನೀರು ಏರತೊಡಗಿತು. ಕೋತಿಯೇ

ಪೂರ್ಣ ಮುಳುಗುವುದರಲ್ಲಿತ್ತು. ಆಗ ಆ ಕೋತಿ ತನ್ನ ಮರಿಯನ್ನೇ ಕಾಲ ಅಡಿಗೆ ಹಾಕಿ ಅದರ ಮೇಲೆ ಹತ್ತಿಕೊಂಡಿತು. ಶರೀರ ಮೋಹ ಇಷ್ಟಿದೆ. ಮೋಹದ ಉಪಶಮ ಉಪವಾಸದಿಂದ ಆಗುತ್ತದೆ

ಪ್ರಶ್ನೆ: "ಉಪವಾಸದಿಂದ ನಿಮಗೆ ಆಕುಲತೆ ಏನಾದರೂ ಹುಟ್ಟುವುದೇ?"

ಉತ್ತರ : "ಮನಸ್ಸಿಗೆ ಎಷ್ಟು ಸಹ್ಯವಾಗುವುದೋ ಅಷ್ಟೇ ಉಪವಾಸ ಮಾಡುತ್ತೇವೆ. ಅಧಿಕ ಉಪವಾಸ ಮಾಡುವುದಿಲ್ಲ. ಶಾಂತಿಗೆ ಭಂಗ ಬರುವಷ್ಟು ಅಧಿಕ ಉಪವಾಸ ಮಾಡಬಾರದು.

ಪ್ರಶ್ನೆ : "ಮಹರಾಜ್! ಒಬ್ಬ ದೀರ್ಘ ಉಪವಾಸದ ನಿಯಮ ತೆಗೆದುಕೊಂಡಿದ್ದ. ಆಗ ಅವನಿಗೆ ತಿಳುವಳಿಕೆ ಇರಲಿಲ್ಲ. ಅನಂತರ ಅವನಿಗೆ ಅದು ದುಃಸ್ಸಹವಾಗಿ ಕಂಡಿತು. ಆಗೇನು ಮಾಡಬೇಕು.

ಉತ್ತರ : ವ್ರತಾದಿಗಳಲ್ಲಿ ಕಷ್ಟಾದಿಗಳು ಬಂದಾಗ ಪಂಚಪರಮೇಷ್ಠಿಗಳ ಸ್ಮರಣೆ ಮಾಡಬೇಕು. ಅವರ ಪ್ರಭಾವದಿಂದ ಶರೀರ ಪೀಡೆ ಶೀಘ್ರ ಶಮನವಾಗುತ್ತದೆ. ಅದರಿಂದ ಶಾಂತಿ ಲಭಿಸುವುದೆಂದು ನಾವು ದೃಢವಾಗಿ ಹೇಳುತ್ತೇವೆ.

ಪ್ರಶ್ನೆ : "ಮಹರಾಜ್! 'ಸಂಜದ್' ಪದವನ್ನು ಧವಲ ಸಿದ್ಧಾಂತ ಗ್ರಂಥದಲ್ಲಿ ಸೇರಿಸಿದವರ ಪಿತೂರಿಯಿಂದ ನೀವು ಹಾಲನ್ನು ತ್ಯಾಗ ಮಾಡಿ ದೀರ್ಘ ಉಪವಾಸ ಮಾಡುತ್ತಿದ್ದೀರೆಂದು ಕೆಲವರು ಭಾವಿಸುತ್ತಿದ್ದಾರೆ...ಇದು ಎಷ್ಟರ ಮಟ್ಟಿಗೆ ನಿಜ?"

ಉತ್ತರ : "ಉಪವಾಸದ ಕಾರಣ ಸಮಾಧಿಗೆ ಸಿದ್ಧತೆ ಎಂದು ನಾವು ಎಷ್ಟೋ ಬಾರಿ ಹೇಳಿದ್ದೇವೆ. ಷೋಡಷ ಭಾವನೆಯ ವ್ರತಗಳಲ್ಲಿ ಶೇಷ ರಸಗಳೊಡನೆ ಹಾಲನ್ನೂ ತ್ಯಜಿಸಿದ್ದೇವೆ. ಸಂಜದ್ ಪದದ ಬಗ್ಗೆ ನಮಗೀಗ ಸ್ವಲ್ಪವೂ ವಿಕಲ್ಪವುಳಿದಿಲ್ಲ. ಜಗತ್ತಿನ ನಾನಾ ವಿಚಾರಗಳಿಂದ ನಮಗೇನು? ಬರೆಯುವವರು ಸ್ವರ್ಗ, ನರಕ ತಿರ್ಯಂಚಗಳಿಗೂ ಸಂಜದ್ ಬಳಸಿ ಬರೆಯಲಿ. ಅದರಚಿಂತೆ ನಮಗೇಕೆನಾವು ಹೇಳ ಬೇಕಾದ್ದನ್ನು ಹೇಳಿ ಮುಗಿಸಿದ್ದೇವೆ. ನಾವಿನ್ನು ಅದರ ವಿಕಲ್ಪಕ್ಕೆ ಬೀಳುವುದಿಲ್ಲ"

"ಸಂಜದ್ ಪದ ಇರದಿರುವುದರಿಂದ ಸಿದ್ಧಾಂತಕ್ಕೆ ಏನು ಲೋಪವಾಗಿದೆ?

ವಿವೇಕಿಗಳಂತೆ ವರ್ತಿಸಬೇಕು."



"ಆತ್ಮ ಧ್ಯಾನದ ಅಧಿಕಾರಿ ಯಾರು ? ಎನ್ನುವ ಪ್ರಶ್ನೆಗೆ ಹೀಗೆ ಹೇಳಿದರು.

"ಆತ್ಮ ಧ್ಯಾನ ನಿಕಟ ಸಂಸಾರೀ ಜೀವಕ್ಕೆ ಮಾತ್ರ ಆಗುತ್ತದೆ. ಯಾರಿಗೆ ಭವ ಭ್ರಮಣೆ ಅಧಿಕವಿರುವುದೋ ಅಂತವರಿಗೆ ಆತ್ಮಧ್ಯಾನ ಹತ್ತುವುದಿಲ್ಲ ಅವರು ಸದಾ ಗಾಢವಾದ ಆತ್ಮಧ್ಯಾನದಲ್ಲಿ ಮುಳುಗಿರುತ್ತಿದ್ದರು.

## ಜಿನ ನಾಮಸ್ಮರಣೆಯ ಮಹಿಮೆ

ಪ್ರಶ್ನೆ : "ಜಿನಭಕ್ತಿ ಇಲ್ಲದ ಜಪ ಫಲಕಾರಿಯಾಗಬಲ್ಲದೆ? ಜಿನ ಭಕ್ತಿಯಿಂದ ಕಷ್ಟಗಳು ದೂರಾಗುವುದಾದರೆ ಅದಕ್ಕೆ ಕಾರಣವೇನು?"

ಉತ್ತರ : ಯಾವ ಪ್ರಕಾರ ಅಗ್ನಿಯ ಸಂಪರ್ಕದಿಂದ ಬೆಣ್ಣೆ ಕರಗುತ್ತದೋ ಅದೇ ರೀತಿ ಜಿನಭಕ್ತಿಯಿಂದ ಕಷ್ಟಗಳು ಕರಗಿ ಹೋಗುತ್ತವೆ.

## ಪಾಪದಿಂದ ಪತನ

ಪಾಪದ ಭಾರದಿಂದ ಉನ್ನತ ಸ್ಥಾನದಲ್ಲಿರುವವರೂ ಕೆಳಕ್ಕೆ ಬಿದ್ದು ಕಷ್ಟ ಭೋಗಿಸಬೇಕಾಗುತ್ತದೆ. ಅವರು ದಕ್ಷಿಣದ ಒಬ್ಬ ಭಟ್ಟಾರಕರ ಉದಾಹರಣೆ ಕೊಟ್ಟರು. ಹೀನಾಚರಣೆಯಿಂದ ಸಾಯುವಾಗ ಅವರ ಶರೀರದಲ್ಲಿ ಹುಳ ಬಿದ್ದವು. ಅಸಹ್ಯ ದುರ್ಗಂಧ ಹೊರಬರಲಾರಂಭಿಸಿತು. ಅವರ ಸಮೀಪಕ್ಕೆ ಹೋಗಲು ಯಾರೂ ಸಾಹಸ ಮಾಡುತ್ತಿರಲಿಲ್ಲ. ಅಲ್ಲಿ ಗಂಧದೆಣ್ಣೆ ಚುಮುಕಿಸಿ, ತಮ್ಮ ಮೈಗೆ ಹಚ್ಚಿಕೊಂಡು, ಮೂಗಿಗೆ ಬಟ್ಟೆ ಕಟ್ಟಿಕೊಂಡು ಬಹಳ ಸಾಹಸದಿಂದ ಶವವನ್ನು ಹೊರ ತೆಗೆದು ದಹನ ಕ್ರಿಯೆ ಮಾಡಿದರು. ಮಹಾಪಾಪದಿಂದ ಈ ಸ್ಥಿತಿ ಬರುತ್ತದೆ"

## ವಿದೇಹದಲ್ಲಿ ದ್ರವ್ಯ ಮಿಥ್ಯಾತ್ವವಿಲ್ಲ.

ಪ್ರಶ್ನೆ : "ವಿದೇಹದಲ್ಲಿ ದ್ರವ್ಯ ಮಿಥ್ಯಾತ್ವವಿಲ್ಲ ಎಂದು ಹೇಳಿದೆ. ಇದಕ್ಕೆ ಕಾರಣವೇನು?"

ಉತ್ತರ : ವಿದೇಹಗಳಲ್ಲಿ ದ್ರವ್ಯ ಮಿಥ್ಯಾತ್ವದ ಸದ್ಭಾವವಿಲ್ಲ ಏಕೆಂದರೆ ಅಲ್ಲಿ ಸದಾ ಕೇವಲಿ ಶ್ರುತಕೇವಲಿಗಳಿರುತ್ತಾರೆ. ಅಲ್ಲಿ ಸದಾ ಚತುರ್ಥ ಕಾಲದ ಪರಿಸ್ಥಿತಿ ಇರುತ್ತದೆ. ಯಾವ ರೀತಿ ಕಾಲಪರಿವರ್ತನೆಗಳಿಂದ ಭರತಖಂಡದಲ್ಲಿ ದ್ರವ್ಯ ಮಿಥ್ಯಾತ್ವ ಕಂಡುಬರುತ್ತದೋ ಆ ರೀತಿ ಅಲ್ಲಿ ಕಂಡು ಬರುವುದಿಲ್ಲ"

ಭರತ ಐರಾವತ ಖಂಡಗಳಲ್ಲಿ ಉತ್ಸರ್ಪಿಣಿ ಅವಸರ್ಪಿಣಿ ಕಾಲ ಪರಿವರ್ತನೆಯಲ್ಲಿ ಮಿಥ್ಯಾತ್ವದ ಆವಿರ್ಭಾವ ಮತ್ತು ನಾಶ ನಡೆಯುತ್ತದೆ. ಆದೆ ವಿದೇಹಗಳಲ್ಲಿ ಮಿಥ್ಯಾದೃಷ್ಟಿಗಳಿರುತ್ತಾರೆ. ಮಿಥ್ಯಾಧರ್ಮಗಳಿರುವುದಿಲ್ಲ.

ಪ್ರಶ್ನೆ : "ದರ್ಶನವಿಶುದ್ಧಿ ಭಾವಯುಕ್ತ ಕ್ಷಯೋಪಶಮ ಮತ್ತು ಅದು ಇಲ್ಲದ ಕ್ಷಾಯಿಕ ಇವೆರಡರಲ್ಲಿ ಯಾವುದು ಉನ್ನತ?"

ಉತ್ತರ : "ತೀರ್ಥಂಕರ ಪ್ರಕೃತಿ ಬಂಧ ಬೀಳಿಸುವ ಸಾಧಾರಣ ಕ್ಷಾಯಿಕವೇ ಶ್ರೇಷ್ಠ ಏಕೆಂದರೆ ತೀರ್ಥಂಕರ ಪ್ರಕೃತಿ ಬಂಧ ಮಾಡುವ ಕ್ಷಾಯಿಕ ಸಮ್ಯಕ್ತ್ವದಿಂದ ಜೀವ ಸ್ವಯಂ ಸಂಸಾರದಿಂದ ಪಾರಾಗುವುದಲ್ಲದೆ ಅಸಂಖ್ಯಾತ ಜೀವಿಗಳನ್ನು ಪಾರು ಮಾಡಬಲ್ಲದು."

ಪ್ರಶ್ನೆ : ಕೇವಲಿಭಗವಾನರು ೧೩ನೆ ಗುಣಸ್ಥಾನದಲ್ಲಿ ಯೋಗ ಧಾರಣೆ ಮಾಡಲು ಕಾರಣವೇನು?

ಉತ್ತರ : ಉತ್ತರ ಗುಣಗಳು ಪೂರ್ಣವಾಗಿರದ ಕಾರಣ ಕರ್ಮಾಸ್ರವ ಆಗುತ್ತಲೇ ಇರುತ್ತದೆ. ಆರನೆ ಗುಣ ಸ್ಥಾನದಲ್ಲೇ ಉತ್ತರ ಗುಣಗಳು ಪೂರ್ಣವಾಗುತ್ತವೆಂದು ಅಜ್ಞಾನಿಗಳು ತಿಳಿಯುತ್ತಾರೆ. ಆದ್ದರಿಂದ ೧೩ ನೇ ಗುಣಸ್ಥಾನದಲ್ಲಿ ಯೋಗ ಧಾರಣೆ ಮಾಡುವ ಅಗತ್ಯವಿದೆ."

ಆಹಾರದ ವೇಳೆಯಲ್ಲಿ ಜನಗಳು ಬಹಳ ಗಡಿಬಿಡಿ ಮಾಡುತ್ತಿದ್ದರು. ಆಹಾರ ಪದಾರ್ಥಗಳನ್ನು ಹೊರಗಿನಿಂದಲೂ ತರುತ್ತಿದ್ದರು. ಚೌಕದಿಂದ ಹೊರಗೆ ತಂದ ವಸ್ತುಗಳನ್ನು ಮುನಿಗಳು ಸ್ವೀಕರಿಸುವುದಿಲ್ಲ. ಈ ಬಗ್ಗೆ ನಾನು ಕೇಳಿದೆ. ಆಗ ಅವರೆಂದರು.

"ಒಂದು ವೇಳೆ ನಾವು ಇಚ್ಛಿಸುವುದಾದರೆ ಈ ಗಡಿಬಿಡಿಯನ್ನು ಒಂದೇ ದಿನದಲ್ಲಿ ಬಂದ್ ಮಾಡಿ ಬಿಡಬಲ್ಲೆವು. ಒಂದೇ ಮನೆಯ ಭೋಜ್ಯವಸ್ತುಗಳನ್ನು ತೆಗೆದುಕೊಳ್ಳಲು ನಿಯಮವಿಟ್ಟುಕೊಳ್ಳುವುದಾದರೆ ಈ ಗಡಿಬಿಡಿ ಹೇಗೆ ಉಂಟಾದೀತು?ಜನಗಳಿಗೆ ದುಃಖವೂ ಆಗದು. ನಮ್ಮ ಕೆಲಸವೂ ಆಗುತ್ತದೆ. ಹಾಗೆ ಯೋಚಿಸುತ್ತಿದ್ದೇವೆ "

## ವೃದ್ಧನ ಸಮಾಧಿ

೧೯೫೭ರ ಕುಂಥಲಗಿರಿ ಚಾತುರ್ಮಾಸ ಕಾಲ. ಲೋಣಂದಾದ ೭೦ ವರ್ಷ ವಯಸ್ಸಿನ ಒಬ್ಬ ವೃದ್ಧ ೧೬ ದಿನಗಳ ಉಪವಾಸ ಸ್ವೀಕರಿಸಿದ. ಆದರೆ ೧೫ನೇ ದಿನವೇ ಆ ವೃದ್ಧನ ಅಂತ್ಯವಾಗಿ ಹೋಯಿತು. ಪೂಜ್ಯಶ್ರೀಯವರು ಏಕಾಕಿ



೧೬ ಉಪವಾಸಗಳ ನಿಯಮ ಕೊಡದೇ ಹೋದರು. "ನೀನು ಬಹಳ ಮುಪ್ಪಿನವನು. ೧೬ ಉಪವಾಸ ತಾಳಿಕೊಳ್ಳಲಾರೆ"ಎಂದು ಹೇಳಿ ನೋಡಿದರು. "ಪ್ರಾಣ ಹೋದರೂ ಸರಿ" ವ್ರತ ಭಂಗ ಮಾಡಲಾರೆ. ಉಪವಾಸ ನಿಯಮ ಕೊಡಿ ಎಂದು ಒತ್ತಾಯಿಸಲಾರಂಭಿಸಿದ. ಆ ವೃದ್ಧನಿಗೆ ಒಳ್ಳೆಯದಾಗುವ ಕಾಲ ಬಂದಿತ್ತು. ದೃಢ ಮನಸ್ಸೂ ಇತ್ತು. ಕೊಟ್ಟುಬಿಟ್ಟರು. ಆಗ ನಾವು ಅಲ್ಲೆ ಇದ್ದೆವು. ಆ ವೃದ್ಧನ ಅಂತ್ಯ ಬಹಳ ಸಾವಧಾನಪೂರ್ವಕ ಆಯಿತು.

ದುಃಖಿಗಳಾದ ಆ ವೃದ್ಧನ ಬಂಧುಗಳಿಗ ಅವರು ಹೇಳಿದರು–

"ಆ ಸಹೋದರನಿಗೆ ದೇವಗತಿ ಆಗಿದೆಯೆಂದೇ ಖಾತ್ರಿಯಿಂದ ಹೇಳುತ್ತೇವೆ. ಈ ನಿರ್ವಾಣ ಭೂಮಿಯ ಪ್ರಭಾವ ಮತ್ತು ಇಂತಹ ಉಪವಾಸದಿಂದಾಗುವ ಆತ್ಮಶುದ್ಧಿ ಸಾಮಾನ್ಯವಾದುದಲ್ಲ. ಅವನ ಬಗ್ಗೆ ಶೋಕಿಸುವುದು ಉಚಿತವಲ್ಲ."ಅವರ ವಚನದಿಂದ ಆ ವೃದ್ಧನ ಬಂಧುಗಳಿಗೆ ಶಾಂತಿ ಸಿಕ್ಕಿತು.

## ಕೇಶಲೋಚನ

ನೇಮಿಸಾಗರರ ಕೇಶಲೋಚನವಿತ್ತು. ಅದು ಆದನಂತರ ಅವರಲ್ಲಿ ಪ್ರಶ್ನೆ ಹಾಕಿದೆ.

"ನಿಮ್ಮ ಕೇಶ ಲೋಚು ನೋಡಿ ಕೆಲವರ ಕಣ್ಣಲ್ಲಿ ನೀರು ಬಂದಿತ್ತು. ಆದರೆ ನಿಮ್ಮ ಮುಖದಲ್ಲಿ ಯಾವ ವಿಕೃತಿಯೂ ಕಂಡು ಬರಲಿಲ್ಲ. ನಿಮಗೆ ಯಾವ ಕಷ್ಟವೂ ಆಗಲಿಲ್ಲವೇ?

ಉತ್ತರ : "ನಮಗೆ ಯಾವ ಕಷ್ಟವೂ ಇಲ್ಲ. ಕೇಶಲೋಚನ ಮಾಡುತ್ತಾ ಬಹಳ ವರ್ಷ ಕಳೆದಿದ್ದೇವೆ. ಅಭ್ಯಾಸವಾಗಿ ಹೋಗಿದೆ."

ಆಗ ಆಚಾರ್ಯ ಶ್ರೀಯವರ ಮಾರ್ಮಿಕ ಉಪದೇಶ ನಡೆಯಿತು.

"ಈ ಜೀವ ಚತುರ್ಗತಿಯಲ್ಲಿ ಸುತ್ತುತ್ತಿದೆ. ಸ್ವರ್ಗದಲ್ಲಿ ತನ್ನ ಇಚ್ಛೆಯನ್ನು ಪೂರ್ಣ ತಣಿಸುವಷ್ಟು ಭೋಗ ಭೋಗಿಸಿತು. ಅಲ್ಲಿ ರೋಗ, ಅಪ ಮೃತ್ಯು ಭೋಗಗಳ ಖಂಡನೆ ಇಲ್ಲ. ಇಷ್ಟೆಲ್ಲಾ ಇದ್ದರೂ ಆ ಸುಖವೂ ಶಾಶ್ವತವಲ್ಲ. ನರಕದಲ್ಲಿ ಭಯಾನಕ ವೇದನೆ ಸಹಿಸುತ್ತದೆ. ತಿರ್ಯಂಚಗತಿಗಳಲ್ಲಿ ಪರಾಧೀನ ದುಃಖವನ್ನು ಮೌನವಾಗಿ ಸಹಿಸಬೇಕಾಗುತ್ತದೆ. ಮನುಷ್ಯ ಗತಿಯಲ್ಲೂ ಸಹ ಈ ಜೀವಕ್ಕೆ ನೆಮ್ಮದಿ ಇಲ್ಲ. ಸಿದ್ಧ ಗತಿಯಲ್ಲಿ ಮಾತ್ರ ನೈಸರ್ಗಿಕ ಸುಖವಿದೆ.

ಅನಂತ ಶಾಂತಿ ಇದೆ. ಅದಕ್ಕಾಗಿ ಏನು ಮಾಡಬೇಕಾಗಿದೆ? ನೀವೆಲ್ಲಾ ರತ್ನತ್ರಯವನ್ನು ಧರಿಸಬೇಕು ಅದರಿಂದ ನಿಮ್ಮ ಕಲ್ಯಾಣ ಆದೀತು."

## ಸಮ್ಯಕ್ತ್ವ

ಸಮ್ಯಗ್ದರ್ಶನ ಎಂದರೇನು?ಮಿಥ್ಯಾತ್ವವೆಂದರೇನು? ಎಂದು ಮೊದಲು ತಿಳಿಯದೆ ಮುಕ್ತಿಯ ಮಾತೇ ಇಲ್ಲ ಅವರು ಒಮ್ಮೆ ಕೇಳಿದರು.

"ಯಾರು ಮಿಥ್ಯಾದೃಷ್ಟಿಗಳು ಕೈ ಎತ್ತಿ ?"

ಒಬ್ಬರಿಗೊಬ್ಬರು ಮುಖ ನೋಡಿಕೊಂಡರು. ಮಿಥ್ಯಾದೃಷ್ಟಿಗಳಾಗಲು ಯಾರಿಗೂ ಬೇಕಿರಲಿಲ್ಲ. ಯಾರೂ ಕೈ ಎತ್ತಲಿಲ್ಲ.

"ಯಾರು ಸಮ್ಯಗ್ದೃಷ್ಟಿಗಳು ಕೈ ಎತ್ತಿ?

ಸಮ್ಯಗ್ದೃಷ್ಟಿಗಳೆಂದು ಹೇಳಿಕೊಳ್ಳುವ ಧೈರ್ಯವೂ ಯಾರಿಗೂ ಬರಲಿಲ್ಲ. ಅದಕ್ಕೂ ಕೈ ಎತ್ತಲಿಲ್ಲ. ಮಂದಸ್ಮಿತರಾಗಿ ಅವರೇ ಉತ್ತರಿಸಲಾರಂಭಿಸಿದರು. 'ನಾವೂ ನೀವು ಏನು, ಬೇರೆ ಯಾರೂ ಈ ಪ್ರಶ್ನೆಗಳಿಗೆ ಉತ್ತರ ಹೇಳಲಾರರು. ಯಾರು ಸಮ್ಯದೃಷ್ಟಿ ಯಾರು ಮಿಥ್ಯಾದೃಷ್ಟಿಯೆಂದು ಕೇವಲಿ ಮನಃಪರ್ಯಾಯ ಜ್ಞಾನಿಗಳೇ ಹೇಳಬಲ್ಲರು.

ಸಮ್ಯಕ್ತ್ವದ ಬಗ್ಗೆ ಕುಂದಕುಂದರು ಹೀಗೆ ಹೇಳಿದ್ದಾರೆ.

"ಅರಹಂತೆ ಸಹಬತ್ತಿ ಸಮ್ಮತಂ"ಅರ್ಹಂತರಲ್ಲಿ ಶುದ್ಧ ಭಕ್ತಿಯೇ ಸಮ್ಯಕ್ತ್ವ ಭಕ್ತಿಯ ಸ್ವರೂಪ ಹೇಗಿರುತ್ತದೆ?

ಮನಸಾ ಕರ್ಮಣಾ ವಾಚಾ ಜಿನ ನಾಮಾಕ್ಷರ ದ್ವಯಂ

ಸದೈವ ಸ್ಮರ್ಯತಿ ಯತ್ರ ಸಾರ್ಹದ್ಭಕ್ತಿಃ ಪ್ರಕೀರ್ತಿತಾ

ಮನ ವಚನ ಕಾಯಗಳಿಂದ 'ಜಿನ'ನಾಮಾಕ್ಷರ ಸ್ಮರಿಸುವುದೇ ಅರ್ಹದ್ಭಕ್ತಿ

ಅಂತಹ ಸಮ್ಯಕ್ತ್ವದ ಲಕ್ಷಣವೇನು?

"ಪ್ರಶಮ, ಸಂವೇಗ, ಅನುಕಂಪ ಮತ್ತು ಅಸ್ತಿಕ್ಯವು ಬಾಹ್ಯ ಲಕ್ಷಣಗಳು. ಕಷಾಯಗಳ ಉದಯದ ಅಭಾವವೇ ಪ್ರಶಮ ಭಾವ. ಈ ಕಷಾಯಗಳ ಕ್ಷಯ ೧೦ನೇ ಗುಣಸ್ಥಾನದಲ್ಲಾಗುತ್ತದೆ. ೧೨ ರಲ್ಲಿ ಮೋಹ ಸಂಪೂರ್ಣ ಕ್ಷಯವಾಗುತ್ತದೆ. ಜೀವಿಗಳ ಬಗ್ಗ ದಯಾಭಾವವೇ ಅನುಕಂಪ. ಸಂಸಾರ ಶರೀರ ಭೋಗಗಳಲ್ಲಿ ವಿರಕ್ತಿ ಸಂವೇಗ. ಜಿನವಾಣಿಯಲ್ಲಿ ಶ್ರದ್ಧೆಯೇ ಅಸ್ತಿಕ್ಯ. ಇದು ಪ್ರಾಪ್ತವಾಗುವುದು



ಕಠಿಣ, ಪ್ರಶಮ ಸಂವೇನಾದಿಗಳು ಎಲ್ಲರಲ್ಲೂ ಇರುತ್ತದೆ, ಆದರೆ ಅಸ್ತಿಕ್ಯ ಕೇವಲ ಭವ್ಯ ಜೀವಿಗೆ ಮಾತ್ರ ಹುಟ್ಟುತ್ತದೆ."

## ಗೃಹಸ್ಥರ ಕರ್ತವ್ಯಗಳು

ಗೃಹಸ್ಥರು ಏನು ಮಾಡಬೇಕು?ಕಡಿಮೆಯಿಂದ ಕಡಿಮೆ ಮನವಚನ ಕಾಯ ಕೃತ ಕಾರಿತಾನುಮೋದಪೂರ್ವಕ ಸಾವದ್ಯ ದೋಷ ತ್ಯಜಿಸಬೇಕು. ಈ ಶರೀರದಲ್ಲಿ ತಿಲದಲ್ಲಿ ತೈಲವಿರುವಂತೆ ಸರ್ವತ್ರ ಆತ್ಮನಿದ್ದಾನೆ. ಉಗುರಿಕ್ಕಿದರೆ ನೋಯದ, ಜಾಗ ಬಿಟ್ಟು ಅನ್ಯತ್ರ ಸಮಸ್ತ ಕಡೆಯ ಆತ್ಮನಿದ್ದಾನೆ. ಧೂಳರಾಶಿಯಲ್ಲಿ ಹೂತಿರುವ ಮಾಣಿಕ್ಯದ ಮೂರ್ತಿಯಂತೆ ಆತ್ಮನನ್ನು ಶರೀರದಿಂದಲೆ ಬೇರ್ಪಡಿಸಿ ನೋಡಿ. ನಮ್ಮದಲ್ಲದ ಜಡದೇಹದ ಮಮತೆ ತ್ಯಜಿಸಿ, ಆತ್ಮನಲ್ಲಿ ಶ್ರದ್ಧೆ ಬೆಳಸಿ. ಆಗ ನಿಮ್ಮಲ್ಲಿ ನೀವು ಸುರಕ್ಷಿತವಾಗಿದ್ದಂತೆ. ಸರ್ವ ಅಪಾಯಗಳಿಂದಲೂ ಪಾರಾದಂತೆ! ಗೃಹಸ್ಥಾಶ್ರಮ ಮುಕ್ತಿಯ ಮೊದಲು ಮೆಟ್ಟಿಲು. ಅದು ಭೋಗದ ಆಟದ ಮೈದಾನವಲ್ಲ. ಅದು ಆತ್ಮಕಲ್ಯಾಣದ ದೀಕ್ಷೆಯ ಸ್ಥಾನ. ಗೃಹಸ್ಥನಾದವನು ೨೪ ಗಂಟೆಗಳಲ್ಲಿ ಕಡಿಮೆಯಿಂದ ಕಡಿಮೆ ೧೫ ನಿಮಿಷಗಳಾದರೂ ಆತ್ಮಧ್ಯಾನ ಮಾಡಬೇಕು. ಅಷ್ಟು ಮಾಡದೆ ಸಂಸ್ಕಾರ ಉಳಿಯುವುದಿಲ್ಲ. ಆತ್ಮ ಜಾಗೃತಿ ಮೂಡುವುದಿಲ್ಲ. ಮೋಕ್ಷದತ್ತ ಭಾವನೆಯೂ ಬರುವುದಿಲ್ಲ. ಆತ್ಮ ಧ್ಯಾನದಿಂದ ಪ್ರತಿಕ್ಷಣ ಅಸಂಖ್ಯಾತ **ಗುಣೆ** ಕರ್ಮ ನಿರ್ಜರೆ ಆಗುತ್ತದೆ. ಅದಿಲ್ಲದೆ ಅಷ್ಟೇ ಕರ್ಮ ಬಂಧ ಆಗುತ್ತಿರುತ್ತದೆ. ಆಗ ಸಂಸಾರ ಅನಂತಾನಂತವಾಗಿ ಬೆಳೆದುಹೋಗುತ್ತದೆ. ಆದ್ದರಿಂದ ಮೋಕ್ಷ ಪ್ರಾಪ್ತಿಗಾಗಿ ಆತ್ಮಚಿಂತನೆ ಅತ್ಯವಶ್ಯಕವಾಗಿದೆ. ಅದು ಗೃಹಸ್ಥಾವಸ್ಥೆಯಲ್ಲೇ ಆರಂಭಗೊಂಡು ಮುನಿ ಅವಸ್ಥೆಯಲ್ಲಿ ಬೆಳೆಯುತ್ತದೆ.

## ವ್ರತ ಸಂಬಂಧಿ ಚರ್ಚೆ

ಪ್ರಶ್ನೆ : "ಹ್ರಾಂ, ಹ್ರುಂ, ಹ್ರೂಂ, ಇತ್ಯಾದಿ ಬೀಜಾಕ್ಷರಗಳ ಅರ್ಥವೇನು?"

ಉತ್ತರ : "ಇವು ಉಪಯೋಗಿ ಬೀಜಾಕ್ಷರಗಳಾಗಿವೆ. "ಓಂ ಅರಹಂತ ಸಿದ್ಧ ಸಾಧುಭ್ಯೋನಮಃ" ಈ ವ್ರತದ ಜಪದಿಂದ ಅತ್ಯಧಿಕ ಫಲ ದೊರೆಯುತ್ತದೆ. ಚಿಕ್ಕಚಿಕ್ಕ ಮಂತ್ರಗಳಿಂದ ಇಷ್ಟು ಫಲ ದೊರೆಯುವುದಿಲ್ಲಾ. ನಾವು ಧರ್ಮ ಸಂಕಟ ಬಂದಾಗ ೧೮ ಲಕ್ಷ ಜಪಮಾಡಿದ್ದೇವೆ. ನಮ್ಮ ಸ್ವಾಸ್ಥ್ಯ ರಕ್ಷಣೆಗಾಗಿ ಎಂದೂ ಮಾಡಲಿಲ್ಲ.

ಅವರು ಜಪಿಸುತ್ತಿದ್ದ ಬೀಜಾಕ್ಷರಗಳು ಹೀಗಿದ್ದವು.

೧. ಓಂ ಅರಹಂತ ಸಿದ್ಧ ಸಾಧುಭ್ಯೋ ನಮಃ

ಪ್ರಶ್ನೆ : ಕಠಿಣ ತಪಸ್ಸಿನಿಂದ ಶಾರೀರಿಕ ಕಷ್ಟವಾಗುತ್ತಿತ್ತೋ ಇಲ್ಲವೋ?

ಉತ್ತರ : ನಮಗೆ ಆತ್ಮ ಶಕ್ತಿಯಲ್ಲಿ ಭರವಸೆ ಇದೆ.

ಪ್ರಶ್ನೆ : ಮೌನ ವ್ರತದಿಂದ ನಿಮಗೇನಾದರೂ ಲಾಭ ಕಂಡಿದೆಯೇ?

ಜನಗಳೊಡನೆ ಮಾಡುವ ವಚನಾಲಾಪದಿಂದ ಏನು ಪ್ರಯೋಜನ. ನಮ್ಮ ಕಿವಿಯಲ್ಲಿ ಬಿದ್ದ ಶಬ್ದದಿಂದ ಹೃದಯದಲ್ಲಿ ಯಾವ ಪರಿಣಾಮವೂ ಹುಟ್ಟುವುದಿಲ್ಲ. ನಮ್ಮ ವಿಚಾರ ಮುಂದೂ ಹೀಗೆಯೇ ಮೌನ ಧಾರಣೆ ಮಾಡುವುದಿದೆ. ಮೌನದಿಂದ ಆತ್ಮ ಶಕ್ತಿಯ ಅಪವ್ಯಯ ತಡೆಯಲ್ಪಡುತ್ತದೆ. ಮನಸ್ಸು ಮತ್ತೂ ಹತೋಟಿಯಲ್ಲಿರುತ್ತದೆ. ಕಾಯ ಚೇಷ್ಟೆಯೂ ಕಡಿಮೆ ಆಗುತ್ತದೆ. ಮೌನದಿಂದ ಆತ್ಮ ಕಲ್ಯಾಣ ಸಮೀಪಿಸುತ್ತದೆ."

ಒಮ್ಮೆ ನಾನು ಕೇಳಿದೆ – "ಮಹರಾಜ್!ನೀವು ದೀರ್ಘ ಪ್ರವಾಸದಿಂದ ಈರ್ಯಾ ಸಮಿತಿಯನ್ನು ಹೇಗೆ ಪಾಲಿಸುತ್ತೀರಿ?"

ಉತ್ತರ : "ಒಂದು ಗಂಟೆಯಲ್ಲಿ ಮೂರು ಮೈಲು ನಡೆಯುತ್ತೇವೆ. ಬೊಂಬಾಯಿ ಮಂದಿರ ಪ್ರವೇಶ ಕಾನೂನಿನ ನಿಮಿತ್ತ ಬೊಂಬಾಯಿಗೆ ಹೋಗಿದ್ದೆವು. ಸಾಮಾಯಿಕ ಸಮಯ ಬಿಟ್ಟು ಉಪವಾಸವಿದ್ದರೂ ದಿನಕ್ಕೆ ೩೦ ಮೈಲು ನಡೆಯುತ್ತವೆ.

## ಅಗಸ ಮತ್ತು ಪಂಡಿತ

ಒಮ್ಮೆ ಅವರು ಪಂಡಿತರ ಬಗ್ಗೆ ಮಾರ್ಮಿಕ ವಿಚಾರ ತಿಳಿಸಿದರು.'

"ನೀವೆಲ್ಲಾ ಪಂಡಿತರು ಧರ್ಮದ ಬಗ್ಗ ಬೇಕಾದಷ್ಟು ಹೇಳಬಲ್ಲಿರಿ ಆದರೆ ಅದರಂತೆ ಸ್ವಯಂ ನಡೆಯಲಾರಿರಿ. ಇದು ಅಗಸನ ಕೆಲಸದಂತೆ! ಅಗಸ ಬೇರೆಯವರ ಬಟ್ಟೆ ಮಾತ್ರ ಶುಚಿಗೊಳಿಸುತ್ತಾನೆ. ಆದರೆ ಸ್ವಯಂ ಕೊಳೆ ಬಟ್ಟೆ ಹಾಕಿಕೊಳ್ಳುತ್ತಾನೆ.

## ಪೂರ್ವದಲ್ಲಿ ಮುನಿ

ಸಂಘಪತಿ ಸಮೀಪದಲ್ಲಿ ಕೂತಿದ್ದರು. ಆಗ ಒಂದು ಮಾತು ಹೇಳಿದರು.

"ಈ ಭವದ ಮೊದಲು ಮುನಿಧರ್ಮ ಸ್ವೀಕರಿಸಿರಬಹುದು"



ಆಗ ನಾನು ಕೇಳಿದೆ. "ನೀವು ಈ ಮಾತನ್ನು ಯಾವ ಆದಾರದ ಮೇಲೆ ಹೇಳುತ್ತೀರಿ."

ಉತ್ತರ : ನಮ್ಮ ಹತ್ತಿರ ದೀಕ್ಷೆ ತೆಗೆದುಕೊಳ್ಳುವ ಮುನ್ನ ಮೂಲಾಚಾರಗ್ರಂಥವಿರಲಿಲ್ಲ. ಆದರೂ ನಮ್ಮ ಅನುಭವದಿಂದ ಹೇಗೆ ಪ್ರವೃತ್ತಿ ಮಾಡುತ್ತಿದ್ದೆವೋ ಅದರ ಯಥಾಕ್ರಮ ವಿವರಣೆ ಶಾಸ್ತ್ರದಲ್ಲಿ ಇರುತ್ತಿತ್ತು. ಹೀಗೆ ಅನೇಕ ಪ್ರಸಂಗಗಳಲ್ಲಿ ಉಂಟಾಗಿದೆ.ಆದ್ದರಿಂದ ಒಂದೆರಡು ಭವಗಳ ಪೂರ್ವದಲ್ಲಿ ಅವಶ್ಯ ಮುನಿಧರ್ಮ ಪಾಲಿಸಿರಬೇಕು"

## ತಮ್ಮ ಗೃಹಸ್ಥ ಜೀವನದ ಬಗ್ಗೆ

"ನಾವು ನಮ್ಮ ಅಂಗಡಿಯಲ್ಲಿ ೫ ವರ್ಷಗಳವರೆಗೆ ವ್ಯವಹಾರ ಮಾಡಿಕೊಂಡಿದ್ದೆವು. ಯಾರೋ ಬಂದು ಸಾಮಾನುಗಳನ್ನು ತೆಗೆದುಕೊಂಡು ಹೋಗುತ್ತಿದ್ದರು. ಆ ಕಡೆ ಹೆಚ್ಚು ಗಮನವಿಡುತ್ತಿರಲಿಲ್ಲ.ನಾವೂ ಹೊರಗಿನವರಂತೆಯೇ ಅಂಗಡಿಯಲ್ಲಿದ್ದುಕೊಂಡು ಸ್ವಸ್ವರೂಪದ ಚಿಂತನೆಯಲ್ಲಿರುತ್ತಿದ್ದೆವು."

"ಜೀವನದಲ್ಲಿ ನಮಗೆಂದೂ ಆರ್ತ ರೌದ್ರ ಧ್ಯಾನಗಳಾಗುತ್ತಿರಲಿಲ್ಲ. ಮನೆಯಲ್ಲಿದ್ದರೂ ಇಲ್ಲದಂತೆ ಇರುತ್ತಿದ್ದೆವು. ಲಾಭ-ನಷ್ಟ, ಸುಖ-ದುಃಖಗಳು ಉಂಟಾಗುತ್ತಿದ್ದರೂ ಮನಸ್ಸಿಗೆ ಹಚ್ಚಿಕೊಳ್ಳುತ್ತಿರಲಿಲ್ಲ."

"ನಾವು ನಮ್ಮ ಮನೆಯಲ್ಲಿ ಏಕಭಕ್ತ ಮತ್ತು ಧಾರಣೆ-ಪಾರಣೆ ಮಾಡಿದ್ದೇವೆ"

## ಸ್ನೇಹಿತ ರುದ್ರಪ್ಪನ ಬಗ್ಗೆ

ರುದ್ರಪ್ಪ ಶ್ರೀಮಂತ ಕುಟುಂಬದ ವ್ಯಕ್ತಿ. ಅವರು ತಮ್ಮ ಕೋಣೆಯ ಬಾಗಿಲು ಮುಚ್ಚಿ ಒಳಗೇ ಕೂತಿರುತ್ತಿದ್ದರು. ಯಾರೊಡನೆಯೂ ವ್ಯರ್ಥವಾಗಿ ಹೆಚ್ಚು ಮಾತಾಡುತ್ತಿರಲಿಲ್ಲ. ನಮ್ಮೊಡನೆ ಮಾತ್ರ ಹೃದಯಬಿಚ್ಚಿ ಧರ್ಮ ಚರ್ಚೆ ಮಾಡುತ್ತಿದ್ದರು. ನಮ್ಮಲ್ಲಿ ಅವರಿಗೆ ವಿಶೇಷ ಸ್ನೇಹವಿತ್ತು. ಅವರು ಪಕ್ಕಾ ಸತ್ಯ ನಿಷ್ಠ ವ್ಯಕ್ತಿ.

## ತಮ್ಮ ಬಗ್ಗೆ

ತಾವೇನಾದರೂ ಒಂದು ಮಾತು ಹೇಳಿದರೆ ಪತ್ರವಿಲ್ಲದೆ ಸಾವಿರಾರು ರೂಪಾಯಿಗಳನ್ನು ಕೊಡುವವರಿದ್ದರು. ನಾವು ಯಾರೊಡನೆಯೂ ಎಂದೂ ಜಗಳವಾಡಲಿಲ್ಲ. ತಂದೆ ಗತಿಸಿದ ನಂತರ ಶೀಘ್ರವಾಗಿ ದೀಕ್ಷೆ ತೆಗೆದುಕೊಂಡೆವು.

ದೀಕ್ಷೆ ನಂತರ ೫ ವರ್ಷಗಳವರೆಗೆ ಕೇವಲ ಅನ್ನ ಮತ್ತು ಹಾಲನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು.

## ನಿಮಿತ್ತ ಕಾರಣ.

ನಿಮಿತ್ತ ಕಾರಣವೂ ಬಲವಾನ್ ಇದೆ. ಕುಂಬಾರನಿಲ್ಲದೆ ಕೇವಲ ಮಣ್ಣಿನಿಂದ ಮಡಕೆ ಆಗುವುದಿಲ್ಲ. ಅಗ್ನಿ ಸಂಸ್ಕಾರವೂ ಅಷ್ಟೇ ಅಗತ್ಯ.

ಒಮ್ಮೆ ಹೀಗೆ ಹೇಳಿದರು.

"ಕನಿಷ್ಟ ೫ ರಿಂದ ೧೫ ನಿಮಿಷಗಳವರೆಗಾದರೂ ಆತ್ಮ ಧ್ಯಾನ ಮಾಡಿರಿ. ಇದರಿಂದ ನಿರ್ಜರೆ ಆಗುತ್ತದೆ. ಅದರಿಂದಲೇ ಸಮ್ಯಕ್ತ್ವ ಹುಟ್ಟುತ್ತದೆ. ದಾನ ಪೂಜಾದಿಗಳು ಪುಣ್ಯ ಬಂಧಕ್ಕೆ ಕಾರಣವಾಗಿವೆ. ಸದಾ ಆತ್ಮಚಿಂತನೆ ಮಾಡಿ ಇದೊಂದೇ ಮೋಕ್ಷಕ್ಕೆ ನೇರ ದಾರಿ.

ತಿಲೋಯ ಪಣ್ಣತ್ತಿಯಲ್ಲಿ ಜಿನೇಂದ್ರ ಭಗವಾನರ ಪೂಜೆಯನ್ನು "ಕರ್ಮಕ್ಖಯಣಿಮಿತ್ತಂ"ಎಂದು ಹೇಳಿದೆ. ಜಿನೇಂದ್ರ ಭಗವಂತರ ಪೂಜೆ ಕರ್ಮಕ್ಷಯಕ್ಕೆ ನಿಮಿತ್ತವಾಗಿದೆ. ಆದರಿಂದ ಪಾಪದ ಉಪಶಾಂತಿ ಮತ್ತು ಪುಣ್ಯ ವೃದ್ಧಿಯೂ ಆಗುತ್ತದೆ.

ಅವರು ಶಾಸ್ತ್ರದ ಬಗ್ಗೆ ಕೆಲವು ಮಾತು ಹೇಳಿದರು.

ಶಾಸ್ತ್ರ ದಾನ ಮಾಡಿ. ಅದಕ್ಕೆ ಬಹಳಶಕ್ತಿ ಇದೆ. ಶಾಸ್ತ್ರ ದಾನದಿಂದ ಕೇವಲಿಯಾಗುತ್ತಾನೆ. ಶಾಸ್ತ್ರಗ್ರಂಥಗಳ ವ್ಯಾಪಾರದಿಂದ ಜ್ಞಾನಾವರಣೀಯ ಕರ್ಮಬಂಧವಾಗುತ್ತದೆ. ಶಾಸ್ತ್ರದ ಶಬ್ದ ಕಿವಿಗೆ ಬಿದ್ದಿದ್ದರಿಂದ ಅಂಜನ ಚೋರ ಮೋಕ್ಷಕ್ಕೆ ಹೋದ. ಶಾಸ್ತ್ರದ ಮೂಲಕ ಸಮಸ್ತ ಜೀವಿಗಳ ಕಲ್ಯಾಣವಾಗುತ್ತದೆ.

ಅವರು ಒಂದು ಕಡೆ ನಿಲ್ಲುತ್ತಿರಲಿಲ್ಲ." ಮುನಿ ಒಂದು ಕಡೆ ನಿಲ್ಲಬಾರದು. ವಿಹರಿಸುತ್ತಿರಬೇಕು" ಎಂದು ಹೇಳುತ್ತಿದ್ದರು. ಆಗ ಮುನಿ ನೇಮಿಸಾಗರರು ಹೀಗೆ ಹೇಳಿದರು" ನದಿಯ ನೀರು ಸದಾ ಹರಿಯುತ್ತದೆ. ಅದೇ ರೀತಿ ಮುನಿ ಸದಾ ವಿಹರಿಸುತ್ತಿರಬೇಕು? ಈ ಮಾತಿನ ನಡುವೆ ಒಬ್ಬ ಭಕ್ತ ಶಾಂತಿಸಾಗರರನ್ನು ಕೇಳಿದ.

"ಮಹರಾಜ್!ನೀವಂತೂ ಸಾಗರವಿದ್ದಂತೆ! ಸಾಗರ ಹರಿಯುವುದಿಲ್ಲ. ಒಂದೇ ಕಡೆ ಇರುತ್ತದೆ." ಈ ಮಾತಿನಿಂದ ಅವರಿಗೆ ಮುಗುಳ್ನಗೆ ಮೂಡಿತು. ನಾವು ಪುನ: ಇಲ್ಲಿಗೆ ಬರುತ್ತೇವೆ". ಎಂದು ಪ್ರಸನ್ನ ಚಿತ್ತದಿಂದ ಹೇಳಿದರು.



ಅವರ ಬಳಿ ಕೂಡುತ್ತಿದ್ದರೆ ಎಲ್ಲರಿಗೂ ವಿಶೇಷ ಸ್ಫೂರ್ತಿ ಮೂಡುತ್ತಿತ್ತು. ಅವರು ಮೌನದಿಂದ ಇದ್ದರೂ ಅವರ ಬಳಿ ಸುಮ್ಮನೆ ಕೂತಿದ್ದರೂ ಜನಗಳಿಗೆ ಅದೇನೊ ಒಂದು ರೀತಿಯ ಶಾಂತಿಯ ಅನುಭವ ಆಗುತ್ತಿತ್ತು. ಅವರು ಹೆಚ್ಚು ಹೇಳುತ್ತರಲಿಲ್ಲ. ಹೇಳುವುದನ್ನು ತೂಕ ಮಾಡಿ ಹೇಳುತ್ತಿದ್ದರು. ಅವರು ಹೇಳುವ ಮಾತಿಗೆ ಬೆಲೆ ಕಟ್ಟುವರಾರು? ಅವರ ಮಾತಿನಲ್ಲಿ ಏನೋ ಮೋಡಿ ಇರುತ್ತಿತ್ತು. ಆಕರ್ಷಣೆ ತುಂಬಿರುತ್ತಿತ್ತು. ಅವರ ಬಾಯಿಂದ ಯಾವುದೋ ಅಕಾರಣ ಶಕ್ತಿ ಮಾತಿನ ಮೂಲಕ ಹೊರಬೀಳುತ್ತಿತ್ತು.

## ಪ್ರಾಯಶ್ಚಿತ್ತ

ಒಮ್ಮೆ ಒಬ್ಬ ಮಹಿಳೆ ಅವರು ತ್ಯಾಗ ಮಾಡಿದ ಆಹಾರ ಪದಾರ್ಥವನ್ನು ಕೊಟ್ಟುಬಿಟ್ಟಳು.ಅದರ ಸ್ವಾದ ಹತ್ತುತ್ತಲೇ ಆಹಾರ ತ್ಯಜಿಸಿಬಿಟ್ಟರು. ಪ್ರಾಯಶ್ಚಿತ್ತ ರೂಪದಲ್ಲಿ ಐದು ದಿನಗಳ ಉಪವಾಸ ಗ್ರಹಣೆ ಮಾಡಿದರು. ಅದನ್ನು ನೋಡಿ ಆ ಮಹಿಳೆ ಬಹಳ ವ್ಯಥೆಪಡುತ್ತಾ ತನ್ನಿಂದಲೆ ನೀವು ಐದು ಉಪವಾಸ ತೆಗೆದುಕೊಳ್ಳುವಂತಾಯಿತೆಂದು ಅಳತೊಡಗಿದಳು. ಅವರು ಬಹಳ ಶಾಂತ ಚಿತ್ತದಿಂದ ಸಮಾಧಾನ ಪಡಿಸಲಾರಂಭಿಸಿದರು.

"ಅಮ್ಮಾ! ನೀನೇಕೆ ದುಃಖಪಡುವೆ? ನಮ್ಮ ಅಂತರಾಯ ಕರ್ಮದಿಂದ ಹೀಗಾಯಿತು. ನೀನು ಒಂದು ವೇಳೆ ಸರಿಯಾಗಿ ನೋಡಿ ಆಹಾರ ಕೊಟ್ಟಿದ್ದರೆ ನಮಗೆ ಅಪಕಾರವನ್ನೆ ಮಾಡಿತ್ತಿದ್ದಿ. ನಿನ್ನ ಕಾರಣದಿಂದಲೇ ನಮಗೆ ಉಪಾವಾಸ ಮಾಡುವ ಯೋಗ ಸಿಕ್ಕಿತು. ಅದರಿಂದ ಆತ್ಮಶಾಂತಿ ಮತ್ತು ಆನಂದ ಪ್ರಾಪ್ತವಾಗಿದೆ. ವ್ರತದಲ್ಲಿ ನಮಗೆ ಕಷ್ಟವೇನೂ ಇಲ್ಲ."

## ಬಾಲ ವಿವಾಹ ಪ್ರತಿಬಂಧ ಕಾನೂನು ಪ್ರೇರಣೆ

ಬಾಲ ವಿವಾಹ ಪ್ರತಿಬಂಧ ಕಾನೂನನ್ನು ತರುವ ಮುನ್ನವೇ ಅವರು ಬಾಲ ವಿವಾಹವನ್ನು ವಿರೋಧಿಸಿದ್ದರು. ಅವರ ಪ್ರೇರಣೆಯಿಂದಲೇ ಈ ಕಾನೂನು ಅಸ್ತಿತ್ವಕ್ಕೆ ಬಂತು. ಕೊಲ್ಲಾಪುರದ ದಿವಾನ್ ಬಹದ್ದೂರ್ ಲಠ್ಠೆಯವರು ದಿಗಂಬರ ಜೈನರಾಗಿದ್ದರು. ಅವರಿಗೆ ಮಹಾರಾಷ್ಟ್ರ ಪ್ರಾಂತ್ಯದಲ್ಲಿ ಒಳ್ಳೆಯ ಹೆಸರಿತ್ತು. ಕೊಲ್ಲಪುರದ ಶಾಹಪುರಿ ಮಂದಿರದಲ್ಲಿ ಪಂಚ ಕಲ್ಯಾಣವಿತ್ತು. ಆಗ ಪೂಜ್ಯ ಶ್ರೀಯವರು ಅವರಿಗೆ ಆಶೀರ್ವಾದ ಕೊಡುತ್ತಾ "ನೀವು ಪೂರ್ವ ಪುಣ್ಯದಿಂದ ಈ ರಾಜ್ಯದ ದಿವಾನರಾಗಿದ್ದೀರಿ. ನಿಮ್ಮಿಂದ ನಮಗೆ ಯಾವ ಸಹಾಯವೂ ಬೇಡ. ಜನತೆಗೆ ನೀವೂ ಕಲ್ಯಾಣ ಮಾಡಬಲ್ಲ ಒಂದು ಮಾತಿದೆ" ಎಂದು ಹೇಳಿದರು.ನನಗೆ

ಯೋಗ್ಯ ಸೇವೆ ಮಾಡಲು ಆಜ್ಞೆ ಮಾಡಿ ಎಂದು ಕೈಮುಗಿದು ತಮ್ಮ ಸೇವಾ ಸಮ್ಮತಿ ಸೂಚಿಸಿದರು ಲಠ್ಠೆಯವರು.

" ಚಿಕ್ಕ ಚಿಕ್ಕ ಅರಿಯದ ಮಕ್ಕಳಿಗೆ ಮದುವೆ ಮಾಡುವ ಅನೀತಿಯುತ ಸಂಪ್ರದಾಯವಿನ್ನೂ ಸಮಾಜದಲ್ಲಿ ಉಳಿದು ಬಂದಿದೆ. ಹುಡುಗ ಸತ್ತರೆ ಹುಡುಗಿ ವಿಧವೆಯಾಗುತ್ತಾಳೆ. ಆ ಚಿಕ್ಕ ಮಗುವಿನ ಭವಿಷ್ಯ ಕತ್ತಲಾಗಿಬಿಡುತ್ತದೆ. ಅದ್ದರಿಂದ ನೀವು ಬಾಲ ವಿವಾಹ ಪ್ರತಿಬಂದ ಕಾನೂನು ಮಾಡಿರಿ. ಇದರಿಂದ ನಿಮ್ಮ ಜನ್ಮ ಸಾರ್ಥಕವಾಗುತ್ತದೆ. ಇದರಲ್ಲಿ ಸ್ವಲ್ಪವೂ ವಿಳಂಬವಾಗಬಾರದು ಎಂದು ಹೇಳಿದರು.

ದಿವಾನ್ ಲಠ್ಠೆಯವರಿಗೆ ಈ ಸೂಚನೆ ಕೇಳಿ ಬಹಳ ಆನಂದವಾಯಿತು. ಕೂಡಲೆ ಬಾಲ ವಿವಾಹ ವಿರೋಧ ಕಾನೂನು ಜಾರಿಗೊಳಿಸಲಾಯಿತು. ಮಧ್ಯಾನ್ಹವೇ ಒಬ್ಬ ಸರಕಾರಿ ಕುದುರೆ ಸವಾರ ಒಂದು ಸರಕಾರಿ ಪತ್ರ ಹಿಡಿದು ಪೂಜ್ಯ ಶ್ರೀಯವರಿಗೆ ವಂದಿಸಿ ಕಾಗದ ಪತ್ರಕೊಟ್ಟ. ಜನ ಆಶ್ಚರ್ಯದಲ್ಲಿ ಮುಳುಗಿದರು. ಇಲ್ಲಿ ಯಾವ ಅಶಾಂತಿಯೂ ಇಲ್ಲ. ಶಾಂತಿಯ ಸಾಗರವೇ ಆಗಿರುವ ಈ ಸಾಧುವಿನ ಹತ್ತಿರ ಶಸ್ತ್ರ ಸಜ್ಜಿತ ಅಧಿಕಾರಿ ಏಕೆ ಬಂದ ? ಜನಗಳು ಈ ಪ್ರಶ್ನೆಯ ಉತ್ತರಕ್ಕೆ ಕಾದು ಕುಳಿತರು. ರಾಜ ಮುದ್ರೆಯ ಸರ್ಕಾರಿ ಪತ್ರವನ್ನೇಕೆ ಕೊಟ್ಟ ಎನ್ನುವುದೂ ನಿಗೂಢ ವಿಚಾರವಾಗಿ ಹೋಯಿತು. ಆ ಸರ್ಕಾರಿ ಪತ್ರವನ್ನು ಓದಿದ ಮೇಲೆ ಎಲ್ಲವೂ ಸ್ಪಷ್ಟವಾಯಿತು. ಕೊಲ್ಹಾಪುರ ಸರ್ಕಾರ ಬಾಲವಿವಾಹ ನಿರ್ಬಂಧ ಕಾನೂನು ಹೊರಡಿಸಿದ ದಾಖಲೆ ಆದಾಗಿತ್ತು. ಅದನ್ನು ಓದಿದ ಮೇಲೆ ಅವರ ಮುಖದಲ್ಲಿ ತೃಪ್ತಿಯ ಕಿರುನಗೆ ಮೂಡಿತು.

## ಎರಡನೆಯ ಮಹಾಯುದ್ಧ

ಸನ್ ೧೯೪೦ ಎರಡನೆಯ ಮಹಾ ವಿಶ್ವ ಸಮರ ಆರಂಭಗೊಂಡಿತು. ಅದು ಯಾರಿಂದ ಆರಂಭವಾಯಿತೆಂದು ಕೇಳಿದರು. ಜರ್ಮನಿ ವಿಶ್ವಸಮರ ಆರಂಭ ಮಾಡಿತೆಂದು ಹೇಳಲಾಯಿತು. ನಿಶ್ಚಯವಾಗಿಯೂ ಜರ್ಮನಿ ಸೋಲುವುದೆಂದು ಅವರು ಹೇಳಿದರು. ಮೊದಮೊದಲು ಅವರ ಭವಿಷ್ಯವಾಣಿಯ ಬಗ್ಗೆ ಕುತೂಹಲವಿತ್ತು. ಕಟ್ಟಕಡೆಗೆ ಜರ್ಮನಿ ಸೋತಾಗ ಪರಮಾಶ್ಚರ್ಯವಾಯಿತು. ಇನ್ನೊಮ್ಮೆ ಗಾಂದೀಜಿ ಮತ್ತು ಜವಾಹರ್‌ಲಾಲ್ ನೆಹರುಗಳ ಬಗ್ಗೆ ಪ್ರಸಂಗವಶಾತ್ ತಮ್ಮ ಭಾವನೆಯನ್ನು ವ್ಯಕ್ತ ಮಾಡಿದರು.

"ಗಾಂಧೀಜಿ ಒಳ್ಳೆಯ ಮನುಷ್ಯ. ಅವರೊಡನೆ ಅಧಿಕ ಪುಣ್ಯಶಾಲಿ ನೆಹರೂ ಇದ್ದಾರೆ. ಅವರು ರಾಜ್ಯವಾಳಲು ಯೋಗ್ಯರಿದ್ದಾರ"

ಈ ಮಾತು ಕೇಳಿ ನನಗೆ ಆಶ್ಚರ್ಯವಾಯಿತು. ಆಗ ನಾನು ಕೇಳಿದೆ.



"ಮಹರಾಜ್! ರಾಜನೀತಿ ವಿಚಾರಗಳಿಂದ ನೀವು ದೂರವಿದ್ದೀರಿ. ಆದರೂ ಅವರಿಬ್ಬರ ಬಗ್ಗೆ ಹೇಗೆ ಹೇಳುತ್ತೀರಿ. ಆಗ ಅವರೆಂದರು– "ನಮ್ಮ ಆತ್ಮ ಹೇಳಿದಂತೆ ನುಡಿಯುತ್ತೇವೆ ಅಷ್ಟೆ. ನಮಗೆ ಗಾಂಧಿಯೂ ಗೊತ್ತಿಲ್ಲ. ನೆಹರೂರವರೂ ಗೊತ್ತಿಲ್ಲ.

## ಸಂಘಪತಿಯ ಅನುಭವ

ಸಂಘಪತಿ ಸೇಠ್ ಗೇಂದನ್‌ಮಲ್ ಮತ್ತು ಅವರ ಪರಿವಾರದವರಿಗೆ ಪೂಜ್ಯಶ್ರೀಯವರ ಸೇವಾ ಸಂಬಂಧ ಬಹಳ ಕಾಲದಿಂದ ಇತ್ತು. ಗುರುಚರಣಾ ಸೇವಾ ಫಲಸ್ವರೂಪವಾಗಿ ಅವರಿಗೆ ಮಹಾಸಂಪತ್ತು ಕೀರ್ತಿ ಲಭಿಸಿತ್ತು.

ಅವರು ಒಂದು ದಿನ ತಮ್ಮ ಅನುಭವ ವಿವರಿಸಲಾರಂಭಿಸಿದರು.

"ಪೂಜ್ಯಶ್ರೀಯವರ ಪುಣ್ಯ ಬಹಳ ತೀಕ್ಷ್ಣವಾದುದು. ನಾವು ಅವರೊಡನೆ ಸಾವಿರಾರು ಮೈಲಿಗಳಷ್ಟು ತಿರುಗಿದ್ದೇವೆ. ಎಂದೂ ಯಾವ ಉಪದ್ರವವನ್ನೂ ಕಂಡಿಲ್ಲ. ರಾತ್ರೋರಾತ್ರಿ ಕಾಡಿನಲ್ಲಿ ಹೋಗುತ್ತಿದ್ದೆವು. ಯಾವ ವಿಪತ್ತೂ ಉಂಟಾಗಿಲ್ಲ. ಬಾಗಡ್ ಪ್ರಾಂತ್ಯದ ಜನಗಳು ಎಷ್ಟು ಕ್ರೂರಿಗಳೆಂದರೆ ಕೇವಲ ೧೦ ರೂಪಾಯಿ ಸಿಗುವುದಾದರೆ ಪ್ರಾಣ ಹೀರಲು ಅವರು ಸಿದ್ಧ. ಅಂತಹ ಭಯಾನಕ ಪ್ರದೇಶದಲ್ಲೂ ಅವರ ಪುಣ್ಯ ಪ್ರಭಾವದಿಂದ ನಿಶ್ಚಿಂತೆಯಿಂದ ವಿಹಾರ ಮಾಡಿದ್ದೇವೆ. ವಿಹಾರ ಕಾಲದಲ್ಲಿ ಮಳೆ ಮುಂದೆ ಮುಂದೆ ಹುಯ್ಯುತ್ತಿರುತ್ತದೆ. ಹಿಂದೆ ಹಿಂದೆಯೂ ಸುರಿಯುತ್ತದೆ. ಆದರೆ ಪೂಜ್ಯ ಶ್ರೀಯವರ ಸಂಘದ ಮೇಲೆ ಎಂದೂ ಮಳೆ ಹುಯ್ದು ಪ್ರಕೃತಿ ಉಪಸರ್ಗ ಕೊಟ್ಟದ್ದನ್ನು ನೋಡಿಲ್ಲ. ಕುಂಥಲಗಿರಿಯ ಮೇಲೆ ಕೂತು ಅವರು ಉಪದೇಶ ಕೊಡುತ್ತಿದ್ದ ದೃಶ್ಯ ಸಮವಸರಣವನ್ನು ಸ್ಮರಣೆಗೆ ತರುತ್ತಿತ್ತು".

ಜನಗಳು ಇಂತಹ ಪುಣ್ಯದ ಮಹಿಮೆ ಕಂಡು ಬೆರಗಾಗುತ್ತಾರೆ. ಆಶ್ಚರ್ಯ ಚಕಿತರಾಗುತ್ತಾರೆ. ಅಂತಹ ಪುಣ್ಯ ನಮಗೂ ಬೇಕೆಂದು ಬಯಸುತ್ತಾರೆ. ಆದರೆ ಅದನ್ನು ಗಳಿಸುವ ಗೊಡವೆಗೆ ಹೋಗುವುದಿಲ್ಲ. ಪಾಪಿಗಳ ಪರದಾಟ ಕಂಡು ಇಂತಹ ಪಾಪ ನಮಗೆ ಬೇಡವೇ ಬೇಡ ಅಂದುಕೊಳ್ಳುತ್ತಾರೆ. ಆದರೆ ಪಾಪ ಮಾರ್ಗ ಮಾತ್ರ ಬಿಡುವುದಿಲ್ಲ ಇದು ಲೌಕಿಕ ಜನಗಳಲ್ಲಿ ಕಂಡು ಬರುವ ವಿಚಿತ್ರ ವರ್ತನೆ.

ಮನಸ್ಸು ಮತ್ತು ಮಾತುಗಳಲ್ಲಿ ಹೊಂದಾಣಿಕೆ ಇಲ್ಲದೆ ಢಾಂಬಿಕ ಜೀವನ ನಡೆಸುವ ಆಷಾಢಭೂತಿ ಜನಗಳಿಗೆ ಅವರ ಜೀವನ ಒಂದು ಆದರ್ಶವಾಗಿತ್ತು.

ಅವರು ಪುಣ್ಯದ ಒಂದು ಪರ್ವತವೇ ಆಗಿದ್ದರು. ಕೇವಲ ಪಾಪ ತೊಳೆಯುವುದಷ್ಟೇ ಅವರ ಗುರಿಯಾಗಿರಲಿಲ್ಲ. ಪಾಪ ಪುಣ್ಯಗಳೆರಡು ಆತ್ಮ ಸಾಕ್ಷಾತ್ಕಾರ ಮಾಡಿಕೊಳ್ಳಲಿಚ್ಚಿಸುವವರಿಗೆ ಬೇಡಿಗಳಿದ್ದಂತೆ! ಅವೆರಡು ಬೇಡಿಗಳನ್ನು ತುಂಡರಿಸಿದಾಗಲೇ ಜೀವನಕ್ಕೆ ಸ್ವಾತಂತ್ರ್ಯ ! ಅವರಂತೂ ಪೂರ್ಣ ಸ್ವತಂತ್ರರಾಗಿ ಪೂರ್ಣ ಪ್ರಯತ್ನದಲ್ಲಿ ಸದಾ ಪ್ರಯತ್ನಶೀಲರಾಗಿದ್ದರು. ಪುಣ್ಯದ ಫಲ ಬೇಕೆನಿಸಿದರೆ ಪಾಪದ ಫಲ ಬೇಡವಾದರೆ, ಅಂತಹವರು ಪೂಜ್ಯಶ್ರೀಯವರು ಅಡಿ ಇಟ್ಟು ನಡೆದ ಮಾರ್ಗದಲ್ಲಿ ನಿಃಶಂಕಿತರಾಗಿ ನಡೆದುಹೋಗಬೇಕು.

## ತೃಷಾಪರೀಷಹ

ಒಮ್ಮೆ ಒಂದು ಘಟನೆ ನಡೆಯಿತು. ಅದು ಗ್ರೀಷ್ಮ ಕಾಲ. ಅವರು ಆಹಾರಕ್ಕೆ ಹೊರಟರು. ದಾತೃ ಭಕ್ತಿ ಪೂರ್ವಕ ಒಂದೊಂದೇ ಭೋಜ್ಯ ಪದಾರ್ಥ ಪಾಣಿಪಾತ್ರದಲ್ಲಿ ಹಾಕುತ್ತಾ ಹೋದರು. ಆದರೆ ಜಲಕೊಡಲು ಮರೆತರು. ಆಹಾರ ಜಲವಿಲ್ಲದೆ ಮುಕ್ತಾಯವಾಯಿತು. ಭೀಕರ ಬಿಸಿಲಿನ ತಾಪದಿಂದ ಜಲಕಣವಿಲ್ಲದೆ ಶರೀರ ಬಾಧೆಗೊಳಗಾಯಿತು. ಮಾರನೆಯ ದಿನವೂ ಭಕ್ತಿಯಿಂದ ಶ್ರಾವಕರು ಆಹಾರ ಕೊಟ್ಟರಾದರೂ ಅಂತರಾಯ ಕರ್ಮದ ಉದಯದಿಂದ ಯಾರಿಗೂ ಜಲಕೊಡುವ ವಿಚಾರ ಹೊರಡಲೇ ಇಲ್ಲ. ಸ್ವಲ್ಪ ಕಾಲ ಜಲ ಪ್ರತೀಕ್ಷೆ ಮಾಡಿ ಕುಳಿತುಬಿಟ್ಟರು. ಮುಖ ಶುದ್ಧಿ ಮಾಡಿಕೊಂಡು ಹೊರಟು ಹೋದರು. ೨-೩ ದಿನಗಳಿಂದ ನೀರು ಸಿಗದೆ ವೇದನೆ ಹೇಳತೀರದು. ಆ ವೇದನೆಗಳನ್ನು ಅನಿತ್ಯಾದಿ ಭಾವನೆಗಳಿಂದ ಎದೆಗೊಟ್ಟು ಸಹಿಸಿದರು. ನರಕದಲ್ಲಿ ಜೀವ ಒಂದು ಸಮುದ್ರದಷ್ಟು ಜಲವನ್ನಾದರೂ ಹೀರಿಬಿಟ್ಟೇನು ಎಂದು ಮಹಾ ಬಾಯಾರಿಕೆಯಿಂದ ಪರಿತಪಿಸುತ್ತಿದ್ದರೂ ಒಂದು ಹನಿ ನೀರೂ ಸಿಗದು. ಆ ದುಃಖದ ಮುಂದೆ ಇದೆಂತಹ ದುಃಖ ಎಂದು ಮನಸ್ಸಿಗೆ ಶಾಂತಿ ತಂದುಕೊಳ್ಳುತ್ತಿದ್ದರು. ಮಿಥ್ಯಾದೃಷ್ಟಿ ಜೀವಕ್ಕೆ ತೃಷಾಪರೀಷಹಗಳು ಆಗುತ್ತಿದ್ದರೂ ಶರೀರಾತ್ಮ ಭೇದ ವಿಜ್ಞಾನವಿರದ ಕಾರಣ ಆರ್ತ ಧ್ಯಾನದಲ್ಲಿ ಮುಳುಗಿ ಮಹಾ ಸಂಕಟ ಕೊಡುವ ಪಾಪ ಬಂಧ ಮಾಡಿಕೊಳ್ಳುತ್ತದೆ. ಅದೇ ಸಮ್ಯಗ್ದೃಷ್ಟಿ ಜೀವಕ್ಕೆ ಆತ್ಮ ಜಾಗ್ರತಿ ಇರುವುದರಿಂದ ಕರ್ಮಕ್ಷಯ ಮಾಡಿಕೊಳ್ಳುತ್ತದೆ.

ಮೂರನೆಯ ದಿನವೂ ಜಲಕೊಡಲಿಲ್ಲ. ಹೀಗೆ ೮ ದಿನಗಳು ಜಲವಿಲ್ಲದೆ ಆಹಾರ ನಡೆದು ಹೋಯಿತು. ಅವರ ಶರೀರ ಕಾದ ಕಬ್ಬಿಣದಂತಾಯಿತು. ಒಳಗಿನ ವೇದನೆ ಯಾರು ತಿಳಿಯಬಲ್ಲರು? ಹತ್ತನೆಯ ದಿನ ದಾತೃ ಜಲ ಕೊಟ್ಟರು. ಈ ಬಗ್ಗೆ ಪ್ರಶ್ನೆ ಕೇಳಲಾಯಿತು.



"ಶರೀರಕ್ಕೆ ನೀರಿನ ಅಗತ್ಯವಿತ್ತು. ನೀವು ನೀರು ಕೊಡಲಿಲ್ಲ . ನಡೆಯಿರಿ ಒಳ್ಳೆಯದೇ ಆಯಿತು." ಎಂದು ಹೇಳಿದರು. ಇದೇ ನಿಜವಾದ ಸಾಧುತ್ವ ಲಾಭ-ಅಲಾಭಗಳಲ್ಲಿ ಸಾವಧಾನತೆ ವಹಿಸುವುದೇ ಸಾಧುತ್ವ. ಶಾಂತಿಸಾಗರರು ಅಂತಹ ಸಾಧುತ್ವ ಜೀವನದ ಸಂಕೇತವಾಗಿದ್ದರು.

ಒಬ್ಬ ಸಾಧುವಿಗೆ ರಾತ್ರಿ ವೇಳೆಯಲ್ಲಿ ಬಾಯರಿಕೆ ಆಯಿತಂತೆ. ಬಹಳ ವೇದನೆಯಿಂದ ಜೀವ ಹೋಗುವಂತಾಯಿತು. ಇದು ಆಪತ್ಕಾಲ ಜಲ ಸ್ವೀಕರಿಸಿ ವಿಶ್ರಮಿಸಿ ಎಂದು ಒಬ್ಬ ಪಂಡಿತ ಬೋಧಿಸಲಾರಂಭಿಸಿದ. ಆ ಭ್ರಷ್ಟ ಪಂಡಿತನ ಮಾತು ಕೇಳಿ ಆ ಅಜ್ಞಾನಿ ಸಾಧು ನೀರು ಕುಡಿದು ಸ್ವಲ್ಪ ಸಮಯದಲ್ಲೇ ವಿಧಿವಶರಾಗಿಬಿಟ್ಟರು. ಜೀವನವಿಡೀ ಸಾಧಿಸಿದ ತಪಸ್ಸು ಒಂದು ಕ್ಷಣ ಕಾಲದಲ್ಲೇ ನಾಶವಾಗಿಹೋಯಿತು. ಈ ವಿಚಾರ ಆಚಾರ್ಯ ಶ್ರೀಯವರ ಕಿವಿಗೂ ಬಿತ್ತು. ಆಗ ಈ ಘಟನೆಯನ್ನು ವಿಮರ್ಶಿಸುತ್ತಾ ಹೀಗೆ ಹೇಳಿದರು.

"ಎಂದೂ ವ್ರತಭಂಗ ಮಾಡಬಾರದು. ನಶ್ವರವಾದ ಪ್ರಾಣಗಳು ಹೋಗುವುದಾದರೆ ಹೋಗಲಿ. ಮಾನವನೇನು? ಪಶುಗಳೂ ವ್ರತ ಧಾರಣೆ ಮಾಡಿಕೊಂಡಿರುವುದನ್ನು ನೋಡುತ್ತೇವೆ. ವ್ರತ ಕಾಲದಲ್ಲಿ ಅವುಗಳಲ್ಲೂ ಅದ್ಭುತ ಸ್ಥಿರತೆ ಇರುತ್ತದೆ."

ತೆಗೆದುಕೊಂಡ ವ್ರತವನ್ನು ಎಂತಹ ಸ್ಥಿತಿಯಲ್ಲೂ ಉಲ್ಲಂಘಿಸಬಾರದು. ಸಂಪತ್ತು ಕಳೆದು ಹೋದರೂ ಮರುಗಳಿಗೆಯಲ್ಲೇ ಗಳಿಸಬಹುದು. ವ್ರತ ಭ್ರಷ್ಟ ವ್ಯಕ್ತಿ ಮತ್ತೆನ್ನೆಂದೂ ಅಂತಹ ಯೋಗ್ಯತೆ ಪಡೆದುಕೊಳ್ಳಲಾರ.

## ಶರೀರದ ಬಗ್ಗೆ ನಿರ್ಮಮಕಾರ

ಅವರಿಗೆ ಶರೀರದ ಬಗ್ಗೆ ಒಂದು ಅಣುವಿನಷ್ಟು ರಾಗ ಪರಿಣಾಮವಿರಲಿಲ್ಲ. ಅವರಲ್ಲಿ ಒಂದು ಪ್ರಶ್ನೆ ಕೇಳಿದೆ.

"ಮಹರಾಜ್! ನಿಮ್ಮ ಸ್ವರ್ಗಾರೋಹಣದ ನಂತರ ಈ ಶರೀರವನ್ನು ಏನು ಮಾಡುವುದು.

"ನಮ್ಮ ಮಾತು ಕೇಳುವೆಯೇನು?"

ನಾನು : ಹೌದು! ನಿಮ್ಮ ಮಾತನ್ನೇಕೆ ಕೇಳುವುದಿಲ್ಲ.

ಅವರು : ಈ ಶರೀರವನ್ನು ಎಲ್ಲಿಯಾದರೂ ನದಿ ದಂಡೆ ಹಳ್ಳ ತಿಟ್ಟುಗಳಲ್ಲಿ ಎಸೆದು ಬಿಡು. ಪಶುಪಕ್ಷಿಗಳಾದರೂ ತಿಂದು ಹೊಟ್ಟೆ ತುಂಬಿಸಿಕೊಳ್ಳಲಿ. ಚೈತನ್ಯ ಹೋದ ಮೇಲೆ ಇದಕ್ಕೆಲ್ಲಿ ಬೆಲೆ ?"

ಈ ಮಾತು ಕೇಳುತ್ತದ್ದಂತೆಯೇ ಎಲ್ಲರ ಮುಖದಲ್ಲೂ ಬೆವರು ಕಾಣಿಸಿತು.

"ಕ್ಷಮಿಸಿ ಹಾಗೇನೂ ಮಾಡಲಾರೆವು. ಶಾಸ್ತ್ರ ವಿಧಿಯನ್ನು ಮಾತ್ರ ಕೇಳಿದೆವು."

"ಮೃತ ದೇಹವನ್ನು ಪದ್ಮಾಸನದಲ್ಲಿ ಕೂರಿಸಿ ವಿಮಾನದಲ್ಲಿರಿಸಿ ದಹನ ಕಾರ್ಯ ಮಾಡಿರಿ. ಆದರೂ ನಿಮಗೆ ತಿಳಿದಂತೆ ಮಾಡಬಹುದು.

## ಪಾರ್ಶ್ವಮತಿ ಅಮ್ಮನವರಿಂದ ಸಂಗ್ರಹ

ಅವರ ಲೋಕೋತ್ತರ ಜೀವನಕ್ಕೆ ಅವರ ಮಾತಾಪಿತೃಗಳ ಆದರ್ಶ ಜೀವನವೇ ಕಾರಣ. ಮಾತೆ ಸತ್ಯವತಿಯವರೊಡನ ಕ್ಷು.ಪಾರ್ಶ್ವಮತಿ ಅಮ್ಮನವರಿಗೆ ಒಳ್ಳೆಯ ಪರಿಚಯವಿತ್ತು.

ಕುಂಥಲಗಿರಿ ಕ್ಷೇತ್ರದಲ್ಲಿ ಅವರನ್ನು ಭೇಟಿ ಮಾಡಿದೆ. ಅವರು ಆ ಕುಟುಂಬದ ಬಗ್ಗೆ ಮಹತ್ಪೂರ್ಣವಿಚಾರ ತಿಳಿಸಿದರು.

ಸತ್ಯವತಿ, ಶಾಂತ, ಮಂದಕಷಾಯಿ ಮತ್ತು ಸರಳ ಸ್ವಭಾವದ ಸಾಧ್ವಿಯಾಗಿದ್ದರು. ನಿತ್ಯವೂ ಏಕ ಭುಕ್ತ ಮಾಡುತ್ತಿದ್ದರು.ಪತಿಯ ಮೃತ್ಯುವಿನ ನಂತರ ತಲೆ ಕೂದಲು ಕತ್ತರಿಸಿಕೊಂಡು ವೈದವ್ಯ ದೀಕ್ಷೆ ತೆಗೆದುಕೊಂಡಿದ್ದರು. ಬಿಳಿ ವಸ್ತ್ರ ಉಡುತ್ತಿದ್ದರು. ಯಥಾರ್ಥವಾಗಿ ಪಿಂಚರಹಿತ ಆರ್ಯಿಕೆಯಂತಿದ್ದರು. ಶಾಸ್ತ್ರ ಸ್ವಾಧ್ಯಾಯ ಮತ್ತು ಚರ್ಚೆಯೇ ಅವರ ಜೀವನವಾಗಿತ್ತು. ಮಹರಾಜರಿಂದ ಹಿಡಿದು ಕುಮುಗೊಂಡನವರೆಗೆ ಎಲ್ಲರೂ ಅವರಿಂದ ಶಾಸ್ತ್ರ ಕೇಳುತ್ತಿದ್ದರು. ಅವರ ಮನೆಯಲ್ಲಿ ಸದಾ ಅತಿಥಿಗಳ ಸತ್ಕಾರ ನಡೆಯುತ್ತಿತ್ತು. ಅತಿಥಿ ಸತ್ಕಾರ ಮತ್ತು ವೈಯಾವೃತ್ಯದಲ್ಲಿ ಮಹರಾಜರು ಬಹಳ ಪ್ರವೀಣರಾಗಿದ್ದರು. ಅವರು ಸಾಧುಗಳಿಗೆ ಸ್ವಯಂ ಆಹಾರ ಕೊಡುತ್ತಿದ್ದರು. ಬಹಳ ವಿನಯಶೀಲರು. ಅವರ ನಡೆನುಡಿ ನೋಡಿ ಇವರು ಒಮ್ಮೆ ಮಹಾಮುನಿಯೇ ಆಗುತ್ತಾರೆ ಎಂದು ಊಹಿಸುತ್ತಿದ್ದರು. ಅದು ಹಾಗೆಯೇ ಆಗಿ ಹೋಯಿತು. ಅವರು ತಾಯಿಯ ಮಾತನ್ನು ಸ್ವಲ್ಪವೂ ಮೀರುತ್ತಿರಲ್ಲಿಲ್ಲ.



ಅವರು ಭೋಜ ಗ್ರಾಮದ ದೇವತೆಯಂತಿದ್ದರು. ಮನೆಯಲ್ಲಿ ಹೆಚ್ಚು ಮಾತಾಡುತ್ತಿರಲಿಲ್ಲ. ಅವರು ಯಾರೊಡನೆಯೂ ವೈರ ವಿರೋಧದ ಮಾತು ಆಡುತ್ತಿರಲಿಲ್ಲ. ಮನೆಯಲ್ಲಿ ಇರುವಾಗಲೇ ತುಪ್ಪ, ಉಪ್ಪು, ಸಕ್ಕರೆ ಮತ್ತು ಹಸಿರು ತರಕಾರಿ ಸೊಪ್ಪುಗಳನ್ನು ತ್ಯಜಿಸಿಬಿಟ್ಟದ್ದರು. ದೀಕ್ಷೆಗೆ ಮೊದಲು ಐದು ವರ್ಷಗಳಿಂದಲೇ ಏಕಾಶನ ನಿಯಮ ಇಟ್ಟುಕೊಂಡಿದ್ದರು. ಸಾಯಂಕಾಲ ಜನಗಳಿಗೆ ನಿತ್ಯ ಶಾಸ್ತ್ರ ಹೇಳುತ್ತಿದ್ದರು. ಚಾತುರ್ಮಾಸದ ಕಾಲದಲ್ಲಿ ಶಾಸ್ತ್ರ ಕೇಳಲು ಹೆಚ್ಚು ಜನ ಬರುತ್ತಿದ್ದರು. ಜೈನ ಅಜೈನರೆಲ್ಲ ಅವರನ್ನು ಬಹಳ ಆದರದಿಂದ ಕಾಣುತ್ತಿದ್ದರು."

ಅವರಿಗೆ ಚಿಕ್ಕ ತಮ್ಮ ಕುಮಗೌಂಡನ ಮೇಲೆ ಬಹಳ ಆದರವಿತ್ತು. ಮನೆಯಲ್ಲಿ ಎಲ್ಲರೂ ಅವರ ಮಾತಿನಂತೆ ನಡೆಯುತ್ತಿದ್ದರು. ಅವರಿಗೆ ಸಾಧುವಿನಂತೆ ಗೌರವ ಕೊಡುತ್ತಿದ್ದರು. ಅವರೆಂದೂ ಆಟ-ತಮಾಷೆಗಳಿಗೆ ಹೋಗುತ್ತಿರಲಿಲ್ಲ. ಧಾರ್ಮಿಕ ಕಾರ್ಯಕ್ರಮಗಳಲ್ಲಿ ಮಾತ್ರ ತಪ್ಪದೆ ಭಾಗವಹಿಸುತ್ತಿದ್ದರು.

ಪೂರ್ವೋಕ್ತ ಪಾರ್ಶ್ವಮತಿ ಅಮ್ಮನವರಿಗೆ ಭೋಜ ಗ್ರಾಮದಲ್ಲಿ ೮ ಚಾತುರ್ಮಾಸಗಳಾಗಿವೆ. ಆದ್ದರಿಂದ ಮತ್ತೆ ಹೇಳ ತೊಡಗಿದರು.

"ಭೋಜದಲ್ಲಿ ಸುಮಾರು ೩೦೦ ಜೈನರ ಮನೆಗಳಿವೆ. ಆಸುಪಾಸಿನಲ್ಲೂ ಇವೆ. ಅವರೆಲ್ಲಾ ಧಾರ್ಮಿಕ ಜನ. ಪೇಟ, ಕೋಟು, ಕಚ್ಚೆ, ಪಂಚೆ ಮಹರಾಜರ ಗೃಹಸ್ಥಾವಸ್ಥೆಯ ಉಡುಪಾಗಿತ್ತು. ೨೫ ಅಥವ ೩೦ ವರ್ಷಗಳಿಂದಲೂ ಅವರು ಚಪ್ಪಲಿ ಮೆಟ್ಟುತ್ತಿರಲಿಲ್ಲ. ಅವರ ಅಣ್ಣ ದೇವಗೌಂಡ. ಇನ್ನೊಬ್ಬ ಅಣ್ಣ ಆದಿಗೊಂಡ. ಚಿಕ್ಕ ತಮ್ಮ ಕುಮಗೊಂಡ ತಂಗಿ ಕೃಷ್ಣಾಬಾಯಿ. ಒಟ್ಟು ಐದು ಜನ ಮಕ್ಕಳಿದ್ದರು.

ಅಣ್ಣ ದೇವಗೊಂಡಾ ಕೂಡ ಬಹಳ ಸಾತ್ವಿಕ ಮನುಷ್ಯ. ನ್ಯಾಯಾಲಯದಲ್ಲಿ ಇವರು ಸತ್ಯವನ್ನೆ ಹೇಳಿದ್ದರಿಂದ ಒಂದು ಕೇಸು ಇವರ ವಿರುದ್ಧವಾಗಿತ್ತು. ಇವರ ಪರ ವಕೀಲ ಇವರ ವಿರುದ್ಧ ಮಾತಿನ ಘರ್ಷಣೆಗೆ ಇಳಿದ್ದಿದ್ದ. ಆದರೂ ಶಾಂತವಾಗಿ ಹೀಗೆ ಹೇಳಿದ್ದರು. " ಏನು ಮಾಡುವುದು. ನಿಜ ಹೇಳುವುದೇ ನನ್ನ ಸ್ವಭಾವ. ನಷ್ಟವಾಗುವುದಾದರೆ ಆಗಲಿ ಬಿಡಿ. ಸುಳ್ಳನ್ನೆಂದೂ ಹೇಳಲಾರೆ."

ತಂಗಿ ಕೃಷ್ಣಾಬಾಯಿ ತಪಸ್ವಿನಿಯಂತಿದ್ದಳು. ೮ ನೇ ವರ್ಷದಲ್ಲೇ ಅವರು ಬಾಲವಿಧವೆಯಾಗಿದ್ದಳು. ಅವಳು ಒಂದು ರೀತಿಯಲ್ಲಿ ಬಾಲ ಬ್ರಹ್ಮ ಚಾರಿಣಿಯಂತಿದ್ದಳು.

## ಭೀಮ ಗೌಡರ ಸ್ಮರಣೆ

ಮಹಾರಾಜರ ಸಹೋದರರನ ಮೊಮ್ಮಗ ಭೀಮಗೊಂಡಾ ಪಾಟೀಲ. ಅವರ ನಮಗೆ ಕುಂಥಲಗಿರಿಯಲ್ಲಿ ಕಂಡರು. ನಮಗೆ ಕೆಲವು ವಿಚಾರ ತಿಳಿಸಿದರು.

ಕೃಷ್ಣಾಬಾಯಿಯನ್ನು ನಾವು ಅಜಿ ಎಂದು ಕರೆಯುತ್ತಿದ್ದೆವು. ಕೃಷ್ಣಾಬಾಯಿ ನನ್ನನ್ನು ಅಣ್ಣಾ ಎಂದು ಕರೆಯುತ್ತಿದ್ದರು. ನನ್ನ ಹೆಸರಿನಿಂದ ಕರೆಯುತ್ತಿರಲಿಲ್ಲ. ಮನೆಯಲ್ಲಿ ಎಲ್ಲರೂ ನನ್ನನ್ನು 'ಅಣ್ಣಾ' ಎಂದು ಕರೆಯುತ್ತಿದ್ದರು. ಕೃಷ್ಣ ಬಾಯಿ ಒಬ್ಬ ಯೋಗಿನಿಯಂತಿದ್ದರು. ದಿನ ರಾತ್ರಿಗಳನ್ನು ಧ್ಯಾನದಲ್ಲಿ ಕಳೆಯುತ್ತಿದ್ದರು. ಮೂರು ದಿನಗಳ ಸಲ್ಲೇಖನ ತೆಗೆದುಕೊಂಡು ಸಮಾಧಿ ಹೊಂದಿದರು.

ಕನ್ನಡಿ ಶುಚಿಯಾಗಿದ್ದರೆ ಪ್ರತಿಬಿಂಬ ಸ್ಪಷ್ಟವಾಗಿ ಕಾಣುತ್ತದೆ. ಮನಸ್ಸು ರಾಗ-ದ್ವೇಷಗಳಿಲ್ಲದೆ ನಿರ್ಮಲವಾಗಿದ್ದರೆ ಭವಿಷ್ಯ ಯಥಾವತ್ತಾಗಿ ಕಾಣುತ್ತದೆ. ಇದೇನೂ ಪವಾಡವಲ್ಲ. "ನನ್ನ ಆತ್ಮ ಹೇಳಿದಂತೆ ನಾನು ಹೇಳುತ್ತೇನೆ." ಎಂದು ಅವರು ಎಷ್ಟೋ ಬಾರಿ ಹೇಳಿದ್ದರು. ರಾಗ-ದ್ವೇಷಗಳಿಲ್ಲದ ಮನಸ್ಸು ಯಥಾರ್ಥವಾದುದನ್ನು ಹೇಳಲು ಸಮರ್ಥವಾಗುತ್ತಿತ್ತು. ಒಮ್ಮೆ ಒಂದು ಘಟನೆ ನಡೆಯಿತು.

ಜಯಪುರದಲ್ಲಿ ಅವರ ಚಾತುರ್ಮಾಸವಿತ್ತು. ಬ್ರ.ಬಂಡೂರತ್ತೋರವರು ಕುಚುಡಿ ದೇವಾಲಯಕ್ಕೆ ಮೂರ್ತಿ ಕೊಂಡಯ್ಯಲು ಅಲ್ಲಿಗೆ ಬಂದರು. ಅವರು ಮಹರಾಜರಿಗೆ ವಂದಿಸಿ ಹೇಳಿದರು.

"ಮಹರಾಜ್! ನಿಮ್ಮ ಸೂಚನೆಯ ಪ್ರಕಾರವೆ ಮೂರ್ತಿ ತರಲು ಹೇಳಿಕಳಿಸಿದ್ದಾರೆ"

"ಅಲ್ಲಿ ಮಹಾವೀರ ಭಾಗವಾನರ ಮೂರ್ತಿ ವಿರಾಜಮಾನ ಮಾಡಬಹುದು. ನೀನು ತಂತಿ ಕೊಟ್ಟು ಧರ್ಮದರ್ಶಿಗಳಿಂದ ಖಚಿತ ಪಡಿಸಿಕೋ" ಎಂದು ಹೇಳಿದರು. ಅದೇರೀತಿ ತಂತಿ ಕೊಡಲಾಯಿತು. ಭಗವಾನ್ ಪಾರ್ಶ್ವನಾಥ ಸ್ವಾಮಿ ಬಿಂಬ ತರಬೇಕೆಂದು ಉತ್ತರ ಬಂತು. ಆಗ ಅವರು ಹೇಳಿದರು.

"ಧರ್ಮದರ್ಶಿಗಳ ಮನಸ್ಸು ಸ್ಥಿರವಿರುವುದಿಲ್ಲವೆಂದು ನಾವು ಹೇಳುತ್ತಿರಲಿಲ್ಲವೇ ? ಒಳ್ಳೆಯದಾಯಿತು. ತೀರ್ಮಾನ ಆಯಿತಲ್ಲ. ನಾವು ನಿನಗೆ ಮಹಾವೀರ ಭಗವಾನಗರ ಬಗ್ಗೆ ಹೇಳಿದೆವು. ಏಕೆಂದರೆ ನಮಗೆ ಅಲ್ಲಿಯ ಮಂದಿರದಲ್ಲಿ ಮಹಾವೀರ ಭಗವಾನರ ಪ್ರತಿಮೆ ಕಾಣುತ್ತಿತ್ತು."



ಕೆಲವು ದಿನಗಳಲ್ಲಿ ಪಾರ್ಶ್ವನಾಥ ಸ್ವಾಮಿಯ ಮೂರ್ತಿ ತಯಾರಾಯಿತು. ಆದರೆ ಆ ಮೂರ್ತಿ ಭಿನ್ನವಾಗಿ ಹೋಯಿತು. ಇದನ್ನು ತಿಳಿಯುತ್ತಲೇ ಧರ್ಮದರ್ಶಿಗಳು ತಂತಿ ಕೊಟ್ಟು ಯಾವ ಮೂರ್ತಿ ಸಿದ್ಧವಿದೆಯೋ ಅದನ್ನೇ ಬೇಗ ಕಳಿಸಿರಿ ಎಂದು ವರ್ತಮಾನ ಕಳಿಸಿದ್ದರು. ಆ ಪ್ರಕಾರ ಮೂರ್ತಿಯನ್ನು ಕಳಿಸಲಾಯಿತು. ಅದನ್ನು ಬಿಡಿಸಿ ನೋಡುತ್ತಿದ್ದಂತೆಯೇ ಧರ್ಮದರ್ಶಿಗಳು ಅವಾಕ್ಕಾಗಿ ಹೋದರು. ಅದು ಮಹಾವೀರ ಭಗವಾನರ ಮೂರ್ತಿಯೇ ಆಗಿತ್ತು. "ಅಲ್ಲಿಯ ಮಂದಿರದಲ್ಲಿ ಮಹಾವೀರ ಭಗವಾನರ ಮೂರ್ತಿಯೇ ಕಾಣುತ್ತಿತ್ತು." ಎಂದು ಹೇಳಿದ ಅವರ ಮಾತು ಎಂತಹ ಭವಿಷ್ಯವಾಣಿ. ಎಲ್ಲರೂ ವಿಸ್ಮಯಪಟ್ಟರು.

ಆಚಾರ್ಯಶ್ರೀಯವರ ೧೬ ನೇ ಉಪವಾಸದ ದಿನ. ಆ ದಿನ ಅವರು ಮಂಗಲಮಯ ಭಾಷಣವನ್ನು ೨೨ ನಿಮಿಷಗಳ ಕಾಲ ಮಾಡಿದರು. ಆ ಉಪದೇಶ ಸಮಸ್ತ ಜಿನವಾಣಿಯ ಸಾರವಾಗಿತ್ತು.

ಕುಂಥಲಗಿರಿ ಕ್ಷೇತ್ರಕ್ಕೆ ದೇಶದ ಮೂಲೆ ಮೂಲೆಗಳಿಂದ ಜನ ಸಾಲುಗಟ್ಟಿ ಬರುತ್ತಿದ್ದರು. ಧರ್ಮ ಸೂರ್ಯನ ಅಂತಿಮ ದರ್ಶನಕ್ಕಾಗಿ ಉಸಿರು ಬಿಗಿ ಹಿಡಿದು ಕಾದು ಕುಳಿತಿದ್ದರು. ಭೌತಿಕ ಸೂರ್ಯ ಅಸ್ತನಾದರೆ ಮತ್ತೆ ಹುಟ್ಟಿ ಬರುತ್ತಾನೆ. ಆದರೆ ಈ ಧರ್ಮ ಸೂರ್ಯ ಅಸ್ತನಾದರೆ ಮತ್ತೆಂದೂ ಹುಟ್ಟಿ ಬರಲಾರ.

ಸಲ್ಲೇಖನದ ಚರ್ಚೆ ಸ್ವರ್ಗದಲ್ಲೂ ಆಗುತ್ತಿರಬಹುದು. ಸೌಧರ್ಮೇಂದ್ರ ತನ್ನ ಸುದರ್ಮ ಸಭಾದಲ್ಲಿ ಕುಳಿತು ಮುಕ್ತಕಂಟದಿಂದ ಆ ಸಾಧು ರಾಜನ ಸಲ್ಲೇಖನದ ಬಗ್ಗೆ ಹೊಗಳುತ್ತಿರಬಹುದು. ಇನ್ನು ಸ್ವಲ್ಪಕಾಲದಲ್ಲಿ ಆ ಮಾಹಾ ತಪಸ್ವಿ ನಮ್ಮ ಸ್ವರ್ಗದ ನಿಧಿ ಆಗುವರೆಂದು ಆನಂದ ಪಡುತ್ತಿರಬಹುದು.

ಅವರಂತೆಯೇ ಜಿನ ದೀಕ್ಷೆ ತೆಗೆದುಕೊಂಡು ಉಜ್ವಲ ಮುನಿಜೀವನ ನಡೆಸಿದ ಅನೇಕರು ಅವರಿಗೆ ಸ್ವರ್ಗದಲ್ಲಿ ಸಂಗಾತಿಗಳಾಗುತ್ತಾರೆ. ಮಹರ್ಷಿ ಕುಂದಕುಂದ, ಸಮಂತಭದ್ರಾಚಾರ್ಯ, ಅಕಲಂಕ ಜಿನಸೇನ ಮುಂತಾದ ಮಹಾವಿಭೂತಿ ಸಂಪನ್ನ ತಪಸ್ವಿ ಆತ್ಮಗಳು ಸ್ವರ್ಗದಲ್ಲಿವೆ. ಅವರೆಲ್ಲರ ಭೇಟಿ ಸುಖಪೂರ್ವಕ ತತ್ವ ಚರ್ಚೆ ಸ್ವರ್ಗದ ಅಪಾರ ಕಾಲದುದ್ದಕ್ಕೂ ಸಿಗುತ್ತದೆ. ಶ್ರೀಮಂಧರಾದಿ ವಿದೇಹಸ್ಥ ೨೦ ಜನ ತೀರ್ಥಂಕರರ ದರ್ಶನ ಭಾಗ್ಯವೂ ಸದಾ ಲಭಿಸುತ್ತದೆ. ಅವರು ಮೂರು ಲೋಕದ ಅಕೃತಿಮ ಬಿಂಬಗಳ ದರ್ಶನವನ್ನು ಮಾಡುತ್ತಿರಬಹುದು. ಅಲ್ಲಿಯ ಸಾಗರೋಪಮಲಕಾಲ ಆಯಸ್ಸು ಕಳೆದ ಮೇಲೆ ಪುಷ್ಕರಾರ್ಧ ದ್ವೀಪದಲ್ಲಿ ಧರ್ಮತೀರ್ಥೇಶ್ವರರಾಗಿ ಹುಟ್ಟಿ ಮೋಕ್ಷಕ್ಕೆ ಹೋಗುತ್ತಾರೆ.

## ಸಂಯಮಿಯ ಮಹತ್ವ

ಅವರ ದೃಷ್ಟಿಯಲ್ಲಿ ಸಂಯಮಿ ಮತ್ತು ಸಂಯಮದ ಬಗ್ಗೆ ಬಹಳ ಮಹತ್ವವಿತ್ತು. ಒಂದು ದಿನ ಅವರು ತಮ್ಮ ಕ್ಷುಲಕ ಶಿಷ್ಯನಿಗೆ ಹೇಳುತ್ತಿದ್ದರು. "ನಿನ್ನ ಮುಂದೆ ಚಕ್ರವರ್ತಿತ್ವಕ್ಕೂ ಬೆಲೆ ಇಲ್ಲ. ಸಂಯಮದ ಬಗ್ಗೆ ಜನಗಳು ತಿಳಿದಿಲ್ಲ. ಹೊಟ್ಟೆಪಾಡಿಗಾಗಿ ದೀಕ್ಷೆ ತಗೆದುಕೊಂಡವರೂ ತಪಸ್ಸಿನಿಂದ ಸ್ವರ್ಗದಲ್ಲಿ ಹುಟ್ಟುತ್ತಾರೆ. ಆದರೆ ನೀನು ಆತ್ಮ ಕಲ್ಯಾಣಕ್ಕಾಗಿ ಸಂಯಮ ಧಾರಣೆ ಮಾಡಿದ್ದೀಯೆ. ನೀನಂತೂ ನಿಶ್ಚಯವಾಗಿ ಸ್ವರ್ಗಕ್ಕೆ ಹೋಗುವೆ. ಇದರಲ್ಲಿ ಸಂಶಯವೇ ಇಲ್ಲ."

## ಹಿತೋಪದೇಶ

ಒಮ್ಮೆ ಒಬ್ಬ ಭಕ್ತನಿಗೆ ಕಿವಿ ಮಾತು ಹೇಳಿದರು. "ನೀನು ಮನೆಯಲ್ಲಿದ್ದರೂ ಏಕಾಂತದಲ್ಲಿರಲು ಕಲಿ. ಜನಗಳ ಗುಂಪಿನಲ್ಲಿರಬೇಡ. ಸದಾ ಸ್ವಾಧ್ಯಾಯ ಧ್ಯಾನ ಬಿಡಬೇಡ. ಮನುಷ್ಯಭವ ಮೇಲಿಂದಮೇಲೆ ಸಿಗುವಷ್ಟು ಅಗ್ಗವಾದುದಲ್ಲ. ಮೋಹವು ಜೀವಕ್ಕೆ ಸಂಕೋಲೆ ತೊಡಸಿದೆ. ಆ ಮೋಹಕ್ಕೇ ನೀನು ಸಂಕೋಲೆ ತೊಡಿಸಿ ಪಾರಾಗಬೇಕಾಗಿದೆ. ಸಲ್ಲೇಖನ ಸ್ವೀಕರಿಸಿಯೇ ಮರಣ ಹೊಂದು ಹಾಗೆಯೇ ಮರಣ ಹೊಂದ ಬೇಡ."

## ಅಷ್ಟಾದಶ ಕೋಟಿ ಜಪ

ಅವರ ಜೀವನದಲ್ಲಿ ವೈವಿಧ್ಯತೆ ಇತ್ತು. ಅವರು ಮಹಾ ಆತ್ಮ ಚಿಂತಕರಾಗಿದ್ದರು. ಪರಮ ಜಿನ ಭಕ್ತರಾಗಿದ್ದರು. ಸಲ್ಲೇಖನಕ್ಕೆ ಪೂರ್ವ ಅವರು ಪಂಚಪರಮೇಷ್ಠಿ ವಾಚಕ ಮಂತ್ರದ ೧೮ ಕೋಟಿ ಜಪ ಮಾಡಿದ್ದರು.

ಒಮ್ಮೆ ಅವರಿಗೆ ೧೦೪ ರಿಂದ ೧೦೫ ಡಿಗ್ರಿ ಜ್ವರ ಬರಲಾರಂಭಿಸಿತು. ಆದರೂ ಅವರು ತಮ್ಮ ಜಪದ ಕಾರ್ಯ ಬಿಡಲಿಲ್ಲ. ಇನ್ನೊಮ್ಮೆ ಪಲ್‌ಟನ್‌ನಿಂದ ಲೋಣಾಂದಾಕ್ಕೆ ಹೋದಾಗಲೂ ಜ್ವರ ಬಂದಿತ್ತು. ಆಗ ನಾನು ಕೇಳಿದೆ.

"ಇಂತಹ ಭೀಷಣ ಪರಿಸ್ಥಿತಿಯಲ್ಲೂ ನಿಮ್ಮ ಜಪದ ಕಾರ್ಯ ಹೇಗೆ ನಡೆದಿದೆ.

ಅವರು ಹೇಳಿದರು :" ಈಗಲೂ ನಾವು ಸರಿಯಾಗಿ ಜಪ ಮಾಡುತ್ತಿದ್ದೇವೆ. ಶರೀರದ ಬೇನೆ ನಮಗೇನು ಮಾಡೀತು..." ಅವರ ಅದ್ಭುತ ಸ್ಥಿರತೆಗೆ ರೋಗವೂ ತಲೆ ಬಾಗಿತ್ತು.



ಅವರು ಮಾಡಿರುವ ಉಪವಾಸಕ್ಕೆ ಗಣನೆಯೇ ಇಲ್ಲ. ಒಂದಲ್ಲ ಒಂದು ವ್ರತ ಆಚರಿಸುತ್ತಲೇ ಇದ್ದರು. ಧಾರಣೆ ಪಾರಣೆ ಅವರಿಗೆ ಸಾಮಾನ್ಯವಾಗಿತ್ತು. "ಉಪವಾಸದಿಂದ ಶರೀರದಲ್ಲಿ ಪ್ರಮಾದವಿರುವುದಿಲ್ಲ" ಎಂದು ಹೇಳುತ್ತಿದ್ದರು. ಹತ್ತು ಮೈಲು ನಡೆಯುವ ನಾವು ಉಪವಾಸದ ಕಾರಣ ಹದಿನೈದು ಮೈಲು ನಡೆಯುತ್ತೇವೆ ಎಂದು ಹೇಳುತ್ತಿದ್ದರು. ಅವರು ಎಂದೂ ಪ್ರಮಾದಪೂರ್ಣ ಆಚರಣೆ ಮಾಡಿದ್ದನ್ನು ನೋಡಲೇ ಇಲ್ಲ. ಪ್ರಮತ್ತಾವಸ್ಥೆಯ ಮುನಿಯಾಗಿದ್ದರೂ, ಅವರ ಚರ್ಯೆ ಅಪ್ರಮತ್ತಾವಸ್ಥೆಯಂತಿತ್ತು. ಸಿಂಹನಿಃಕ್ರೀಡಿತದಂತಹ ಕಠೋರ ತಪಸ್ಸನ್ನು ಮಾಡಿದ್ದರು. ಅಷ್ಟಾಹ್ನಿಕ, ದಶಲಕ್ಷಣ, ಚಂದ್ರಾಯಣ ಕರ್ಮದಹನ, ಶ್ರುತಪಂಚಮಿಯ ಉಪವಾಸಗಳನ್ನು ಆಚರಿಸಿದ್ದರು.

ತಪಸ್ಸಿನ ಮೂಲಕ ಮನಸ್ಸಿನ ಮಲಿನತೆ ದೂರವಾಗುತ್ತದೆ. ಆತ್ಮ ವಿಶುದ್ಧಿ ಪ್ರಾಪ್ತಿಯಾಗುತ್ತದೆ. ನಿಜವಾದ ಸಾಧುತ್ವವೆಂದರೆ ಆಪತ್ಕಾಲದಲ್ಲಿ ಮನಸ್ಸನ್ನು ಸ್ಥಿರವಾಗಿಡುವುದು. ಅಂತಹ ಸ್ಥಿರತೆ ಉಪವಾಸದಿಂದಲೇ ಸಿಗುತ್ತದೆ.

## ಆಚಾರ್ಯಶ್ರೀಯವರ ಪ್ರಭಾವ

ಅವರು ಕಟನಿ ಚಾತುರ್ಮಾಸದಿಂದ ಜಬ್ಬಲ್‌ಪುರದತ್ತ ಹೋಗುವಾಗ ಬಿಲಹರಿ ಗ್ರಾಮ ತಲುಪಿದರು. ಅಲ್ಲಿಯ ಜನ ಅವರ ಪ್ರಭಾವಕ್ಕೆ ಮಾರು ಹೋಗಿದ್ದರು. ಅಲ್ಲಿ ಎಲ್ಲಾ ಬಾವಿಗಳಲ್ಲೂ ಉಪ್ಪುನೀರು. ಆಗ ಆಚಾರ್ಯ ಮಹರಾಜರು ಒಂದು ಜಾಗದಲ್ಲಿ ಕುಳಿತಿದ್ದರು. ಭಕ್ತಿಯಿಂದ ಪ್ರೇರಿತರಾದ ಆ ಜನ ಅವರು ಕೂತಿದ್ದ ಜಾಗದಲ್ಲಿ ಬಾವಿ ತೋಡಿದರು. ಅಲ್ಲಿ ಅಗಾದ ಸಿಹಿನೀರಿನ ಜಲರಾಶಿ ಹೊರಹೊಮ್ಮಿತು. ಈ ಘಟನೆ ಅಲ್ಲಿಯ ಜನಗಳ ಮನಸ್ಸಿನಲ್ಲಿ ಇಂದೂ ಸ್ಮರಣೆಯಲ್ಲಿದೆ.

ಒಮ್ಮೆ ಅವರು ಒಂದು ಗೊಡ್ಡು ಮಾವಿನ ಮರದ ಕೆಳಗೆ ಆಸೀನರಾಗಿ ಧ್ಯಾನಸ್ಥರಾಗಿದ್ದರು. ಆ ಮರ ಎಂದೂ ಕಾಯಿ ಬಿಟ್ಟಿರಲಿಲ್ಲ. ನಂತರ ಇದ್ದಕ್ಕಿದ್ದಂತೆಯೇ ಸುಗ್ಗಿಯ ಕಾಲದಲ್ಲಿ ಫಲಭಾರದಿಂದ ಜಗ್ಗುತ್ತಿತ್ತು. ಜನ ಹಿಂಡು ಹಿಂಡಾಗಿ ಬಂದು ಆಶ್ಚರ್ಯದಿಂದ ಆ ಮರ ನೋಡಿ ಹೋಗತೊಡಗಿದರು. ಎಲ್ಲರ ಬಾಯಲ್ಲೂ ಅವರ ಮಹಿಮೆಯ ಮಾತೇ ಮಾತು! ಅವರು ಕೂತಿದ್ದ ಜಾಗದ ಮಣ್ಣನ್ನು ಪವಿತ್ರವೆಂದು ಹಣೆಗೆ ಹಚ್ಚಿಕೊಳ್ಳುತ್ತಿದ್ದರು.

## ಸಂದೇಹ ಭಾವನೆ

ಒಮ್ಮೆ ಅವರು ನೇಮಿಸಾಗರರೊಡನೆ ಬ್ರಬಂಡೂರತ್ತು ಜೊತೆಯಲ್ಲಿ ಸಾಂಗ್ಲಿಯತ್ತ ನಡೆಯುತ್ತಿದ್ದರು. ಅವರನ್ನು ನೋಡಿ ಮೂರುಜನ ಹರಿಜನ ಮಹಿಳೆಯರು ತಿರಸ್ಕಾರ ಪೂರ್ವಕ ಉಪಹಾಸ್ಯ ಮಾಡಿ ನಕ್ಕರು. ಆಗ ಅವರು ಹೇಳಿದ ಮಾತು ನೆನಪಿನಲ್ಲಿ ಉಳಿಯುವಂತವು.

"ನಾವು ಅನಾದಿಕಾಲದಿಂದಲೂ ಅನ್ಯರನ್ನು ಉಪಾಸ್ಯ ಮಾಡಿಕೊಂಡೇ ಬಂದಿದ್ದೇವೆ. ಅದರ ಫಲ ಈಗ ನಾವೂ ಉಪಾಸ್ಯಕ್ಕೆ ಒಳಗಾಗಿದ್ದೇವೆ. ಇದರಿಂದ ನಮಗೇನು ನಷ್ಟ."

ಸಾಧುಗಳ ಬಗ್ಗೆಯ ಒಳ್ಳೆ ವಿಚಾರ ತಿಳಿಸುತ್ತಿದ್ದರು.

ಸಾವಧಾನತೆಯೇ ಸಾಧುವಿನ ಲಕ್ಷಣ. ಸಾವಧಾನತೆಯೂ ಒಂದು ತಪಸ್ಸೆಂದು ತಿಳಿಯಿರಿ. ಸಾವಧಾನತೆಯ ಸಿಪಾಯಿಗಳಿಲ್ಲದಾಗ ರಾಗ ದ್ವೇಷರೂಪಿ ಡಾಕುಗಳು ಸಂಯಮ ರೂಪಿ ನಿಧಿಯನ್ನು ಲೂಟಿ ಮಾಡಿಬಿಡುತ್ತಾರೆ. ಆದ್ದರಿಂದ ಸದಾ ಸಾವಧಾನ, ಸಾವಧಾನ ! ಅದಕ್ಕಾಗಿ ತ್ಯಾಗಿಗಳು ಸದಾ ಸಂಘದಲ್ಲೇ ಇರಬೇಕು. ಈಗಂತೂ ಸ್ವತಂತ್ರ ಪ್ರವೃತ್ತಿ ಬೆಳೆಯುತ್ತಿದೆ. ಅದು ಒಳ್ಳೆಯದಲ್ಲ"

ಒಮ್ಮೆ ಒಬ್ಬ ಅವರಿಗೆ ಒಂದು ಪ್ರಶ್ನೆ ಕೇಳಿದ.

"ಮಹರಾಜ್! ನಿಮ್ಮಂತಹ ದುಃಖಿಗಳು ಇನ್ನೊಬ್ಬರಿಲ್ಲ, ಏಕೆಂದರೆ ನಿಮ್ಮ ಹತ್ತಿರ ಸುಖದ ಸಾಧನಗಳೇ ಇಲ್ಲ"

ಅವರೆಂದರು : "ವಾಸ್ತವವಾಗಿ ಯಾರು ಪರಾಧೀನವಾಗಿದ್ದಾರೋ ಅವರೇ ದುಃಖಿಗಳು. ಯಾರು ಸ್ವಾಧೀನರಾಗಿದ್ದಾರೋ (ಇಂದ್ರಿಯ ದಮನ ಮಾಡಿದ್ದಾರೋ)ಅವರೇ ಸುಖಿಗಳು. ನಮ್ಮ ಸುಖದ ಕಲ್ಪನೆ ನೀನೇನು ಮಾಡಬಲ್ಲೆ? ಇಂದ್ರಿಯಗಳ ಹಿಂದೆ ಓಡುವವನು ದುಃಖಿ ದರಿದ್ರ ಇದ್ದಾನೆ. ಆತ್ಮನಲ್ಲೇ ಇರುವವನು ಸರ್ವ ಶ್ರೇಷ್ಠ ಸುಖಿ"

## ತಲೆನೋವು ನಿವಾರಣೆ

ವೇಡಣೆ ಗ್ರಾಮದ ಒಬ್ಬ ಶ್ರೀಮಂತ ಯುವಕನಿಗೆ ಅಸಾಧ್ಯ ತಲೆನೋವು ಬರುತ್ತಿತ್ತು. ಭಾರೀ ಖರ್ಚು ಮಾಡಿ ಸೋತಿದ್ದ. ಅದು ಕಡಿಮೆ ಆಗಿರಲಿಲ್ಲ. ಅವನು ಪೂಜ್ಯ ಶ್ರೀಯವರ ಪಾದಮೂಲದಲ್ಲಿ ಬಂದು ತನ್ನ ಕರ್ಮ ಕಥೆಯನ್ನು ನಿವೇದಿಸಿದ. ಅವರು ಕರುಣೆಗೊಂಡು ಪಿಂಚದಿಂದ ಅವನ ತಲೆಯನ್ನೊಮ್ಮೆ



ನೇವರಿಸಿದರು. ಅಷ್ಟೆ. ಅವನ ತಲೆ ನೋವು ಆಗಲೇ ಭೀಕರವಾಗಿ ಬೀಸುವ ಗಾಳಿಗೆ ಸಿಕ್ಕ ತರಗೆಲೆಯಂತೆ ಹಾರಿ ಹೋಯಿತು. ಮತ್ತೆನ್ನೆಂದೂ ಅದು ಕಾಣಿಸಲಿಲ್ಲ. ಆ ಯುವಕನಿಗೆ ಅವರು ಅಂದಿನಿಂದ ಇಷ್ಟ ದೈವವಾದರು. ಅವರನ್ನು ಸ್ಮರಿಸದೆ ಒಂದು ತುತ್ತು ಅನ್ನವನ್ನೂ ಅವನು ಬಾಯಿಗೆ ಸೇರಿಸುತ್ತಿರಲಿಲ್ಲ.

## ಸರ್ಪ ಭಾಧೆ

ಪಲ್‌ಟನ್ ನಿವಾಸಿ ತಿಲಕ್ ಚಂದ್ ದೇವಚಂದ್ ಗಾಂಧಿಯವರ ಮಗ ೧೦ ವರ್ಷದ ಹುಡುಗನಿಗೆ ಒಂದು ಹಾವು ಕಚ್ಚಿತು. ಆ ಹುಡುಗನನ್ನು ಅವರ ಬಳಿ ಒಯ್ಯಲಾಯಿತು. ಹುಡುಗನನ್ನು ದೃಷ್ಟಿಸಿ ನೋಡಿ "ಹೆದರಬೇಡಿರಿ" ಆ ಹುಡುಗನಿಗೆ ಏನೂ ಆಗುವುದಿಲ್ಲ" ಎಂದರು. ಕೆಲವು ಸಮಯದ ನಂತರ ಆ ಹುಡುಗ ವಿಷವಿಳಿದು ಸ್ವಸ್ಥನಾದ.

ಕುಷ್ಠ ರೋಗ :

ನಸಲಾಪುರದಲ್ಲಿ ಒಬ್ಬ ವ್ಯಕ್ತಿಗೆ ಕುಷ್ಠ ರೋಗ ಬಂದಿತ್ತು. ಅದು ತೀರಾ ಮೀರಿಹೋಗಿತ್ತು. ಅವನು ಆಚಾರ್ಯ ಶ್ರೀಯವರ ಚರಣಕ್ಕೆ ಶರಣಾದ. ಆಗ ಅವರು ಅವನಿಗೆ ಬ್ರಹ್ಮಚರ್ಯ ವ್ರತಕೊಟ್ಟು "ಹೆದರಬೇಡ! ನೀನು ಇನ್ನಾರುತಿಂಗಳಲ್ಲೇ ಸರಿ ಹೋಗುತ್ತೀಯೆ" ಎಂದರು. ಆ ಪ್ರಕಾರ ಅವನ ರೋಗ ಆರು ತಿಂಗಳಲ್ಲೇ ವಾಸಿಯಾಗಿ ಹೋಯಿತು.

## ಮೃಗೀ ರೋಗ

ಒಬ್ಬ ವ್ಯಕ್ತಿಗೆ ಮೃಗೀರೋಗ ಅಂಟಿಕೊಂಡಿತ್ತು. ಅವನು ಎಲ್ಲಿಯೋ ಬಿದ್ದು ಸತ್ತು ಹೋಗುತ್ತಾನೆಂದು ಜನ ಮಾತನಾಡಿಕೊಳ್ಳುತ್ತಿದ್ದರು. ಅವನು ಪೂಜ್ಯ ಶ್ರೀಯವರ ಸೇವೆಗೆ ಬಂದು ನಿಂತ. ಬಹಳ ಕಾಲದವರೆಗೆ ಅವರ ಶ್ರೀ ಚರಣಗಳ ಸೇವೆ ಮಾಡಿಕೊಂಡಿದ್ದ. ಆಗ ಅವರು ಅವನಿಗೆ ಹೇಳಿದರು. ನೀನು ನಿತ್ಯ ಭಗವಂತನನ್ನು ಪೂಜಿಸು. ಸ್ವಲ್ಪಕಾಲದಲ್ಲೆ ಸರಿ ಹೋಗುತ್ತದೆ ಅಂದರು. ಅತ್ಯಲ್ಪ ಕಾಲದಲ್ಲೇ ಅವನು ವ್ಯಾಧಿಮುಕ್ತನಾಗಿದ್ದ.

## ವಾನರ ವೃಂದದ ಮೇಲೆ ಪ್ರಭಾವ

ಸಂಘವು ಶಿಖರಿಜಿಯತ್ತ ವಿಹಾರ ಮಾಡುತ್ತಿತ್ತು. ವಿಂಧ್ಯಾಟವಿ ನಾಲ್ಕು ದಿಕ್ಕಿಗೆ ಚಾಚಿ ಹಬ್ಬಿತ್ತು. ಒಂದು ಕಡೆ ಸಂಘ ವಾಸ್ತವ್ಯ ಹೂಡಿ ಆಹಾರದ ತಯಾರಿಯಲ್ಲಿ ಮಗ್ನವಾಯಿತು. ಅದು ವಾನರಗಳ ಸ್ವಚ್ಛಂದ ವಿಹಾರ

ಸ್ಥಳವಾಗಿತ್ತು. ಆದ್ದರಿಂದ ಶ್ರಾವಕರಿಗೆ ಚಿಂತೆ ಹುಟ್ಟಿತು. ಅಲ್ಲಿಂದ ಬೇರೆ ಕಡೆ ಹೋಗಲು ೧೪ ಮೈಲುಗಳವರೆಗೆ ಅನುಕೂಲವಿರಲಿಲ್ಲ.

ಸಂಘಪತಿ ಆಚಾರ್ಯ ಶ್ರೀಯವರ ಬಳಿ ಬಂದು ಪ್ರಾರ್ಥಿಸಿದರು. "ಮಹರಾಜ್! ಇಲ್ಲಿ ಕೋತಿಗಳ ಉಪದ್ರವ ಬಹಳವಿದೆ. ನಾವು ಆಹಾರದ ವ್ಯವಸ್ಥೆ ಹೇಗೆ ಮಾಡುವುದು? ನೀವು ಕೋತಿಗಳನ್ನು ಭಯಪಡಿಸುತ್ತೀರಿ. ಆದ್ದರಿಂದಲೇ ಅವು ನಿಮ್ಮನ್ನು ಭಯಪಡಿಸುತ್ತವೆ ಎಂದರು. ಆಗ ಎಲ್ಲರೂ ಸುಮ್ಮನಾದರು. ಬಹಳ ಭಯ ಪಡುತ್ತಲೇ ಆಹಾರ ತಯಾರಿ ನಡೆಯಿತು. ಆದರೂ ಭಯ ಹೋಗಿರಲಿಲ್ಲ. ತ್ಯಾಗಿಗಳು ಆಹಾರ ಮಾಡುತ್ತಿರುವಾಗ ಅವರ ಕೈಯ್ಯಿಂದಲೇ ಆಹಾರ ಕಿತ್ತುಕೊಂಡರೆ ಎನ್ನುವ ಭೀತಿ ಶ್ರಾವಕರಲ್ಲಿ ಹೊಕ್ಕಿತು.

ಚರ್ಯೆಯ ಸಮಯ ಸಮೀಪಿಸಿತು. ಮಹರಾಜರು ಶುದ್ಧಿ ಮಾಡಿಕೊಂಡು ಹೊರಟರು. ಕೋತಿಗಳು ಬಹಳ ಶಾಂತವಾಗಿ ಕೂತು ಇದನ್ನೆಲ್ಲಾ ನೋಡುತ್ತಿದ್ದವು. ಅವರ ಆಹಾರ ನಿರ್ವಿಘ್ನವಾಗಿ ಮುಗಿದು ಹೋಯಿತು. ಎಲ್ಲಾ ತ್ಯಾಗಿಗಳು ಆಹಾರವೂ ಮುಕ್ತಾಯವಾಯಿತು. ಅವರ ಆಹಾರವಾಯಿತೋ ಇಲ್ಲವೋ ಕೋತಿಗಳ ಉಪದ್ರವ ಇದ್ದಕ್ಕಿದ್ದಂತೆ ಸ್ಫೋಟಗೊಂಡಂತಾಯಿತು. ಗೃಹಸ್ಥರು ಅವುಗಳಿಗೆ ರೊಟ್ಟಿಯನ್ನು ಎಸೆಯುತ್ತಾ ಬಹಳ ಕಷ್ಟದಿಂದ ತಾವೂ ತಿಂದರು.

## ಆತ್ಮಧ್ಯಾನದ ಉಪಾಯ

ಒಂದು ದಿನ ಆರ್ಯಿಕಾ ವಿಶಾಲಮತಿ ಮಾತಾಜಿಯವರು ಗುರುದೇವರಲ್ಲಿ ಒಂದು ವಿನಮ್ರ ವಿನಂತಿ ಮಾಡಿಕೊಂಡರು.

"ಮಹರಾಜ್! ಆತ್ಮ ಧ್ಯಾನ ಮಾಡಿರೆಂದು ನೀವು ಹೇಳುತ್ತೀರಿ . ಅದು ಹೇಗೆ ಉಂಟಾಗುತ್ತದೆ ಸ್ವಲ್ಪ ತಿಳಿಸಿ ಹೇಳಿ"

ಅವರು ಸೂತ್ರರೂಪದಿಂದ ಒಂದು ಮಹತ್ಪೂರ್ಣ ಮಾತು ಹೇಳಿದರು.

"ಪೂರ್ಣವಾಗಿ ಸುಮ್ಮನಿರುವುದನ್ನು ಕಲಿ"

ಈ ಮಾತು ಬಹಳ ಅರ್ಥಪೂರ್ಣ. ಬಾಹ್ಯ ಚಟುವಟಿಕೆಗಳನ್ನು ಸ್ತಬ್ಧಗೊಳಿಸಿ ಶಾಂತವಾಗಿ ಸುಮ್ಮನೆ ಕುಳಿತುಕೊಳ್ಳುವುದೇನೂ ಸಾಮಾನ್ಯ ಮಾತಲ್ಲ. ಒಂದು ದೃಷ್ಟಿಯಲ್ಲಿ ಶಾಂತ ಸ್ವಭಾವವೇ ಆತ್ಮ ಸ್ವರೂಪ. ಸುಮ್ಮನೆ ಕುಳಿತುಕೊಳ್ಳುವುದರಲ್ಲೂ ಆ ಗುಣ ಜಪ್ರಕಟವಾಗಬಲ್ಲದು। ಸುಮ್ಮನಿರು ಎನ್ನುವುದರ. ಇನ್ನೊಂದು ಅರ್ಥ ಅಂತರ್ಯದ ಚಂಚಲತೆಯನ್ನು ಬಂದ್ ಮಾಡು ಎನ್ನುವುದು. ಬಾಹ್ಯದ ಚಟುವಟಿಕೆಯನ್ನೇನೋ ನಿಲ್ಲಿಸುವುದು ಸುಲಭ. ಆದರೆ ಮನಸ್ಸಿನ ಚಂಚಲತೆ ಬಂದ್ ಮಾಡುವುದು ಕಷ್ಟ. ಕಾರಣ ಅನಾದಿ ವಿಷಯ ವಾಸನೆಯಿಂದ ಮನಸ್ಸು ಸದಾ ಚಂಚಲಗೊಳ್ಳುತ್ತಿರುತ್ತದೆ. ಆ ಚಂಚಲತೆಗೆ ಕಾರಣ ರಾಗ–ದ್ವೇಷೋತ್ಪತ್ತಿ. ಈ ರಾಗ–ದ್ವೇಷಗಳನ್ನು ಬಂದ್ ಮಾಡಿ ಕೂತುಕೊಳ್ಳಬೇಕು. ಆಗ ಸ್ವಸ್ವರೂಪದ ಬೋಧೆ ಉಂಟಾಗುತ್ತದೆ. ಅದೇ ಆತ್ಮಧ್ಯಾನದ ಪ್ರಥಮ ಹೆಜ್ಜೆ. ಇದು ಅವರ ಇಂಗಿತವಾಗಿತ್ತು. ಅವರು ಮತ್ತೆ ಹೇಳಿದರು.



"ಸ್ತ್ರೀಯರು ತಮ್ಮ ಹೃದಯದಲ್ಲಿ ಸ್ಫಟಿಕದ ಮೂರ್ತಿಯನ್ನು ವಿರಾಜಮಾನ ಮಾಡಿ ಧ್ಯಾನಿಸತಕ್ಕದ್ದು. ಪುರುಷರೂ ಅದೇ ರೀತಿ ಧ್ಯಾನಿಸಬೇಕು. ಅಂತರ್ಜಲ್ಪ ದೂರ ಮಾಡಲು ಪ್ರಯತ್ನಿಸಬೇಕು. ಹಾಗೆ ಮಾಡುತ್ತಾ ಮಾಡುತ್ತಾ ಆತ್ಮ ಧ್ಯಾನ ಸಿದ್ಧಿಯಾಗುತ್ತದೆ.

ಅವರು ಇನ್ನೊಂದು ಮಾತೂ ಹೇಳಿದರು.

"ಬೆಳಿಗ್ಗೆ ಎಂಟು ಗಂಟೆಗೆ ಸರಿಯಾಗಿ ಸೂರ್ಯನಿಗೆ ಎದುರಾಗಿ ನಿಂತು ಸುಮಾರು ೧೫ ನಿಮಿಷ ಆತ್ಮಧ್ಯಾನ ಮಾಡು. ಸ್ವಲ್ಪ ಅಭ್ಯಾಸವಾದ ಬಳಿಕ ಶರೀರವೇ ಸ್ಫಟಿಕದ ಮೂರ್ತಿಯಂತೆ ಕಾಣಿಸತೊಡಗುತ್ತದೆ.

## ಮುಸ್ಲಿಮ್ ಮತ್ತು ದರ್ಜಿ

ನಸಲಾಪುರದಲ್ಲಿ ಒಬ್ಬ ಮುಸ್ಲಿಮ್ ವ್ಯಕ್ತಿ ಆಚಾರ್ಯ ಶ್ರೀಯವರ ಪರಮ ಭಕ್ತನಾಗಿದ್ದ. ಕೆಲವೇ ಕಾಲದಲ್ಲಿ ಅವನು ಉನ್ನತಿಗೇರಿದ. ಅವರನ್ನು ವಿನಾಕಾರಣ ದ್ವೇಷಿಸುತ್ತಿದ್ದ ಒಬ್ಬ ದರ್ಜಿ ಸ್ವಲ್ಪಕಾಲದಲ್ಲೆ ಆರ್ಥಿಕ ಹಾನಿಯಿಂದ ನರಳತೊಡಗಿದ.

ಅವರನ್ನು ವಂದಿಸುವವರು, ನಿಂದಿಸುವವರೂ ಅವರ ಪ್ರಭಾವದ ಬಿಸಿ ಅನುಭವಿಸಿದ್ದರು.

# ಶ್ರಮಣರ ಸಂಸ್ಮರಣೆ ೧೪.

ತಪೋಮೂರ್ತಿ ಮಹಾಮುನಿ ಆಚಾರ್ಯ ಶ್ರೀಯವರ ಪೂರ್ವಾಶ್ರಮದ ಜೇಷ್ಠ ಬಂಧು ಶ್ರೀ ೧೦೮ ವರ್ಧಮಾನಸಾಗರರ ಸಂಸ್ಮರಣೆ.

ಈ ತಪೋ ಮೂರ್ತಿಯ ದರ್ಶನವನ್ನು ೧೯೫೭ ರಲ್ಲಿ ಶ್ರೀ ಬಾಹುಬಲಿ ಕ್ಷೇತ್ರದಲ್ಲಿ ಮಾಡಿದೆವು. ಆ ದಿನ ಶುಕ್ರವಾರ. ಆಗ ಪಂಚಕಲ್ಯಾಣ ಮಹೋತ್ಸವಗಳು ನಡೆದಿದ್ದವು. ಆ ದಿನ ಜಿನೇಂದ್ರ ಭಗವಾನರ ಜನ್ಮ ಕಲ್ಯಾಣ ನಡೆದಿತ್ತು. ವರ್ಧಮಾನ ಸಾಗರರು ವೃದ್ಧಾಪ್ಯದಿಂದ ಪಕ್ವವಾಗಿ ಹೋಗಿದ್ದರು. ಅವರ ವಯಸ್ಸು ಆಗ ೯೪ ವರ್ಷ. ಜ್ಞಾನ, ಧ್ಯಾನ, ತಪಸ್ಸಿನಿಂದ ತೇಜಃಪುಂಜರಾಗಿ ಕಾಣುತ್ತಿದ್ದರು. ಅವರ ಆಧ್ಯಾತ್ಮಿಕ ವರ್ಚಸ್ಸೇನೂ ಸಾಮಾನ್ಯವಾಗಿರಲಿಲ್ಲ. ಅವರ ತಪಸ್ಸೂ ಮನೆಮಾತಾಗಿತ್ತು. ಅವರು ಬಾಹ್ಯದಲ್ಲಿ ಮಾತ್ರ ದಿಗಂಬರವಾಗಿರದೆ ಅಂತರಂಗದಲ್ಲೂ ದಿಗಂಬರರಾಗಿದ್ದರು.

ದಿಗಂಬರತ್ವ ಅದು ಒಂದು ವೇಷವಲ್ಲ ಅದು ಶ್ರೇಷ್ಠತೆಯ ಸಂಕೇತ. ಆತ್ಮ ಶುದ್ಧಿಯ ಲಾಂಛನ. ಆತ್ಮನ ಸರ್ವತೋಮುಖ ವಿಕಾಸದ ಒಂದು ಸಾಧನ. ದಿಗಂಬರತ್ವ ಶ್ರೇಷ್ಠವೆಂದು ಹೇಳುವುದಾದರ ದಿಗಂಬರವಾಗಿರುವವೆಲ್ಲವೂ ಶ್ರೇಷ್ಠವಲ್ಲ. ಪಶುಪಕ್ಷಿಗಳು, ಚಿಕ್ಕಮಕ್ಕಳೂ,ಬುದ್ಧಿ ಭ್ರಮಣೆಗೊಂಡ ಮನುಷ್ಯನೂ ದಿಗಂಬರ. ಯಾರು ರಾಗ-ದ್ವೇಷಗಳನ್ನು ತ್ಯಜಿಸುತ್ತಾರೋ ಲಾಭ-ಅಲಾಭ, ಸುಖ-ದುಃಖಗಳಲ್ಲಿ ಸಮಭಾವ ಹೊಂದಿದ್ದಾರೋ ಸಂಸಾರ ಶರೀರ ಭೋಗಗಳಲ್ಲಿ ಆಸಕ್ತರಿದ್ದಾರೋ ಸ್ವಸಮಯದಲ್ಲಿ ಸಮಾಹಿತರಾದ ಯತಿಗಳ ದಿಗಂಬರತ್ವ ಜಗತ್ತಿನಲ್ಲಿ ಪೂಜ್ಯವಿರುತ್ತದೆ. ಉಳಿದ ಅವಸ್ಥೆಗಳಿಂದ ಏನು ಲಾಭ? ಆದ್ದರಿಂದ ದಿಗಂಬರ ಅವಸ್ಥೆ -ಕಷಾಯಗಳ ದಮನದ ಸಂಕೇತ. ಕೇವಲ ದಿಗಂಬರತ್ವ ಧಾರಣೆ ಮಾಡುವುದರಿಂದಲೇ ವಿಷಯ ಕಷಾಯಗಳ ದಮನವಾಗಲಾರದು ಆದ್ದರಿಂದ ಕೇವಲ ಬಾಹ್ಯ ದಿಗಂಬರತ್ವಕ್ಕೇನೂ ಮಹತ್ವವಿಲ್ಲ. ಅಂತರಂಗದಿಂದಲೂ ದಿಗಂಬರರಾಗಿದ್ದಾಗಲೇ ಬಾಹ್ಯಕ್ಕೆ ಬೆಲೆ. ದಿಗಂಬರತ್ವ ಸಂಸಾರ ಸಾಗರವನ್ನು ದಾಟಿಸುವ ನಾವೆ ಇದ್ದಂತೆ! ಅಂತರಂಗದಲ್ಲಿ ಕಷಾಯಗಳ ಕೋಲಾಹಲ ತುಂಬಿದ್ದರೆ ಕೀರ್ತಿ ಲಾಭ ಪೂಜೆಗಳಿಂದ ಮನಸ್ಸು ಮಲಿನವಾಗಿದ್ದರೆ, ಸಂಸಾರ ಶರೀರ ಭೋಗಗಳ ಕಡೆಗೆ ಮನಸ್ಸು ಕ್ಷಣಕ್ಷಣಕ್ಕೂ ಹಾರುತ್ತಿದ್ದರೆ, ಲಾಭ-ಅಲಾಭ, ಸುಖ-ದುಃಖ ಯಶ-ಅಪಯಶ, ಹೊಗಳಿಕೆ-ತೆಗಳಿಕೆಗಳಲ್ಲಿ ಮನಸ್ಸು ಹರ್ಷ-ವಿಷಾದಗೊಳ್ಳುತ್ತಿದ್ದರೆ, ಮನಸ್ಸು ಅಂತರಂಗದಲ್ಲಿ ಸ್ಥಿರಗೊಂಡಿರದೆ ಬಾಹ್ಯ



ಜಗತ್ತಿನಲ್ಲೇ ಒಂದಾಗಿ ರಮಿಸಲು ಬಯಸುತ್ತಿದ್ದರೆ ಅಂತಹ ದಿಗಂಬರತ್ವ ಕಲ್ಲಿನ ದೋಣಿ ಇದ್ದಂತೆ! ಅಂತಹ ಸಂಯಮಿ ತಾನೂ ಆತ್ಮಘಾತ ಮಾಡಿಕೊಳ್ಳುವನಲ್ಲದೆ ಪರಂಪರೆಯನ್ನೂ ಹಾಳುಮಾಡುತ್ತಾನೆ.

ಆದ್ದರಿಂದ ದಿಗಂಬರ ಅವಸ್ಥೆ ಗ್ರಹಿಸುವ ಮುನ್ನ ತನ್ನ ಶಕ್ತಿಯನ್ನು ತಾನೇ ಪರೀಕ್ಷಿಸಿ ತನ್ನನ್ನು ತಾನು ಸ್ವಯಂ ಅಷ್ಟು ಎತ್ತರಕ್ಕೆ ಏರಿಸಿ ಪ್ರಾಣವನ್ನು ಪಣವನ್ನಾಗಿ ಇಟ್ಟು ತ್ರಿಕರಣ ಶುದ್ಧಿಯಿಂದ ಧರ್ಮ ರಕ್ಷಣೆ ಮಾಡುತ್ತೇನೆ ಎನ್ನುವ ಅಪ್ರತಿಮ ಧೈರ್ಯ ಸಾಹಸ ತುಂಬಿ ಆ ಕ್ಷೇತ್ರಕ್ಕೆ ದುಮುಕಬೇಕು. ಜೀವನದ ಕೊನೆ ಉಸಿರಿರುವವರೆಗೂ ಜಾಗೃತಿಯಿಂದಿದ್ದು ಅಣು ಮಾತ್ರವೂ ಅತಿಚಾರ ಅನಾಚಾರಗಳನ್ನು ಹಚ್ಚಿಕೊಳ್ಳದೆ ಹೋರಾಡುವ ಮನೋಬಲ ಇರಬೇಕು. ಒಂದು ವೇಳೆ ಸಾಮರ್ಥ್ಯವಿರದಿದ್ದರೆ ಮುನಿಚರ್ಯೆಗೆ ಭಾರೀ ಗಂಡಾಂತರ ಬಂದರೆ ಶರೀರವನ್ನು ಸಮಾಧಿ ಮೂಲಕ ವಿಸರ್ಜಿಸಲು ತಯಾರಿರಬೇಕು. ಯುದ್ಧಕ್ಕೆ ಹೊರಡುವ ಯೋಧ ಬದುಕುಳಿದು ಬರುವೆನೆಂದು ಯೋಚಿಸುವುದಿಲ್ಲ. ಅವನ ದೃಷ್ಟಿಯಲ್ಲಿ ಶರೀರಕ್ಕೆ ಯಾವ ಮೌಲ್ಯವು ಇಲ್ಲ. ತಾಯಿನಾಡಿನ ರಕ್ಷಣೆಯಷ್ಟೇ ಅವನ ಗುರಿ ಅದೇ ರೀತಿ ಅದೇ ರೀತಿ ಮುನಿಯೂ ಒಬ್ಬ ಆಧ್ಯಾತ್ಮ ಯೋಧನಿದ್ದಂತೆ. ಅವನದು ಕರ್ಮ ಶತೃವಿನ ವಿರುದ್ಧ ಯುದ್ಧ ಘೋಷಣೆ ! ಅವನು ಆತ್ಮ ರಕ್ಷಣೆಗಾಗಿ ಶರೀರವನ್ನು ತ್ಯಜಿಸಲೂ ಸಿದ್ಧ. ಅಹಿಂಸೆಯೇ ಅವನ ಕವಚ ! ಸಂಯಮವೇ ಅವನ ಅಸ್ತ್ರ ! ಸ್ಯಾದ್ವಾದವೇ ಅವನ ಲಾಂಛನ ! ಸಮಿತಿ ಗುಪ್ತಿಗಳೇ ಅವನ ಸೈನಿಕರು ! ಅಹಿಂಸಾವಾಣಿಯೇ ಅವನು ಮಾಡುವ ಸಿಂಹನಾದ ! ಅಂತಹ ಮಹಾಯೋಧನಾದ ದಿಗಂಬರ ಮುನಿಗೆ ಮೂರು ಲೋಕಗಳೂ ಜಯ ಜಯಕಾರ ಮಾಡುತ್ತವೆ. ಆ ಮುನಿ ಮುಂದೆ ಸ್ವರ್ಗಾಧಿಪತಿ ಆಗುತ್ತಾನೆ. ಅಂತಹ ಲೋಕೋತ್ತರ ದಿಗಂಬರ ಅವಸ್ಥೆಯನ್ನು ಅತಿಚಾರ ಅನಾಚಾರದಿಂದ ಮಲಿನಗೊಳಿಸಿದರೆ ಶರೀರವನ್ನು ಬತ್ತಲೆಗೊಳಿಸಿ ಮನಸ್ಸನ್ನು ಕತ್ತಲೆಮಾಡಿಕೊಂಡರೆ ಕೇವಲ ಶರೀರದಿಂದ ಮಲಧಾರಿಯಾಗಿದ್ದು ಮನಸ್ಸಿನಿಂದ ಕಷಾಯ ಧಾರಿಯಾಗಿದ್ದರೆ ಅಂತಹ ದಿಗಂಬರತ್ವ ನಿಶ್ಚಯವಾಗಿಯೂ ಕಲ್ಲಿನ ದೋಣಿಯೇ ಸೈ !

ಪೂಜ್ಯ ವರ್ಧಮಾನಸಾಗರರು ಭಾವಲಿಂಗ ಮುನಿಗಳಾಗಿದ್ದರು ಅವರು ದಿಗಂಬರ ಅವಸ್ಥೆಯ ಪರಮಾದರ್ಶ ಶಿಲಾಸ್ತಂಭ. ಅವರ ಜೀವನ ಒಂದು ಮಾದರಿಯದು. ಅದು ಶಕ ಪುರುಷ ಮುನಿಪರಂಪರೆಯ ಪಿತಾಮಹ ಚಾರಿತ್ರಚಕ್ರವರ್ತಿ ಆಚಾರ್ಯ ಶಾಂತಿಸಾಗರರಿಂದ ಸಾಣೆ ಹಿಡಿಯಲ್ಪಟ್ಟ ಬೆಲೆಬಾಳಬಲ್ಲ ಒಂದು ವಜ್ರ. ಆ ವಜ್ರಕ್ಕಿನ್ನೆಷ್ಟು ಬೆಲೆ ಬೇಡ !

ಅವರ ಸ್ಥಿರತೆ, ನಿರ್ಮಲತೆ, ಸರ್ವಾಂಗೀಣ ಸಾಧುತ್ವಕ್ಕೆ ನಾನು ಮಾರು ಹೋಗಿದ್ದೆ. ಅವರ ಮುಖಮಂಡಲದಲ್ಲಿ ವಿಶೇಷ ತೇಜಸ್ಸಿತ್ತು. ಆಚಾರ್ಯ ಶಾಂತಿಸಾಗರರ ಸ್ವರ್ಗವಾಸದ ನಂತರ ವಿಷಯ ಕಷಾಯಗಳಿಂದ ತುಂಬಿದ ಈ ಮಲಿನ ಪ್ರಪಂಚದಲ್ಲಿ ಉಸಿರು ಕಟ್ಟಿದಂತಾಗಿ ಬೇಸತ್ತಿದ್ದ ನನಗೆ ಅವರ ದರ್ಶನ ಮರುಭೂಮಿಯಲ್ಲಿ ಓಯಸಿಸ್ ಕಂಡಂತಾಯಿತು. ಕಗ್ಗತ್ತಲೆಯಿಂದ ಬಂದವನಿಗೆ ಪೂರ್ಣೇಂದುವಿನ ದರ್ಶನದಂತಾಯಿತು. ಅವರ ದಿವ್ಯ ಚರಣಗಳಿಗೆ ವಂದಿಸಿ ಕುಳಿತೆ. ಅವರ ಆಶೀರ್ವಾದದಿಂದ ಒಂದು ಹೊಸ ಹುರುಪು ಮೂಡಿತು.

## ವಾರ್ತಾಲಾಪ

ನಾನು ಅವರಿಂದ ಅನೇಕ ವಿಚಾರ ತಿಳಿಯಲು ಚರ್ಚೆಗೆ ಅಣಿಯಾದೆ. ಅವರು ಹೇಳಿದರು

" ನೀವು ಬಂದಿದ್ದು ಒಳ್ಳೆಯದಾಯಿತು. ನೀವು ಹೊರದೇಶದಿಂದ ಬಂದ ವಿಚಾರ ಬಹಳ ಹಿಂದೆಯೇ ಗೊತ್ತಾಯಿತು. ಅಂದಿನಿಂದಲೂ ನೀವು ನಮ್ಮ ದರ್ಶನಕ್ಕೆ ಬಂದೇ ಬರುವಿರೆಂದು ನಿರೀಕ್ಷಿಸುತ್ತಿದ್ದೆ. ಆಚಾರ್ಯ ಶ್ರೀಯವರ ಸ್ವರ್ಗವಾಸದ ನಂತರ ನೀವು ನಮ್ಮನ್ನು ಮರೆತಿರಬಹುದೆಂದು ತಿಳಿದಿದ್ದೆವು.

ಆಗ ನಾನು ಹೇಳಿದೆ :

"ಮಹರಾಜ್ ! ನಾನು ನಿಮ್ಮನ್ನು ಹೇಗೆ ಮರೆಯಲಿ, ನಿತ್ಯವೂ ಪೂಜಾಭಿಷೇಕವಾದ ನಂತರ ನಿಮ್ಮ ಚರಣಗಳನ್ನು ಸ್ಮರಿಸಿ ಪರೋಕ್ಷ ವಂದನೆ ಸಲ್ಲಿಸುತ್ತೇನೆ. ಜಪಾನ್ ಮುಂತಾದ ದೇಶಗಳಿಗೆ ಹೋಗಿದ್ದೆ. ನಿಮ್ಮ ಚರಣ ಸ್ಮರಣೆ ಅಲ್ಲಿಯೂ ಬರುತ್ತಿತ್ತು. ಅಲ್ಲಿಯ ಜನಗಳಿಗೆ ನಿಮ್ಮ ಫೋಟೋ ತೋರಿಸುತ್ತಿದ್ದೆ. ಅಲ್ಲಿಯ ಜನ ನಿಮ್ಮ ಫೋಟೋ ನೋಡಿ ಬಹಳ ಆಶ್ಚರ್ಯ ವ್ಯಕ್ತ ಮಾಡುತ್ತಿದ್ದರು.

## ಸಂದೇಶ

ಪ್ರಶ್ನೆ : " ಆಚಾರ್ಯ ಮಹರಾಜರು ಸಲ್ಲೇಖನ ಸ್ವೀಕರಿಸಿದಾಗ ಏನಾದರೊಂದು ಸಂದೇಶ ಕಳಿಸಿರಬಹುದು. ಅದರ ಬಗ್ಗೆ ದಯವಿಟ್ಟು ತಿಳಿಸಿ"

ಉತ್ತರ: " ನಿರಂತರ ಆತ್ಮ ಧ್ಯಾನ ಮಾಡುತ್ತಿರಿ. ಆತ್ಮ ಧ್ಯಾನ ಬಿಡಬಾರದು. ಭರತ ಚಕ್ರವರ್ತಿಯಂತೆ ಆತ್ಮಜಾಗೃತಿ ಇಟ್ಟುಕೊಳ್ಳಬೇಕು" ಇದು ಆಚಾರ್ಯ ಶ್ರೀಯವರು ಕಳಿಸಿದ ಸಂದೇಶ

ಅವರು ಮತ್ತೆ ಹೇಳಿದರು



"ನಮ್ಮ ಶರೀರ ಅಧಿಕ ನಿಶ್ಶಕ್ತವಾಗಿದೆ ಆದರೂ.................ಈ ವೃದ್ಧ ಶರೀರದಲ್ಲಿರುವ ಆತ್ಮ ನಿಶ್ಶಕ್ತನಲ್ಲ. ಆಗಾಗ್ಗೆ ನಾವು ಇಡೀ ರಾತ್ರಿ ಎಲ್ಲಾ ಧ್ಯಾನದಲ್ಲಿ ಮುಳುಗಿರುತ್ತೇವೆ. ಮೂರು-ಮೂರು ಗಂಟೆಗಳವರೆಗೆ ಧ್ಯಾನದಲ್ಲಿ ಕೂತಿರುತ್ತೇವೆ. ಇದು ಆತ್ಮ ಶಕ್ತಿಯ ಫಲ."

ಪ್ರಶ್ನೆ : "ಮಹರಾಜ್! ಆತ್ಮಧ್ಯಾನ ಯಾವಾಗ ಮಾಡುತ್ತೀರಿ. ಅಂದರೆ ರಾತ್ರಿ ವೇಳೆಯಲ್ಲೋ ?

ಉತ್ತರ : "ನಾವು ರಾತ್ರಿ ೧೨ ಕ್ಕೆ ಧ್ಯಾನಕ್ಕೆ ಕುಳಿತುಕೊಳ್ಳುತ್ತೇವೆ. ಸುಮಾರು ಮೂರು ಗಂಟೆಯವರೆಗೂ ನಡೆಯುತ್ತದೆ.

ಪ್ರಶ್ನೆ : ಈ ವೃದ್ಧ ಶರೀರವೇನಾದರೂ ಕಿರಿಕಿರಿ ಮಾಡುವುದೋ ಹೇಗೆ"

ಉತ್ತರ : ವ್ಯವಹಾರದ ದೃಷ್ಟಿಯಿಂದ ಅದರಿಂದ ಸ್ವಲ್ಪ ಕಿರಿಕಿರಿ ಇರಬಹುದು. ನಿಶ್ಚಯದ ದೃಷ್ಟಿಯಿಂದ ಅದೇನೂ ಕಷ್ಟ ಕೊಡಬಲ್ಲದು. ನಾವೀಗ ಆತ್ಮ ಶಕ್ತಿಯಿಂದಲೇ ಬದುಕಿದ್ದೇವೆ. ಅನ್ಯಥಾ ಹೊರಗೆ ಶೌಚಾದಿಗಳಿಗೆ ಹೋಗಲೂ ಈ ಶರೀರದಲ್ಲಿ ಶಕ್ತಿ ಇಲ್ಲ.

## ಅಪೂರ್ವ ಕೇಶಲೋಚನ

ತಾ೧೧ ಫೆ. ೧೯೫೭ ರಲ್ಲಿ ಅವರು ಕೇಶಲೋಚನ ಮಾಡಿಕೊಂಡರು. ದೂರದೂರದಿಂದ ಸಾವಿರಾರು ಸ್ತ್ರೀಪುರುಷರು ಬಂದಿದ್ದರು. ಅವರು ಕೇವಲ ಅರ್ಧಗಂಟೆ ಒಳಗೆ ಪೂರೈಸಿದರು. ಯಾರ ಸಹಾಯವನ್ನೂ ತೆಗೆದುಕೊಳ್ಳಲಿಲ್ಲ. ಮುಖದಲ್ಲಿ ಯಾವ ವಿಕೃತಿಯೂ ಉಂಟಾಗಲಿಲ್ಲ. ಅವರು ಧೀರ ಗಂಭೀರ ವ್ಯಕ್ತಿಯಾಗಿದ್ದರು. ಅವರಲ್ಲಿ ನಾನು ಕೇಳಿದೆ.

"ನೀವು ಇದೀಗ ಕೇಶಲೋಚನ ಮಾಡಿಕೊಂಡಿರಿ. ನಿಮಗೇನಾದರೂ ತೊಂದರೆ ಆಯಿತೇ?

ಉತ್ತರ "ಅರೆ ಬಾಬಾ! ಸ್ವಲ್ಪವೂ ತೊಂದರೆ ಇಲ್ಲ. ಕೇಶಗಳನ್ನು ಕಿತ್ತು ಹಾಕುವೆವೆಂದು ಅನ್ನಿಸಲೇ ಇಲ್ಲ. ಮಸ್ತಕದಲ್ಲಿ ಬೆಳೆದು ಕೂದಲನ್ನು ಬೇರ್ಪಡಿಸುತ್ತಿರುವಂತೆ ಭಾಸವಾಯಿತು."

"ಶರೀರದತ್ತ ನಮ್ಮ ಲಕ್ಷ್ಯವಿಲ್ಲ. ಕೇಶಗಳನ್ನು ಕಿತ್ತು ಹಾಕುವ ಮುನ್ನ ನಾವು ಜಿನಭಗವಾನರನ್ನು ಸ್ಮರಿಸುತ್ತೇವೆ. ಆಗ ಶರೀರಕ್ಕೆ ಹೀಗೆ ಹೇಳುತ್ತೇವೆ.

'ಎಲೈ ಶರೀರವೆ! ನೀನು ನನ್ನಿಂದ ಭಿನ್ನನಿದ್ದೀಯೆ' ಇಷ್ಟೆ, ಕೇಶಗಳನ್ನು ಕೀಳಲಾರಂಭಿಸಿದೆವು."

## ಸ್ವಪ್ನದಲ್ಲಿ ಗುರುದರ್ಶನ

ಪ್ರಶ್ನೆ : "ಮಹರಾಜ್! ಸ್ವಪ್ನದಲ್ಲೇನಾದರೂ ಆಚಾರ್ಯ ಶ್ರೀಯವರ ದರ್ಶನ ಆಗಿರಬಹುದೇ?

ಉತ್ತರ : "ಜಾಗೃತ ಅವಸ್ಥೆಯ ಭಾವ ಸ್ವಪ್ನದಲ್ಲಿ ಬರುತ್ತದೆ. ಅನೇಕ ವೇಳೆ ಅವರ ದರ್ಶನವಾಗಿದೆ. ಅವರು ಸ್ವಪ್ನದಲ್ಲಿ ಹೇಳುತ್ತಿದ್ದರು. ನೀವು ವ್ರತಗಳಲ್ಲಿ ಸ್ಥಿರವಾಗಿದ್ದು ಆತ್ಮ ಚಿಂತನೆ ಮಾಡುತ್ತಿರಿ"

## ರುದ್ರಪ್ಪನ ಸಮಾಧಿ

ಆಚಾರ್ಯಶ್ರೀಯವರ ಗೃಹಾವಸ್ಥೆಯ ಸ್ನೇಹಿತ ಲಿಂಗಾಯತ ಮತಸ್ಥ ಶ್ರೀಮಂತವ್ಯಕ್ತಿ ರುದ್ರಪ್ಪನ ಬಗ್ಗ ಹೇಳತೊಡಗಿದರು.

"ಸತ್ಯವ್ರತಿ ರುದ್ರಪ್ಪ ವೇದಾಂತದ ಮಹಾ ಪಂಡಿತ. ಅತ್ಯಂತ ನಿಷ್ಕಲಂಕ ವ್ಯಕ್ತಿ. ಅವರು ತಮ್ಮ ಮನೆಯಲ್ಲಿ ಯಾರೊಡನೆಯೂ ಹೆಚ್ಚು ಮಾತನಾಡುತ್ತಿರಲಿಲ್ಲ. ದಿನವೆಲ್ಲಾ ಮೌನಿಯಾಗಿರುತ್ತಿದ್ದರು. ಆಗಾಗ್ಗೆ ನಮ್ಮ ಮನೆಗೆ ಬಂದು ಆಚಾರ್ಯ ಶ್ರೀಯವರೊಡನೆ ಚರ್ಚಿಸುತ್ತಿದ್ದರು. ಅವರ ಉಪದೇಶ ಲಕ್ಷ್ಯವಿಟ್ಟು ಕೇಳುತ್ತಿದ್ದರು.

ಒಂದು ದಿನದ ಮಾತದು. ಭೋಜ ಗ್ರಾಮದಲ್ಲಿ ಪ್ಲೇಗು ಬಹಳ ಅವಾಂತರ ಎಬ್ಬಿಸಿತು. ನಾವೆಲ್ಲಾ ನಮ್ಮ ತಂದೆ-ತಾಯಿಗಳೊಡನೆ ನಮ್ಮ ಮಾವನ ಊರು ಯರನಾಳಕ್ಕೆ ಹೋಗಿದ್ದೆವು. ಪ್ಲೇಗು ಕಾಡ್ಗಿಚ್ಚಿನಂತೆ ಮನೆ ಮನೆಗೂ ಹಬ್ಬತೊಡಗಿತು. ರುದ್ರಪ್ಪನವರಿಗೂ ಆ ರೋಗ ತಗಲಿತು. ಕೊನೆಯ ಗಂಟೆ ಭಾರಿಸತೊಡಗಿತು. ಪ್ಲೇಗ್ ಅಂದರೆ ಆಗಿನ ಜನಕ್ಕೆ ಎದೆಯೊಡೆದು ಹೋಗುತ್ತಿತ್ತು. ಭೂತ ದರ್ಶನದಂತೆ ಹೆದರಿ ಬಿಡುತ್ತಿದ್ದರು ಗಟ್ಟಿ ಎದೆಯ ಕೆಲವರು ಮಾತ್ರ ಓಡಾಡುವುದು ಕಾಣುತ್ತಿತ್ತು. ಮನೆಮನೆಗಳೂ ಹೆದರಿಕೆಯಿಂದ ಬಾಗಿಲು ಹಾಕಲ್ಪಡುತ್ತಿದ್ದವು. ಪ್ಲೇಗ್ ಎಂದರೆ ಊರಿಗೆ ಹುಲಿ ಹೊಕ್ಕಂತೆ!

ಆಚಾರ್ಯ ಮಹರಾಜರಿಗೆ ರುದ್ರಪ್ಪ ರುಗ್ಣಾವಸ್ಥೆಯಲ್ಲಿರುವುದು ಹೇಗೋ ತಿಳಿಯಿತು. ಅವರು ಒಂದೇ ಉಸುರಿಗೆ ರುದ್ರಪ್ಪನ ಹತ್ತಿರ ಧಾವಿಸಿ ಬಂದರು. ಭಯವೆಂದರೇನು ಬಾಲ್ಯದಿಂದಲೂ ಅವರಿಗೆ ತಿಳಿದಿರಲಿಲ್ಲ. ಅವರು ಜೀವನವೆಲ್ಲಾ ನಿರ್ಭೀತರಾಗಿಯೇ ಬದುಕಿದ್ದರು. ಅವರು ಹೋಗಿ ನೋಡುತ್ತಾರೆ. ರೋಗ



ರುದ್ರಪ್ಪನನ್ನುಪೂರ್ಣ ಹಣ್ಣು ಮಾಡಿತ್ತು. ಇಂತಹ ಧಾರ್ಮಿಕ ಜೀವಕ್ಕೆ ಕಲ್ಯಾಣ ಮಾಡುವುದು ನನ್ನ ಕರ್ತವ್ಯವೆಂದು ಭಾವಿಸಿದರು.

ರುದ್ರಪ್ಪನಿಗೆ ಅಂತ್ಯ ಸಮೀಪಿಸುತ್ತಿತ್ತು. ಶರೀರ ಚೇಷ್ಟಾಹೀನವಾಗಿತ್ತು. ಉಸಿರಾಟ ರಭಸಗೊಳ್ಳತೊಡಗಿತು. ಪರಿಸ್ಥಿತಿ ತಿಳಿದ ಅವರು ರುದ್ರಪ್ಪನ ಕಿವಿಯಲ್ಲಿ ಹೇಳತೊಡಗಿದರು.

"ರುದ್ರಪ್ಪ! ನಿನ್ನ ದಿನ ಮುಗಿಯುತ್ತಾ ಬಂದಿವೆ. ಈಗ ಸಮಾಧಿ ಧಾರಣೆ ಮಾಡಿಕೋ. ನಿನ್ನ ಶರೀರದಿಂದ ಆತ್ಮ ಭಿನ್ನ. ಶರೀರದ ಚಿಂತೆ ಬಿಡು. ರುದ್ರಪ್ಪಾ! ಅರಹಂತ ಎಂದು ಹೇಳು"ಎಂದು ಉಪದೇಶ ಕೊಟ್ಟರು. ಆಗ ಅವರ ಬಾಯಿಂದ ಮಂದ ಸ್ವರದಲ್ಲಿ ಆದರೂ ಸ್ಪಷ್ಟವಾದ 'ಅರಹಂತ'ಎನ್ನುವ ಶಬ್ದ ಹೊರಟಿತು. ಆಗಲೇ ರುದ್ರಪ್ಪನ ಭಾಗ್ಯ ಜಗಜಗಿಸತೊಡಗಿತು. ಅರ್ಹಂತಾ ಅರ್ಹಂತಾ ಎನ್ನುತ್ತಾ ವಾಣಿ ಕ್ಷೀಣಗೊಳ್ಳಲಾರಂಭಿಸಿತು.

ಆದರೂ ಅವರ ಕಂಠದಲ್ಲಿ ಶಬ್ದೋಚ್ಚಾರವಾಗುತ್ತಿದ್ದುದು ಸ್ಪಷ್ಟವಾಗಿ ಕಾಣುತ್ತಿತ್ತು. ಮತ್ತೆ ಅವರು ಉಪದೇಶ ಕೊಡತೊಡಗಿದರು.

"ರುದ್ರಪ್ಪಾ! ಹೆದರಬೇಡ. ಈ ಶರೀರ ನಿನ್ನದಲ್ಲ. ಈ ಜೀರ್ಣ ಶರೀರದ ವ್ಯಾಮೋಹ ಬಿಡು. ನಿನ್ನ ಆತ್ಮನನ್ನೇ ನೀನು ಅವಲಂಭಿಸು. ಅರ್ಹಂತನನ್ನು ಬಿಡದೆ ಧ್ಯಾನಿಸು" ಇಷ್ಟು ಹೇಳುವಾಗಲೇ ಶರೀರ ಚೇಷ್ಟಾ ಹೀನವಾಗಿ ಬಿದ್ದಿತ್ತು. ರುದ್ರಪ್ಪನ ಆತ್ಮ ಈ ರೋಗ ಜರ್ಝರಿತ ಶರೀರ ತ್ಯಜಿಸಿ ದಿವ್ಯ ಲೋಕಕ್ಕೆ ತೆರಳಿತ್ತು. ಸಮಾಧಿ ಮರಣ ಪ್ರೇಮಿ ಆಚಾರ್ಯ ಮಹರಾಜರು ತಮ್ಮ ನೆಚ್ಚಿನ ಮಿತ್ರ ರುದ್ರಪ್ಪನಿಗೆ ಸನ್ಮಾರ್ಗ ತೋರಿಸಿದ್ದರು.

ರುದ್ರಪ್ಪ ಆಚಾರ್ಯ ಶ್ರೀಯವರ ಉಪದೇಶದಿಂದ ಸದ್ಗತಿ ಪಡೆದಿದ್ದರು. ಈ ರೀತಿ ಸದ್ಗತಿ ತೋರಿಸಬಲ್ಲ ಮಿತ್ರರು ಯಾರಿದ್ದಾರೆ. ಮೋಹ ಭಾವಗಳನ್ನು ಹುಟ್ಟಿಸಿ ಭವಸಿಂಧುವಿಗೆ ತಳ್ಳುವ ಮಿತ್ರರಿಗೆ ಈಗೇನು ಕೊರತೆ. ಮೋಕ್ಷ ಮಾರ್ಗದಲ್ಲಿ ಮುನ್ನಡೆಸುವ ಮಿತ್ರರು ಸಿಗುವುದು ಮಹಾ ದುರ್ಲಭ."

ಇದಾದ ನಂತರ ಅವರ ವಿಚಾರವನ್ನು ಇನ್ನೊಂದೆಡೆಗೆ ಸೆಳೆದೆ.

ಪ್ರಶ್ನೆ : "ಮಹರಾಜ್! ಆತ್ಮ ಚಿಂತನೆಯಲ್ಲಿ ನಿಮ್ಮ ಮನಸ್ಸು ದೃಢವಾಗಿರುವುದೋ ಇಲ್ಲವೋ ತಿಳಿಸಿ"

ಉತ್ತರ : ನಾವು ಏಕಾಗ್ರದಿಂದ ಆತ್ಮ ಚಿಂತನೆ ಮಾಡುತ್ತಿರುತ್ತೇವೆ. ಧ್ಯಾನಬಿಟ್ಟು ಹೊರ ಬಂದ ನಂತರವೂ ಮನಸ್ಸು ಒಳ ಒಳಗೇ ಹೋಗಲು

ಬಯಸುತ್ತದೆ. ಆಗಾಗ್ಗೆ ನಾವು ೬೩ ಶಲಾಕ ಪುರುಷರ ದಿವ್ಯ ಜೀವನವನ್ನು ಚಿಂತನೆ ಮಾಡುತ್ತೇವೆ.

## ಮಲಿನ ಭಾವಕ್ಕೆ ಔಷಧಿ.

"ಕೆಟ್ಟದ್ದರ ಬಗ್ಗೆಯೂ ಒಮ್ಮೊಮ್ಮೆ ಮನಸ್ಸು ಚಿಂತನೆ ಆರಂಭಿಸುವುದುಂಟು. ಅತ್ತ ಏಕೆ ಹೋಗುವೆ ಎಂದು ಎಚ್ಚರಿಸಿದ ಕೂಡಲೇ ಛಟ್ಟನೆ ಹಾರಿ ಮತ್ತೆ ಅದು ಒಳ ಸೇರಿ ಆತ್ಮ ಚಿಂತನೆಗೆ ಅಣಿಯಾಗುತ್ತದೆ."

ಪ್ರಶ್ನೆ : ನೀವು ಜಪದ ಬಗ್ಗೆ ಏನು ಕ್ರಮ ಇಟ್ಟುಕೊಂಡಿದ್ದೀರಿ?

ಉತ್ತರ : "ಪ್ರಭಾತದಲ್ಲಿ ೧೬ ಮಾಲೆ. ಮಧ್ಯಾಹ್ನ ೫ ಮಾಲೆ. ಸಂಧ್ಯಾ ೩೬ ಮಾಲೆ. ಮಧ್ಯರಾತ್ರಿ ೫ ಮಾಲೆ . ಉಳಿದ ಸಮಯ ಆತ್ಮಧ್ಯಾನ. ಇವಿಷ್ಟೂ ನಮ್ಮ ದಿನಚರಿ"

ಪ್ರಶ್ನೆ : "ಮಹರಾಜ್! ಈ ಗಡಿಯಾರ ನಿಮ್ಮದಲ್ಲ. ನಾವು ನಿಮ್ಮವರೇ?

ಉತ್ತರ : ಹಸನ್ಮುಖಿಗಳಾಗಿ ಹೇಳಿದರು. ಈ ಜಗತ್ತಿನ ಮಧ್ಯದಲ್ಲಿರುವ ಈ ನಮ್ಮ ಶರೀರವೂ ನಮ್ಮದಲ್ಲ. ನೀವು ನಮ್ಮವರಾದರೆ ನಮ್ಮೊಡನೆ ನಡೆಯಿರಿ. ನಮ್ಮೊಡನೆ ನೀವೇಕೆ ಬರುವುದಿಲ್ಲ. ಮತ್ತೆ. ಅಂತಃ ಕೋಟಾಕೋಟಿ ಸಾಗರ ಕಾಲ ಕಳೆದರೂ ಈ ಜೀವಕ್ಕೆ ಯಾರೂ ಸಂಗಾತಿ ಇಲ್ಲ. ಏಕಾಂಗಿಯಾಗಿಯೇ ಉಳಿದು ಬಂದಿದೆ.

## ಅಭಿಷೇಕದ ಬಗ್ಗೆ.

ಆಚಾರ್ಯ ಶ್ರೀಯವರು ಆಗಮ ಪ್ರಾಣರಾಗಿದ್ದರು. ಅವರು ಸಲ್ಲೇಖನ ತೆಗೆದುಕೊಂಡಕೂಡಲೇ ಭಗವಾನ್ ದೇಶಭೂಷಣ-ಕುಲಭೂಷಣರ ಪಂಚಾಮೃತ ಅಭಿಷೇಕವನ್ನು ಲಕ್ಷ್ಯವಿಟ್ಟುನೋಡುತ್ತಿದ್ದರು. ಪಂಚಾಮೃತ ಅಭಿಷೇಕ ಆಗಮ ವಿರುದ್ಧವಾಗಿದ್ದರೆ ಆಗಮ ನಿಷ್ಠರಾದ ಅವರು ಎಂದೂ ಅದನ್ನು ನೋಡುತ್ತಿರಲಿಲ್ಲ. ಆಗಮದಲ್ಲಿ ಹಾಲು ಮೊಸರು ತುಪ್ಪ ಮುಂತಾದ ರಸವಸ್ತುಗಳ ಅಭಿಷೇಕದ ಪ್ರಸ್ತಾಪ ಬಂದಿದೆ. ಅಂತವರ ಪರಾಮರ್ಷೆಗಾಗಿ ಕೆಲವು ಆಗಮೋಕ್ತ ವಿಚಾರಗಳನ್ನು ಇಲ್ಲಿ ತಿಳಿಸುತ್ತೇನೆ.

ಹರಿವಂಶ ಪುರಾಣದಲ್ಲಿ ೨೨ನೇ ಸರ್ಗದಲ್ಲಿ ಆಚಾರ್ಯ ಜಿನಸೇನರು ಹೀಗೆ ಹೇಳಿದ್ದಾರೆ.

ಕ್ಷೀರೋಕ್ಷುರಸ ಧಾರೊಧ್ಯೆ ಘೃತದದ್ಯುದಕಾದಿಭಿ :



ಅಭಿಷಿಚ್ಯ ಜಿನೇಂದ್ರಾರ್ಚಮರ್ಚಿತಾಂ ನೃಸುರಾಸುರೈ '೨೨ ಸರ್ಗ"

ಭಗವಾನ್ ವಾಸುಪೂಜ್ಯರಿಂದ ಪವಿತ್ರವಾದ ಚಂಪಾಪುರಿಯಲ್ಲಿ ವಸುದೇವನು ಗಂಧರ್ವ ಸೇನೆಯೊಡನೆ ಫಾಲ್ಗುಣ ಅಷ್ಟಾಹ್ನಿಕ ಮಹಾವ್ರತ ಜಿನಮಂದಿರಕ್ಕೆ ಹೋಗಿ ಬಹಳ ಹರ್ಷದಿಂದ ಕ್ಷೀರ ಇಕ್ಷುರಸ ಮೊಸರು ತುಪ್ಪ ಜಲಾದಿಗಳಿಂದ ಭಗವಂತನ ಅಭಿಷೇಕ ಮಾಡಿದ. ನಂತರ ಜಲ ಹರಿಚಂದನ ಶಾಲಿಯಾದಿ ನಾನಾ ಪ್ರಕಾರದ ಸುವಾಸ ಪುಷ್ಪ ನಿರ್ದೋಷ ನೈವೇದ್ಯ ದೀಪ ಧೂಪಗಳಿಂದ ಭಗವಂತನನ್ನು ಅರ್ಚಿಸಿದನು. ಜಿನಸೇನಾಚಾರ್ಯರು ಒಬ್ಬ ದೊಡ್ಡ ದಿಗಂಬರ ಜೈನಾಚಾರ್ಯರಿದ್ದುದರಿಂದ ಅವರ ಮಾತು ಪ್ರಮಾಣವಾಗಿರುತ್ತದೆ.

ಪೂಜಾಂತರದಲ್ಲಿ ವಸುದೇವನು ೧೭೦ ಕರ್ಮಭೂಮಿಯ ತ್ರಿಕಾಲವರ್ತಿ ತೀರ್ಥಂಕರರನ್ನು ಪೂಜಿಸಿದನು.

ಪದ್ಮ ಪುರಾಣದಲ್ಲೂ ಹರಿವಂಶದ ಈ ವಿಚಾರದ ಬಗ್ಗೆ ಸಮರ್ಥನೆ ಇದೆ.

ರಾಮನ ವನವಾಸಾನಂತರ ಭರತನು ಅಯೋಧ್ಯೆಯ ಶಾಸಕನಾಗುತ್ತಾನೆ. ಅವನು ಧೃತಿ ಎಂಬ ಮುನಿಯ ಸಮಕ್ಷಮ ಹೀಗೆ ವ್ರತ ಧರಿಸುತ್ತಾನೆ. "ಪದ್ಮದರ್ಶನ ಮಾತ್ರೇಣ ಕರಿಷ್ಯೆ ಮುನಿತಾಮ್" ರಾಮನ ದರ್ಶನವಾದ ಕೂಡಲೇ ಮುನಿಯಾಗುತ್ತೇನೆ. ಆಗ ಆಚಾರ್ಯರು ಹೇಳುತ್ತಾರೆ – "ನೀನು ಮುನಿಯಾಗುವಮುನ್ನ ಶ್ರಾವಕ ವ್ರತಗಳನ್ನು ಪಾಲಿಸಬೇಕಾಗುತ್ತದೆ. ಯಾರು ರಾತ್ರಿ ಭೋಜನ ತ್ಯಾಗ ಮಾಡುವರೋ ಅವರು ಆರಂಭ ಪರಿಗ್ರಹಿಗಳಾದರೂ ಶುಭಗತಿಗೆ ಹೋಗುತ್ತಾರೆ. ಯಾವ ಪುರುಷ ಕೇತಕಿ ಮಾಲತಿಯಾದಿ ಪುಷ್ಪಗಳಿಂದ ಭಗವಂತನನ್ನು ಅರ್ಚಿಸುತ್ತಾನೋ ಅಂತವನು ಪುಷ್ಪಕ ವಿಮಾನಗಳಲ್ಲಿ ಹುಟ್ಟಿ ಯಥೇಚ್ಛವಾಗಿ ಕ್ರೀಡಿಸುತ್ತಾನೆ."

ದೌಲತ್‌ರಾಮ್‌ರವರ ಬಾಷಾಟೀಕೆ ಪು.೩೦೭

ರವಿಷೇಣ ಆಚಾರ್ಯರು ಪದ್ಮಪುರಾಣದಲ್ಲಿ ಹೀಗೆ ಹೇಳಿದ್ದಾರೆ.

ಯ ಕರೋತಿ ವಿಭವಾರ್ಯಮಹಾರ ಪರಿವರ್ಜನಮ್

ಸರ್ವಾರಂಭ ಪ್ರವೃತ್ತೋಪಿ ಯತ್ಯಾಸ್ ಸುಖದಾಂ ಗತಿಃ ಸ್ವರ್ಗ ೨೨

ಪುಷ್ಪದಿಂದ ಅರ್ಚಿಸುವವರು ಪುಷ್ಪಕ ವಿಮಾನಗಳಲ್ಲಿ ಹುಟ್ಟಿ ಕ್ರೀಡಿಸುತ್ತಾರೆ.

ಈ ರೀತಿ ಹಲವಾರು ಮಹಾನ್ ಆಚಾರ್ಯರ ಪ್ರಕಾರ ಪುಷ್ಪಾರ್ಚನೆಯ ನಿಷೇಧ ಹಾಕಲು ಬರುವುದಿಲ್ಲ. ಸಿದ್ಧಪೂಜೆಯಲ್ಲೂ ಹೀಗೆ ಬರುತ್ತದೆ. ಮಂದಾರ ಕುಂದ ಕಮಲಾದಿ ವನಸ್ಪತಿನಾಮ್ ಪುಷ್ಪರ್ಯಜೆ ಶುಭತಮೈರ್ವರ ಸಿದ್ಧಚಕ್ರಂ.

## ಅಭಿಷೇಕದ ಫಲ

ಪದ್ಮಪುರಾಣದ ಭಾಷಾ ಟೀಕೆಯಲ್ಲಿ ದೌಲತ್‌ರಾಮ್ ಹೀಗೆ ಹೇಳಿದ್ದಾರೆ.

"ಯಾರು ಜಿನೇಂದ್ರ ದೇವರ ಅಭಿಷೇಕ ಮಾಡುವರೋ ಅಂತವರು ಸಕಲ ಮಾನವರಿಂದ ಸೇವಿಸಲ್ಪಡುವ ಚಕ್ರವರ್ತಿಗಳಾಗಿ ಹುಟ್ಟುತ್ತಾರೆ. ದೇವ ಮಾನವ ವಿದ್ಯಾಧರರಿಂದ ಮಾಡುವ ರಾಜ್ಯಾಭಿಷೇಕ ಹೊಂದುತ್ತಾರೆ. ಯಾರು ಕ್ಷೀರಾಭಿಷೇಕ ಮಾಡುತ್ತಾರೆ ಅಂತವರು ಕ್ಷೀರಸಾಗರದಂತಹ ಉಜ್ವಲ ಶರೀರ ಧಾರಿಗಳಾಗುತ್ತಾರೆ. ಘೃತಾಭಿಷೇಕ ಮಾಡುವವರು ಮಹಾಕಾಂತಿಯುಕ್ತ ಸುಗಂಧ ಶರೀರ ಧರಿಸಿ ಸ್ವರ್ಗದಲ್ಲಿ ಹುಟ್ಟುತ್ತಾರೆ. ಇಕ್ಷು ರಸದ ಧಾರೆಯನ್ನು ಭಗವಂತನ ಮೇಲೆ ಭಕ್ತಿಯಿಂದ ಬಿಡುವವರು ಸುರೇಂದ್ರರಾಗಿ ಹುಟ್ಟುತ್ತಾರೆ. ಅಂತಹ ಸುದೃಷ್ಟಿಜೀವಿಗಳು ಕ್ರಮೇಣ ಮೋಕ್ಷಕ್ಕೆ ಹೋಗುತ್ತಾರೆ-ಪೃ.೩೦

ಸಂಸ್ಕೃತದ ಕೆಲವು ಗ್ರಂಥಗಳಲ್ಲಿ ಹೀಗೆ ಹೇಳಿದೆ.

ಅಭಿಷೇಕಂ ಜಿನಂದ್ರಾಣಾಂ ಕೃತ್ವ ಸುರಭಿವಾರಿಣಾ

ಅಭಿಷೇಕಮವಾಪ್ನೋತಿ ಯತ್ರ ಯತ್ರೋಪಜಾಯತೇ

ಅಭಿಷೇಕ ಜಿನಂದ್ರಾ್ರ ವಿಧಾಯ ಕ್ಷೀರಧಾರಯಾ

ವಿಮಾನ ಕ್ಷೀರಧವಲೆ ಜಾಯತೆ ಪರಮದ್ಯುತಿಃ

ದಧಿಕುಂಭ್ಯೆ ಜಿನೇಂದ್ರಾಣಾಂ ಯಃ ಕರತ್ಯಭಿಷೇಚನಂ

ದದ್ಯಾಭ ಕುಟ್ಟವೇ ಸ್ವರ್ಗೇ ಜಾಯತೆ ಸಪುರೋತ್ತಮಃ

ವರಾಂಗ ಚರಿತ್ರೆಯಲ್ಲಿ:



"ಜನ್ಮ ಜರಾಮೃತ್ಯು ಆದಿಗಳ ಶಾಂತ್ಯರ್ಥ ಜಲಾಭಿಷೇಕ ಮಾಡಲಾಗುತ್ತದೆ. ವಿಷಯ ವಾಸನೆಗಳನ್ನು ದೂರ ಮಾಡಲು ಹಾಲಿನ ಅಭಿಷೇಕ ಮಾಡಲಾಗುತ್ತದೆ. ಮೊಸರಿನ ಅಭಿಷೇಕದಿಂದ ಇಷ್ಟಾರ್ಥ ಸಿದ್ಧಿಯಾಗುತ್ತದೆ.

ಭಾವ ಸಂಗ್ರಹದಲ್ಲಿ:

ಉಚ್ಚಾರಿ ಊಣಮಂತೆ ಅಹಿಸೇಯಂ ಹಣವು ದೆವ ದೇವಸ್ಸಣೇರ ದಯ ವೀರ ದಹಿಯಂ ಖಿವವು ಅಣಕ್ಕಮೇಣ ಜಿಣಸಿಸೆ

ಸದಾಸುಖಿಜಿಯವರು :

"ಯಾರು ಭಗವಂತನನ್ನು ಸಚಿತ್ತದ್ರವ್ಯಗಳಿಂದ ಪೂಜಿಸುತ್ತಾರೋ ಜಲಗಂದಾಕ್ಷತೆಯಾದಿ ದ್ರವ್ಯಗಳಿಂದ ಅರ್ಚಿಸುತ್ತಾರೋ ಸಚಿತ್ತ ಆಮ್ಲ ದಾಡಿಮಾದಿ ಫಲಗಳಿಂದ ಅರ್ಚಿಸುತ್ತಾರೋ, ಧೂಪ ಸಮರ್ಪಿಸುವರೋ ಅಂತಹ ಸಚಿತ್ತ ದ್ರವ್ಯಗಳಿಂದ ಕೂಡಿದ ಪೂಜೆಯೂ ಆಗಮೋಕ್ತವಾಗಿದೆ. ಪುಣ್ಯ ಅವರವರ ಭಾವನೆಯ ಆಧೀನವಾಗಿದೆ.

-ಕನ್ನಡ ಶ್ರಾವಕಾಚಾರ ಟೀಕೆ ಪ್ರ. ೧೯೯

ತಿಲೋಯ ಪಣ್ಣತ್ತಿಯಲ್ಲಿ

ದಕ್ಖದಾಡಿಮ ಕದಳಿ ಣಾರಂಗವು ಮಾದುಲಿಂಗ ಭೂ ದೇಹಿ ಪಕ್ಕೇಹಿ ಫಲೋಹಿಪೂಜಂತಿ ಜಿಣಣಾಹಂ:

ಸಚಿತ್ತ ದ್ರವ್ಯಗಳಿಂದ ಜಿನೇಶ್ವರರನ್ನು ಪೂಜಿಸಬಹುದೆಂದು ಈ ಶ್ಲೋಕದ ಅಭಿಪ್ರಾಯವಾಗಿದೆ.

## ಸಾಧು ವಿರೋಧಿ ಆಂದೋಲನ

ಒಂದು ದಿನ ವರ್ಧಮಾನಸಾಗರರು ಹೇಳಲಾರಂಭಿಸಿದರು.

ಇತ್ತೀಚಿನ ದಿನಗಳಲ್ಲಿ ಸಾಧುಗಳ ಚರ್ಯೆಯ ಬಗ್ಗೆ ಪತ್ರಿಕೆಗಳಲ್ಲಿ ಚರ್ಚಿಸಲಾಗುತ್ತದೆ. ಅನೇಕ ದೋಷಗಳನ್ನು ಪ್ರಕಟಿಸುತ್ತಾರೆ. ಹೀಗೆ ಮಾಡುವುದರಿಂದ ಅನ್ಯ ಸಾಧುಗಳಿಗೆ ಅಹಿತವಾಗುತ್ತದೆ. ಮಾರ್ಗಚ್ಯುತ ಯತಿಗಳ ಬಗ್ಗೆ ಚರ್ಚೆ ನಡೆಯಲಿ. ಅದು ಏಕಾಂತದಲ್ಲಿ ಮತ್ತು ಸ್ಥಿತೀಕರಣ ಉಪಗೂಹನಾಂಗಗಳ ಸಹಿತ. ಆದರೆ ಬಹಿರಂಗವಾಗಿ ಅಲ್ಲ. ಕುಮಾರ್ಗಿಗಳು

ಮಿಥ್ಯಾದೃಷ್ಟಿಗಳು ಇದನ್ನು ದುರುಪಯೋಗಪಡಿಸಿ ನಿಜವಾದ ಸಾಧುಗಳಿಗೂ ಆಪತ್ತು ತಂದೊಡ್ಡುತ್ತಾರೆ"

ಅವರು ಮತ್ತೆ ಹೇಳಿದರು.

"ಯಾವ ಸಾಧುವಿಗೆ ಆಹಾರ ನಿರೋಧಿಸಬಾರದು. ಮುನಿಧರ್ಮ ಬಹಳ ಕಠಿಣ. ಮುನಿಯಾಗಿಯೂ ಅಡ್ಡಹಾದಿ ತುಳಿದರೆ ಬಹಳ ಅನರ್ಥವಾಗಿ ಬಿಡುತ್ತದೆ. ಮುನಿಗಳ ಚರ್ಯೆಗೆ ಅಡ್ಡಗಾಲು ಹಾಕಿದರೂ ಅಷ್ಟೇ ಹಾನಿ. ನೇತ್ರಗಳನ್ನು ಜಾಗೃತವಾಗಿಟ್ಟುಕೊಳ್ಳಬೇಕು. ಸಂಯಮದ ಪಾಲನೆಯಲ್ಲಿ ಆಗುವ ಹಾನಿಗಿಂತ ಜ್ಞಾನಾದಿಗಳ ನ್ಯೂನತೆಯಿಂದ ಆಗುವ ಹಾನಿ ಹೆಚ್ಚಿನದಿರುತ್ತದೆ. ಮುನಿಧರ್ಮ ಅಸಿಧಾರಾವ್ರತ. ಕತ್ತಿಯ ಅಲಗಿನ ಮೇಲೆ ನಡೆದಂತೆ ! ಬಹಳ ಎಚ್ಚರಬೇಕು. ಮನಸ್ಸು ನೇರ ಸಂಯಮ ಮಾರ್ಗದಲ್ಲಿಯೇ ಹೋಗಬೇಕು. ಅತ್ತಿತ್ತ ಸ್ವಲ್ಪ ಹೊಯ್ದಾಡಿದರೂ ಚಾರಿತ್ರ ಖಂಡಿತವಾಗುತ್ತದೆ."

## ವೈರಾಗ್ಯದ ಜಾಗೃತಿ

ಅವರು ತಮಗೆ ವೈರಾಗ್ಯ ಹೇಗೆ ಹುಟ್ಟಿತು ಎನ್ನುವುದನ್ನು ತಿಳಿಸಿಕೊಟ್ಟರು.

"ಆಚಾರ್ಯ ಶಾಂತಿಸಾಗರ ಮಹಾರಾಜರ ಸಂಘ ಯಾವಾಗ ಶಿಖರಿಜಿಯತ್ತ ವಿಹಾರ ಹೊರಟಿತೋ ಆಗ ನಮ್ಮ ಮನಸ್ಸಿನಲ್ಲೂ ವೈರಾಗ್ಯಭಾವ ವಿಶೇಷವಾಗಿ ಜಾಗೃತವಾಯಿತು. ಮಹಾವ್ರತಿಯಾಗಲು ಶೀಘ್ರ ಸಿದ್ಧತೆ ಆರಂಭಿಸಿದೆವು"

ವರ್ಧಮಾನಸಾಗರರು ಸುಸಂಸ್ಕೃತ ಚೇತನ. ಮನೆಯಲ್ಲೂ ಮುನಿಯಂತೇ ಬಾಳಿದರು. ಮನೆ ತ್ಯಜಿಸಲು ಕಾಲಲಬ್ಧಿಗಾಗಿ ಕಾದಿದ್ದರು. ಮನೆಯಲ್ಲಿದ್ದರೂ ಮಾನಸಿಕವಾಗಿ ಎಂದೋ ಮುನಿಯಂತಾಗಿದ್ದರು. ಜಗತ್ತಿನ ದೃಷ್ಟಿಯಲ್ಲಿ ಬಟ್ಟೆಗಳನ್ನು ಕಳಚಿಹಾಕುವುದಿತ್ತು. ಬಾಹ್ಯದ ವೇಷ ಭೂಷಣಗಳಿಂದ ನೋಡಿದವರಿಗೆ ಗೃಹಸ್ಥರಂತೇನೋ ಕಾಣುತ್ತಿದ್ದರು. ಅವರ ಅಂತರಂಗದ ಭಾವವನ್ನು ಸೂಕ್ಷ್ಮವಾಗಿ ಗ್ರಹಿಸಿದವರಿಗೆ ಅವರು ಮುನಿಚೇತನ ಎನ್ನುವ ಸತ್ಯ ಕಾಣಬರುತ್ತಿತ್ತು. ಸುಂದರ ಬಿಂಬವಾಗುವ ಯೋಗ್ಯತೆ ಇರುವ ಕೋಡುಗಲ್ಲಿನಂತೆ ಅವರು ಮನೆಯಲ್ಲಿದ್ದರು. ಆಚಾರ್ಯ ಶ್ರೀಯವರು ಆ ಕೋಡುಗಲ್ಲಿನಲ್ಲಿ ಸುಂದರ ಬಿಂಬ ಬಿಡಿಸಿ ಜಗತ್ತಿಗೆ ಮತ್ತೊಬ್ಬ ಮುನಿ ಮಹಾತ್ಮನನ್ನು ಕೊಟ್ಟರು.

ದಶಲಕ್ಷಣ ಪರ್ವ ಮುಗಿದಿತ್ತು. ಆಗ ನಾನು ಕೇಳಿದೆ–



"ಮಹರಾಜ್! ತಮ್ಮ ಚರಣ ಸಾನಿಧ್ಯದಲ್ಲಿ ದಶಲಕ್ಷಣ ಪರ್ವ ಆನಂದವಾಗಿ ಕಳೆದುಹೋಯಿತು."

ಆಗ ಅವರೆಂದರು–

"ನೀವು ಬರುವುದರಿಂದ ಜನಗಳಿಗೆ ಒಳ್ಳೆಯ ಧರ್ಮಲಾಭವಾಯಿತು. ಮಿಥ್ಯಾತ್ವದ ಆವರಣ ಸರಿದು ಹೋಯಿತು. ಧಾರ್ಮಿಕ ಭಾವದ ವೃದ್ಧಿ ಆಯಿತು"ಆಗ ನಾನು ಹೇಳಿದೆ–

"ಅದೇನಾಗಿದೆಯೋ ನನಗೆ ಗೊತ್ತಿಲ್ಲ. ಆದರೆ ನಿಮ್ಮ ಪವಿತ್ರ ದರ್ಶನದಿಂದ ವಿಶೇಷ ಲಾಭವಾಗಿದೆ"

ಅವರೆಂದರು – "ಸರಿ! ಇಬ್ಬರಿಗೂ ಲಾಭ ಆದಂತಾಯಿತಲ್ಲ. ನಿಮಗೆ ಮತ್ತು ಜನಗಳಿಗೆ"

ನಿಜವಾಗಿಯೂ ಸರಿಯಾದ ಮಾತೇ ಹೇಳಿದಿರಿ ಎಂದೆ. ನಾನೇಕೆ ಉತ್ಪ್ರೇಕ್ಷೆ ಮಾಡಿ ಹೇಳಲಿ ಎಂದು ಮುಗುಳ್ನಕ್ಕರು. ಅವರ ನಗುವಿನಲ್ಲಿ ಸಕ್ಕರೆಯ ಸಿಹಿ ತುಂಬಿತ್ತು. ಅದರೊಡನೆ ಮಾನಸಿಕ ದೃಡತೆಯ ಜಿಗುಟೂ ಹೊರಚಿಮ್ಮಿತು. ಅವರು ಸರ್ವಗುಣಗಳ ಸಮತೋಲನದ ವ್ಯಕ್ತಿಯಾಗಿದ್ದರು.

## ಅದ್ಭುತ ಏಕಾಗ್ರತೆ.

ನಾನು ಕೇಳಿದೆ "ಬ್ರಹ್ಮಚರ್ಯ ಧರ್ಮದ ಬಗ್ಗೆ ನಿನ್ನೆ ನಾನು ಸುಮಾರು ೨ ಗಂಟೆಯವರೆಗೆ ನಿಮ್ಮ ಕುಟೀರದ ಸಮೀಪ ಉಪನ್ಯಾಸ ಮಾಡಿದೆ. ಅದನ್ನುನೀವು ಕೇಳಿರಬಹುದು?"

ಅವರು : "ನಾವು ಧ್ಯಾನಮಗ್ನರಾಗಿದ್ದೆವು. ನಿಮ್ಮ ವ್ಯಾಖ್ಯಾನದ ಬಗ್ಗೆ ಸ್ವಲ್ಪವೂ ಗಮನವಿರಲಿಲ್ಲ. ನಾವು ಧ್ಯಾನದಲ್ಲಿ ಕುಳಿತ ಮೇಲೆ ಹತ್ತಿರದಲ್ಲಿ ನಗಾರಿ ಭಾರಿಸಿದರೂ ಅದರ ಅರಿವು ನಮಗಿರುವುದಿಲ್ಲ. ನದಿ ಅಥವಾ ಕೊಳದಲ್ಲಿ ಮುಳುಗಿಸಿದರೂ ಗೊತ್ತಿರುವುದಿಲ್ಲ. ನಾವು ಧ್ಯಾನಮಾಡುವಾಗ ಧ್ಯೇಯ ವಸ್ತುವಿನಲ್ಲಿ ಒಂದಾಗಿ ಹೋಗುತ್ತೇವೆ. ನಾವು ಇದ್ದದ್ದನ್ನು ಇದ್ದಂತೆಯೇ ಹೇಳುತ್ತೇವೆ."

ನನಗೆ ಬಹಳ ಆಶ್ಚರ್ಯವೇ ಆಯಿತು. ಸಮೀಪದಲ್ಲೇ ಉಚ್ಚಕಂಠದಲ್ಲಿ ಮಾತಾಡಿದ ಮಾತು ಕೇಳಿಸಲಿಲ್ಲವೆಂದ ಮೇಲೆ ಅವರ ಏಕಾಗ್ರತೆ ಅಪ್ರತಿಮ! ಒಬ್ಬ ಯೋಗಿ ಬಾಹ್ಯದ ಮೋಹದಿಂದ ಎಷ್ಟರಮಟ್ಟಿಗೆ ವಿರಕ್ತನಾಗಿದ್ದಾನೆ; ಆತ

ಸ್ವರೂಪ ಚಿಂತನೆಯಲ್ಲಿ ಅದೆಷ್ಟು ಆಳಕ್ಕೆ ಇಳಿದು ಹೋಗಿದ್ದಾನೆ; ಶರೀರಾತ್ಮ ಭೇದ ವಿಜ್ಞಾನದಲ್ಲಿ ಅದೆಷ್ಟು ತದಾತ್ಮಭಾವಹೊಂದಿದ್ದಾನೆ; ಎನ್ನುವುದರ ಮಾನದಂಡವೇ ಅವನ ಧ್ಯಾನ ಸಮಯದ ಏಕಾಗ್ರತೆ! ಮನಸ್ಸು ಬಾಹ್ಯದ ವಿಷಯ ಕಷಾಯಗಳಿಗೆ ಎಷ್ಟೆಷ್ಟು ರೋಸಿ ಹೋಗಿ ಅಂತರಂಗದ ಅನಂತ ಸಿರಿಯತ್ತ ಸರಿದು ಹೋಗುವುದೋ ಅಷ್ಟಷ್ಟು ಆತ್ಮಧ್ಯಾನದಲ್ಲಿ ಏಕಾಗ್ರತೆ ಮೂಡುತ್ತದೆ. ತನ್ನ ಶರೀರದಿಂದ ಹಿಡಿದು ಅನ್ಯ ಒಂದು ಅಣುಪ್ರಮಾಣದ ವಸ್ತುವೂ ಬಾಹ್ಯಜಗತ್ತಿನಲ್ಲಿ ನನ್ನದೇನೂ ಇಲ್ಲ ಎನ್ನುವ ಭಾವ ತನ್ನಲ್ಲಿ ಸಂಪೂರ್ಣ ಮೂಡಿದಾಗ ಭೀಬತ್ಸ ಮಸಣದ ಅಸಹ್ಯ ನೀರವತೆಗೆ ಬೆದರುವ ಪುಕ್ಕಲು ಮನುಷ್ಯನಂತೆ ಮನಸ್ಸು ಬಾಹ್ಯಕ್ಕೆ ಬೆದರಿ ಅಂತರಂಗದ ನಿರ್ಭಯ ಧಾಮ ಸೇರುತ್ತದೆ. ಆಗ ಮಾತ್ರ ಯೋಗಿ ಪರಮ ಏಕಾಗ್ರತೆ ಹೊಂದಬಲ್ಲ. ಹಾಗಾಗದೆ ಹಿಡಿಹಿಡಿದು ಒಳ ತುರುಕುತ್ತಿದ್ದರೂ ಕಪ್ಪೆಯಂತೆ ಹೊರಹೊರಕ್ಕೆ ಮನಸ್ಸು ಹಾರಿಹೋಗುತ್ತಿದ್ದರೆ, ಹಾಗೆ ಹೋಗುವ ಮನಸ್ಸನ್ನು ಹಿಡಿದೆಳೆಯದೆ ಅತ್ತವೇ ಹರಿಯ ಬಿಡುತ್ತಿದ್ದರೆ, ಹೊರ ಓಡುವ ಮನಸ್ಸನ್ನು ಅಂತರಂಗದ ಚಿಂತನೆಯಲ್ಲಿ ಕಟ್ಟಿಹಾಕಲಾಗದೆ ಸೋಲನ್ನೊಪ್ಪಿಕೊಳ್ಳುವಂತಾದರೆ ಅಂತಹ ಧ್ಯಾನ, ದುರ್ಧ್ಯಾನ ; ಅಂತಹ ತಪ ಮಿಥ್ಯಾತಪ; ಅಂತಹ ಯೋಗಿ ನಿಶ್ಚಯವಾಗಿಯೂ ಭವ ರೋಗಿ!

ಕ್ಷಣಕ್ಷಣವೂ ಹೊರ ಹೊರಕ್ಕೆ ಜಿಗಿದು ಹೋಗುವ ಮನಸ್ಸನ್ನು ಛಲ ಬಿಡದ ವಿಕ್ರಮನಂತೆ ಒಳ ಒಳಕ್ಕೆ ಎಳೆಯುತ್ತಲೇ ಇರಬೇಕು. ಅನಾದಿ ಕಾಲದ ಮಿಥ್ಯಾ ಸಂಸ್ಕಾರ ಅದಕ್ಕೆ ಅಂಟಿದೆ. ಅದು ವಿಷಯ ಕಷಾಯಗಳ ರುಚಿ ಉಂಡಿದೆ. ಅದು ವಿಷಯಕಷಾಯಗಳತ್ತಲೇ ಹಾರಿ ಹೋಗುವುದು ಸಹಜ. ಅದಕ್ಕೆ ಆತ್ಮ ಸುಖದ ಅಮೃತದ ರುಚಿ ಇನ್ನೂ ಹತ್ತಿಲ್ಲ. ಅದು ಆತ್ಮಸುಖದ ರುಚಿಯನ್ನು ಒಮ್ಮೆ ನೋಡಿ ಒಳಗೆ ಗಪ್ಪನೆ ಕೂಡುವವರೆಗೆ ಬೆವರಿಳಿಸಿ ಒಳ ಒಳಗೆ ಎಳೆಯಬೇಕು. ಈ ಹೋರಾಟದಲ್ಲಿ ಮೊದಮೊದಲ ಸೋಲು ಕಾಣಬಹುದು. ಭವಿಷ್ಯಶೂನ್ಯವಾಗಬಹುದು. ಇದು ವ್ಯರ್ಥ ಹೋರಾಟವೆನಿಸಬಹುದು. ನಿರುತ್ಸಾಹ ಮೂಡಬಹುದು ಆದರೂ ಬಿಡಬಾರದು. ಛಲದಂಕಮಲ್ಲನಾಗಿ ಹೋರಾಡಬೇಕು. ಈ ಛಲ, ಈ ಬಲ, ನಿರ್ಭೀಕರತೆಯಿಂದ ಹೋರಾಡುವವನಿಗೆ ಮಾತ್ರ ಆತ್ಮ ದರ್ಶನವಾಗುತ್ತದೆ. ಮುಕ್ತಿ ಕನ್ಯೆ ಒಲಿದು ಬರುತ್ತಾಳೆ. ಮಹಾಯೋಗಿಗಳ ಇಂತಹ ಸಾಧನೆ ಉಳಿದವರಿಗೆ ಆದರ್ಶ. ಅವರು ಅಡಿ ಇಟ್ಟ ಮಾರ್ಗವೇ ಮುಕ್ತಿಮಾರ್ಗ! ವರ್ಧಮಾನಸಾಗರರು ಬಹುದೊಡ್ಡ ಸಾಧಕರು. ನಿರ್ಭೀತ ಆತ್ಮ ; ಸ್ವಾವಲಂಬಿ ಆತ್ಮ. ಆಚಾರ್ಯ ಶಾಂತಿಸಾಗರರು ಮತ್ತು ವರ್ಧಮಾನಸಾಗರರು ಈ ಕಾಲದ ತೀರ್ಥಂಕರ ಮತ್ತು ಗಣಧರರಿದ್ದಂತೆ! ಅವರ



ಸ್ಮರಣೆ ಪಾಪನಾಶನಿ. ಸ್ವರ್ಗೀಯ ಆಚಾರ್ಯ ಮಹರಾಜರು ಏಕಾಗ್ರಧ್ಯಾನದಲ್ಲಿ ನಿಸ್ಸೀಮರಾಗಿದ್ದರು. ಅಂತಹ ಯೋಗಿಗಳನ್ನು ಇನ್ನು ನೋಡುವುದೆಲ್ಲಿ?

## ಸಂಸಾರ ಒಂದು ಆಟ

ಒಂದು ದಿನ ಒಂದು ಮಂದಿರದಲ್ಲಿ ಚಿಕ್ಕಚಿಕ್ಕ ಬಾಲಿಕೆಯರು ಆಟವಾಡಿಕೊಳ್ಳುತ್ತಿದ್ದವು. ಅದನ್ನು ನೋಡಿ ವರ್ಧಮಾನಸಾಗರರಿಗೆ ನವಿರಾದ ಅಧ್ಯಾತ್ಮ ಭಾವವೊಂದು ಮೂಡಿತು.

"ನೋಡಿ! ಇದಂತೂ ಮಕ್ಕಳಾಟ, ಸಂಸಾರವೂ ಒಂದು ಆಟವೇ? ಆದರೆ ಆತ್ಮ ಮಾತ್ರ ಈ ಆಟದಿಂದ ಸಂಪೂರ್ಣ ಭಿನ್ನವೆಂದು ತಿಳಿಯಿರಿ. ಸಂಸಾರದಲ್ಲಿ ಈ ಜೀವ ಮೋಹಮದಿರೆ ಕುಡಿದು ನಟಿಸುತ್ತದೆ–ನರ್ತಿಸುತ್ತದೆ."

ಎಂತಹ ಮನಮೋಹಕ ವಿಶ್ಲೇಷಣೆ ಅದು. ಆ ಮಾತು ಕೇಳಿ ಹರ್ಷದಿಂದ ಬೀಗಿ ಹೋದೆ. ಅಂತಹ ಅನುಭವದ ನುಡಿ ಯೋಗಿಗಳ ಬಾಯಲ್ಲೇ ಬಂದಾವು. ರಾಗದಿಂದ ರೋಗಿಗಳಾದ ನಮ್ಮಂತವರೇನು ಇಂತಹ ಮಾತು ಹೇಳಬಲ್ಲೆವು? ಅವರ ಆ ವಿಶ್ಲೇಷಣೆ ಕೇಳುತ್ತಲೇ ಹುಳಿಮಜ್ಜಿಗೆ ಕುಡಿದು ಜಡ್ಡು ಗಟ್ಟಿದ ನಾಲಿಗೆಗೆ ನೊರೆ ಹಾಲು ಸವಿದಂತಾಯಿತು! ಶ್ವಾಸನಾಳದ ಕಫವನ್ನು ಕತ್ತರಿಸಿ ಹಾಕುತ್ತಾ ಒಳ ನುಗ್ಗುವ ಔಷಧದಂತೆ ಆ ಮಾತು ನೇರ ಹೃದಯಕ್ಕೇ ಧಾಳಿ ಇಟ್ಟು ಬಹುಕಾಲ ಧ್ವನಿಗೈಯ್ಯುತ್ತಲೇ ಇತ್ತು. ಬಹುಕಾಲದವರೆಗೆ ಅವು ನನಗೆ ಹೇಳುತ್ತಲೇ ಇದ್ದವು. ಕೇಳಿ ಆನಂದಿಸುತ್ತಲೇ ಇದ್ದೆ!

## ವಿನಮ್ರತೆ

ಒಂದು ದಿನ ಬೆಳಗ್ಗೆ ಅವರ ಚರಣಸನ್ನಿಧಿಯಲ್ಲಿ ಕುಳಿತೆ. ಅದು ಮಂಗಳಮಯ ಸುಪ್ರಭಾತದ ಸಮಯ. ಹಿತಕರವಾದ ವಾಯುಸಂಚಾರ. ಅವರು ಅದಾವುದೋ ಭಾವೋನ್ಮಾದದಲ್ಲಿ ಮರೆಯಾಗಿದ್ದವರು ನಾನು ಬರುತ್ತಲೇ ಬಾಹ್ಯಕ್ಕೆ ಬಂದು ಹೇಳಲಾರಂಭಿಸಿದರು.

"ಹೆಸರು ಸುವರ್ಣ. ಆದರೆ ಹತ್ತಿರ ಸುವರ್ಣವೇನೂ ಇಲ್ಲ. ಅದೇ ರೀತಿ ನಾವು ಸಾಧಾರಣ ಸಾಧಕರು. ಆದರೆ ಜನ ನಮ್ಮನ್ನು ದೊಡ್ಡ ದೊಡ್ಡ ಮಾತಿನಿಂದ ಕರೆಯುತ್ತಾರೆ. ಯಾರೋ ನಮ್ಮನ್ನು ಆಚಾರ್ಯ ಪುರುಷ ಎಂದರು. ಇನ್ನಾರೋ ಚಾರಿತ್ರ ಚೂಡಾಮಣಿ ಎಂದರು. ಅರೆ ಬಾಬಾ! ಇದೆಲ್ಲಾ ಮಹಾಪುರಷರಿಗೆ ಹೇಳಬೇಕಾದ ಮಾತು. ನಮಗೆ ಯಾವ ಪದವಿ ಪುರಸ್ಕಾರವೂ ಬೇಡ"

## ಮುನಿಪದದ ರಹಸ್ಯ

ಸೆಪ್ಟೆಂಬರ್ ೮ ಆಗ ತಾನೇ ಆಹಾರ ಮುಗಿಸಿ ಮರಳಿದ್ದರು. ನಿತ್ಯಕ್ರಿಯೆ ಮುಗಿಸಿ ಕುಳಿತು ಕನ್ನಡದಲ್ಲಿ ನನಗೆ ಏನೋ ಹೇಳಿದರು. ನೀವೇನಂದಿರಿ ನನಗೆ ತಿಳಿಯಲಿಲ್ಲ ಅಂದೆ. ಸ್ವಲ್ಪ ನಸುನಕ್ಕು ಕೂತುಕೊಳ್ಳಿ ಎಂದರು. ಕ್ಷಣಾರ್ಧದಲ್ಲೇ ಅವರ ಮುಖ ಗಂಭೀರವಾಯಿತು. ಅವರು ಯಾವುದೋ ರಹಸ್ಯ ಹೇಳುವಂತೆ ಕಂಡಿತು!

"ನಾವು ಗೃಹ ತ್ಯಜಿಸಿ ಮುನಿ ಪದ ಧರಿಸಿದ್ದು ಏಕೆ ಗೊತ್ತೆ ?

ನನ್ನತ್ತ ಭಾರಿ ಪ್ರಶ್ನೆಯ ಅಸ್ತ್ರವನ್ನೇ ಎಸೆದಿದ್ದರು! ನಾನೇನು ಹೇಳಲಿ? ಅಂತಹ ಅನುಭವವೂ ನನಗಿಲ್ಲ. ನಾನಾಗ ಉತ್ತರ ಹೇಳಲು ತಡವರಿಸುವಷ್ಟರಲ್ಲೇ ಮತ್ತೊಂದು ಪ್ರಶ್ನೆ ಹಾಕಿದರು.

"ಊಟಕ್ಕಾಗಿ ಎಂದು ತಿಳಿದಿದ್ದೀರೇನು?"

ನಾನು ಏನೋ ಹೇಳಲು ಬಾಯಿ ಬಿಟ್ಟೆ. ಬಾಯಿಂದ ಮಾತುಗಳು ಹೊರಡುವ ಮುನ್ನ ಅವರೇ ಹೇಳಲಾರಂಭಿಸಿದರು. ಆಗ ಅದೇನೋ ಅವರಲ್ಲಿ ಸುಂದರ ವಿಚಾರಗಳ ಭಾವ ರಂಗೇರಿತ್ತು. ವೈರಾಗ್ಯದ ಬುಗ್ಗೆ ಒಮ್ಮೆಗೇ ಬಿರಿದು ಚಿಮ್ಮಿತ್ತು. ಹೇಳುವ ಬಯಕೆ ತುಟಿಯಂಚು ಭೇದಿಸಿ ಹೊರಟಿತ್ತು.

"ಲಜ್ಜೆಯನ್ನು ಬಿಟ್ಟು ಅನ್ಯರ ಮನೆಯಲ್ಲಿ ನಿಂತು ಆಹಾರ ತೆಗೆದುಕೊಳ್ಳುವುದಕ್ಕೇನು ಮುನಿಪದ ಧಾರಣೆ ಮಾಡಿರುವುದು? ಬೆನ್ನು ಹಿಂದೆಯೇ ಮತ್ತೊಂದು ಪ್ರಶ್ನೆಯಿಂದ ನನ್ನನ್ನು ಗುದ್ದಿದ್ದರು! ಅವರು ನನ್ನಿಂದ ಯಾವ ಉತ್ತರವನ್ನು ನಿರೀಕ್ಷಿಸಿಯೂ ಈ ಪ್ರಶ್ನೆಗಳನ್ನು ಹಾಕಿರಲಿಲ್ಲ. ಅಥವ ನನ್ನ ಉತ್ತರ ಸಪ್ಪೆ ಸಾರಿನಂತೆ ಅವರಿಗೆ ರುಚಿಯೂ ಆಗುತ್ತಿರಲಿಲ್ಲ. ಅವರ ಹೃದಯದಲ್ಲಿ ಹುಟ್ಟಿದ ಸುಂದರ ಭಾವಗಳನ್ನು ಹೊರಗೆಡಹಲು ಈ ಪೀಠಿಕೆ ಹಾಕಿದ್ದರು ಅಷ್ಟೆ. ನಾನು ಏನನ್ನೂ ಹೇಳುವ ಸ್ಥಿತಿಯಲ್ಲಿರಲಿಲ್ಲ. ಕಣ್ಣು ಮಿಟಕಿಸಲೂ ಅವಕಾಶ ಕೊಡದೆ ಪ್ರಶ್ನೆಗಳನ್ನು ಹಾಕಿ ಉತ್ತರ ಕೊಡಲು ಅವರೇ ಅಣಿಯಾದರು. ಕೂಡಲೇ ನಾನು ಒಂದು ವಿಚಾರ ಮುಂದಿಟ್ಟೆ.

"ಮಹರಾಜ್! ಸಂಪನ್ನ ಪರಿವಾರದವರೇ ನಿಮಗೆ ಶ್ರದ್ಧಾಪೂರ್ವಕ ಆಹಾರ ಕೊಡುತ್ತಿದ್ದಾರೆ. ಉಪರೋಕ್ತ ಕಾರಣವೇನೂ ನನಗೆ ಕಾಣುತ್ತಿಲ್ಲ. ನೀವೇ ನಿಮ್ಮ ಪ್ರಶ್ನೆಗಳಿಗೆ ಸಮಾಧಾನಹೇಳಿ ಎಂದು ವಿನಂತಿಸಿದೆ."



"ಆತ್ಮ ಕಲ್ಯಾಣಕ್ಕಾಗಿ ಈ ಪದ ಧರಿಸಿದ್ದೇವೆ ಎಂದು ತಿಳಿ. ಆಗಮಾನುಸಾರ ಪ್ರವೃತಿಸಲು ಈ ಮುನಿಮುದ್ರೆ ಧರಿಸಿದ್ದೇವೆ. ೨೮ ಮೂಲ ಗುಣ ಪಾಲಿಸುತ್ತಾ ಆತ್ಮ ಹಿತ ಮಾಡಿಕೋ ಎಂದು ಆಚಾರ್ಯ ಮಹರಾಜರು ಹೇಳಿದ್ದರು. ಆದ್ದರಿಂದ ನಾವು ಅದೇ ರೀತಿ ಪ್ರವೃತಿಸುತ್ತಿದ್ದೇವೆ. ಕೀರ್ತಿ ಲಾಭ ಪೂಜೆಗಾಗಿ ಈ ಪದಧಾರಣೆ ಮಾಡಿಲ್ಲ. ಅವುಗಳಿಂದ ನಮಗೇನಾಗಬೇಕಾಗಿದೆ. ಪೌದ್ಗಲಿಕ ಆಗುಹೋಗುಗಳಿಂದ ನಮಗೇನು? ಆಹಾರಾನಂತರ ನಿಂದಿಸಿದರೇನು. ವಂದಿಸಿದರೇನು? ಮುನಿಧರ್ಮವನ್ನು ಆತ್ಮಕಲ್ಯಾಣದ ಏಕಮಾತ್ರ ಸಾಧನವನ್ನಾಗಿ ಸ್ವೀಕರಿಸಿದ್ದೇವೆ. ಇದೇ ಮೋಕ್ಷದಾಯಕವಲ್ಲ. ಆದರೆ ಇದರ ಹೊರತು ಮೋಕ್ಷ ಸಿಗುವುದಿಲ್ಲ, ಆದ್ದರಿಂದ ಈ ಪದವಿ ಧಾರಣೆ ಮಾಡಬೇಕಾಗಿದೆ ; ಮಾಡಿದ್ದೇವೆ"

ರಪರಪ ಮಳೆ ಹೊಡೆದು ಬಿಟ್ಟಂತಾಯಿತು; ನನ್ನ ಮನಸ್ಸಿನ ಅಳಿದುಳಿದ ಹುಚ್ಚೂ ಕೊಚ್ಚಿ ಹೋಗಿತ್ತು! ವೈರಾಗ್ಯದಿಂದ ಒತ್ತರಿಸಿ ಬಂದ ಆ ಸತ್ವಪೂರ್ಣವಾಣಿಯಿಂದ ನನ್ನ ಮನಸ್ಸಿನ ಕೊಳೆಯೂ ತೊಳೆದುಹೋಗಿತ್ತು. ಅಪೂರ್ವಶಾಂತಿ ಚಿಮ್ಮಿತ್ತು; ಹೊರಹೊಮ್ಮಿತ್ತು!

## ಸಾಂಗಲಿ ನರೇಶನಿಗೆ ಉಪದೇಶ

ನಾಂದ್ರ ಗ್ರಾಮದಲ್ಲಿ ಮಾನಸ್ತಂಭದ ಪೂಜೆ ೧೯೫೭ ರ ಜೇಷ್ಠಮಾಸದಲ್ಲಿ ನಡೆದಿತ್ತು. ವರ್ಧಮಾನ ಸ್ವಾಮಿಯವರನ್ನು ಮಹಾಜನತೆ ಈ ಸಂದರ್ಭದಲ್ಲಿ ವಿರಾಜಮಾನರಾಗಿರಲು ಭಕ್ತಿಯಿಂದ ಸ್ವಾಗತಿಸಿತು. ಆಗ ಸಾಂಗ್ಲಿಯ ರಾಜನೂ ಬಂದ. ಸಾಮಾಯಿಕವಾದ ನಂತರ ಆ ರಾಜ ಅವರನ್ನು ಭಕ್ತಿಯಿಂದ ಕಂಡ. ಅವರ ಮುಖದಲ್ಲಿ ಲಾಸ್ಯವಾಡುತ್ತಿದ್ದ ಅಪೂರ್ವ ತೇಜಸ್ಸಿಗೆ ರಾಜ ಸಿಕ್ಕಿಬಿದ್ದಿದ್ದ. ಮೋಹ ಮೂರುಲೋಕವನ್ನೇ ಮರಳು ಮಾಡುತ್ತದೆ. ಅಂತಹ ಮೋಹವನ್ನೇ ಮುಳುಗಿಸಿದ ಮಹಾಯೋಗಿಯ ಪ್ರತಾಪಕ್ಕೆ ಯಾರು ತಲೆ ತಗ್ಗಿಸರು? ರಾಜ ತಲೆ ಬಗ್ಗಿಸಿ ಕೈಮುಗಿದು ಕೂತಿದ್ದ. ಭೋಗ ವಿಲಾಸಗಳಿಗೆ ಮರುಳಾಗಿ ಅದರ ಬೆನ್ನು ಬಿದ್ದವರೆಲ್ಲಾ ಸಂಸಾರ ರಂಗ ಮಂಟಪದಲ್ಲಿ ಒಂದೊಂದು ವೇಷ ಕಟ್ಟಿ ನಟಿಸುತ್ತಾರೆ. ರಾಜನದೂ ಒಂದು ಪಾತ್ರವಷ್ಟೆ! ಹಾಕುವ ಪಾತ್ರವೆಲ್ಲಾ ನಾನೇ ಎಂದುಕೊಳ್ಳುವವರೆಗೆ ಅದು ಮುಗಿಯದ ನಾಟಕ. ಈ ನಾಟಕ ಒಂದು ಆಣಕ. ನಾನಾ ವೇಷ ತೊಟ್ಟು ಬಗೆ ಬಗೆಯ ಬಣ್ಣ ಹಚ್ಚಿ ನಟಿಸಿದ್ದೇನೆ, ನರ್ತಿಸಿದ್ದೇನೆ, ನಕ್ಕಿದ್ದೇನೆ—ನರಳಿದ್ದೇನೆ. ಆದರೆ ಅವೆಲ್ಲಾ ನನ್ನದೆಂದೇ ಭ್ರಮಿಸಿ ನಕ್ಕಿದ್ದೆ—ನರಳಿದ್ದೆ. ಅದೆಲ್ಲವೂ ನನ್ನದಲ್ಲ ಎಂದು ತಿಳಿದಾಗ ನಗುವೆಲ್ಲಿ—ನೋವೆಲ್ಲಿ, ಭ್ರಮೆಯೆಲ್ಲಿ, ಮರುಳಾಟವೆಲ್ಲಿ? ನಾನಾ ವೇಷಗಳನ್ನು ಕಟ್ಟುವ ತೊಡಕೆಲ್ಲಿ? ಕೊನೆಯಿಲ್ಲದ ಹೋರಾಟವೆಲ್ಲಿ? ಎಲ್ಲವೂ ನಿಂತ ನಿಲುವಲ್ಲೇ ಕಳಚಿಹೋಗಿ ಆತ್ಮ ಮಾತ್ರ

ಉಳಿಯುತ್ತಾನೆ. ಆಗ ಕಾಣುವುದು ಅವನ ಬಯಲುರೂಪ ಒಂದೇ! ಅದೇ ದಿಗಂಬರಾವಸ್ಥೆ! ಅವರ ಮಹತ್-ಬೃಹತ್ತನ್ನು ಸಂಸಾರ ನಾಟಕದ ವೇಷಧಾರಿಗಳೇನು ಬಲ್ಲರು? ರಾಜನೂ ಅಂತಹ ಮಹಾಮುನಿಯ ಪ್ರಭಾವಲಯದ ತೆಕ್ಕೆಗೆ ಬಿದ್ದುದು ಯಾವ ಆಶ್ಚರ್ಯ? ಭೋಗ ವಿಲಾಸಗಳ ಸುಳಿಯಲ್ಲಿ ಸದಾ ಮಿಂದೆದ್ದು ಕೂಪಮಂಡೂಕವಾಗಿದ್ದ ರಾಜನಿಗೆ ಈ ಮಹಾಯೋಗಿಯ ದಿಗಂಬರ ಮುದ್ರೆ ಒಂದು ವಿಚಿತ್ರ ಅನುಭವ ಮೂಡಿಸಿತ್ತು. ಅದು ತನ್ನನ್ನೇ ತಾನು ನಿರೀಕ್ಷಿಸುವಂತೆ ಮಾಡಿತ್ತು. ಅವರ ವಾಣಿಯ ಸಿಹಿಯನ್ನಿಷ್ಟು ಸವಿಯಬೇಕೆಂದು ರಾಜ ಆತುರದಿಂದ ಕುಳಿತ. ಅದಕ್ಕಾಗಿ ವಿನಮ್ರ ಪ್ರಾರ್ಥನೆಯನ್ನೂ ಮುಂದಿಟ್ಟ.

"ಪ್ರಭೂ! ಸಂಸಾರದ ನಾನಾ ಕಷ್ಟಗಳಿಂದ ಪಾರಾಗುವ ದಾರಿಯನ್ನು ಹೇಳಿರಿ"

"ರಾಜೇಂದ್ರ, ನೀವು ದಕ್ಷರಾಜರೂ, ಪ್ರಜಾಹಿತಪಾಲಕರೂ ಆಗಿದ್ದೀರೆಂದು ಕೇಳಿದ್ದೇವೆ. ಈಗ ಪ್ರಜಾಪ್ರಭುತ್ವ ಸ್ಥಾಪಿತವಾಗಿರುವುದರಿಂದ ನಿಮ್ಮ ಮೇಲೆ ಶಾಸನ ಸಂಚಾಲನೆಯ ಭಾರ ಈಗಿಲ್ಲ. ಈಗ ನಿಮಗೆ ನಾವು ಒಂದು ಮುಖ್ಯವಾದ ಮಾತು ಹೇಳಬೇಕಾಗಿದೆ. ನೀವು ನಿಮ್ಮ ಮನಸ್ಸನ್ನು ಆತ್ಮ ಕಲ್ಯಾಣದ ಕಡೆ ತಿರುಗಿಸಬೇಕಾಗಿದೆ. ಪ್ರತಿನಿತ್ಯ ನೀವು ಏಕಾಂತದಲ್ಲಿ ಕುಳಿತು, ನಾನು ಚೈತನ್ಯ ಸ್ವರೂಪ ಆತ್ಮ ಶರೀರಾದಿ ಬಾಹ್ಯ ವಸ್ತುಗಳು ನನ್ನವಲ್ಲ. ಭೋಗಾದಿ ಬಾಹ್ಯ ಚೇಷ್ಟೆಗಳು ಆತ್ಮನ ವಿಕಾರ ಭಾವಗಳಾಗಿವೆ ಎಂದು ಸ್ವಲ್ಪ ಸಮಯ ಧ್ಯಾನಿಸುತ್ತಿರಿ. ಇದರಿಂದ ನಿಮ್ಮಾತ್ಮನಿಗೆ ಅಪಾರ ಹಿತ ಆಗುತ್ತದೆ. ಇಷ್ಟರವರೆಗೆ ನೀವು ಪ್ರಜಾಪಾಲಕರೆನಿಸಿ ಪ್ರಜೆಗಳನ್ನು ರಕ್ಷಿಸಿದ್ದೀರಿ. ಇನ್ನು ಮೇಲೆ ನಿಮ್ಮನ್ನು ನೀವು ರಕ್ಷಿಸಿಕೊಳ್ಳುವ ಪ್ರಯತ್ನ ಆರಂಭಿಸಿ. ಅನ್ಯರ ರಕ್ಷಣೆಯಿಂದಲೇ ನಿಮ್ಮಾತ್ಮ ರಕ್ಷಣೆ ಎಂದು ಹೇಳಲಾಗದು. ಅದು ಪರೋಪಕಾರ ಭಾವವಷ್ಟೆ. ನಿಮ್ಮಾತ್ಮ ರಕ್ಷಣೆಯಿಂದ ಅನ್ಯರ ರಕ್ಷಣೆಯೂ ಆಗುವ ಸಂಭವವಿದೆ. ಇದೇ ಜಗತ್ತಿನಲ್ಲಿ ಪರಮ ಧರ್ಮ. ಈ ಮಾರ್ಗದಲ್ಲಿ ನಡೆಯಿರಿ ನಿಮ್ಮ ಕಲ್ಯಾಣವಾದೀತು."

ಈ ರೀತಿ ಹರಸಿ ಆಶೀರ್ವದಿಸಿದರು. ರಾಜನಿಗೆ ಅಮೃತ ಪಾನ ಮಾಡಿದಂತಾಯಿತು. ಬಿಸಿಲಲ್ಲಿ ಬೆಂದವನನ್ನು ಪನ್ನೀರಲ್ಲಿ ಮೀಯಿಸಿದಂತಾಗಿತ್ತು. ಜೀವನದಲ್ಲೇ ಅವನಿಗೆ ಇಂತಹ ನೆಮ್ಮದಿ ಸಿಕ್ಕಿರಲಿಲ್ಲ. ಇಂತಹ ಉಪದೇಶ ಕೇಳಿರಲಿಲ್ಲ. ಆ ರಾಜನ ಕಣ್ಣಲ್ಲಿ ಆನಂದದ ಕಣ್ಣೀರು ತೊಟ್ಟಿಕ್ಕತೊಡಗಿತು.

ಅನಾದಿಕಾಲೀನ ಅನಂತ ಅಪರಾಧಗಳನ್ನು ಸ್ಮರಿಸಿ ಪಶ್ಚಾತ್ತಾಪಗೊಂಡ ಜೀವಕ್ಕೆ ಹೀಗೆ ಕಣ್ಣೀರು ಬಂದಿರಬಹುದು. ಇಂತಹ ಮಹಾನ್ ಗುರುವಿನ ಸಾನಿಧ್ಯಕ್ಕೆ ಹೋಗದೆ ವ್ಯರ್ಥವಾದ ಭೋಗ ವಿಲಾಸಗಳಲ್ಲೇ ಜೀವನ ಕಳೆದೆನಲ್ಲಾ ಎಂದೂ



ಕಣ್ಣೀರು ಕರೆದಿರಬಹುದು. ಸಂಸಾರದ ಅನಂತ ಯಾತನೆಯಿಂದ ಬಿಡಿಸುವ ಸದ್ಗುರುವಿನ ಶ್ರೀಚರಣ ಕೊನೆಗಾದರೂ ಸಿಕ್ಕಿತಲ್ಲ ಎನ್ನುವ ಸಂಭ್ರಮದಿಂದಲೂ ಕಣ್ಣೀರು ಬಂದಿರಬಹುದು. ಅದೇನೇ ಇರಲಿ ಆ ರಾಜನ ಮನಸ್ಸು ಪಕ್ವವಾಗಿಬಿಟ್ಟಿತು. ಆತ್ಮಹಿತಕ್ಕಾಗಿ ಆಜೀವ ಸಜ್ಜಾಗಿ ನಿಂತಿತು. ಇಂತಹ ಅದೆಷ್ಟು ಜೀವಿಗಳಿಗೆ ಆ ಮಹಾತ್ಮ ಮಾರ್ಗ ತೋರಿಸಿದ್ದರೋ ದೇವರೇ ಬಲ್ಲ!

ರಾಜ ಮೆಲ್ಲನೆ ವಿನಂತಿಸಿದ.

"ಸ್ವಾಮಿ! ನಮಗೆ ಸಾವಿರಾರು ದೊಡ್ಡದೊಡ್ಡ ಸಾಧುಗಳ ಭೇಟಿಯಾಗಿದೆ. ಆದರೆ ಆತ್ಮಶಾಂತಿಯನ್ನುಂಟುಮಾಡುವ ಇಂತಹ ಮೌಲಿಕ ತತ್ವಗಳನ್ನು ಸಾರ ರೂಪದಲ್ಲಿ ಯಾರು ತಿಳಿಸಲಿಲ್ಲ!"

ಇಷ್ಟು ಹೇಳಿ ಆ ರಾಜ ಅವರ ಚರಣಗಳಿಗೆ ಎರಗಿದ. ಇದಾದ ನಂತರ ಅವರು ಆ ರಾಜನಿಗೆ ಆಧ್ಯಾತ್ಮಿಕ ವಿಚಾರಗಳನ್ನು ಸಂಕ್ಷಿಪ್ತವಾಗಿ ತಿಳಿಸುವ ಗ್ರಂಥ ಕೊಟ್ಟರು. ಆಗ ಆ ರಾಜ ಒಂದು ನಿಧಿಯಂತೆ ಹರ್ಷದಿಂದ ಆ ಗ್ರಂಥ ಗ್ರಹಣೆ ಮಾಡಿದ.

## ಸತತ ಅಭ್ಯಾಸದ ಮಹಾತ್ಮೆ

ಯಾವ ರೀತಿ ಹಗ್ಗದ ಎಳೆದಾಟದಿಂದ ಕರಿಶಿಲೆ ಕಲ್ಲಮೇಲೂ ಗುರ್ತು ಬೀಳುತ್ತದೋ, ಹಾಗೆಯೇ ಸತತ ಚಿಂತನೆಯಿಂದ ಮನಸ್ಸಿನ ಮೇಲೂ ಗುರ್ತು ಬೀಳುತ್ತದೆ. ಅದನ್ನೇ ಸಂಸ್ಕಾರ ಅನ್ನುತ್ತಾರೆ. ಈ ಮಾತನ್ನು ದಿವಂಗತ ಆಚಾರ್ಯ ಮಹರಾಜರೂ ಒತ್ತಿ ಒತ್ತಿ ಹೇಳುತ್ತಿದ್ದರು. ಈ ಬಗ್ಗೆ ಅವರನ್ನು ಒಮ್ಮೆ ಕೇಳಿದ್ದೆ.

"ನೀವು ಸತತ ಅಭ್ಯಾಸ ಮಾಡುತ್ತಿದ್ದೀರಲ್ಲಾ. ನಿಮ್ಮ ಮನಸ್ಸೆಂಬ ಕೋತಿಯನ್ನು ಅಂಕೆಯಲ್ಲಿ ಇಡುವುದಕ್ಕಾಗಿ ಏನು?" ಆಗ ಅವರು ಹೇಳಿದರು.

"ನಮ್ಮ ಮನಸ್ಸು ನಮ್ಮ ಅಧೀನವೇ ಇದೆ. ಅದು ಚಂಚಲವಾಗಿಲ್ಲ"

ಮಹಾ ತಪಸ್ವಿಗಳ ಮನ ವಚನ ಕಾಯ ಪ್ರವೃತ್ತಿಗಳು ಸಾಮಾನ್ಯರಿಗಿಂತ ತೀರಾ ಭಿನ್ನ. ಅವರು ನಮ್ಮ ಕಲ್ಪನೆಗೂ ಮೀರಿ ಮೇಲೇರಿ ಹೋಗಿರುತ್ತಾರೆ. ಆದ್ದರಿಂದ ಯೋಗಿಯ ಆಳವನ್ನು ನಾವು ಅಳೆಯಲಾರೆವು. ಅವರಂತೂ ನಮಗೆ ಮಾರ್ಗದರ್ಶಕ ದೈವತಾರೆಗಳಂತೆಯೇ ಕಾಣುತ್ತಿರುತ್ತಾರೆ.

## ದೀರ್ಘ ಜೀವನದ ರಹಸ್ಯ

ವರ್ಧಮಾನ ಸಾಗರರು ಹೇಳಿದರು.

ಸಂಯಮ ಜೀವನ ದೀರ್ಘಾಯುಷ್ಯಕ್ಕೆ ಕಾರಣವಾಗಿದೆ. ನಾವು ರಾತ್ರಿ ೯ಕ್ಕೆ ಮಲಗಿ ೩ ಗಂಟೆಗೆ ಏಳುತ್ತಿದ್ದೆವು. ೫೫ ವರ್ಷ ವಯಸ್ಸಿನಲ್ಲೇ ಬ್ರಹ್ಮಚರ್ಯ ವ್ರತ ತೆಗೆದುಕೊಂಡಿದ್ದೆವು. ನಮ್ಮ ಶರೀರದಲ್ಲಿ ಎಂದೂ ರೋಗ ಹುಟ್ಟುತ್ತಿರಲಿಲ್ಲ. ಗೃಹಸ್ಥಾಶ್ರಮದಲ್ಲಿ ದಿನ ಒಂದಕ್ಕೆ ೪೫ ಮೈಲಿ ಕಷ್ಟವಿಲ್ಲದೆ ನಡೆಯುತ್ತಿದ್ದೆವು. ನಮ್ಮ ಹರೆಯದಲ್ಲಿ ರಾತ್ರಿ ೫.೩೦ ಗಂಟೆಗೆ ಭೋಜದಿಂದ ಹೊರಟು ೪೫ ಮೈಲು ದೂರವಿರುವ ತೇರದಾಳ ಸೇರಿಯೇ ಭೋಜನ ಮಾಡುತ್ತಿದ್ದೆವು. ಮೊದಲು ನಮ್ಮ ಶರೀರದ ಚರ್ಮ ಎಷ್ಟು ಕಠಿಣವಾಗಿತ್ತೆಂದರೆ ಚರ್ಮ ಬೆರಳಿನಿಂದ ಹಿಡಿದೆತ್ತಿದರೂ ಬರುತ್ತಿರಲಿಲ್ಲ. ನಾವು ಈಗ ವೃದ್ಧರಾಗಿದ್ದೇವೆ."

## ಆಚಾರ್ಯ ಶ್ರೀಯವರ ವಿರಕ್ತಿಗೆ ಕಾರಣ

ಒಮ್ಮೆ ಅವರ ಗಮನವನ್ನು ಆಚಾರ್ಯ ಶ್ರೀಯವರಿಗೆ ಪೂರ್ವಾಶ್ರಮದಲ್ಲಿ ವೈರಾಗ್ಯ ಉತ್ಪತ್ತಿಯಾದುದರ ಬಗ್ಗೆ ಕೇಳಿದೆ. ಆಚಾರ್ಯ ಶ್ರೀಯವರ ಜೀವನದ ಪ್ರಾಮಾಣಿಕ ಘಟನೆಗಳು ಅವರಿಂದಲೇ ದೊರೆಯುತ್ತಿದ್ದವು.

"ಬಟ್ಟೆಯ ಅಂಗಡಿಯನ್ನು ಕುಮಗೊಂಡ ಮತ್ತು ಮಹರಾಜರೇ ನೋಡಿಕೊಳ್ಳುತ್ತಿದ್ದರು. ನಾವು ಕೃಷಿಕೆಲಸ ನೋಡಿಕೊಳ್ಳುತ್ತಿದ್ದೆವು. ನಾವು ಆಗ ಉಪವಾಸಾದಿಗಳನ್ನು ಮಾಡುತ್ತಿರಲಿಲ್ಲ. ನಾವು ಮತ್ತು ಮಹರಾಜರು ತಂದೆಯ ಸೇವೆಯನ್ನು ಮಾಡುತ್ತಿದ್ದೆವು. ತಂದೆಯ ಮರಣಾನಂತರ ನಾಲ್ಕೈದು ವರ್ಷ ಅವರು ಮನೆಯಲ್ಲೇ ಇದ್ದರು. ಏಕೆಂದರೆ ತಾಯಿಯವರು ಬದುಕಿದ್ದರು. ಮಹರಾಜರು ಅತ್ಯಧಿಕ ಉಪವಾಸ ಮಾಡುತ್ತಿದ್ದರು. ಅವರನ್ನು ನೋಡಿ ನಮ್ಮ ತಾಯಿಯೂ ಉಪವಾಸ ಮಾಡುತ್ತಿದ್ದರು.

## ಸ್ತವನಿಧಿ ದರ್ಶನದ ನಿಯಮ

ತಾಯಿಯ ಮರಣಾನಂತರ ಅವರ ವೈರಾಗ್ಯಭಾವ ವೇಗವಾಗಿ ವೃದ್ಧಿಯಾಗತೊಡಗಿತು. ಭೋಜದಿಂದ ೨೨ ಮೈಲು ದೂರದಲ್ಲಿ ಅತಿಶಯ ಕ್ಷೇತ್ರ ಸ್ತವನಿಧಿ ಇದೆ. ಅನ್ಯಮತೀಯರು ಅದನ್ನು ತೇವಂದಿ ಅನ್ನುತ್ತಾರೆ. ಪ್ರತಿ ಅಮವಾಸ್ಯೆಯ ದಿನ ಅಲ್ಲಿಗೆ ಹೋಗಿ ಬರುವ ನಿಯಮ ಅವರಿಗಿತ್ತು. ಸ್ತವನಿಧಿಯಲ್ಲಿ ಒಂದು ದಿನ ಉಳಿದಿರುತ್ತಿದ್ದರು. ಸ್ತವನಿಧಿಯ ಯಾತ್ರೆಯಿಂದ ಗೃಹಕೃತ್ಯದ ಸಂಪರ್ಕ ಹರಿದು ಹಾಕಲಾರಂಭಿಸಿದ್ದರು.



ಒಂದು ದಿನ ಅವರು ನಮ್ಮ ತಂಗಿಗೆ ಹೇಳಿದರು."ಅಕ್ಕಾ! ನಾನೊಬ್ಬನೇ ಸ್ತವನಿಧಿಗೆ ಹೋಗಿ ಬರುತ್ತೇನೆ" ಈ ಮಾತಿಗೆ ಯಾರಿಗೂ ಯಾವ ಗುಮಾನಿಯೂ ಬರಲಿಲ್ಲ. ಏಕೆಂದರೆ ಹೀಗೆ ಹೋಗಿ ಬರುವ ಕ್ರಮ ಬಹಳ ಕಾಲದಿಂದಲೂ ನಡೆದೇ ಇತ್ತು. ಜೊತೆಯಲ್ಲೇ ಆಹಾರ ತೆಗೆದುಕೊಂಡು ಹೋಗುತ್ತಿದ್ದರು. ತಮ್ಮ ಮನಸ್ಸು ವ್ಯಾಪಾರದಲ್ಲಿ ಕೂಡುವುದಿಲ್ಲವೆಂದು ಕುಮಗೊಂಡನಿಗೂ ಹೇಳಿದ್ದರು."

## ಉತ್ತೂರಿನ ದೇವಪ್ಪಸ್ವಾಮಿ ದರ್ಶನ

"ಸ್ತವನಿಧಿಗೆ ಹೋಗುವುದಾಗಿ ಮನೆಯಲ್ಲಿ ಹೇಳಿ ಹೊರಟಿದ್ದರೂ, ಅವರು ಹೋದದ್ದು ಸ್ತವನಿಧಿಗಲ್ಲ. ಉತ್ತೂರು ಗ್ರಾಮಕ್ಕೆ! ಅಲ್ಲಿ ದೇವೇಂದ್ರಕೀರ್ತಿ ಸ್ವಾಮಿಗಳಿದ್ದರು. ಅವರನ್ನು ಜನ ದೇವಪ್ಪ ಸ್ವಾಮಿ ಎಂದು ಕರೆಯುತ್ತಿದ್ದರು. ದೇವಪ್ಪಸ್ವಾಮಿಗೆ ಮಹರಾಜರ ಮೇಲೆ ವಿಶೇಷ ಅನುಗ್ರಹವಿತ್ತು. ಏಕೆಂದರೆ ಅವರು ಭೋಜ ಗ್ರಾಮದಲ್ಲಿ ಆಗಾಗ್ಗೆ ಬಂದು ತಿಂಗಳುಗಟ್ಟಲೆ ಇರುತ್ತಿದ್ದರು. ಮಹರಾಜರ ರುಚಿ ಮತ್ತು ಭಾವನೆಗಳ ಪರಿಚಯ ಅವರಿಗಿತ್ತು. ಮಹರಾಜರು ದೀಕ್ಷೆಯ ಯಾಚನೆ ಮಾಡಿದ ಕೂಡಲೇ ಅವರು ಒಪ್ಪಿಗೆ ಕೊಟ್ಟಿದ್ದರು. ಈ ವಿಚಾರ ನಾವು ನಂತರ ಹೋದಾಗ ಸವಿವರವಾಗಿ ತಿಳಿದು ಬಂತು.

## ದೀಕ್ಷಾ ಮಂಟಪ ರಚನೆ

"ದೇವಪ್ಪ ಸ್ವಾಮಿಗೆ ಸಾತಗೌಡರ ಪರಿಣತಿಯ ಪೂರ್ಣ ಪರಿಚಯವಿತ್ತು. ಅದೊಂದು ಮಹಾನ್ ಅಸನ್ನ ಭವ್ಯಜೀವ ಎನ್ನುವ ಗುಟ್ಟು ಅವರಿಗೆ ಎಂದೋ ತಿಳಿದಿತ್ತು. ಬಹಳ ಸಂಭ್ರಮದಿಂದ ಜನಗಳು ದೀಕ್ಷಾ ಮಂಟಪ ರಚಿಸಿದರು. ಕೆರೆಯಲ್ಲಿ ಅವರನ್ನು ಸ್ನಾನ ಮಾಡಿಸಿ ಕರೆತಂದರು. ಬಹಳ ವೈಭವದ ಉತ್ಸವವನ್ನು ಗ್ರಾಮದ ಜನತೆ ಏರ್ಪಡಿಸಿದ್ದರು. ಅವರು ಸ್ವಚ್ಛಶ್ವೇತ ವಸ್ತ್ರ ಧರಿಸಿದ್ದರು. ಅದು ಅವರ ಕೊನೆಯ ವಸ್ತ್ರ ಧಾರಣೆಯಾಗಿತ್ತು. ಉತ್ಸವ ಬಾಜಾ ಭಜಂತ್ರಿಯೊಡನೆ ದೀಕ್ಷಾ ಮಂಟಪಕ್ಕೆ ಬಂದಿತು. ಅಲ್ಲಿ ದೇವಪ್ಪ ಸ್ವಾಮಿಗಳು ಕ್ಷಲ್ಲಕ ದೀಕ್ಷೆ ಕೊಟ್ಟರು. ಅವರನ್ನು ಕ್ಷುಲ್ಲಕ ಶಾಂತಿಸಾಗರರೆಂದು ಘೋಷಣೆ ಮಾಡಿದರು."

"ಮನೆಗೆ ಯಾವ ಸಮಾಚಾರವನ್ನೂ ಅವರು ಕಳಿಸಿರಲಿಲ್ಲ. ಎಲ್ಲಾ ಬಂಧನ ಕಿತ್ತುಹಾಕಿ ಹೋದ ಮೇಲೆ ಹೇಳಿ ಕೇಳುವ ಸಂಬಂಧ ಇನ್ನೆಲ್ಲಿ ಉಳಿಯುತ್ತದೆ? ಅವರು ಸಮಾಚಾರ ಕಳಿಸದಿದ್ದರೂ ಆ ಸುದ್ದಿಯನ್ನು ಮುಚ್ಚಿಡಲಾಗಲಿಲ್ಲ. ಏಕೆಂದರೆ ಅವರು ಭೋಜ ಗ್ರಾಮದ ದೊಡ್ಡ ಪಾಟೀಲರಷ್ಟೆ?

ಜನಗಳ ಬಾಯಿಂದ ಹಬ್ಬಿ ನಮ್ಮೂರಿಗೂ ಆ ಸುದ್ದಿ ಬಂದು ಮುಟ್ಟಿತು. ಸಾತಗೌಡಿರಿಗೆ ಕ್ಷುಲ್ಲಕ ದೀಕ್ಷೆ ಜೇಷ್ಠ ಶುದ್ಧ ತ್ರಯೋದಶಿಯಂದು ಆಗಿತ್ತು."

" ಒಮ್ಮೆ ಸಮಾಚಾರ ಪತ್ರ ಒಂದು ಕುಮಗೊಂಡನ ಕೈಗೆ ಸಿಕ್ಕಿತು. ಅದನ್ನು ಅವನೊಬ್ಬನೇ ಓದಿ ಅತ್ತೂ ಅತ್ತೂ ಹಣ್ಣಾಗಿದ್ದ. ಅವನ ಬತ್ತಿದ ಮುಖ ನೋಡಿ ನಮ್ಮ ತಂಗಿ ಅವನನ್ನು ಕೇಳಿದಳು. "ಏಕೆ ಏನಾಯಿತು? ಹೀಗೇಕೆ ನಿನ್ನ ಮುಖ ಬತ್ತಿ ಹೋಗಿದೆ?ಆಗ ಅಳುತ್ತಾ ಬಿಕ್ಕುತ್ತಾ ಕುಮಗೊಂಡ ಹೇಳತೊಡಗಿದ.

"ಅಪ್ಪಾನಿ ದೀಕ್ಷಾ ದೆತಲೀ." ಮಹರಾಜರು ದೀಕ್ಷೆ ತೆಗೆದುಕೊಂಡರು. ಮಹರಾಜರನ್ನು ಅಪ್ಪಾ ಎಂದು ಕರೆಯುತ್ತಿದ್ದರು. ಈ ಸುದ್ದಿ ಕೇಳಿ ಎಲ್ಲರ ಕಣ್ಣುಗಳಲ್ಲೂ ಬಳ ಬಳ .ನೀರಹನಿ ಉದುರಿದವು. ಕೂಡಲೇ ನಾವು ಉಪಾಧ್ಯಾಯರ ಮಗ ಮತ್ತು ಕುಮಗೊಂಡ ಮೂವರು ಸೇರಿ ಉತ್ತೂರಿಗೆ ಹೊರಟೆವು.

## ಕ್ಷುಲ್ಲಕ ರೂಪದಲ್ಲಿ ದರ್ಶನ

ಉತ್ತೂರನ್ನು ಮುಟ್ಟಿ ಅವರನ್ನು ಕ್ಷುಲ್ಲಕ ರೂಪದಲ್ಲಿ ನೋಡುತ್ತಲೇ ನಮಗೂ ಕಣ್ಣೀರು ಬಂದಿತು. ಆಗ ಅವರೆಂದರು.

"ಇಲ್ಲಿಗೆ ಅಳುವುದಕ್ಕಾಗಿಯೇ ಬಂದಿರೇನು?ನೀವು ನನ್ನ ಹಾಗೆಯೇ ದೀಕ್ಷೆ ತೆಗೆದುಕೊಳ್ಳಬೇಕು. ಸುಮ್ಮನೆ ಅಳುತ್ತೀರೇಕೆ?" ಅವರ ಮಾತು ಕೇಳಿ ಸುಮ್ಮನಾಗಿಬಿಟ್ಟೆವು. ನಾವು ಚೌಕಿ ಹಾಕಿದೆವು. ಅವರ ಆಹಾರ ನಮ್ಮ ಚೌಕಿಯಲ್ಲೇ ಆಯಿತು. ನಾವು ಗೋವಾದ ಮಾವಿನ ಹಣ್ಣು ಕೊಟ್ಟೆವು."

"ಇದು ಸಣ್ಣಗ್ರಾಮ. ಚಾತುರ್ಮಾಸಕ್ಕೆ ಇವರನ್ನು ನಿಮ್ಮ ಕಡೆ ಕರೆದುಕೊಂಡು ಹೋಗಿ ಎಂದು ದೇವಪ್ಪ ಸ್ವಾಮಿಗಳು ಹೇಳಿದರು. ಕುಮಗೊಂಡನೂ ಅವರ ಜೊತೆ ಹೊರಟ"

ಅದು ಅದ್ಭುತ ಯುಗವಾಗಿತ್ತು. ಅವರಿಗೆ ಕೊಡಲು ಕಮಂಡಲು ಕೂಡಾ ಸಿಗುತ್ತಿರಲಿಲ್ಲ. ಚೆಂಬಿಗೆ ಸುತ್ತಲಿ ಕಟ್ಟಿ ಕಮಂಡಲು ಮಾಡಿಕೊಂಡಿದ್ದರು. ಅವರ ಪಿಂಛದಿಂದಲೇ ಕೆಲವು ಗರಿ ಕಿತ್ತು ಸಣ್ಣ ಪಿಂಛ ಮಾಡಿಕೊಟ್ಟಿದ್ದರು. ಕೊಲ್ಲಾಪುರದ ಭೂಪಾಲಪ್ಪ ಜೀರಿಗೆ ಭಾರಿ ವ್ಯಾಪಾರಗಾರ. ಕಟ್ಟಾ ದಿಗಂಬರ ಸಂಪ್ರದಾಯವಾದಿ. ಕುಮಗೊಂಡ ಅವರ ಬಳಿ ಹೋದ. ಅವರು ಎಲ್ಲೋ ಹುಡುಕಿಸಿ ಒಂದು ಕಮಂಡಲು ತರಿಸಿಕೊಟ್ಟರು. ಕುಮಗೊಂಡಾ ಕಮಂಡಲು



ತೆಗದುಕೊಂಡು ವಾಪಾಸು ಬಂದು ಅವರಿಗೆ ಕೊಟ್ಟ. ಅವರ ಪ್ರಥಮ ಚಾತುರ್ಮಾಸ ಕೊಗನೊಲಿ ಗ್ರಾಮದಲ್ಲಿ ಆಯಿತು.

## ಕೊಗನೊಲಿ ಪ್ರಥಮ ಚಾತುರ್ಮಾಸ

"ವಾಪಾಸು ಮನೆಗೆ ಬಂದೆವು. ಆದರೆ ಅವರಿಲ್ಲದ ಮನೆ ಬಣಗುಟ್ಟುತ್ತಿತ್ತು. ಮನೆಯೇ ಶೂನ್ಯವಾಸದಂತೆ ಕಾಣುತ್ತಿತ್ತು. ಎಲ್ಲರ ಮನಸ್ಸು ಮುದುರಿ ಹೋಗಿತ್ತು. ಕುಮಗೊಂಡ ಬಟ್ಟೆ ಅಂಗಡಿಯನ್ನು ಯಾರೋ ಒಬ್ಬ ಮಾರವಾಡಿಗೆ ಮಾರಿಬಿಟ್ಟ"

ಅವರು ಮತ್ತೆ ಹೇಳತೊಡಗಿದರು.

"ನಾವು ಅವರ ಹತ್ತಿರ ಹೋಗಿ ನಮಗೆ ದೀಕ್ಷೆ ಕೊಡಿ ಎಂದು ಕೇಳುತ್ತಿದ್ದೆವು. ದೀಕ್ಷೆ ಬಹಳ ಕಠಿಣಕಾರ್ಯ. ನಮ್ಮ ಹಾಗೇ ನೀವೂ ಮೊದಲು ಮನೆಯಲ್ಲೇ ಅಭ್ಯಾಸ ಮಾಡಿ ಎಂದು ಹೇಳಿದರು.

ನಾವು ತಡಮಾಡದೆ ಏಕ ಭುಕ್ತ ನಿಯಮ ಕೈಗೊಂಡೆವು. ನಾವು ಕೃಷಿ ಕೆಲಸ ನೋಡಿಕೊಳ್ಳುತ್ತಿದ್ದೆವು.

ಕುಮಗೊಂಡ ಕೊಲ್ಲಾಪುರಕ್ಕೆ ಹೋಗಿ ಬಟ್ಟೆ ವ್ಯಾಪಾರ ಪ್ರಾರಂಭಿಸಿದ. ನಾವು ನಮ್ಮ ತಂಗಿಯನ್ನು ಆಗಾಗ್ಗೆ ಕೊಲ್ಲಾಪುರಕ್ಕೆ ಕರೆದುಕೊಂಡು ಹೋಗುತ್ತಿದ್ದೆವು. ಕುಮಗೊಂಡ ಬಹಳ ಬುದ್ಧಿವಂತ. ಬೇಗ ವ್ಯಾಪಾರ ಬೆಳೆಯಿತು. ಅವನು ಜಯಸಿಂಘಪುರಕ್ಕೂ ತನ್ನ ವ್ಯಾಪಾರ ವಿಸ್ತರಿಸಿದ. ನಾವೆಲ್ಲಾ ಜಯಸಿಂಘಪುರದಲ್ಲೆ ಇರಲಾರಂಭಿಸಿದೆವು. ನಾವು ೧೧ ರಿಂದ ೧ ಗಂಟೆವರೆಗೆ ಪರ್ವತದ ಕೆಳಗೆ ಧ್ಯಾನ ಮಗ್ನರಾಗಿ ಕುಳಿತಿರುತ್ತಿದ್ದೆವು. ಆಗ ಮನಸ್ಸಿನ ಚಂಚಲತೆ ತಡೆಯುತ್ತಿದ್ದೆವು. ಏಳು ವರ್ಷ ಜಯಸಿಂಘಪುರದಲ್ಲಿದ್ದು ಧ್ಯಾನದ ಅಭ್ಯಾಸ ನಡೆಸಿದೆವು. ಒಮ್ಮೆ ಶಾಂತಿಸಾಗರ ಮಹರಾಜರು ಬಾಹುಬಲಿಗೆ ಬಂದರು. ಒಮ್ಮೆ ಅವರ ಬಳಿ ಕಲ್ಲಪ್ಪ ಭರಮಪ್ಪ ನಿಟವೆ ಶಾಸ್ತ್ರಿ ಕುಳಿತಿದ್ದರು. ಅವರ ಪರಿಚಯ ನಮಗಿರಲಿಲ್ಲ. ನಮ್ಮನ್ನು ನೋಡಿ ಇವರ್ಯಾರೆಂದು ಮಹರಾಜರನ್ನು ಕೇಳಿದರು. ಇವರು ಭೋಜಗ್ರಾಮದ ಪಾಟೀಲ ಎಂದಿಷ್ಟೆ ಹೇಳಿದರು. ಅವರಲ್ಲಿ ಇಷ್ಟು ವಿರಕ್ತಿ ಇತ್ತು. ಪೂರ್ವಾಶ್ರಮದ ಸಂಬಂಧ ಹೇಳಿಕೊಳ್ಳಲೂ ರುಚಿ ಇರಲಿಲ್ಲ. ಅವರು ಸಂಘ ಸಹಿತ ಸಮ್ಮೇದ ಶಿಖರಜಿಗೆ ಯಾತ್ರೆ ಹೊರಟಾಗ ನಮ್ಮಲ್ಲಿ ವೈರಾಗ್ಯದ ಅಗ್ನಿ ಉದ್ದೀಪನಗೊಂಡಿತು."

## ದೀಕ್ಷೆಗಾಗಿ ಯಾಚನೆ :

ಅವರು ಉತ್ತರ ಭಾರತದಲ್ಲಿ ವಿಹರಿಸಿ ಜಯಪುರದಲ್ಲಿ ಚಾತುರ್ಮಾಸ ನಿಂತಾಗ ಅವರ ದರ್ಶನಕ್ಕೆ ಕುಮಗೊಂಡ ಮತ್ತು ಬ್ರ.ಜಿನಗೊಂಡಾ ಸಮಡೋಳಿಕರ್ ಹೊರಟರು. ಅವರಿಬ್ಬರಿಗೂ ಮನಸ್ಸಿನ ಭಾವನೆ ತಿಳಿಸದೆ ಅವರೊಡನೆ ಹೊರಟಿದ್ದ"ಇನ್ನೊಬ್ಬ ವ್ಯಕ್ತಿ ಬಲಗೊಂಡನಿಗೆ ನಮ್ಮ ನಮೋಸ್ತು (ಆಗ ಮುನಿಯಾಗಿದ್ದರು) ತಿಳಿಸಿ ನಮಗೆ ದೀಕ್ಷೆ ಕೊಡುವ ಬಗ್ಗೆ ವಿಚಾರಿಸಲು ಹೇಳಿ ಕಳಿಸಿದ್ದೆವು."

ಜಯಪುರದಲ್ಲಿ ನಮ್ಮ ಬಗ್ಗೆ ಹೇಳಿದಾಗ "ಇನ್ನೂ ವೈರಾಗ್ಯ ಭಾವ ಇದೆಯೇನು ಎಂದು ಕೇಳಿದರಂತೆ. ಆಗ ಬಲಗೊಂಡ ಹೌದು ಈಗಲೂ ನೈಜ ವೈರಾಗ್ಯ ಭಾವ ಇದ್ದೇ ಇದೆ ಎಂದನಂತೆ. ಅವರು ಪುತ್ತೂರಿನ ನೇಮಿಸಾಗರರನ್ನು ದೀಕ್ಷೆ ಕೊಡಲು ಕೇಳಿದ್ದರು.

ಇಲ್ಲಿ ಒಂದು ಸಂಶಯ ಬರುತ್ತದೆ. ತಮ್ಮ ಸ್ವಂತ ತಮ್ಮನೊಡನೆ ದೀಕ್ಷೆ ಕೊಡುವ ಬಗ್ಗೆ ಹೇಳಿ ಕಳಿಸದೆ ಬೇರೆಯವರೊಡನೆ ಹೇಳಿ ಕಳಿಸಲು ಏನು ಕಾರಣ? ಬಂಧುಗಳು ಬಂಧನಕ್ಕೆ ಕಾರಣವೆಂದು ಜ್ಞಾನಾರ್ಣವದಲ್ಲಿ ಹೇಳಿದೆ. ತಮ್ಮ ತಮ್ಮನೊಡನೆ ಹೇಳಿಕಳಿಸಿದ್ದರೆ ಅವನೆಂದೂ ಒಪ್ಪುತ್ತಿರಲಿಲ್ಲ. ಇದಾದನಂತರ ಅವರು ನೇಮಿಸಾಗರರ ಹತ್ತಿರ ಸಮಡೊಳಿಗೆ ಹೋಗಿ ದೀಕ್ಷೆ ಯಾಚಿಸಿದರು. ಆಗ ಅವರ ವಯಸ್ಸು ೭೦ ವರ್ಷಗಳು. ಈ ವಿಚಾರ ತಿಳಿದು ಕುಮಗೊಂಡ ಬಿಕ್ಕಿ ಬಿಕ್ಕಿ ಅತ್ತ. ಆಗ ಅವರು ಬ್ರ.ಸಮಡೋಳಿಕರ್ ರವರಿಗೆ ಒಂದು ಒಳ್ಳೆಯ ಮಾತು ಹೇಳಿದರು.

ರಾಗದಿಂದ ಹಿಂದಕ್ಕೆ ನೋಡಬೇಡ. ವೀತರಾಗಭಾವದಿಂದ ಮುಂದಕ್ಕೆ ನೋಡು."

ಅವರು ಕ್ಷುಲ್ಲಕ ದೀಕ್ಷೆಯಲ್ಲಿ ನಾಲ್ಕು ವರ್ಷವಿದ್ದರು. ಆಗ ಆಚಾರ್ಯ ಮಹರಾಜರು ಗಜಪಂಥದಲ್ಲಿದ್ದರು. ಬಾಬೂರಾವ್ ಮಾರ್ಲೆಯವರು ಅವರನ್ನು ಅಲ್ಲಿಗೆ ಬಸ್ಸಿನಲ್ಲಿ ಕರೆದೊಯ್ದರು.

ಅವರು ಅಲ್ಲಿಗೆ ಬಂದು ಆಚಾರ್ಯ ಶ್ರೀಯವರಿಗೆ ನಮೋಸ್ತು ಮಾಡಿದರು. ಅವರು ಆಚಾರ್ಯ ಶ್ರೀಯವರಿಗಿಂತ ೧೦ ವರ್ಷ ಹಿರಿಯರಾಗಿದ್ದರೂ ಆಚಾರ್ಯ ಶ್ರೀಯವರು ದೀಕ್ಷೆಯಲ್ಲಿ ಅವರಿಗೆ ದೊಡ್ಡವರಾಗಿದ್ದರು. ಪೂಜ್ಯರಾಗಿದ್ದರು. ವಂದ್ಯನೀಯರಾಗಿದ್ದರು.



ಮಹರಾಜ್! ಕ್ಷುಲ್ಲಕ ದೀಕ್ಷೆ ಆಗಿ ನಾಲ್ಕು ವರ್ಷಗಳಾದವು. ಮತ್ತೆ ನಮಗೆ ಐಲಕ ದೀಕ್ಷೆ ಕೊಡಿ" ಎಂದು ಕೇಳಿದರು.

"ಇದು ಕಠಿಣ ಕೆಲಸ. ನಿಮಗಾಗಲೇ ೭೫ ದಾಟಿದೆ." ಎಂದು ಆಚಾರ್ಯ ಶ್ರೀಯವರು ಹೇಳಿದರು. ಅವರಿಗೆ ವರ್ಧಮಾನಸಾಗರರ ಮೇಲೆ ಪೂರ್ಣ ವಿಶ್ವಾಸವೇನೋ ಇತ್ತು. ಆದರೂ ಮನಸ್ಸಿನ ಸ್ಥಿರತೆ ಪತ್ತೆ ಹಚ್ಚಲು ಹೀಗೆ ಹೇಳಿದ್ದರು.

## ವರ್ಧಮಾನಸಾಗರರ ಪರೀಕ್ಷೆ.

ಗಜಪಂಥದಲ್ಲಿ ವರ್ಧಮಾನಸಾಗರರಿಗೆ ಮಲಗಲು ಒಂದು ಚಾಪೆ ಕೊಡಿಸಿದರು. ಆಗ ಅವರು ಅದರ ಮೇಲೆ ಮಲಗದೆ ಜಮೀನಿನ ಮೇಲೆ ಮಲಗಿದರು. ಮಧ್ಯರಾತ್ರಿ ಆಚಾರ್ಯ ಮಹರಾಜರು ಎದ್ದು ಬಂದು ಪರೀಕ್ಷಿಸಿ ನೋಡಿದರು. ಆಗ ಅವರಿಗೆ ವಿಶ್ವಾಸ ಮೂಡಿತು.

ಆಚಾರ್ಯಶ್ರೀಯವರು ವರ್ಧಮಾನಸಾಗರರಿಗೆ ಐಲಕ ದೀಕ್ಷೆ ಕೊಟ್ಟರು. ವಾಹನ ತ್ಯಾಗದ ವ್ರತ ಕೊಟ್ಟರು. ಅಲ್ಲಿಂದ ಹೊರಟ ನಂತರ ವರ್ಧಮಾನ ಸಾಗರರಿಗೆ ಬಹಳ ವಿಶುದ್ಧಿ ಆಯಿತು. ಬಹಳ ಆನಂದ ಹುಟ್ಟತೊಡಗಿತು.'ಭಗವಾನ್' ನನಗೆಂದು ನಿರ್ಗ್ರಂಥಾವಸ್ಥೆ ಪ್ರಾಪ್ತವಾಗುವುದೋ" ಎಂದು ಭಗವಂತನಲ್ಲಿ ಹಾರೈಸಿದರು. ಐಲಕ ಅವಸ್ಥೆಯಲ್ಲಿ ಒಂದು ವರ್ಷ ಕಳೆದುಹೋಯಿತು. ಎರಡನೆ ವರ್ಷ ಆರಂಭವಾಯಿತು.

## ಬಾರಾಮತಿಯಲ್ಲಿ ಮುನಿದೀಕ್ಷೆ.

ಐಲಕ ವರ್ಧಮಾನ ಸಾಗರರು ಬಾರಾಮತಿಯಲ್ಲಿ ಆಚಾರ್ಯಶ್ರೀಯವರ ದರ್ಶನ ಮಾಡಿ ಮುನಿದೀಕ್ಷೆಗಾಗಿ ಯಾಚಿಸಿದರು. ೧೯೩೩ರಲ್ಲಿ ಅವರಿಗೆ ಮುನಿ ದೀಕ್ಷೆ ಕೊಡಲಾಯಿತು. ಮಾತೆ ಸತ್ಯವತಿ ಮತ್ತು ಪಿತ ಭೀಮಗೌಡರ ವಂಶದಲ್ಲಿ ಎರಡು ರತ್ನಗಳು ಉದ್ಭವವಾಗಿದ್ದವು! ಅವರ ವಂಶದಲ್ಲಿ ತ್ರಿಭುವನ ವಂದಿತ ಇಬ್ಬರು ವೀತರಾಗಿ ನಿರ್ಗ್ರಂಥ ಸಾಧುಗಳು ಆವಿರ್ಭವಿಸಿದ್ದರು. ಅಂತಹ ಸೌಭಾಗ್ಯ ಇನ್ನಾರಿಗೆ ಸಿಕ್ಕೀತು? ನಿರ್ಗ್ರಂಥ ಮುನಿ ವರ್ಧಮಾನ ಸಾಗರರು ದಕ್ಷಿಣದತ್ತ ವಿಹಾರ ಕೈಗೊಂಡರು. ಅವರನ್ನು ತಮ್ಮ ಸಂಘದಲ್ಲಿ ಇಟ್ಟುಕೊಳ್ಳಲು ಆಚಾರ್ಯ ಮಹಾರಾಜರು ಒಪ್ಪಲಿಲ್ಲ. ಏಕೆಂದರೆ ಪೂರ್ವಾಶ್ರಮದ ಮೋಹ ಬಾಧಿಸಬಹುದೆಂದು ಅವರು ಯೋಚಿಸಿದ್ದರು. ಆದ್ದರಿಂದ ಅವರಿಗೆ ಅನ್ಯತ್ರ ವಿಹರಿಸಲು ಆಜ್ಞಾಪಿಸಿದರು.

## ಅದ್ಭುತ ವಿಕಲ್ಪ

ಒಂದು ದಿನ ಕುಮಗೊಂಡ ಪಾಟೀಲರ ಪುತ್ರ ಜನಗೊಂಡ ಪಾಟೀಲರ ಪತ್ನಿ ಲಕ್ಷ್ಮೀಬಾಯಿ ಮಹರಾಜರ ಹತ್ತಿರ ಸುಮಾರು ೧೫ ನಿಮಿಷ ಚರ್ಚೆ ಮಾಡುತ್ತಿದ್ದಳು. ಇದ್ದಕ್ಕಿದ್ದಂತೆಯೇ ಅವರಿಗೆ ಒಂದು ಅದ್ಭುತ ಮನೋವಿಕಲ್ಪ ಹುಟ್ಟಿತು. ಪೂರ್ವಾಶ್ರಮದ ಬಂಧುವಿನ ಪತ್ನಿಯೊಡನೆ ಇಷ್ಟುಹೊತ್ತು ಮಾತಾಡುವುದು ಸರಿಯಲ್ಲ ಎಂದು ಭಾವಿಸಿದರು. ಈಗ ನನಗೆ ಯಾರೂ ಬಂಧು ಬಾಂಧವರಿಲ್ಲ. ಬಾಂಧವ್ಯವನ್ನು ತೊರೆದು ಬಂದ ಮೇಲೆ ಬಂಧು ಬಾಂಧವರ ರಾಗಾಲಾಪದಲ್ಲಿ ತೊಡಗುವುದೆಂದರೇನು? ಹೀಗಿರುವಲ್ಲಿ ಲಕ್ಷ್ಮೀ ಬಾಯಿಯ ಜೊತೆಯಲ್ಲಿ ವಾರ್ತಾಲಾಪ ಮಾಡುವುದರಲ್ಲೇನು ಅರ್ಥ. ಆಚಾರ್ಯ ಶ್ರೀಯವರು ನಿಗ್ರಂಥರಾದ ಮೇಲೆ ನಮ್ಮನ್ನು ತಮ್ಮ ಅಣ್ಣನೆಂದು ಹೇಳದೆ ಭೋಜಗ್ರಾಮದ ಪಾಟೀಲರೆಂದು ಹೇಳಿದ್ದರು. ನನ್ನ ದೃಷ್ಟಿ ಹಾಗೆಯೇ ಇರತಕ್ಕದ್ದು ಎಂದು ಗಾಢವಾದ ವಿಚಾರದ ಸುಳಿಯಲ್ಲಿ ಮುಳುಗತೊಡಗಿದರು. ಅವರು ಕೂಡಲೇ ಕುಟಿಯಿಂದ ಹೊರ ಬಿದ್ದು ಬಹಳ ಸಮಯದವರೆಗೆ ಆತ್ಮಧ್ಯಾನದಲ್ಲಿ ಮುಳುಗಿಬಿಟ್ಟರು. ಆಗ ಒಬ್ಬ ವಿಚಾರವಂತ ಗೃಹಸ್ಥನಲ್ಲಿ ಹೇಳಿದರು.

"ಆ ದಿನ ಬಹಳ ತಪ್ಪು ಆಗಿ ಹೋಯಿತು. ನಾನು ಎಲ್ಲಿಂದ ಎಲ್ಲಿಗೆ ಹೋಗಿ ಬಿಟ್ಟಿದ್ದೆ. ಯಥಾರ್ಥವಾಗಿ ನನಗೆ ಯಾರೂ ಇಲ್ಲ. ನಾನು ಯಾರೊಡನೆಯೂ ಯಾವ ಸಂಬಂಧ ಹೊಂದಿರುವವನಲ್ಲ"

ಆಗ ನನಗೆ ಅವರು ಮಾನಸಿಕ ವಿಶುದ್ಧಿ ಎಷ್ಟು ಉಚ್ಚಕೋಟಿಯದು ಎಂದು ತಿಳಿಯಿತು.

## ಅತ್ಯಂತ ಸರಳ

ಅವರ ಸರಳತೆಯ ಮೂರ್ತಿಯಾಗಿದ್ದರು. ಒಂದು ದಿನ ನನ್ನ ತಮ್ಮ ಸುಶೀಲ ಕುಮಾರನಿಂದ ಒಂದು ಪತ್ರ ಬಂದಿತ್ತು. ಅದರಲ್ಲಿ ನಮೋಸ್ತು ತಿಳಿಸಿದ್ದ. ಈ ಮಾತು ಅವರಿಗೆ ಹೇಳಿದೆ. "ಅವರಿಗೆ ನಮ್ಮ ಆಶೀರ್ವಾದ ತಿಳಿಸಿ. ನಿಮ್ಮ ಮನೆಯವರಿಗೆಲ್ಲಾ ಆಶೀರ್ವಾದ ತಿಳಿಸಿ" ಎಂದು ಹೇಳಿದರು.

ಅವರ ಬಾಯಿಂದ ಕೆಲವೊಮ್ಮೆ ಮಾರ್ಮಿಕ ಭಾವಗಳು ಹೊರಡುತ್ತಿದ್ದವು. ನಾನು ಒಂದು ದಿನ ಶಾಸ್ತ್ರ ಓದುತ್ತಿದ್ದೆ. ಆಗ ಅವರ ಮುಖ ಯಾವುದೋ



ವಿಚಾರದ ತೆಕ್ಕೆಗೆ ಸಿಕ್ಕಿ ಗಂಭೀರವಾಗಿತ್ತು. ಏನೋ ಗಹನ ವಿಚಾರದಲ್ಲಿ ಮುಳುಗಿದಂತೆ ಕಂಡಿತು.

ಆಗ ಅವರು ಹೇಳಿದರು–

"ಸರಾಗಿ ಭಗವಾನರು ಸ್ವಯಂ ನಾಟಕವಾಡುತ್ತಾರೆ. ವೀತರಾಗಿ ಸಿದ್ಧ ಭಗವಾನರು ಲೋಕಾಗ್ರದಲ್ಲಿ ಕುಳಿತು ನಾಟಕ ನೋಡುತ್ತಾರೆ. ಜೈನಾಗಮ ಸಣ್ಣ ಜಲಾಶಯವಲ್ಲ. ಅದೊಂದು ಮಹಾಸಾಗರ. ಸಮ್ಯಕ್ತ್ವಿ ಜೀವ ಅವ್ರತಿಯಾಗಿದ್ದರೂ ಅದು ವ್ರತಿಯನ್ನು ನೋಡಿದಾಗ ಅದಕ್ಕೆ ಉಂಟಾಗುವ ಹರ್ಷ ಚಿರಕಾಲದ ವಿಯೋಗದ ನಂತರ ಪ್ರದ್ಯುಮ್ನ ಕುಮಾರನನ್ನು ನೋಡಿದಾಗ ರುಕ್ಮಿಣಿಗೆ ಆದ ಆನಂದಕ್ಕೆ ಸಮಾನವಾಗಿರುತ್ತದೆ."

ಸಮಾಧಿಗೆ ಮುನ್ನ ಆಚಾರ್ಯಶ್ರೀಯವರು ನಾಂದ್ರೆಯಲ್ಲಿ ಬಲಗೊಂಡಾ ಪಾಟೀಲರ ಸುಂದರ ತೋಟದಲ್ಲಿ ಸುಮಾರು ೨೦ ದಿನ ಇದ್ದರು. ಅಲ್ಲಿಂದ ಮುಂದಕ್ಕೆ ವಿಹಾರ ಮಾಡಿದರು. ಅದು ಅವರ ಮತ್ತು ವರ್ಧಮಾನಸಾಗರರ ಅಂತಿಮ ಭೇಟಿಯಾಗಿತ್ತು. ಆಗ ನಡೆದ ಮಾತುಕತೆಯತ್ತ ಗಮನ ಸೆಳೆದೆ.

## ಅಂತಿಮ ವಾರ್ತಾಲಾಪ

ವರ್ಧಮಾನಸಾಗರರು : "ನೀವು ಇತ್ತ ಇನ್ನು ಯಾವಾಗ ಬರುವಿರಿ? ನಮ್ಮ ನಿಮ್ಮ ಭೇಟಿ ಇನ್ನು ಯಾವಾಗ ಮತ್ತೆ?"

ಆಗ ಆಚಾರ್ಯ ಶಾಂತಿಸಾಗರರು ಹೇಳಿದರು.

"ಇನ್ನು ನಮ್ಮ ನಿಮ್ಮ ಭೇಟಿ ಇಲ್ಲಿ ಆಗುವುದಿಲ್ಲ. ನಮ್ಮ ಭೇಟಿ ಇನ್ನು ಮುಂದೆ ಸ್ವರ್ಗದಲ್ಲಿ ಮಾತ್ರ"

ಅದು ಹಾಗೆಯೇ ಆಗಿ ಹೋಯಿತು. ಒಬ್ಬರಿಗೊಬ್ಬರು ಪರಸ್ಪರ ಸಂಧಿಸಲೇ ಇಲ್ಲ.

## ತಾತ್ವಿಕ ದೃಷ್ಟಿ

ಅವರೆಂದರು–"ದಾನಪೂಜೆ ಮುಂತಾದ ಷಟ್ಕರ್ಮಾಚರಣೆಗಳಿಂದ ಮೋಕ್ಷ ಸಿಗುವುದಿಲ್ಲ. ಸ್ವರ್ಗಸುಖ ಮಾತ್ರ ಸಿಗಬಲ್ಲದು. ಸುಳ್ಳು ಮೋಸ, ವಂಚನೆಗಳಿಂದ ನರಕತಿರ್ಯಂಚ ಆಗುತ್ತದೆ. ಒಂದು ದೃಷ್ಟಿಯಿಂದ (ಪಾಪದ ದೃಷ್ಟಿಯಿಂದ)ಪುಣ್ಯ ಅಮೃತ ಕುಂಭವಾಗುತ್ತದೆ. ಇನ್ನೊಂದು ದೃಷ್ಟಿ (ಮೋಕ್ಷದ ದೃಷ್ಟಿಯಿಂದ)

ವಿಷಕುಂಬವಾಗುತ್ತದೆ. ಆದರೆ ಅಪೇಕ್ಷಾರಹಿತ ಭಾವದಿಂದ ಶುದ್ಧ ದೃಷ್ಟಿಯೇ ಅಮೃತ ಕುಂಭ"

## ಗೃಹಸ್ಥರ ಪಥ

ಗೃಹಸ್ಥರು ಷಟ್ಕರ್ಮಾಚರಣೆಯಿಂದ ಪಾಪ ಪಂಕದಲ್ಲಿ ಮುಳುಗುತ್ತಾರೆ. ಈ ಪಾಪದಿಂದ ಕುಗತಿಗಳಲ್ಲಿ ಜೀವ ಅಸಹ್ಯ ದುಃಖ ಭೋಗಿಸುತ್ತದೆ. ಇದರಿಂದ ತಪ್ಪಿಸಿಕೊಳ್ಳಲು ಷಡಾವಶ್ಯಕ ಕ್ರೀಯೆಗಳನ್ನು ವಿಧಿಸಿದರು. ಇವು ಪುಣ್ಯ ಬಂಧಕ್ಕೆ ಕಾರಣ. ಪುಣ್ಯದಿಂದ ಜೀವಕ್ಕೆ ಸದ್ಗತಿ ಪ್ರಾಪ್ತವಾಗುತ್ತದೆ. ಆದ್ದರಿಂದ ಪಾಪವಿಷ ಕುಂಭ ಪುಣ್ಯ ಅಮೃತ ಕುಂಬ ಎಂದರು.

ಪಾಪದಿಂದ ಉಂಟಾಗುವ ದುಃಖಕ್ಕಿಂತ ಪುಣ್ಯದಿಂದ ಉಂಟಾಗುವ ಸುಖ ಮೇಲು. ಆದರೆ ಇಂದ್ರಿಯ ಭೋಗಗಳೂ ಕ್ಷಣಿಕ. ಪುಣ್ಯ ತೀರಿದ ಮೇಲೆ ಜೀವ ಮತ್ತೆ ಪಾಪದ ಫಲವನ್ನೇ ಭೋಗಿಸಬೇಕಾಗುತ್ತದೆ. ಪುಣ್ಯಮಾಡಿದರೂ ಪರಂಪರೆಯಿಂದ ದುಃಖ ತಪ್ಪಿದ್ದಲ್ಲ. ಈ ದೃಷ್ಟಿಯಿಂದ ವಿಚಾರಿಸಿದಾಗ ಪುಣ್ಯವೂ ಹೇಯ. ಆದ್ದರಿಂದ ಪಾಪ ಪುಣ್ಯಗಳೆರಡೂ ಸಂಸಾರ ಬಂಧನದ ದೃಷ್ಟಿಯಿಂದ ವಿಷಕುಂಬ ಎಂದರು. ಒಟ್ಟಿನಲ್ಲಿ ಶುಭವಿರಲಿ, ಅಶುಭವಿರಲಿ, ಅವೆರಡೂ ಆತ್ಮನ ಪರಭಾವಗಳು. ಆದ್ದರಿಂದ ವಿಷಕುಂಬ. ಆದ್ದರಿಂದ ಸ್ವಸಮಯವೇ ಅಮೃತ ಕುಂಬ ಎಂದು ಮತ್ತೆ ಹೇಳಿದರು. ಏಕೆಂದರೆ ಸ್ವಸ್ವಭಾವ ಸ್ಥಿರತೆಯಿಂದಲೇ ಅಚ್ಯುತ ಅನಂತ ಸುಖ ಸಿಗಬಲ್ಲದು. ಗೃಹಸ್ಥರಿಗೆ ಮಾತ್ರ ಪಾಪ ವಿಷಕುಂಭವೂ, ಪುಣ್ಯ ಅಮೃತಕುಂಭವೂ ಆಗಿರುತ್ತದೆ. ಮುನಿಗೆ ಪುಣ್ಯವೂ ವಿಷಕುಂಬ. ಅಂದರೆ ಪಾಪಪುಣ್ಯಗಳೆರಡೂ ವಿಷಕುಂಬ. ಶುದ್ಧೋಪಯೋಗವೆ ಅಮೃತಕುಂಬ. ಗೃಹಸ್ಥರು ಮಾತ್ರ ಪುಣ್ಯವನ್ನು ತ್ಯಜಿಸುವಂತಿಲ್ಲ. ಅವರ ಮೊದಲ ಕರ್ತವ್ಯ ಪಾಪ ಪ್ರವೃತ್ತಿ ತ್ಯಜಿಸುವುದು. ಅವರ ಜೀವನ ಪಾಪ ಪುಣ್ಯಗಳ ಕಲಸು ಮೇಲೋಗರ. ಸಮ್ಯಗ್ದೃಷ್ಟಿ ಶ್ರಾವಕ ಪುಣ್ಯವನ್ನು ಯತ್ನಚಾರಪೂರ್ವಕ ಸಂಪಾದಿಸುತ್ತಾನೆಂದಲ್ಲ. ಆದರೆ ಪಾಪವನ್ನು ಯತ್ನಾಚಾರಪೂರ್ವಕ ದೂರಮಾಡುತ್ತಾನೆ. ಅದಕ್ಕಾಗಿ ಅವನು ಅಶುಭ ಪ್ರವೃತಿಯಿಂದ ಶುಭ ಪ್ರವೃತಿಯತ್ತ ಹೊರಳುತ್ತಾನೆ. ಆಗ ತನ್ನಷ್ಟಕ್ಕೆ ತಾನೇ ಪುಣ್ಯಬಂಧ ಆಗುತ್ತಿರುತ್ತದೆ. ಅಶುಭದಿಂದ ಶುಭದತ್ತ ಹೊರಳುವ ಬೆಳವಣಿಗೆಯಲ್ಲಿಆಗುವ ಪುಣ್ಯಾಸ್ರವವನ್ನು ತಡೆಯಲಾಗುವುದಿಲ್ಲ. ಮುಖ್ಯ ಮಾತೆಂದರೆ ಸಮ್ಯಗ್ದೃಷ್ಟಿ ಪುಣ್ಯ ಬಂಧದಲ್ಲೂ ಮತ್ತು ಅದರ ಮಧುರ ಫಲಗಳಲ್ಲೂ ರಾಗವಿಟ್ಟಿರುವುದಿಲ್ಲ. ಆದ್ದರಿಂದ ಆತ್ಮ ವಿಕಾಶದತ್ತ ಸಮ್ಮುಖವಾಗುವ ಪ್ರಥಮಾವಸ್ಥೆಯಲ್ಲೇ ಜೀವಕ್ಕೆ ಪಾಪತ್ಯಾಗ ಮತ್ತು



ಪುಣ್ಯಸಂಗ್ರಹ ಪ್ರವೃತಿ ಉಂಟಾಗುತ್ತದೆ. ಏಕೆಂದರೆ ಆತ್ಮ ವಿಕಾಸವು ಅನಾದಿಕಾಲೀನ ಹೀನ ಸಂಸ್ಕಾರಗಳ ತ್ಯಾಗ ಪೂರ್ವಕವೇ ಪ್ರಾರಂಭಗೊಳ್ಳುತ್ತದೆ. ಈ ಹೀನ ಸಂಸ್ಕಾರಗಳ ತ್ಯಾಗ ಶುಭ ಪ್ರವೃತಿ ಸದಾಚಾರ ಪೂರ್ವಕವೇ ಆಗುತ್ತದೆ. ಆಗ ಆಗುವ ಪುಣ್ಯಬಂಧವನ್ನು ಬೇಡವೆಂದು ಹೇಳಲು ಸಾಧ್ಯವೇ ಇಲ್ಲ. ಹೀನ ಸಂಸ್ಕಾರಗಳಿಂದ ಜರ್ಝರಿತನಾಗಿದ್ದ ಆತ್ಮ ಶುಭ ಸಂಸ್ಕಾರದಿಂದ ತನ್ನ ಶಕ್ತಿಯನ್ನು ಕ್ರೋಡೀಕರಿಸಿ ಮುಕ್ತಿಯತ್ತ ಮುನ್ನುಗ್ಗುತ್ತಾನೆ. ಆತ್ಮ ಕಲ್ಯಾಣ ಸಾಧನೆಗೆ ದೇಶ, ಕಾಲ, ಸ್ಥಿತಿ, ಶರೀರ ಶಕ್ತಿ ಇತ್ಯಾದಿಗಳ ಸಹಾಯ ಅತ್ಯಗತ್ಯವಾಗಿದೆ. ಅನಾದಿ ಹೀನ ಸಂಸ್ಕಾರದಿಂದ ಈ ಸೌಲಭ್ಯ ಸಿಕ್ಕಿಲ್ಲ. ಶುಭ ಸಂಸ್ಕಾರದಿಂದ ಇವು ಮತ್ತೆ ಪ್ರಾಪ್ತಿಯಾಗಬಲ್ಲವು. ಅವುಗಳು ಪ್ರಾಪ್ತಿಯಾದ ಮೇಲೆ ಜೀವ ಪುರುಷಾರ್ಥದಿಂದ ಆತ್ಮ ಕಲ್ಯಾಣ ಸಾಧಿಸುತ್ತದೆ. ಅಂದರೆ ಜೀವ ಗೃಹಸ್ಥಾವಸ್ಥೆಯಲ್ಲಿ ಅಶುಭದ ತ್ಯಾಗವನ್ನೂ ಶುಭದ ಪ್ರಾಪ್ತಿಯನ್ನೂ ಮಾಡಿಕೊಳ್ಳುತ್ತದೆ. ಆಗ ಪಾಪದ ತ್ಯಾಗವೂ ಪುಣ್ಯದ ಪ್ರಾಪ್ತಿಯೂ ಅನಿವಾರ್ಯವಾಗುತ್ತವೆ. ಯಾವ ಅಪೇಕ್ಷೆಯೂ ಇಲ್ಲದೆ ಪುಣ್ಯ ಹೇಯ ಅನ್ನುವುದು ಏಕಾಂತವಾದವಾಗುತ್ತದೆ. ಲೋಹಗಳ ಸಂಗ್ರಹಕಾರ ಸುವರ್ಣದ ಅಪೇಕ್ಷೆ ಇಟ್ಟುಕೊಂಡಿದ್ದರೆ ಆಕ್ಷೇಪಾರ್ಹವಲ್ಲ. ಆದರೆ ರತ್ನ ಸಂಗ್ರಹಕಾರ ಸುವರ್ಣದ ಅಪೇಕ್ಷೆ ಇಟ್ಟುಕೊಂಡಿದ್ದರೆ ಆಕ್ಷೇಪಾರ್ಹವಾಗುತ್ತದೆ. ಸುವರ್ಣದ ಪ್ರಾಪ್ತಿಯಿಂದ ಕೀಳುಲೋಹದ ತ್ಯಾಗವೂ, ರತ್ನಗಳ ಪ್ರಾಪ್ತಿಯಿಂದ ಸುವರ್ಣದ ತ್ಯಾಗವೂ ತನಗೆ ತಾನೇ ಆಗುತ್ತದೆ. ಅಂದರೆ ಪುಣ್ಯದ ಅಪೇಕ್ಷೆಯಿಂದ ಪಾಪದ ತ್ಯಾಗವೂ ಮುಕ್ತಿಯ ಅಪೇಕ್ಷೆಯಿಂದ ಪಾಪ ಪುಣ್ಯಗಳ ತ್ಯಾಗವೂ ಕ್ರಮವಾಗಿ ಆಗುತ್ತವೆ. ಆಯಾ ಹಂತದಲ್ಲಿ ನಡೆಯುವ ಕ್ರಿಯೆಗಳನ್ನು ಆಯಾ ಹಂತದ ಅಪೇಕ್ಷೆಯಿಂದಲೇ ಗ್ರಹಿಸುವುದು ವಸ್ತುನಿಷ್ಠ ಧರ್ಮವಾಗುತ್ತದೆ.

## ಕಳ್ಳನಲ್ಲೂಕರುಣೆ

ವರ್ಧಮಾನಸಾಗರರು ಶಾಂತಿಸಾಗರರ ಗೃಹಸ್ಥಾವಸ್ಥೆಯ ಒಂದು ಘಟನೆ ತಿಳಿಸಿದರು.

"ಒಂದು ದಿನ ಅವರು ಶೌಚಕ್ಕಾಗಿ ಜಮೀನಿಗೆ ಹೋಗಿದ್ದರು. ತಮ್ಮ ನೌಕರನೇ ಧಾನ್ಯ ಕದ್ದು ಹೋಗುತ್ತಿರುವುದನ್ನು ನೋಡಿದರು. ಆ ಬಡಪಾಯಿ ಹೊಟ್ಟೆಪಾಡಿಗಾಗಿ ಒಂದಿಷ್ಟು ಕದ್ದೊಯ್ದರೆ ಏನು ಹಾಳಾಯಿತು. ? ಹೋಗಲಿ ಎಂದು ಕರುಣೆ ಬಂದಿತು ಅವರಿಗೆ. ಇವರನ್ನು ನೋಡಿ ಅವನಿಗೆ ಬಹಳ ಕೆಡುಕೆನಿಸಿತು. ಅವನು ಮನೆಗ ಬಂದು ತಪ್ಪೊಪ್ಪಿಕೊಂಡು ಕ್ಷಮೆ ಕೇಳಿದ. ಆದರೂ ಅವರು ಅವನ ಬಗ್ಗೆ ಏನೂ ಹೇಳಲಿಲ್ಲ.

ಮತ್ತೆ ಹೇಳಲಾರಂಭಿಸಿದರು.

ಅವರು ಸದಾ ಶಾಂತಚಿತ್ತರಾಗಿರುತ್ತಿದ್ದರು. ಮಗುವಾಗಿದ್ದಾಗ ಅವರೆಂದೂ ಅಳುತ್ತಿರಲಿಲ್ಲ. ಶುಭ್ರ ಬಟ್ಟೆ ಧರಿಸುತ್ತಿದ್ದರು. ಆಗಾಗ್ಗೆ ತಂದೆತಾಯಿಗಳು ಅವರ ಲಗ್ನದ ಬಗ್ಗೆ ಪ್ರಸ್ತಾಪವೆತ್ತುತ್ತಿದ್ದರು. ಆಗ ಅವರು "ಮೀ ಲಗ್ನ ಕರಣಾರ್ ನಾಹಿ" ಎಂದು ಹೇಳುತ್ತಿದ್ದರು. ಸಂಸಾರ ಅಸಾರ. ನಾನು ಆತ್ಮಕಲ್ಯಾಣ ಮಾಡಿಕೊಳ್ಳಬೇಕು. ನನಗೆ ಲಗ್ನ ಬೇಡ ಎಂದು ತಂದೆ ತಾಯಿಗಳಿಗೆ ಸಮಜಾಯಿಸಿ ಕೊಡುತ್ತಿದ್ದರು. ಆ ಮಾತು ಕೇಳಿ ನಮ್ಮ ತಂದೆ ತಾಯಿಗಳಿಗೆ ಒಳಗೊಳಗೇ ಸಂತೋಷವಾಗುತ್ತಿತ್ತು. ಏಕೆಂದರೆ ಅವರಡೂ ಮಹಾನ್ ಸುಸಂಸ್ಕಾರದ ಆತ್ಮಗಳು"

ಶರೀರ ಬಲದಲ್ಲಿ ಕೊಲ್ಲಾಪುರ ಜಿಲ್ಲೆಯಲ್ಲೇ ಅವರನ್ನು ಸರಿಗಟ್ಟುವವರಿರಲಿಲ್ಲ. ಒಂದು ದೊಡ್ಡ ಅಕ್ಕಿಯ ಮೂಟೆಯನ್ನು ಅವರೊಬ್ಬರೇ ತಮ್ಮ ಬೆನ್ನಿಗೆ ಏರಿಸಿಕೊಳ್ಳುತ್ತಿದ್ದರು. ಅವರ ಶರೀರ ಶಕ್ತಿಗೆ ಅನೇಕ ಬಹುಮಾನಗಳ ಬಂದಿದ್ದರೂ ತಿರಸ್ಕರಿಸಿದ್ದರು

ಅವರು ಮುನಿಯಾಗುವರೆಂದು ಜಾತಕದಲ್ಲಿ ಬರೆಯಲಾಗಿತ್ತು. ಸೂರ್ಯ ಹುಟ್ಟುತ್ತಿರುವಾಗ ಅವರೂ ಹುಟ್ಟಿದ್ದರು. ಪುರೋಹಿತ ಜನ್ಮಕುಂಡಲಿ ತಯಾರಿಸಿ ಜಗತ್ತಿಗೇ ಬೆಳಕಾಗಿ ಬದುಕುವ ಆತ್ಮ ಇದು ಎಂದು ಬರೆದಿದ್ದ. ಈ ಮಾತಿನಿಂದ ತಂದೆ ತಾಯಿಗಳಿಗೆ ಅಪಾರ ಆನಂದವಾಗಿತ್ತು.

## ಜ್ಞಾನಿಯ ಆಹಾರ

ವರ್ಧಮಾನಸಾಗರರು ತತ್ವದತ್ತ ಹೊರಳಿದರು.

"ಜ್ಞಾನಿಪುರುಷ ಅವಮೌದರ್ಯ ತಪಸ್ಸು ಮಾಡುತ್ತಾನೆ. ಹಸಿವು ಹಿಂಗಿಸಲು ಬೇಕಾದುದಕ್ಕಿಂತ ಸ್ವಲ್ಪ ಕಡಿಮೆಯೇ ತೆಗೆದುಕೊಳ್ಳುತ್ತಾನೆ. ಅಜ್ಞಾನಿಜೀವ ಹೊಟ್ಟೆ ಒಡೆಯುವಂತೆ ತಿನ್ನುತ್ತದೆ. ಆದ್ದರಿಂದ ಅದು ದುಃಖಿಯಾಗುತ್ತದೆ."

ಅವರು ೭೦ ವರ್ಷ ಪೂರ್ವದ ಒಂದು ಘಟನೆ ನೆನಪಿಸಿಕೊಂಡು ಹೇಳಿದರು–

ಕೊಣ್ಣೂರಿನಲ್ಲಿ ಬಾಬಾ ಭಟ್ಟನೆಂಬ ಒಬ್ಬ ಲೂಪಿ ಬ್ರಾಹ್ಮಣನಿದ್ದ. ಅವನು ಭಾರೀ ಹೊಟ್ಟೆಬಾಕ. ಒಮ್ಮೆ ಅವನು ಒಂದು ಲೋಟದ ತುಂಬ ತುಪ್ಪ ಸುರಿದುಕೊಂಡು ಅದಕ್ಕೆ ಸಕ್ಕರೆ ಕಲಸಿ ಕುಡಿದುಬಿಟ್ಟ. ಅಲ್ಲಿಂದ ಅವನು ಭೋಜ ಗ್ರಾಮಕ್ಕೆ ಹೋಗಬೇಕಾಗಿತ್ತು. ಮಾರ್ಗದಲ್ಲಿ ನದಿ ಸಿಕ್ಕಿತು. ಅದರಲ್ಲಿ



ಧುಮಿಕಿ ಈಜುತ್ತಾ ಬಂದ. ಶೀತಜಲ ಮೈಗೆ ತಟ್ಟಿದ ಕೂಡಲೇ ತುಪ್ಪ ಹೊಟ್ಟೆಯೊಳಗೆ ಗಟ್ಟಿಯಾಗಿ ಕೂತಿಬಿಟ್ಟಿತು. ಆದರಿಂದ ಆ ಬ್ರಾಹ್ಮಣ ಛಡಪಡಿಸತೊಡಗಿದ. ಅವನು ಬಿದ್ದು ಹೊರಳಾಡುವುದನ್ನು ನೋಡಿದರೆ ಬದುಕುವುದೇ ಅಸಂಭವ ಎನ್ನುವಂತಾಗಿ ಬಿಟ್ಟಿತು.

ಭೋಜದಲ್ಲಿ ಒಬ್ಬ ಬುದ್ಧಿವಂತ ವೈದ್ಯನಿದ್ದ. ಅವನನ್ನು ಕರೆಯಿಸಲಾಯಿತು. ಅವನು ನಡೆದ ಎಲ್ಲ ವೃತ್ತಾಂತ ಕೇಳಿ ತಿಳಿದುಕೊಂಡ. ಅವನು ಬೆಂಕಿ ಹಾಕಿಸಿ ಶರೀರವನ್ನು ಚೆನ್ನಾಗಿ ಬಿಸಿಗೊಳಿಸಿದ. ಹೊಟ್ಟೆಯಲ್ಲಿ ಕೂತಿದ್ದ ತುಪ್ಪ ಕರಗಲಾರಂಭಿಸಿತು. ನಂತರ ವಿರೇಚನದಿಂದ ಅದನ್ನು ಹೊರ ತೆಗೆಸಿದ. ಆಗ ಆ ಬಾಬಾ ಭಟ್ಟ ಕಣ್ಣು ಬಿಟ್ಟ. ಅತಿರೇಕದಿಂದ ಅನರ್ಥ ತಪ್ಪಿದ್ದಲ್ಲ.

## ಮರ್ಯಾದಿತ ಜೀವನ.

ಮತ್ತೆ ಮುಂದುವರಿಸಿದರು–

"ಗೃಹಸ್ಥರು ವಿಷಯ ಸುಖಗಳ ಒಂದು ಮರ್ಯಾದೆ ಇಟ್ಟುಕೊಳ್ಳುವುದು ಶ್ರೇಯಸ್ಕರ. ಅಧಿಕ ಭೋಗದಿಂದ ಶರೀರ ಬೇಗ ಶಕ್ತಿಹೀನವಾಗುತ್ತದೆ. ರಕ್ತದೂಷಿತವಾಗುತ್ತದೆ"

ಅವರು ಗೃಹಸ್ಥಾಶ್ರಮದಲ್ಲಿ ಒಬ್ಬ ಪುತ್ರ ಬಲಗೊಂಡಾ ಪಾಟೀಲರನ್ನು ಮಾತ್ರ ಪಡೆದರು. ಅವರ ಧರ್ಮಪತ್ನಿ ಇವರೊಡನೆ ಸುಮಾರು ೧೫ ವರ್ಷ ಮಾತ್ರ ಜೀವಿತವಿದ್ದರು. ಅವರ ಪುತ್ರನೂ ಅವರಂತೆ ಭದ್ರಪರಿಣಾಮಿ.

"ನಮ್ಮ ತಂದೆ ಸುಳ್ಳನ್ನೆಂದೂ ಹೇಳುತ್ತಿರಲಿಲ್ಲ. ಅಸತ್ಯಭಾಷಣ ಮಾಡುತ್ತಿರಲಿಲ್ಲ."ಎಂದು ಅವನು ಹೇಳುತ್ತಿದ್ದ. ಒಂದೇ ಸುಳ್ಳು ಹೇಳಿದ್ದರೆ ಲಕ್ಷಾಂತರ ರೂಪಾಯಿನ ಆಸ್ತಿ ಬರುತ್ತಿತ್ತು. ಆದರೆ ಸುಳ್ಳು ಹೇಳಲಿಲ್ಲ. ನ್ಯಾಯಾಲಯದಲ್ಲಿ ಸತ್ಯವನ್ನೇ ಹೇಳಿಬಿಟ್ಟರು. ಎಷ್ಟೇ ಆದರೂ ಸತ್ಯವತಿಯ ಪುತ್ರರಲ್ಲವೆ? ಆ ಘಟನೆಯನ್ನು ಜನ ಈಗಲೂ ಸ್ಮರಿಸಿಕೊಳ್ಳುತ್ತಾರೆ. ಅವರ ಸತ್ಯನಿಷ್ಠೆಯಿಂದ ಮನೆಯಲ್ಲಿ ಯಾವುದಕ್ಕೂ ಕಡಿಮೆ ಇರಲಿಲ್ಲ. ಶ್ರಾವಕ ಧರ್ಮಾಚರಣೆಯನ್ನು ಅವರ ಮನೆಯಲ್ಲೇ ನೋಡಬೇಕು! ಶೀಲವಂತನಿಗೆ ಮೂರು ಲೋಕಗಳೂ ತಲೆಬಾಗುತ್ತವೆ. ಲಕ್ಷ್ಮಿ ದಾಸಿಯಾಗುತ್ತಾಳೆ. ಪುಣ್ಯಹೀನ ಶತಕೋಟಿಯತ್ನ ಮಾಡಿದರೂ ಹಣ ನಿಲ್ಲದು ಮತ್ತು ಸಿಗದು. ಅವರು ಒಂದು ಕಥೆ ಹೇಳಿದರು.

ಕೊಲ್ಹಾಪುರದ ಸಾಹೂ ಮಹರಾಜರಲ್ಲಿ ಒಬ್ಬ ಬಡ ಪಂಡಿತ ಬೇಡಿಕೊಂಡ "ಪ್ರಭೂ ! ನೀವು ಅನ್ಯರಿಗೆ ಮುಕ್ತಹಸ್ತದಿಂದ ಧನಧಾನ್ಯ ಕೊಡುತ್ತೀರಿ. ನನ್ನನ್ನೇಕೆ ಉಪೇಕ್ಷೆ ಮಾಡುತ್ತೀರಿ?"ಸಾಹೂ ಮಹರಾಜ್ ಅನುಭವಿ ಶಾಸಕನಾಗಿದ್ದ ಈ ಬಡಪಾಯಿ ಬಗ್ಗೆ ರಾಜ ಯೋಚಿಸತೊಡಗಿದ. ಈ ಬಡಪಾಯಿಯ ಅದೃಷ್ಟ ಪರೀಕ್ಷೆ ಮಾಡಬೇಕೆಂದು ಯೋಚಿಸಿ ೨ ಢೇರೆ ಹಾಕಿಸಿದ ರಾಜ. ಅವುಗಳಲ್ಲಿ ಹೊಟ್ಟಿನ ಮೂಟೆ ತುಂಬಿಸಿ ಒಂದರಲ್ಲಿ ಸುವರ್ಣ ಮುದ್ರೆಗಳನ್ನು ಅಡಗಿಸಿಟ್ಟಿದ್ದ. ಇವೆರಡರಲ್ಲಿ ಯಾವುದಾದರೊಂದು ಡೇರಿಯನ್ನು ಆರಿಸಿಕೊಳ್ಳಲು ಬ್ರಾಹ್ಮಣನಿಗೆ ಹೇಳಲಾಯಿತು. ಆ ದರಿದ್ರ ಬ್ರಾಹ್ಮಣ ಸುವರ್ಣ ನಾಣ್ಯಗಳಿದ್ದ ಡೇರೆ ಬಿಟ್ಟು ಬೇರೆ ಡೇರೆಯನ್ನೇ ಆರಿಸಿಕೊಂಡ. ನಾವೇನು ಮಾಡುವುದು ನಿಮ್ಮ ಅದೃಷ್ಟವೇ ಅಂತಹದಿದೆ ಅಂದನಂತೆ ಆ ರಾಜ!

## ಆದಿಸಾಗರರ ಬಗ್ಗೆ

ಆದಿಸಾಗರರು ಯರನಾಳದಲ್ಲಿ ದೀಕ್ಷೆ ತೆಗೆದುಕೊಂಡಿದ್ದರು. ಅವರ ಬಗ್ಗೆ ಕೆಲವು ಮಾಹಿತಿ ತಿಳಿಸಿದರು. ಪಂಚಮಕಾಲದಲ್ಲಿ ೯೯ ಕೋಟಿ ಮುನಿಗಳು ನರಕಕ್ಕೆ ಹೋಗುತ್ತಾರೆ ಎಂದು ಹೇಳುವುದನ್ನು ಕೇಳಿ ಅವರಲ್ಲಿ ಅದ್ಭುತ ಪರಿವರ್ತನೆ ಆಯಿತು. ಮುನಿಪದ ಧಾರಣೆ ಮಾಡಿಯೂ ನರಕಕ್ಕೆ ಹೋಗುವುದಾದರೆ ಅಂತಹ ಮುನಿಧರ್ಮವೇಕೆ ಎನ್ನುವ ಭಾವ ಅವರಲ್ಲಿ ಮೂಡಿತು. ಅಂತಹ ಬೋಳೇ ಸ್ವಭಾವದ ಮುನಿಯನ್ನು ಪ್ರತಿಬೋಧಿಸಿ ಸ್ಥಿತೀಕರಣ ಮಾಡುವವರು ಅಲ್ಲಿ ಯಾರೂ ಇರಲಿಲ್ಲ. ಇದೇ ಗುಂಗಿನಲ್ಲಿ ಯೋಚಿಸುತ್ತಾ ಯೋಚಿಸುತ್ತಾ ಅವರು ಊರಿನತ್ತ ಹೊರಟೇ ಬಿಟ್ಟರು. ಮನೆಗೆ ಬಂದು ಅಲ್ಲಿದ್ದ ಒಂದು ತುಂಡು ಬಟ್ಟೆ ಸುತ್ತಿಕೊಂಡು ಜೋಳದ ರೊಟ್ಟಿ ತಿನ್ನಲು ಕೊಡು ಎಂದು ಕೇಳಿದರು. ಅದರಿಂದ ಭಯಬಿದ್ದ ಅವನ ಹೆಂಡತಿ ಓಡಿ ಹೋಗಿ ಗ್ರಾಮದ ಸರಪಂಚನಿಗೆ ವಿಷಯ ತಿಳಿಸಿದಳು. ಊರಿನ ಜನ ಚಿಂತಾಮಗ್ನರಾದರು. ಅವರು ಹೀಗೆ ಮುನಿಧರ್ಮ ತ್ಯಜಿಸಿ ಬಂದದ್ದು ಅವರಿಗೆ ಸರಿಕಾಣಲಿಲ್ಲ. ಅಲ್ಲಿ ಚೌಗುಲೆ ಎನ್ನುವ ಒಬ್ಬ ಬುದ್ಧಿವಂತ ಗೃಹಸ್ಥನಿದ್ದ. ಅವನು ಅವರ ಅನುಮಾನ ಏನು ಅನ್ನವುದನ್ನು ಸಾವಧಾನವಾಗಿ ಹೊರಗೆಳೆದ. ಆಗ ಅವನು ಆದಿಸಾಗರರನ್ನು ಸಾವಧಾನ ಪೂರ್ವಕ ಪ್ರತಿ ಬೋಧಿಸತೊಡಗಿದ. ಮುನಿ ಪದದಿಂದ ಸ್ವರ್ಗಪ್ರಾಪ್ತಿಯಾಗುತ್ತದೆ. ನರಕವೂ ಪ್ರಾಪ್ತಿಯಾಗುತ್ತದೆ. ಯಾರು ಏಕಾ ಏಕಿ ನಿಮ್ಮಂತೆ ಮುನಿಧರ್ಮ ತ್ಯಜಿಸಿ ಅಸಂಯಮ ವೃತ್ತಿ ಹಿಡಿಯುತ್ತಾರೋ ಅಂತವರೇ ನರಕಕ್ಕೆ ಹೋಗುತ್ತಾರೆ. ನೀವು ಮುನಿಧರ್ಮ ತ್ಯಜಿಸಿ ಬಂದಿರುವುದೇ ಅಪಾಯಕರ. ನರಕದ ಹಾದಿ ಎಂದು ಹೇಳಿದ. ಅದರಿಂದ ಅವರ ಭ್ರಮೆ ದೂರವಾಯಿತು.



ಅವರ ಮುಖದಲ್ಲಿ ಬೆವರ ಹನಿ ಕಾಣಿಸಿದವು. ಮತ್ತೆ ಮುನಿಮಾರ್ಗದಲ್ಲಿ ನಡೆಯತೊಡಗಿದರು.

ತೀಕ್ಷ್ಣ ಚಾರಿತ್ರಮೋಹಕರ್ಮದ ಉದಯದಿಂದ ಆದಿಸಾಗರರು ತಪ್ಪು ಹೆಜ್ಜೆ ಇಟ್ಟಿದ್ದರು. ಮುಕ್ತಿಮಾರ್ಗದಿಂದ ಆಯತಪ್ಪಿ ಕೆಳಗೆ ಬಿದ್ದಿದ್ದರು. ಆದರೆ ಬಿದ್ದರೂ ಶಾಶ್ವತವಾಗಿ ಬಿದ್ದು ಹೋಗದೆ ಮತ್ತೆ ಮೇಲೆದ್ದು ಹೋದರು. ಅಂತ್ಯದಲ್ಲಿ ದೀರ್ಘಕಾಲ ಉಪವಾಸವಿರಲಿಲ್ಲ. ಒಂದೇ ಉಪವಾಸದಲ್ಲಿ ಅವರ ಸಮಾಧಿ ಆಗಿ ಹೋಯಿತು.

## ಆತ್ಮ ಸ್ವರೂಪದ ವಿಶ್ಲೇಷಣೆ.

"ಆತ್ಮ ಬಾಲಕನಲ್ಲ, ಯುವಕನಲ್ಲ, ವೃದ್ಧನಲ್ಲ, ಸ್ತ್ರೀಪುರುಷನೂ ಅಲ್ಲ. ಹೀಗೆಲ್ಲಾ ಕರೆಯುವುದು ಶರೀರದ ಅಪೇಕ್ಷೆ ಮಾತ್ರ! ತನ್ನ ಕರ್ಮಾನುಸಾರ ಜೀವ ೮೪ ಲಕ್ಷ ಯೋನಿಗಳಲ್ಲಿ ಜನ್ಮಧಾರಣೆ ಮಾಡುತ್ತದೆ. ನಾನಾ ರೀತಿಯ ನಾಟಕವಾಡುತ್ತದೆ. ಉತ್ಪತ್ತಿ-ಸ್ಥಿತಿ ಮತ್ತು ಲಯದ ನಾಟಕದ ಸೂತ್ರಧಾರಿ ಆತ್ಮ! "

" ಆತ್ಮನ ಗುಣ ಜ್ಞಾತಾ ಮತ್ತು ದ್ರಷ್ಟಾ! ಆತ್ಮನಂತೂ ಸ್ವಯಂಭೂ ಇದ್ದಾನೆ. ಅಚ್ಯುತನಿದ್ದಾನೆ. ಸ್ವಯಂಭೂವಾದ ಆತ್ಮನಿಗೆ ಕರ್ಮದ ದೆಸೆಯಿಂದ ಸಂಸಾರ ದುಃಖ ಉಂಟಾಗಿದೆ. ಧರ್ಮದಿಂದ ಆತ್ಮನಿಗೆ ಕಲ್ಯಾಣವಾಗುತ್ತದೆ.

## ಶಿಥಿಲಾಚಾರ

ಅವರು ಆ ಕಾಲದ ತ್ಯಾಗಿಗಳ ಬಗ್ಗೆ ಕೆಲವು ವಿಚಾರ ತಿಳಿಸಿದರು.

"ದೇವಪ್ಪ ಸ್ವಾಮಿಗಳ ಕಾಲದಲ್ಲಿ ಮುನಿಪದದಲ್ಲಿ ಬಹಳ ಶಿಥಿಲಾಚಾರವಿತ್ತು. ದೇವಪ್ಪ ಸ್ವಾಮಿಗಳು ಆಹಾರಾನಂತರ ೧.೫೦ ರೂ ಕಾಣಿಕೆ ಸ್ವೀಕರಿಸುತ್ತಿದ್ದರು. ಆಚಾರ್ಯ ಶ್ರೀಯವರು ಕ್ಷುಲ್ಲಕರಾಗಿದ್ದಾಗಲೂ ಈ ಕೆಟ್ಟ ಸಂಪ್ರದಾಯ ಮುಂದುವರಿಸಲಿಲ್ಲ. ಆಗ ದೇವಪ್ಪ ಸ್ವಾಮಿಗಳು ಕ್ಷುಲ್ಲಕ ಶಿಷ್ಯ ಶಾಂತಿಸಾಗರರನ್ನು ಕರೆಸಿ ಹೇಳಿದರು."ರೂಪಾಯಿ ನೀನು ತೆಗೆದುಕೊಳ್ಳದಿದ್ದರೆ ಬೇಡ. ನೀನು ತೆಗೆದುಕೊಂಡು ನನಗೆ ಕೊಡು."ಆಗಮ ಪ್ರಾಣರಾದ ಅವರಿಗೆ ಈ ಮಾತು ಬಹಳ ಕೆಟ್ಟದ್ದಾಗಿ ಕಂಡಿತು. ಕೂಡಲೇ ಅವರು ದೇವಪ್ಪ ಸ್ವಾಮಿಗಳ ಸಂಪರ್ಕವನ್ನೇ ತೊರೆದು ಹೋದರು.

"ಆಚಾರ್ಯಶ್ರೀಯವರು ಲೋಕ ರೂಢಿಗೆ ಬೆಲೆ ಕೊಡುತ್ತಿರಲಿಲ್ಲ. ಅವರು ಮುನಿ ಜೀವನಕ್ಕೆ ಹೊಸ ಚೈತನ್ಯ ತುಂಬಿಸಿದರು. ಇದಕ್ಕೆ ಮೊದಲು

ಮುನಿಗಳು ಒಂದು ವಸ್ತ್ರ ಹೆಗಲ ಮೇಲೆ ಹಾಕಿಕೊಂಡು ಉಪಾಧ್ಯಾಯ ನಿಗದಿ ಪಡಿಸಿದ ಮನೆಯಲ್ಲಿ ಆಹಾರ ಮಾಡುತ್ತಿದ್ದರು. ಆ ಮನೆಯಲ್ಲಿ ಅವರು ಸ್ನಾನವನ್ನೂ ಮಾಡುತ್ತಿದ್ದರು. ಆಹಾರದ ವೇಳೆಯಲ್ಲಿ ವಸ್ತ್ರತ್ಯಾಗ ಮಾಡಿ ಆಹಾರ ತೆಗೆದುಕೊಳ್ಳುತ್ತಿದ್ದರು. ಆಹಾರ ಮಾಡುತ್ತಿರುವಾಗ ಗಂಟೆ ಬಾರಿಸಲ್ಪಡುತ್ತಿತ್ತು. ಕೆಟ್ಟ ಶಬ್ದ ಕಿವಿಗೆ ಬೀಳಬಾರದು ಎನ್ನುವುದೇ ಉದ್ದೇಶವಾಗಿತ್ತು. ಅನಂತ ಕೀರ್ತಿಗಳು ಹೇಳುತ್ತಿದ್ದರು. "ಆಚಾರ್ಯ ಮಹಾರಾಜರು ಮುನಿಧರ್ಮಕ್ಕೆ ಅಂಟಿದ್ದ ಶಿಥಿಲಾಚಾರದ ಮಹಾವ್ಯಾಧಿಯನ್ನು ದೂರಗೊಳಿಸಿ ಅನಂತ ಉಪಕಾರವನ್ನೇ ಮಾಡಿದರು. ಅವರ ಉಪಕಾರ ಸ್ಮರಿಸಲು ಶಬ್ದಗಳೇ ಇಲ್ಲ ಅವರ ಮಾತು ಅಕ್ಷರಶಃ ಸತ್ಯವಿತ್ತು.

ಅವರು ಮತ್ತೆ ಹೇಳಲಾರಂಭಿಸಿದರು.

"ಅವರು ಒಂದು ಮನೆಯಲ್ಲಿ ಆಹಾರದ ಚೌಕಿ ಬಿದ್ದಿದ್ದರೆ ಆಹಾರ ತೆಗೆದುಕೊಳ್ಳದೆ ವಾಪಾಸು ಬರುತ್ತಿದ್ದರು. ಏಕೆಂದರೆ ಉದ್ದಿಷ್ಟತ್ಯಾಗಕ್ಕೆ ಭಂಗ ಬರುತ್ತಿತ್ತು."

## ಪಕ್ಷಿಗಳ ನಿರ್ಭೀತಿ

ವರ್ಧಮಾನಸಾಗರರ ಹತ್ತಿರ ಅನೇಕ ಪಕ್ಷಿಗಳು ಹತ್ತಿರ ಬಂದು ನಿರ್ಭೀತವಾಗಿ ಸಂಚರಿಸುತ್ತಿದ್ದವು. ಅನೇಕ ಬಾರಿ ಶಿರದ ಮೇಲೆ ಹೆಗಲ ಮೇಲೆ ಹತ್ತಿ ಕೂತಿದ್ದನ್ನು ನಾನು ನೋಡಿದ್ದೇನೆ. ಆಶ್ಚರ್ಯದಿಂದ ನಾನು ಅವರನ್ನು ಕೇಳಿಯೂ ಬಿಟ್ಟಿದ್ದೆ. ನೀವು ಅವುಗಳನ್ನು ಭಯಪಡಿಸುತ್ತೀರಿ. ನಾವು ಹಾಗೆ ಮಾಡುವುದಿಲ್ಲ. ಆದ್ದರಿಂದ ನಮ್ಮ ಹತ್ತಿರ ಬರುತ್ತವೆ ಎಂದರು.

## ಅಂತಿಮ ದರ್ಶನ

ಪರ್ಯೂಷಣ ಪರ್ವ ಮುಗಿಯಿತು. ಕೊಲ್ಲಾಪುರದ ಲಕ್ಷ್ಮೀಸೇನ ಸ್ವಾಮಿಗಳು ಹೇಳಿ ಕಳಿಸಿದರು. ಅಲ್ಲಿಗೆ ಹೋದೆ. ಅಲ್ಲಿಂದ ಹೊರಡುವಾಗ ಅವರ ಆಶೀರ್ವಾದ ಬೇಡಿದೆ. ಪುರುಷಾರ್ಥ ಮಾಡುತ್ತಿರು. ನಮ್ಮ ಆಶೀರ್ವಾದವೇನೋ ಸದಾ ಇರುತ್ತದೆ ಎಂದು ಹೇಳುತ್ತಾ ಆಶೀರ್ವಾದ ಕೊಟ್ಟರು. ಇದೇ ಅವರ ಕೊನೆಯ ಆಶೀರ್ವಾದ ಮತ್ತು ದರ್ಶನ. ಅವರ ಶರೀರ ಸ್ಥಿತಿ ಬಗ್ಗೆ ಪತ್ರದ ಮೂಲಕ ಸಮಾಚಾರವೇನೋ ಸಿಗುತ್ತಿತ್ತು. ೧೯೫೯ರ ಫೆ.೨೬ ಸಾಯಂಕಾಲ ಇದ್ದಕ್ಕಿದಂತೆಯೇ ಅವರ ಪ್ರಕೃತಿ ಬಿಗಡಾಯಿಸಿತು. ಇದಕ್ಕೆ ಮುನ್ನ ಅವರು ಅನೇಕರೊಡನೆ ಧರ್ಮ ಚರ್ಚೆ ಮಾಡಿದ್ದರು. ನಂತರ ಸಂಜೆಗೆ ಸ್ವಲ್ಪ ಮುನ್ನ ಜ್ವರ ಕಾಣಿಸಿತು. ಭೇದಿಯಾಗತೊಡಗಿ ನಿಶ್ಯಕ್ತರಾಗಿಬಿಟ್ಟರು. ರಾತ್ರಿ ಎಲ್ಲಾ



ಶರೀರ ನಿಶ್ಯಕ್ತವಾಗುತ್ತಲೇ ಹೋಯಿತು. ಬೆಳಗ್ಗೆ ಸಾಮಾಯಿಕಕ್ಕೆ ಕೂಡಲಾರದಷ್ಟು ಶರೀರ ಶಕ್ತಿಹೀನವಾಗಿತ್ತು. ಅಂದೇ ಣಮೋಕಾರ ಮಂತ್ರ ಕೇಳುತ್ತಾ ಕೇಳುತ್ತಾ ಅತ್ಯಂತ ಸಾವಧಾನದಿಂದ ಸ್ವರ್ಗಸ್ಥರಾದರು. ಅವರಿಗೆ ಆಗ ೯೭ ವರ್ಷ ವಯಸ್ಸಾಗಿತ್ತು. ಈಗ ಆ ಇಬ್ಬರೂ ಮುನಿ ಬಂಧುಗಳು ದೇವಲೋಕದಲ್ಲಿ ಅವಶ್ಯ ಭೇಟಿಯಾಗಿ ವಾರ್ತಾಲಾಪದಲ್ಲಿ ತೊಡಗಿರಬಹುದು.

# ಆಚಾರ್ಯ ವೀರಸಾಗರರು ೧೫

೧೯೫೭ ಏಪ್ರಿಲ್ ೭ ರಂದು ಜಯಪುರದಲ್ಲಿ ೮೭ ವರ್ಷ ವಯಸ್ಸಿನ ಸ್ವರ್ಗೀಯ ಆಚಾರ್ಯ ಶಾಂತಿಸಾಗರರ ಉತ್ತರಾಧಿಕಾರಿ ಆಚಾರ್ಯ ವೀರಸಾಗರ ಮಹರಾಜರ ದರ್ಶನ ಭಾಗ್ಯ ಪ್ರಾಪ್ತವಾಯಿತು. ಅವರು ವಯೋವೃದ್ಧರಾಗಿದ್ದರು. ಶರೀರ ಒಣಗಿದ ಕಟ್ಟಿಗೆಯಂತೆ ಶುಷ್ಕವಾಗಿತ್ತು. ಅವರ ತಪೋದೀಪ್ತಿ ಮುಖಮಂಡಲದಲ್ಲಿ ಚಿಮ್ಮುತ್ತಿತ್ತು.

ನಾನು ಅವರಿಗೆ ವಂದಿಸಿ ಕುಳಿತೆ. ಆಚಾರ್ಯ ಮಹರಾಜರ ಬಗ್ಗೆ ಕೆಲವು ಮಾಹಿತಿ ಸಂಗ್ರಹಿಸಲು ಅವರಲ್ಲಿ ಪ್ರಶ್ನೆ ಹಾಕತೊಡಗಿದೆ. ಅವರಿಂದ ಅಪೂರ್ವ ಸಾಮಾಗ್ರಿಗಳು ದೊರೆತವು. ಅವರಿಗೆ ಆಚಾರ್ಯ ಶಾಂತಿಸಾಗರರಲ್ಲಿ ವಿಶೇಷ ಭಕ್ತಿ ಇತ್ತು. ಅವರು ಆಚಾರ್ಯ ಶಾಂತಿಸಾಗರರ ಬಗ್ಗೆ ಮುಕ್ತ ಹೃದಯದಿಂದ ಹೇಳಲಾರಂಭಿಸಿದರು.

"ಆಚಾರ್ಯ ಮಹರಾಜರು ನಮಗೆಲ್ಲಾ ಬಹಳ ಉಪಕಾರ ಮಾಡಿದ್ದಾರೆ. ಈ ಯುಗದಲ್ಲಿ ಮುನಿಧರ್ಮದ ಯಥಾರ್ಥ ಆಚರಣೆಯನ್ನು ಅವರು ತಮ್ಮ ಜೀವನದಲ್ಲಿ ಅನುಷ್ಠಾನಗೊಳಿಸಿ ತೋರಿಸಿದರು. ಅವರಿಗೆ ಮೊದಲು ಉತ್ತರದಲ್ಲಿ ಯಾರೂ ಮುನಿಗಳಿರಲಿಲ್ಲ. ದಕ್ಷಿಣದಲ್ಲಿ ಅಲ್ಲೊಬ್ಬರು ಇಲ್ಲೊಬ್ಬರು ಇದ್ದರು. ಆದರೂ ಅವರ ಚರ್ಯೆ ಅತಿ ವಿಚಿತ್ರವಾಗಿತ್ತು. ಅವರು ದಿಗಂಬರ ಮುನಿಗಳೆಂದು ಕರೆಸಿಕೊಳ್ಳುತ್ತಿದ್ದರೂ ಮೇಲೊಂದು ವಸ್ತ್ರ ಹೊದೆದುಕೊಳ್ಳುತ್ತಿದ್ದರು. ಉಪಾಧ್ಯಾಯ ನಿರ್ಧರಿಸಿದ ಗೃಹದಲ್ಲಿ ಅವರ ಆಹಾರವಾಗುತ್ತಿತ್ತು. ಆಗ ಜನಗಳಿಗೆ ಮುನಿಗಳನ್ನು ತಡೆಯುವ ವಿಧಿಯೂ ತಿಳಿದಿರಲಿಲ್ಲ.

"ಇದು ನಿರ್ಗ್ರಂಥ ಚರ್ಯೆ ಅಲ್ಲವೆಂದು ಆಚಾರ್ಯ ಮಹರಾಜರು ಯೋಚಿಸಿದರು. ಉಪಾಧ್ಯಾಯನಿಂದ ಪೂರ್ವ ನಿಶ್ಚಿತಗೊಳಿಸಿದ ಮನೆಗೆ ಆಹಾರಕ್ಕೆ ಹೋಗುವುದನ್ನು ಕೂಡಲೆ ನಿಲ್ಲಿಸಿದರು. ದಿಗಂಬರ ಮುದ್ರೆ ಧಾರಣೆ ಮಾಡಿಕೊಂಡೇ ಆಹಾರಕ್ಕೆ ವಿಹರಿಸಲು ಪ್ರಾರಂಭಿಸಿದರು. ಜನಗಳಿಗೆ ವಿಧಿ ತಿಳಿದಿರಲಿಲ್ಲ. ಆದ್ದರಿಂದ ಅನೇಕ ಉಪವಾಸಗಳಾಗತೊಡಗಿದವು. ಶಾಂತಚಿತ್ತದಿಂದ ಉಪವಾಸ ಸ್ವೀಕರಿಸಿ ಧ್ಯಾನ ಮಾಡುತ್ತಿದ್ದರು. ಎರಡನೆಯ ದಿನವೂ ಹಾಗೆಯೇ ಆಯಿತು. ಧರ್ಮಾತ್ಮ ಗೃಹಸ್ಥರಲ್ಲಿ ಚಿಂತೆ ಮೂಡತೊಡಗಿತು. ಅವರ ಉಪವಾಸದ ಕಾರಣವೇನೆಂದು ಯಾರಿಗೂ



ತಿಳಿಯಲಿಲ್ಲ. ಏಕೆಂದರೆ ಅವರು ಯಾರೊಡನೆಯೂ ಮಾತಾಡುತ್ತಿರಲಿಲ್ಲ. ಅವರ ಚರ್ಯೆ ಎಷ್ಟು ಹೃದಯ ಸ್ಪರ್ಶಿಯಾಗಿತ್ತೆಂದರೆ, ಆದಿನಾಥ ಭಗವಾನರ ವೀರಚರ್ಯೆಯನ್ನು ನೆನಪಿಗೆ ತರುತ್ತಿತ್ತು. ಹೀಗೆ ನಾಲ್ಕಾರು ಉಪವಾಸಗಳಾಗತೊಡಗಿದವು. ಜನಗಳಿಗೆ ಬಹಳ ಆತಂಕ ಮೂಡತೊಡಗಿತು. ಆಗ ಗ್ರಾಮದ ಪಟೇಲ ಉಪಾಧ್ಯಾಯನನ್ನು ಬರಹೇಳಿ ಬಹಳ ಜೋರಾಗಿ ಗದ್ದರಿಸಿ ಕೇಳಿದ.

"ಸಾಧೂಲ್ ಮಾರ್ತೇಸ್ ಕಾಯ್ ವಿಧಿ ಸಾಂಗಾ"–ಸಾಧುವನ್ನು ಕೊಲ್ಲಿಯೇನು. ವಿಧಿ ತಿಳಿಸು. ಆಗ ಉಪಾಧ್ಯಾಯ ನಿರುಪಾಯನಾಗಿ ಎಲ್ಲಾ ವಿಧಿ ತಿಳಿಸಿದ"

ಈ ಮಾತುಗಳನ್ನು ಹೇಳುತ್ತಾ ಹೇಳುತ್ತಾ ಅವರ ಕಣ್ಣುಗಳಲ್ಲಿ ನೀರಹನಿ ಕಾಣಿಸಿದ್ದವು. "ಅವರೇ ನಿಜವಾದ ಗುರುಗಳು ಮುನಿಯಾಗಿ ನಮಗೆ ಮಾರ್ಗದರ್ಶನ ಮಾಡಿದ ಪರಮಗುರು ಅವರು!" ಎಂದು ನೀರಹನಿ ಒರೆಸುಕೊಳ್ಳುತ್ತಾ ಅಶ್ರುತರ್ಪಣ ಕೊಟ್ಟರು.

"ಆಚಾರ್ಯ ಶಾಂತಿಸಾಗರರು ಕೊಣ್ಣೂರು ಗುಹೆಯಲ್ಲಿ ತಪಸ್ಸು ಮಾಡುತ್ತಿದ್ದರು. ಅಲ್ಲಿಯ ಪಾಟೀಲ ಅವರ ಆಹಾರ ಮಾಡಲು ನಿರಂತರ ಪ್ರಯತ್ನ ಮಾಡುತ್ತಿದ್ದ. ಆದರೂ ಸಫಲವಾಗಿರಲಿಲ್ಲ. ತನ್ನ ಮನೋವ್ಯಥೆಯನ್ನು ಚಂದ್ರಸಾಗರರಲ್ಲಿ ತಿಳಿಸಿದ. ಆಗ ಅವರು ಆಚಾರ್ಯಶ್ರೀಯವರ ಬಳಿ ಬಂದು ಆ ಪಾಟೀಲ ಯೋಗ್ಯ ವಿಧಿಯಿಂದ ಸಿದ್ಧನಾಗಿದ್ದರೂ ಅವನ ಬಳಿ ನಿಮ್ಮ ಆಹಾರವೇಕೆ ಆಗುತ್ತಿಲ್ಲ ಎಂದು ಕೇಳಿದರು. ಅವನ ಚೌಕಿಗೆ ಬರುವ ಮುನ್ನವೇ ವಿಧಿ ಸಿಕ್ಕರೆ ಮುಂದೆ ಹೋಗುವುದ ಹೇಗೆ ಎಂದರು. ನಂತರ ಈ ಬಗ್ಗೆಯೇ ಯೋಚಿಸುತ್ತಾ ವೃತ್ತಿಪರಿಸಂಖ್ಯಾನ ತಪಸ್ಸಿನ ಉಪಯೋಗವನ್ನು ಸ್ಮರಿಸಿದರು. ಆಗ ಅನೇಕರಿಗೆ ಇದರಿಂದ ಲಾಭವಾಗತೊಡಗಿತು"

## ಗಂಭೀರ ಪ್ರವೃತ್ತಿ

"ಮಹಾರಾಜರು ಹಾಲು ಮತ್ತು ಅನ್ನವನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರೂ ಅತ್ಯಂತ ಬಲಿಷ್ಠ ಶರೀರವಾದ್ದರಿಂದ ಅಲ್ಪ ಆಹಾರ ಅಲ್ಪ ಕಾಲದಲ್ಲೇ ಪಚನವಾಗಿ ಬಿಡುತ್ತಿತ್ತು. ಆದರೂ ಗೃಹಸ್ಥರು ಅನ್ನ ಹಾಲನ್ನು ಮಾತ್ರ ಕೊಡುತ್ತಾರೆ. ಎಂತಹ ವಿಚಾರಗೇಡಿಗಳೆಂದು ಭಾವಿಸಲೂ ಇಲ್ಲ, ಯಾರೊಡನೆ ಹಾಗೆ ಹೇಳಲೂ ಇಲ್ಲ.

ಒಂದು ದಿನ ಚಂದ್ರಸಾಗರರು ಮಹರಾಜ್! ನೀವು ಕೇವಲ ಹಾಲು ಮತ್ತು ಅನ್ನವನ್ನಷ್ಟೇ ಏಕೆ ತೆಗೆದುಕೊಳ್ಳುತ್ತಿದ್ದೀರಿ? ಎಂದು ಪ್ರಶ್ನಿಸಿದರು. ಗೃಹಸ್ಥರು,

ಅವನ್ನಷ್ಟೇ ಕೊಡುತ್ತಾರೆ. ನಾವು ತೆಗೆದುಕೊಳ್ಳುತ್ತೇವೆ. ಅವರು ಕೊಡುವುದನ್ನೇ ನಾವು ತೆಗೆದುಕೊಳ್ಳುತ್ತಿದ್ದೇವೆ ಅಷ್ಟೇ ಅಂದರು. ಇದನ್ನು ತಿಳಿದ ಶ್ರಾವಕರು ಬೇರೆ ಭೋಜ್ಯವಸ್ತುಗಳನ್ನು ತಯಾರಿಸಿಟ್ಟುಕೊಂಡರು"

ಅವರಲ್ಲಿ ಏನೋ ಒಂದು ಚುಂಬಕಶಕ್ತಿಇತ್ತು. ಪಂಡಿತ ದನ್ನಾಲಾಲ್ ಶಾಸ್ತ್ರಿವಾಲ ಮಹರಾಜರ ಬಳಿ ಬಂದು ಬ್ರಹ್ಮಚರ್ಯೆ ಪ್ರತಿಮೆ ಕೊಡಲು ಪ್ರಾರ್ಥಿಸಿದರು. ಆಗ ಅವರು ಮುಹೂರ್ತ ನೋಡಿ ಕೊಡುತ್ತೇನೆ ಎಂದರು. ನಾನೀಗ ನಿಮ್ಮ ಚರಣಗಳನ್ನು ಭಕ್ತಿಯಿಂದ ಹಿಡಿದುಕೊಂಡಿದ್ದೇನೆ. ಇದಕ್ಕಿಂತ ಒಳ್ಳೆಯ ಮುಹೂರ್ತ ಯಾವುದಿದೆ ಎಂದು ದನ್ನಾಲಾಲ್ ಕೇಳಿದರು. ಅವರ ತೀವ್ರ ಆಕಾಂಕ್ಷೆ ಅರಿತು ಆಗಲೇ ಕೊಟ್ಟುಬಿಟ್ಟರು. ಎರಡು ತಿಂಗಳ ನಂತರ ಅವರ ಮರಣವಾಯಿತು. ವ್ರತಯುಕ್ತವಾಗಿ ಅವರು ಸಾವನ್ನಪ್ಪಿದ್ದರು. ಒಳ್ಳೆಯದೇ ಆಯಿತು. ಹೀಗೆ ಶಾಂತಿಸಾಗರ ಮಹರಾಜರು ಅನೇಕರಿಗೆ ಕಲ್ಯಾಣ ಮಾಡಿದ್ದಾರೆ.

ನಾನು ಕೇಳಿದೆ–"ಮಹರಾಜ್! ಮುನಿಜೀವನದಲ್ಲಿ ಏನು ಕಷ್ಟವಿದೆ? ಆಚಾರ್ಯ ಶ್ರೀಯವರು ನಿಮಗೆ ಮುನಿದೀಕ್ಷೆ ಕೊಟ್ಟು ಕಷ್ಟಕೊಟ್ಟರೋ, ಆನಂದ ಕೊಟ್ಟರೋ?"

ಅವರು–"ನಮಗೆ ಕಷ್ಟವೆಂದರೆ ಎಂತಹ ಮಾತು. ನಾವು ನಿಮ್ಮ ತಾಪತ್ರಯವನ್ನು ನೋಡುತ್ತಿದ್ದೇವೆ. ಅದರಿಂದ ಬಿಡುಗಡೆ ಹೊಂದಲು ಯತ್ನಿಸುತ್ತಿದ್ದೇವೆ. ನೀವು ಪರಿಗ್ರಹ ಮತ್ತು ಆಕುಲತೆಯ ಜಾಲದಲ್ಲಿ ಮುಳುಗಿದ್ದೀರಿ. ನಿಮಗೆ ಒಂದು ಕ್ಷಣವೂ ಶಾಂತಿ ಇಲ್ಲ."

ನೋಡಿ ಸಾಧುಗಳಿಗೆ ಪರೀಷಹಗಳು ಆಗುತ್ತವೆ. ಗೃಹಸ್ಥರಿಗೂ ಪರೀಷಹಗಳಾಗುತ್ತವೆ. ಗೃಹಸ್ಥರು ಪರೀಷಹಗಳನ್ನು ಸಹಿಸುವಷ್ಟು ಮುನಿಗಳು ಸಹಿಸಿ ಸ್ವರೂಪದಲ್ಲಿ ತಾತ್ಕಾಲ ಲೀನಾವಾದರೆ ಮುಕ್ತಿ ಪ್ರಾಪ್ತಿಯಾಗಲು ಹೆಚ್ಚುಕಾಲ ಹಿಡಿಯದು.

## ಜಗತ್ತಿಗೇ ಗುರು.

ಅವರು ಮತ್ತೆ ಹೇಳಲಾರಂಭಿಸಿದರು.

"ಅವರ ವಾಣಿಯಲ್ಲಿ ಅದೆಷ್ಟು ಸಿಹಿ, ಅದೆಷ್ಟು ಮಾಧುರ್ಯ, ಅದೆಷ್ಟು ಗಾಂಭೀರ್ಯ ತುಂಬಿತ್ತೆಂದರೆ ಅದನ್ನು ವರ್ಣನೆ ಮಾಡಲು ನಮ್ಮಲ್ಲಿ ಶಬ್ದಗಳೇ ಇಲ್ಲ."



"ಮಹರಾಜರು ಅಲಂದಾದಲ್ಲಿದ್ದಾಗ ಮುಸ್ಲಿಮ್ ನ್ಯಾಯಾಧೀಶ ಅವರ ಉಪದೇಶ ಕೇಳಿ ಅದೆಷ್ಟು ಪ್ರಭಾವಿತನಾದನೆಂದರೆ "ಅರೇ!ಮಹರಾಜರು ಜೈನರಿಗೆ ಮಾತ್ರ ಗುರುವಲ್ಲ. ನಮಗೂ ಕೂಡ. ಅವರು ಜಗತ್ತಿಗೇ ಗುರು"ಎಂದು ಉದ್ಗಾರ ತೆಗೆದ."

"ನಾವು ಶಿಖರಿಜಿಗೆ ಹೋಗುತ್ತಿದ್ದೆವು. ರಸ್ತೆಯಲ್ಲಿ ೧೦೦–೧೫೦ ಎತ್ತುಗಳ ಗುಂಪು ಸಿಕ್ಕಿತು. ಅದರಲ್ಲಿಂದ ನಾಲ್ಕು ದಷ್ಟಪುಷ್ಟ ಹೋರಿಗಳು ಓಡಿಹೋಗಿ ಮಹರಾಜರನ್ನು ಮೂಸಿ ನೋಡಿ ಅವರತ್ತ ಮುಖ ಮಾಡಿ ಪ್ರಣಾಮ ಮಾಡುವಂತೆ ವರ್ತಿಸಿದವು. ಅವರು ಅವುಗಳಿಗೆ ಆಶೀರ್ವಾದ ಕೊಟ್ಟರು. ನೋಡುವವರಿಗೆ ಕಣ್ಣೀರು ಬರುವಂತಾಯಿತು. ಈ ಪ್ರಾಣಿಗಳಿಗೂ ಪೂಜ್ಯರಿಗೆ ನಮಸ್ಕರಿಸುವ ಭಾವ ಹುಟ್ಟುತ್ತಿದೆಯಲ್ಲ. ಮನುಷ್ಯರಿಗೇನು ಬಂತು ಕೇಡು ಎಂದು ಜನ ಮಾತಾಡತೊಡಗಿದರು. ಆಗ ಅವರು ಪೂರ್ಣ ಶಾಂತರಾಗಿದ್ದರು."

## ಶಿಷ್ಯನಾಗು

"ಯಾರು ತನ್ನನ್ನು ಗುರು ಎಂದು ತಿಳಿದುಕೊಳ್ಳುವನೋ ಅಂತವನ ಉದ್ಧಾರ ಆಗುವುದಿಲ್ಲ. ಶಿಷ್ಯನಾಗುವುದರಿಂದಲೇ ತನ್ನ ಹಿತ ಆದೀತು."ಶಿಷ್ಯನಾದಾಗಲೇ ತನ್ನ ದೋಷಗಳು ಗೊತ್ತಾಗುತ್ತವೆ. ಗುರುವಾದರೆ ಅದು ಹೇಗೆ ತಿಳಿದೀತು"

ಪ್ರಶ್ನೆ : ಆಚಾರ್ಯ ಶಾಂತಿಸಾಗರರಲ್ಲಿ ಹಾಗಾದರೆ ಗುರುತ್ವವಿತ್ತೋ, ಶಿಷ್ಯತ್ವವಿತ್ತೋ?

"ಉತ್ತರ : "ನಮ್ಮ ದೃಷ್ಟಿಯಲ್ಲಿ ಅವರು ಗುರುವಾಗಿದ್ದರು. ಆದರೆ ಅವರು ತಮ್ಮನ್ನು ತಾವು ಎಂದೂ ಗುರುವೆಂದುಕೊಂಡಿರಲಿಲ್ಲ. ಆ ಭಾವ ಬಂದ ಕೂಡಲೇ ಕಲ್ಯಾಣ ದೂರವಾಗುತ್ತದೆ. ಅಲ್ಲಿ ಮಾನ ಕಷಾಯವಿರುತ್ತದೆ. ಅದು ಅವನತಿಯ ಮೂಲ."

## ರೋಗಿಯ ಬಗ್ಗೆ

ಪ್ರಶ್ನೆ : "ಮಹರಾಜ್! ನಿಮ್ಮ ಸ್ವಾಸ್ಥ್ಯ ಕೆಟ್ಟುಹೋಗುತ್ತದೆ. ಆದ್ದರಿಂದ ಚಿಂತೆ ಆಗುತ್ತಿದೆ"

ಉತ್ತರ : "ತ್ಯಾಗಿಗೆ ರೋಗ ವೈರಾಗ್ಯಕ್ಕಾಗಿ ಬರುತ್ತದೆ. ಭೋಗಿಗೆ ರೋಗ ಅಳುವುದಕ್ಕಾಗಿ ಬರುತ್ತದೆ. ಇಷ್ಟು ಹೇಳಿ ಮೌನವಾದರು. ಹೆಚ್ಚಿನ ವಿವರಣೆ ಏಕೆ ಬೇಕು?"

ಪ್ರಶ್ನೆ : ಆಚಾರ್ಯ ಶ್ರೀಯವರು ಎಂದಾದರೂ ಸ್ವಪ್ನದಲ್ಲಿ ಕಾಣಿಸಿಕೊಂಡಿದ್ದಾರೇನು?

ಉತ್ತರ : "ಅನೇಕ ಬಾರಿ ಕಾಣಿಸಿಕೊಂಡಿದ್ದಾರೆ. ಅವರೊಡನೆ ಚರ್ಚೆಯನ್ನೂ ಮಾಡಿದ್ದೇವೆ."

## ಹಿತಶತ್ರು

"ಮಹರಾಜ್! ನಾನು ನಿಮ್ಮ ಶಿರಕ್ಕೆ ಸ್ವಲ್ಪ ತೈಲ ಮರ್ಧನ ಮಾಡುತ್ತೇನೆ" ಆಗ ಅವರೆಂದರು-

"ನಮಗೆ ನಮ್ಮ ಶರೀರ ಸ್ಥಿತಿ ತಿಳಿದಿದೆ. ಇದು ನಮ್ಮ ಹಿತೈಷಿ ಎಂದು ತಿಳಿದು ನೀವು ಈ ಮಾತು ಹೇಳುತ್ತಿದ್ದೀರಿ. ನಾವು ಇದನ್ನು ನಮ್ಮ ಹಿತ ಶತ್ರುವೆಂದು ತಿಳಿದಿದ್ದೇವೆ" ಈ ಮಾತು ನನಗೆ ಬಹಳ ಆಶ್ಚರ್ಯವನ್ನುಂಟುಮಾಡಿತು. ಕೂಡಲೇ ಮತ್ತೆ ಕೇಳಿದೆ.

"ಇದನ್ನು ನೀವು ಹೇಗೆ ಹೇಳುತ್ತೀರಿ?"

ಉತ್ತರ: ಶರೀರದ ಹಿತರಕ್ಷಣೆಯಿಂದ ಆತ್ಮನ ಘಾತವಾಗುತ್ತದೆ. ಆತ್ಮನ ಹಿತವೇ ನಮ್ಮ ಲಕ್ಷ್ಯ.

ನಾನು: "ಮಹರಾಜ್! ನಮ್ಮ ತಂದೆ ಬಹಳ ವೃದ್ಧರಾಗಿದ್ದಾರೆ. ಶರೀರ ಶಿಥಿಲವಾಗಿದೆ. ಜಿನಮಂದಿರಕ್ಕೆ ಹೋಗಲೂ ಶಕ್ತಿ ಇಲ್ಲ. ಅವರ ದರ್ಶನಾರ್ಥ ಜಿನ ಬಿಂಬವನ್ನು ಮನೆಯಲ್ಲಿ ವಿರಾಜಮಾನ ಮಾಡಬಹುದೇ?

ಉತ್ತರ: "ಅವಶ್ಯ ಮಾಡಿರಿ. ಯಾರ ಮನೆಯಲ್ಲಿ ಜಿನಮೂರ್ತಿಗಳಿಲ್ಲವೋ ಅವರ ಮನೆ ಸ್ಮಶಾನವಿದ್ದಂತೆ."

ಪ್ರಶ್ನೆ : ಮಹರಾಜ್! ಣಮೋಕಾರ ಮಂತ್ರ ಅನಾದಿ ಮಂತ್ರವೇ?

ಉತ್ತರ : ಣಮೋಕಾರ ಮಂತ್ರ ಅನಾದಿ ಂತ್ರ ಅನಾದಿ ಮೂಲಮಂತ್ರವಿದೆ. ಸಾಧುಗಳ ಪ್ರತಿಕ್ರಮಣಕಾಲದಲ್ಲಿ ಆ ಮಂತ್ರದ ನಿರಂತರ ಉಪಯೋಗವಾಗುತ್ತದೆ. ಸಾಮಾಯಿಕ ಪ್ರಕೀರ್ಣಕದ ಮಂಗಲಾಚರಣವೇ ಈ



ಮಂತ್ರ, ಸಾಮಾಯಿಕ ದಂಡಕದ ಪ್ರಾರಂಭದಲ್ಲೂ ಈ ಮಂತ್ರವಿದೆ. ಆದ್ದರಿಂದ ಸಾಧುಗಳ ಸರ್ವಾವಶ್ಯಕ ಕ್ರಿಯೆಯ ಮೊದಲು ಇದನ್ನು ಪಠಿಸಬೇಕಾಗುತ್ತದೆ. ಮುಕ್ತಿಮಾರ್ಗ ಅನಾದಿಕಾಲದಿಂದಲೂ ವರ್ತಿಸುತ್ತಿದೆ. ಅದೇ ರೀತಿ ಈ ಮಂತ್ರವೂ ಕೂಡಾ"

ಪ್ರಶ್ನೆ: "ಮಹರಾಜ್! ಈಗ ಸಮ್ಯಕ್ತ್ವದ ಪೇಟೆ ಬಹಳ ಬಿಸಿ ಬಿಸಿಯಾಗಿದೆ. ಎಲ್ಲೆಡೆ ಅದರ ಹೆಸರು ಕೇಳಿ ಬರುತ್ತಿದೆ. ಅದರ ಅರ್ಥವೇನು?"

ಉತ್ತರ: "ಸಮ್ಯಕ್ತ್ವ ಸದರದ ವಸ್ತುವಲ್ಲ. ಅದು ಮಹಾನ್ ಅಪರೂಪದ ಪ್ರಾಪ್ತಿ."

## ಸಾಧು ಬಹಿಷ್ಕಾರ

ಪ್ರಶ್ನೆ: ಸಾಧುಗಳ ದೋಷ ತಿದ್ದುವುದು ಸಮಾಜದ ಕರ್ತವ್ಯವೆಂದು ಅನೇಕರು ಹೇಳುತ್ತಾರೆ. ಇದರ ಬಗ್ಗೆ ನೀವೇನು ಹೇಳುವಿರಿ?

ಉತ್ತರ: ಮುನಿಗಳಿಗೆ ಯಾರು ಬಹಿಷ್ಕಾರ ಹಾಕಬಲ್ಲರು? ಆಗ ನಾನು ನಮಗೂ ನಿಮಗೂ ಅಧಿಕಾರವಿಲ್ಲ. ಶಾಂತಿಸಾಗರರಿಗೆ ಇದೆ ಎಂದೆ.

"ಈಗ ಜನ ಬಹಳ ಅತಿರೇಕಿಗಳಂತೆ ವರ್ತಿಸುತ್ತಾರೆ. ಯಾರೂ ಯಾರನ್ನು ಕೇಳುವುದಿಲ್ಲ"ಎಂದರು

ಪ್ರಶ್ನೆ: ಅಂತಹ ಸ್ಥಿತಿಯಲ್ಲಿ ಸತ್ಪುರುಷರ ಕರ್ತವ್ಯವೇನು?

ಉತ್ತರ: "ಆಗ ಜನಗಳ ಮಾತನ್ನು ಬಾಹ್ಯದಲ್ಲಿ ಕೇಳಿದಂತೆ ಮಾಡಿ ಅಂತರಂಗದ ಆಜ್ಞೆಯಂತೆ ನಡೆಯಬೇಕು."

ಆಗ ಅವರು ಒಂದು ಘಟನೆ ತಿಳಿಸಿದರು.

"ಒಬ್ಬ ದೊಡ್ಡ ಜೈನ ವಿದ್ವಾಂಸ ಮುನಿಧರ್ಮಕ್ಕೆ ವಿರುದ್ಧವಾಗಿದ್ದ. ಅವನು ಆಚಾರ್ಯ ಶ್ರೀಯವರ ಹತ್ತಿರ ಬಂದು ಮುನಿಪದದ ಬಗ್ಗೆ ಲಘುವಾಗಿ ಮಾತಾಡತೊಡಗಿದ. ಆಗ ಅವನು ಹೇಳುವುದನ್ನು ಸಾವಧಾನವಾಗಿ ಕೇಳಿದ ಅವರು ಈ ರೀತಿ ಅಂದರು. "ಪಂಡಿತರೇ! ನೀವು ಒಂದು ವರ್ಷದವರೆಗೆ ಮುನಿಧರ್ಮ ಪಾಲನೆ ಮಾಡಿರಿ. ಅದರ ಅನುಭವದ ಮೇಲೆ ನೀವು ಹೇಗೆ ಹೇಳುತ್ತೀರೋ ಆ ರೀತಿ ನಡೆಯಲು ನಾವು ಸಿದ್ಧ" ಆ ಮಾತು ಕೇಳಿ ಆ ಪಂಡಿತನ ಬಾಯಿಂದ ಮಾತೇ ಹೊರಡಲಿಲ್ಲ.

## ಅಲೌಕಿಕ ಪ್ರಭಾವ

"ಅವರ ಪ್ರಭಾವ ಅಲೌಕಿಕವಾಗಿತ್ತು. ನಾನು ಮತ್ತು ಕುಶಾಲ್‌ಚಂದ್ ಪಹಾಡೆ(ಚಂದ್ರಸಾಗರ)ಇಬ್ಬರೂ ಅವರನ್ನು ಕೋಣ್ಣೂರು ಗುಹೆಯಲ್ಲಿ ದರ್ಶನ ಮಾಡಿದೆವು. ಅವರನ್ನು ನೋಡುತ್ತಿದ್ದಂತೆಯೇ ನಮ್ಮ ಮೇಲೆ ಬಿದ್ದ ಪ್ರಭಾವ ಎಷ್ಟೆಂದು ವರ್ಣಿಸಲು ಸಾಧ್ಯವಿಲ್ಲ. ಇಂತಹ ಗುರುವನ್ನು ಬಿಟ್ಟು ನಾವಿನ್ನು ಹೋಗಬಾರದು ಎಂದು ಅನ್ನಿಸಿತು. ಅವರ ದರ್ಶನ ಮಾತ್ರದಿಂದಲೇ ನಮ್ಮಲ್ಲಿ ಸಂಯಮ ಭಾವ ಅಂಕುರಿಸಿತು. ಅವರೇನೂ ನಮಗೆ ಹೇಳಲಿಲ್ಲ. ಆದರೆ ಅವರ ವಿರುದ್ಧ ಜೀವನವೇ ನಮಗೆ ಸಂಯಮಕ್ಕೆ ಪ್ರೇರಕವಾಯಿತು. ಆಗ ನಮ್ಮ ಹೆಸರು ಹೀರಾಲಾಲ್ ಎಂದಿತ್ತು."

"ಒಬ್ಬ ಮಹಾ ಗಯ್ಯಾಳಿ ಹೆಂಗಿಸಿದ್ದಳು. ಅವಳ ಬಾಯಿಗೆ ಎಂತೆಂತಹ ಎದೆಗಾರ ಗಂಡಸೂ ಹಾರಿ ಹೋಗುತ್ತಿದ್ದರು. ಅವಳ ಗಂಡ ಅವಳೆದುರು ಇಲಿಯ ಮರಿಯಂತಾಗಿದ್ದ. ಅಂತಹ ಆ ಹೆಂಗಸು ಆಚಾರ್ಯ ಮಹರಾಜರನ್ನು ದರ್ಶನ ಮಾಡಿದ ಕೂಡಲೇ ಶಾಂತವಾಗಿ ಬಿಟ್ಟಳು. ಅವಳಲ್ಲಿ ಅದೆಷ್ಟು ಪರಿವರ್ತನವಾಯಿತೆಂದರೆ ಅವಳು ಕ್ಷುಲ್ಲಕ ದೀಕ್ಷೆ ತೆಗೆದುಕೊಂಡು ಬಿಟ್ಟಳು."

ಪ್ರಶ್ನೆ: "ಮಹರಾಜ್! ಜನಗಳಿಗೆ ಜಿನಧರ್ಮದ ಬಗ್ಗೆ ಆಸಕ್ತಿಯೇ ಹುಟ್ಟುವುದಿಲ್ಲ. ಇದಕ್ಕೆ ಕಾರಣವೇನು?

ಉತ್ತರ: "ನಿರ್ಮಲ ಪರಿಣಾಮವಿಲ್ಲದೆ ವೀತರಾಗ ಧರ್ಮದಲ್ಲಿ ಶ್ರದ್ಧೆ ಹುಟ್ಟುವುದಿಲ್ಲ."

ಪ್ರಶ್ನೆ: ಜೈನಧರ್ಮ ಸರ್ವಧರ್ಮವಾಗಿದೆ. ವಿಶ್ವಧರ್ಮವೆಂದೂ ಹೇಳುತ್ತಾರೆ. ಅದನ್ನು ಆಚರಿಸುವ ಅಧಿಕಾರ ಎಲ್ಲರಗೂ ಇರಬೇಕು. ಸಾರ್ವಧರ್ಮ ಎಂದು ಕರಯುವ ಜೈನರು ಶೂದ್ರರನ್ನು ಮಂದಿರದೊಳಕ್ಕೆ ಏಕೆ ಬಿಡುವುದಿಲ್ಲ?

ಉತ್ತರ: "ಯಾರೂ ತಡೆಯುವುದಿಲ್ಲ. ಜೈನರಾಗಲು ಯಾರಗೂ ಅಡ್ಡಿ ಇಲ್ಲ. ಒಂದು ಮಾತು ನೆನಪಿಟ್ಟುಕೊಳ್ಳಿ. ಜೈನ ಮಂದಿರ ಜೈನ ಧರ್ಮದ ರಕ್ಷಾಸ್ಥಾನ. ಜೈನ ಧರ್ಮವನ್ನು ಒಪ್ಪಿ ಆಚರಿಸುವವರೆಲ್ಲಾ ಅಲ್ಲಿಗೆ ಹೋಗಬಹುದು. ಉಳಿದವರಿಗೆ ಅಲ್ಲೇನು ಕೆಲಸ?"

ಪ್ರಶ್ನೆ: ಶೂದ್ರರಿಗೆ ಎಷ್ಟು ಅಧಿಕಾರವಿದೆ?

ಶೂದ್ರರ ಮಾತು ಬೇರೆ. ಪಶು ಪರ್ಯಾಯದ ಕಪ್ಪೆಗೂ ಜೈನಧರ್ಮಾಧಿಕಾರ ಸಿಕ್ಕಿದೆ. ಅದಕ್ಕೆ ಯಾರು ತಡೆ ಒಡ್ಡಿದ್ದಾರೆ? ಅದು ಶ್ರದ್ಧೆಯಿಂದ



ಹೂವನ್ನು ಕಚ್ಚಿಕೊಂಡು ಭಗವಂತನ ದರ್ಶನಕ್ಕೆ ಸಮವಸರಣದತ್ತ ಹೊರಟಿತು. ಹಾಗೆ ಭಕ್ತಿ ಮತ್ತು ಶ್ರದ್ಧೆಯನ್ನು ನೀವು ಪ್ರಕಟ ಮಾಡಲಾರಿರಿ. ಜೈನಧರ್ಮದ ಕಥನ ವ್ಯವಸ್ಥಿತ ಹಾಗೂ ನಿಯಮಾನುಸಾರ. ಮೊದಲು ಜೈನನಾಗಬೇಕು. ಅನಂತರವೇ ಅಧಿಕಾರದ ಪ್ರಶ್ನೆ. ಆಚಾರ್ಯ ಶಾಂತಿಸಾಗರರು ಅನೇಕ ಶೂದ್ರರನ್ನು ಜೈನರನ್ನಾಗಿ ಮಾಡಿದರು. ಅವರು ಜಿನಮಂದಿರದ ಪ್ರವೇಶ ಮಾಡದೆ ಜಿನಮಂದಿರದ ದರ್ಶನದಿಂದಲೇ ಪ್ರಸನ್ನರಾಗಿರುತ್ತಿದ್ದರು. ಅವರೆಂದೂ ಜಿನಮಂದಿರದೊಳಗೆ ಹೋಗಲಿಲ್ಲ. ಯಾರೇ ಆಗಲಿ ತಮ್ಮ ಮಿತಿಯೊಳಗೆ ಕೆಲಸ ಮಾಡಬೇಕು.

# ನೇಮಿಸಾಗರರು ೧೬

ಮುನಿ ನೇಮಿಸಾಗರರು ಮಹಾತಪಸ್ವಿಗಳು. ಶಾಂತಮೂರ್ತಿ. ಆಧ್ಯಾತ್ಮ ಜಾದೂಗಾರ ಆಚಾರ್ಯ ಶಾಂತಿಸಾಗರರು ಕಡುಬಿಯ ವ್ಯಾಪಾರಿ ನೇಮಣ್ಣನನ್ನು ನೇಮಿಸಾಗರರನ್ನಾಗಿ ಮಾಡಿದ್ದರು. ಆಚಾರ್ಯಶ್ರೀಯವರಿಂದ ಮುನಿದೀಕ್ಷೆ ತೆಗೆದುಕೊಂಡು ಸುಮಾರು ಐವತ್ತು ವರ್ಷಗಳಾಗಿ ಹೋಗಿವೆ. ಧಾರಣೆ ಪಾರಣೆಯ ಕ್ರಮ ಪ್ರಾರಂಭದಿಂದಲೂ ನಡೆಸಿಕೊಂಡು ಬಂದಿದ್ದಾರೆ. ಅವರು ಭರತ ಐರಾವತ ಖಂಡಗಳ ತ್ರಿಕಾಲವರ್ತಿ ೭೨ ತೀರ್ಥಂಕರರ ಸಂಬಂಧಿ ೭೨ ಉಪವಾಸ ಮಾಡಿದ್ದಾರೆ. ಕರ್ಮದಹನ ೧೫೬ ಉಪವಾಸಗಳು. ಚಾರಿತ್ರಶುದ್ಧಿ ೧೨೩೪ ಉಪವಾಸಗಳು. ಹತ್ತು ಉಪವಾಸಗಳಂತೆ ಐದು ದಶಲಕ್ಷಣದ ಉಪವಾಸಗಳು. ೩ ಅಷ್ಟಾಹ್ನಿಕಗಳಲ್ಲಿ ಎಂಟೆಂಟು ಉಪವಾಸಗಳನ್ನು ಮಾಡಿ ಮುಗಿಸಿರುವ ಮಹಾ ತಪಸ್ವಿ ನೇಮಿಸಾಗರರು. ಷೋಡಶ ಕಾರಣ ಭಾವನೆಯ ೧೬ ಉಪವಾಸ ಮಾಡಿದ್ದರು. ಮೂರು ನಾಲ್ಕು ದಿನಗಳ ಉಪವಾಸವನ್ನು ಯಾವಾಗೆಂದರೆ ಆವಾಗ ಮಾಡುತ್ತಲೇ ಇದ್ದರು. ಅವರು ನಿರಾಹಾರದಿಂದಲೇ ನಿರಾತಂಕರಾಗಿದ್ದರು. ಅಜ್ಞಾನಿಗೆ ತಿಂದುಣ್ಣುವ ಚಟದಿಂದಲೇ ಚಿಂತೆ.

ನೇಮಿಸಾಗರರು ಉಚ್ಚಕೋಟಿ ತಪಸ್ವಿಗಳಾಗಿದ್ದರು. ನಾನು ೧೯೫೮ ಸೆ. ೧೭ರಂದು ಅವರ ಭೇಟಿ ಮಾಡಿದೆ. "ನಾವು ೫೦ ವರ್ಷಗಳವರೆಗೆ ಆಚಾರ್ಯ ಮಹರಾಜರ ಜೊತೆಗಿದ್ದೆವು"ಎಂದು ಹೇಳುತ್ತಾ ಅವರು ತಮ್ಮ ನೆನಪಿನ ಸುರುಳಿ ಬಿಚ್ಚಿದರು.

"೪೦ ವರ್ಷಗಳ ಮುನಿಜೀವನಕ್ಕೆ ಮೊದಲೂ ಗೃಹಸ್ಥಾವಸ್ಥೆಯಲ್ಲಿ ಅವರ ಸತ್ಸಂಗದ ಲಾಭ ಸಿಕ್ಕಿತ್ತು. ಆಗ ಆಚಾರ್ಯಶ್ರೀಯವರು ನನಗೆ ಹೇಳಿದ್ದರು.

"ನೀನು ಶಾಸ್ತ್ರ ಓದು. ನಾವು ಜನಗಳಿಗೆ ಅದರರ್ಥ ಹೇಳುತ್ತೇವೆ. ಎಂದರು. ನಾನು ಐದನೆಯ ತರಗತಿವರೆಗೆ ಮಾತ್ರ ಓದಿದ್ದೆ. ಭಾಷಣ ಮಾಡಲು ಬರುತ್ತಿರಲಿಲ್ಲ. ಶಾಸ್ತ್ರ ಓದಲು ಚೆನ್ನಾಗಿ ಬರುತ್ತಿತ್ತು. ಆದ್ದರಿಂದಲೇ ಶಾಸ್ತ್ರವಾಚನ ಮಾಡಲು ಹೇಳುತ್ತಿದ್ದರು. ಅವರ ಅರ್ಥವಿವರಣೆಯಿಂದ ಬಹಳ ಶಾಂತಿ ಸಿಗುತ್ತಿತ್ತು. ನಾನು ಅವರ ವಚನ ಕೇಳುತ್ತಾ ಕೇಳುತ್ತಾ ಗೃಹತ್ಯಾಗ ಮಾಡಿ ಮುನಿಯಾದೆ"



## ತಂದೆಯೊಡನೆ ಚರ್ಚೆ

"ನನ್ನ ಊರು ಕುಡಚಿ. ಒಂದು ದಿನ ನನ್ನ ತಂದೆಯವರನ್ನು ಚಾತುರ್ಮಾಸದಲ್ಲಿ ಮಹರಾಜರ ಜೊತೆಯಲ್ಲಿದ್ದು ಬರುತ್ತೇನೆಂದು ಕೇಳಿದೆ. ನೀನು ಅವರ ಜೊತೆಯಲ್ಲಿದ್ದು ವಾಪಾಸು ಬರುತ್ತೀಯೇನು ಎಂದು ಅವರು ನನಗೆ ಮರುಪ್ರಶ್ನೆ ಹಾಕಿದ್ದರು. ಅವರಿಗೆ ನನ್ನ ರುಚಿ ಯಾವಾಗಲೋ ತಿಳಿದಿತ್ತು. ಆಚಾರ್ಯಶ್ರೀಯವರ ಸಂಗದಿಂದ ಇವನು ಸನ್ಯಾಸಿ ಆಗದೆ ಇರನು ಎಂದು ಊಹಿಸಿದ್ದರು. ಅದು ಆದದ್ದು ಹಾಗೆಯೇ!"

"ನಾಲ್ಕು ತಿಂಗಳ ಸತ್ಸಂಗದಿಂದ ನನ್ನಲ್ಲಿ ಮಹತ್ತರ ಬದಲಾವಣೆಯಾಗಿತ್ತು. ನನಗೆ ದೀಕ್ಷೆ ತೆಗೆದುಕೊಳ್ಳಬೇಕೆಂದು ಭಾವನೆ ಹುಟ್ಟಿತು. ನನ್ನ ಕುಟುಂಬದವರ ಒಪ್ಪಿಗೆ ಬೇಕಾಗಿಲ್ಲ. ಅವರು ಹೇಗೆ ಒಪ್ಪಿಕೊಂಡಾರೆಂದು ಆಚಾರ್ಯಶ್ರೀಯವರಿಗೆ ನಿವೇದಿಸಿದೆ. ದೀಕ್ಷೆ ತೆಗೆದುಕೊಳ್ಳುವ ಮುನ್ನ ಕುಟುಂಬಿಗಳ ಒಪ್ಪಿಗೆ ಪಡೆಯಬೇಕೆಂಬ ನಿಬಂಧನೆ ಶಾಸ್ತ್ರದಲ್ಲಿ ಇದೆ ಎಂದು ಹೇಳಿದರು. ನನಗೆ ೧೬ ವರ್ಷದವನಿರುವಾಗಲೇ ದೀಕ್ಷೆಯ ಭಾವ ಹುಟ್ಟಿತ್ತು.

## ಮುಸ್ಲಿಮ್ ಪ್ರಭಾವ

"ನಾನು ನನ್ನೂರು ಕುಡಚಿಯಲ್ಲಿ ಮುಸ್ಲಿಮ್ ಸಹೋದರರೊಡನೆ ಬಹಳ ಸಲಿಗೆ ಬೆಳೆಸಿದ್ದೆ. ನಾನು ಮುಸ್ಲಿಮ್ ದರ್ಗಾಕ್ಕೆ ಹೋಗಿ ಕುರಾನ್ ಓದುತ್ತಿದ್ದೆ. ಊದುಬತ್ತಿ ಹಚ್ಚುತ್ತಿದ್ದೆ. ಸಕ್ಕರೆ ಅರ್ಪಿಸುತ್ತಿದ್ದೆ.

ಕುಡಚಿಯಲ್ಲಿ ಮುಸ್ಲಿಮ್ ಜನಾಂಗ ಹೆಚ್ಚು ಇದೆ. ಮನೆಮನೆಯಲ್ಲೂ ನೇಮಣ್ಣನವರ ಹೆಸರು ಕೇಳಿ ಬರುತ್ತಿತ್ತು. ಅವರು ಮತ್ತೆ ಮುಂದೆ ಹೇಳತೊಡಗಿದರು.

"ಯಾವಾಗ ನಮ್ಮ ಧರ್ಮದ ಬಗ್ಗೆ ತಿಳುವಳಿಕೆ ಮೂಡಿತೋ ಆಗ ದರ್ಗಾದತ್ತ ಹೋಗುವುದನ್ನು ಬಂದ್ ಮಾಡಿದೆ. ನನ್ನ ಪರಿವರ್ತನೆ ಮುಸುಲ್ಮಾನರಿಗೆ ಸಹ್ಯವಾಗಲಿಲ್ಲ. ಅವರು ನನ್ನ ವಿರುದ್ಧ ಹಲ್ಲು ಮಸೆಯತೊಡಗಿದರು. ನನ್ನನ್ನು ಹೊಡೆಯಲೂ ಸಿದ್ಧರಾದರು.ನಿನಿ

ಅಂತಹ ಸ್ಥಿತಿಯಲ್ಲಿ ನನ್ನ ಊರಿನಿಂದ ನಾಲ್ಕು ಮೈಲು, ದೂರವಿರುವ ಐನಾಪುರಕ್ಕೆ ಹೋಗಿಬಿಟ್ಟೆ. ಅಲ್ಲಿಯ ಪಟೇಲನಿಗೆ ಧರ್ಮದಲ್ಲಿ ಶ್ರದ್ಧೆ ಇತ್ತು. ಅವನು ನನ್ನನ್ನು ವಿಶ್ವಾಸದಿಂದ ನೋಡಿಕೊಳ್ಳತೊಡಗಿದ. ಸ್ವಲ್ಪ ಕಾಲ ಅಲ್ಲಿ ಶಾಂತಿಯಿಂದ ಇರುವಂತಾಯಿತು"

## ರಾಮುವಿನೊಡನೆ ವ್ಯವಸಾಯ ಆರಂಭ

"ಜೀವನಕ್ಕೊಂದು ಏನಾದರೂ ಮಾಡಬೇಕಾಗಿತ್ತು. ನಾನು ರಾಮು (ಕುಂಥುಸಾಗರರು) ಮತ್ತೊಬ್ಬರು ಹೀಗೆ ಮೂವರು ಸೇರಿ ಜಮೀನನ್ನು ಗುತ್ತಿಗೆಗೆ ಹಿಡಿದೆವು. ಉಳಿಮೆ ಆರಂಭವಾಯಿತು. ಆಗ ಆಚಾರ್ಯಶ್ರೀಯವರು ನಸಲಾಪುರ ಗ್ರಾಮದಲ್ಲಿದ್ದರು. ಅವರೊಡನೆ ಒಂದು ತಿಂಗಳಿದ್ದೆನು. ಚಾತುರ್ಮಾಸಕ್ಕೆ ಐನಾಪುರಕ್ಕೆ ಬಂದರು. ನಾನಂತೂ ಅವರೊಡನ ಸದಾಕಾಲವೂ ಇರುತ್ತಿದ್ದೆನು. ವ್ಯವಸಾಯದತ್ತ ಗಮನವೇ ಇರಲಿಲ್ಲ. ನನ್ನ ಭವಿಷ್ಯದ ಚಿಂತೆಯೇ ನನಗಿರಲಿಲ್ಲ. ಇದೆಲ್ಲವೂ ಅವರ ಗಮನಕ್ಕೆ ಬಂದಿತ್ತು."

ಒಂದು ದಿನ ಅವರು ಹೇಳಿದರು–"ನೀನು ವ್ಯರ್ಥವಾಗಿ ಭೂಮಿಗೆ ಹಣ ಸುರಿದು ಬಿಟ್ಟದ್ದೀಯೆ. ಹಾಗೇಕೆ ಮಾಡಿದೆ?" ಆಗ ನಾನೇನೂ ಹೇಳಲಿಲ್ಲ.

ಚಾತುರ್ಮಾಸ ಮುಗಿದ ಮೇಲೆ ನಾವಿಬ್ಬರೂ ಅವರನ್ನು ಸೇಡಬಾಳಕ್ಕೆ ಕರೆದುಕೊಂಡು ಹೋದೆವು. ಆಗ ಅಲ್ಲಿ ದಿಗಂಬರ ಜೈನ ಮಹಾ ಸಭೆಯ ಉತ್ಸವ ಆಗುವುದರಲ್ಲಿತ್ತು. ನಾನು ಮತ್ತು ರಾಮು ಇಬ್ಬರೂ ಕೈಮೇಲೆ ಕೈಯಿಟ್ಟು ಇನ್ನು ಆರು ತಿಂಗಳೊಳಗೇ ದೀಕ್ಷೆ ತೆಗೆದುಕೊಳ್ಳಬೇಕೆಂದು ಪ್ರಮಾಣ ಮಾಡಿಕೊಂಡೆವು"

ಆಗ ನಾನು ಕೇಳಿದೆ–

"ನಿಮ್ಮ ಮನಸ್ಸು ಆಗ ಪರಿವಾರದ ಮಮತ್ವ ತ್ಯಜಿಸಿದಾಗ ದೀಕ್ಷೆ ಕೊಡುವುದು ಅವರಿಗೇನು ಕಷ್ಟವಾಗಿತ್ತು?"

ಅವರು ಹೇಳಿದರು–

"ಆಗ ಅವರು ನಿರ್ಗ್ರಂಥರಿರಲಿಲ್ಲ. ಕ್ಷುಲ್ಲಕರಾಗಿದ್ದರು. ನಾನು ಮತ್ತು ಬ್ರ.ಬಂಡೂ ತೇರದಾಳದಲ್ಲಿದ್ದೆವು. ಬಂಡೂ ಶಾಸ್ತ್ರ ಓದುತ್ತಿದ್ದರು. ನಾನು ಕೇಳುತ್ತಿದ್ದೆ. ಭಗವತಿ ಆರಾಧನಾ, ತತ್ವಾರ್ಥಸಾರ ಮುಂತಾದ ಗ್ರಂಥಗಳ ಅಧ್ಯಯನವಾಗಿ ಹೋಗಿತ್ತು.

## ಗಜಸ್ನಾನ

ತೇರದಾಳದಿಂದ ವಿಹರಿಸುತ್ತಾ ಕುಡಚಿಗೆ ಬಂದರು. ಅವರ ಆಹಾರ ನಮ್ಮ ಮನೆಯಲ್ಲಿ ಆಯಿತು. ಆಹಾರವಾದ ನಂತರ ಹೇಳಿದರು.



"ನಿಮ್ಮ ಭಕ್ತಿ, ಪೂಜಾ, ಅರ್ಚನೆ ಎಲ್ಲಾ ಗಜಸ್ನಾನದಂತೆ ನೋಡು! ಭಕ್ತಿ ಪೂಜಾದಿಗಳಿಂದ ನಿರ್ಮಲತೆಯೇನೋ ಸಿಗುತ್ತದೆ. ಇದು ಸ್ನಾನದಂತಾಯಿತು. ಇದಾದನಂತರ ನೀನು ಆರಂಭ ಕಾರ್ಯದಲ್ಲಿ ತೊಡಗುವೆ. ಪುನಃ ಪಾಪ ಸಂಪಾದಿಸುವೆ. ಇದರ ಮೂಲಕ ನೀನೆ ಮಣ್ಣು ಹುಡಿ ಹಾರಿಸಿಕೊಂಡಂತಾಯಿತು. ಗೃಹಸ್ಥ ಜೀವನ ಗಜಸ್ನಾನದಂತೆ ವ್ಯರ್ಥವಿದೆ. ಯಥಾರ್ಥವಾಗಿ ಗೃಹಸ್ಥ ಜೀವನದಲ್ಲಿ ಸಾವಧಾನಿಯಾಗಿದ್ದರೂ ಪ್ರಮಾದವಾಗುತ್ತದೆ" ಇಷ್ಟು ಹೇಳಿ ಮುಂದಿನ ಭವಿಷ್ಯದ ಆಯ್ಕೆ ನನಗೇ ಬಿಟ್ಟದ್ದರು. ಇಲ್ಲಿಯವರೆಗೆ ನಡೆದು ಬಂದ ಕತ್ತಲೆ ಹಾದಿ ನೋಡಿ ಭೀತನಾದೆ. ಅವರ ಪ್ರಕಾಶಮಾನವಾದ ಹಾದಿಯಲ್ಲಿ ನಡೆಯಲು ಕಟಿಬದ್ಧನಾಗಿ ನಿಂತೆ.

## ಸರ್ವ ಪ್ರಥಮ ಐಲಕ ಶಿಷ್ಯ

ಅವರು ಗೋಕಾಕ್ ಸೇರಿದಾಗ ನಾನು ಮತ್ತು ಪೀತಾಂಬರ ಇಬ್ಬರೂ ಐಲಕ ದೀಕ್ಷೆ ತೆಗೆದುಕೊಂಡೆವು. ಪ್ರಥಮ ನನ್ನ ಮಸ್ತಕದಲ್ಲಿ ಬೀಜಾಕ್ಷರನ್ಯಾಸ ಮಾಡಿದರು. ನಂತರ ಪೀತಾಂಬರರಿಗೆ ದೀಕ್ಷೆ ಕೊಟ್ಟರು.

ಇದಾದ ಹತ್ತು ತಿಂಗಳಲ್ಲಿ ಸಮಡೊಳಿಯಲ್ಲಿ ನಿರ್ಗ್ರಂಥ ದೀಕ್ಷೆ ತೆಗೆದುಕೊಂಡೆ. ಆಗ ಆಚಾರ್ಯ ಶ್ರೀಯವರು ವೀರಸಾಗರರಿಗೆ ಮುನಿದೀಕ್ಷೆ ನನಗೆ ಮೊದಲೇ ಕೊಟ್ಟರು. ಚಂದ್ರಸಾಗರರು ಐಲಕರಾದರು.

## ಗೃಹವಿಚಾರ

ನೇಮಿಸಾಗರರ ತಂದೆಯ ಹೆಸರು ಅಣ್ಣ ಎಂದಿತ್ತು. ಇವರನ್ನು ನೇಮಣ್ಣ ಎನ್ನುತ್ತಿದ್ದರು. ಅವರ ಒಬ್ಬ ಸಹೋದರ ಮರಣ ಹೊಂದಿದ್ದ. ಇನ್ನೊಬ್ಬ ೭–೮ ವರ್ಷದಲ್ಲಿ ಮೃತಪಟ್ಟದ್ದ. ಇವರೇ ಹಿರಿಯ ಮಗ. ತಾಯಿಯ ಮರಣವಾದಾಗ ಅವರು ಹನ್ನೆರಡು ವರ್ಷದವರಾಗಿದ್ದರು. ತಾಯಿ ಬಹಳ ಧರ್ಮನಿಷ್ಠ ಸ್ತ್ರೀ ದಯೆ. ಅನುಕಂಪೆ, ಬಡವರಲ್ಲಿ ಪ್ರೀತಿ ಅವರಲ್ಲಿ ತುಂಬಿತ್ತು. ಅವರ ತಾಯಿಯ ಹೆಸರು ಶಿವದೇವಿ. ಆದ್ದರಿಂದ ನಾನು ಕೇಳಿದೆ. "ಮಹರಾಜ್! ಭಗವಾನ್ ನೇಮಿನಾಥರ ತಾಯಿಯ ಹೆಸರೂ ಶಿವದೇವಿ. ನಿಮ್ಮ ತಾಯಿಯ ಹೆಸರೂ ಶಿವದೇವಿ. ಎರಡಕ್ಕೂ ಸಾಮ್ಯ ಇದೆಯಲ್ಲ?"ಅವರೆಂದರು–

"ನನ್ನ ಹೆಸರು ನೇಮಣ್ಣ. ಗೋಕಾಕದ ಜಿನಮಂದಿರದಲ್ಲಿ ನನಗೆ ಐಲಕ ದೀಕ್ಷೆಯಾಗಿತ್ತು. ಅಲ್ಲಿಯ ಮೂಲ ನಾಯಕ ನೇಮಿನಾಥ. ಆದ್ದರಿಂದ ನನ್ನನ್ನು ನೇಮಿಸಾಗರ ಎಂದು ಕರೆದರು. ನಾನು ಮುನಿದೀಕ್ಷೆಯನ್ನೇ ಯಾಚಿಸಿದ್ದೆ. ಅವರು

ಮೊದಲು ಕೊಟ್ಟಿದ್ದು ಐಲಕ ದೀಕ್ಷೆ. ಆಗ ಅವರು ಹೇಳಿದರು. "ಸ್ವಲ್ಪ ದಿನ ಐಲಕನಾಗಿರು. ನಂತರ ಮುನಿಯಾಗುವೆಯಂತೆ. ನಮ್ಮದೇನು ಹೋಗುತ್ತದೆ. ದೀಕ್ಷೆ ತಗೆದುಕೊಳ್ಳಬೇಕು. ತೆಗೆದುಕೋ" ಅವರ ಮಾತಿನ ಅರ್ಥವೇನಂದರೆ ಸ್ವಲ್ಪಕಾಲ ಐಲಕನಾಗಿ ಮುನಿಧರ್ಮದ ಚಾರಿತ್ರ್ಯದ ಬಗ್ಗೆ ಅಭ್ಯಾಸ ನಡೆಸುವುದು ಒಳ್ಳೆಯದೆಂದಿತ್ತು. ಅವರೂ ಮುನಿಯಾಗುವ ಮುನ್ನ ಕ್ಷುಲ್ಲಕ ಐಲಕರಾಗಿದ್ದರು. ವರ್ಧಮಾನಸಾಗರರಿಗೂ ಹಾಗೆಯೇ ಕೊಟ್ಟಿದ್ದರು."

## ಶಾಂತಿಯ ಉಪಾಯ

"ಸ್ವಾಮಿನ್! ನನ್ನದೊಂದು ಪ್ರಶ್ನೆ. ಶಾಂತಿಯ ಉಪಾಯ ಯಾವುದು?"

"ಸಂಕಲ್ಪ ವಿಕಲ್ಪಗಳ ತ್ಯಾಗವೇ ಶಾಂತಿಯ ಉಪಾಯ" ಚುಟುಕಾಗಿ ಚಟ್ಟನೆ ಉತ್ತರಿಸಿದರು. ಮತ್ತೆ ವಿವರಣೆ ಹೊರಬೀಳತೊಡಗಿತು.

"ಸಂಕಲ್ಪ ವಿಕಲ್ಪಗಳ ತ್ಯಾಗದಿಂದ ಕರ್ಮಕ್ಷಯವಾಗುತ್ತದೆ. ಪರಿಣಾಮ ಶುದ್ಧಿ ಆಗುತ್ತದೆ. ಎಷ್ಟೆಷ್ಟು ಪರಿಣಾಮ ಶುದ್ಧಿ ಆಗುತ್ತಾ ಹೋಗುವುದೋ ಅಷ್ಟಷ್ಟು ಶಾಂತಿ ಸಿಗುತ್ತದೆ. ಮನಸ್ಸಿನ ಮಲಿನತೆಯ ತ್ಯಾಗವೇ ಶಾಂತಿಯ ಉಪಾಯ. ಮನಸ್ಸಿನ ಮಲಿನತೆಯಿಂದ ಶುದ್ಧನಾಗುತ್ತಾನೆ. ಪರಿಣಾಮದ ನಿರ್ಮಲತೆಗೆ ಸತ್ಸಂಗದ ಅಗತ್ಯವಿದೆ. ಸದ್ವಿಚಾರಗಳ ಅಗತ್ಯವಿದೆ. ವಿಷಯ ಕಷಾಯಗಳ ತ್ಯಾಗದ ಅಗತ್ಯವಿದೆ. ಸದ್ವಿಚಾರ–ಸನ್ನಡತೆಗಳು ಸತ್ಸಂಗದಿಂದ ಪ್ರಚೋದನೆಗೊಳ್ಳುತ್ತವೆ. ಆದರೆ ಸತ್ಸಂಗ ಈ ಕಾಲದಲ್ಲಿ ಮಹಾದುರ್ಲಭ. ಒಂದು ವೇಳೆ ಅಂತಹ ಸತ್ಸಂಗ ದೊರೆಯದಾಗ ಶ್ರೇಷ್ಠ ಗ್ರಂಥಗಳ ಅಧ್ಯಯನ ನಿತ್ಯ ನಿಯಮಪೂರ್ವಕ ಮಾಡುತ್ತಿರಬೇಕು. ಮಹಾನ್ ಗ್ರಂಥಗಳು ಸತ್ಸಂಗಸಮಾನವಾಗಿವೆ. ಆಯಾ ಗ್ರಂಥಗಳಲ್ಲಿ ಮಹಾನ್ ವಿಭೂತಿ ಪುರುಷರು ವಿಧ್ಯಮಾನವಿರುತ್ತಾರೆ. ಈ ದೃಷ್ಟಿಯಿಂದ ಸ್ವಾಧ್ಯಾಯ ಬಹಳ ಮಹತ್ಪೂರ್ಣವಾದುದು. ಆದ್ದರಿಂದ ಸ್ವಾಧ್ಯಾಯವೂ ಶಾಂತಿಯ ಉಪಾಯವೂ ಹೌದು."

## ತ್ಯಾಗದಲ್ಲಿ ಆನಂದ

"ತ್ಯಾಗದಿಂದ ಮನಸ್ಸು ಶಾಂತವಾಗುತ್ತದೆ. ತ್ಯಾಗದಲ್ಲಿ ಶಾಂತಿ ಇದೆ. ಭೋಗದಲ್ಲಿ ಅಶಾಂತಿ ಇದೆ. ತೃಷ್ಣೆಯಿಂದಲೇ ಜೀವ ದೀನದುಃಖಿಯಾಗುತ್ತದೆ. ನಿಜವಾದ ತ್ಯಾಗವೆಂದರೆ ತೃಷ್ಣೆಯ ತ್ಯಾಗವೇ ಆಗಿದೆ. ಬಾಹ್ಯದಲ್ಲಿ ತ್ಯಾಗ ಮಾಡುವವನಿಗಿಂತ ಅಂತರಂಗದ ತೃಷ್ಣೆಯ ತ್ಯಾಗ ಮಾಡುವವನು ಸಹಸ್ರಪಟ್ಟು ದೊಡ್ಡ ತ್ಯಾಗಿ. ಬಾಹ್ಯದಲ್ಲಿ ಎಲ್ಲವನ್ನೂ ತ್ಯಜಿಸಿ ಬತ್ತಲೆಯಾಗಿಯೂ ಅಂತರಂಗದಲ್ಲಿ ತೃಷ್ಣೆ ಹುಟ್ಟುತ್ತಿದ್ದರೆ ಅವನು ಏನನ್ನೂ ತ್ಯಾಗ ಮಾಡಿದಂತಾಗಲಿಲ್ಲ.



ಆದ್ದರಿಂದ ದ್ರವ್ಯತ್ಯಾಗಕ್ಕಿಂತ ಭಾವತ್ಯಾಗ ಹೆಚ್ಚು ಶ್ರೇಷ್ಠ. ಅದರಲ್ಲೇ ನಿಜವಾದ ಶಾಂತಿ ಇದೆ ಎಂದು ಜಿನೇಶ್ವರರು ಹೇಳಿದ್ದಾರೆ."

"ಬಾಹ್ಯದಲ್ಲಿ ಶಕ್ತಿಗೆ ತಕ್ಕಷ್ಟು ತ್ಯಾಗ ಮಾಡತಕ್ಕದ್ದು. ಇಂದ್ರಿಯಗಳು ಜೀವವನ್ನು ದಾಸನನ್ನಾಗಿ ಮಾಡಿವೆ. ಇಂದ್ರಿಯಗಳಿಗೆ ದಾಸನಾಗದೆ ಇಂದ್ರಿಯಗಳನ್ನು ದಾಸನನ್ನಾಗಿ ಮಾಡಿಕೊಳ್ಳುವವ ಉತ್ತಮ ಪುರುಷ. ಇಂದ್ರಿಯಗಳ ದಾಸ ಮಧ್ಯಮಪುರುಷ. ಇಂದ್ರಿಯಗಳೇ ನಾನೆನ್ನುವವ ಅಧಮಪುರುಷ. ಮಾನಸಿಕ ವಿಕಾರಗಳನ್ನು ನಿವಾರಿಸಬೇಕು. ಅದಕ್ಕಾಗಿ ಅಂತರದೃಷ್ಟಿ ಬೆಳೆಸಬೇಕು. ಆತ್ಮಿಕ ಭಾವ ಮೂಡಿದಾಗ ಮನಸ್ಸು ಮತ್ತೆಲ್ಲಿಯೂ ಹೋಗುವುದಿಲ್ಲ. ಆಗ ಭೋಗದಲ್ಲಿ ಅರುಚಿ ಮೂಡುತ್ತದೆ. ಆತ್ಮತತ್ವದಲ್ಲಿ ರುಚಿ ಹುಟ್ಟುತ್ತದೆ. ಭೋಗದಲ್ಲಿ ಅರುಚಿ ಮತ್ತು ಆತ್ಮತತ್ವದಲ್ಲಿ ರುಚಿ ಒಂದು ವಿಧವಾದ ಆನಂದವಾಗಿದೆ. ಆದ್ದರಿಂದ ತ್ಯಾಗದಲ್ಲಿ ರುಚಿ ಇದೆ ಎಂದು ಹೇಳಿದ್ದಾರೆ."

ಅವರ ವಾಣಿಯಲ್ಲಿ ಸ್ಪಷ್ಟತೆ ಇತ್ತು. ಅದು ಮಾನಸಿಕ ವಿಕಾರಗಳ ಚಿತ್ತವನ್ನು ಕಿತ್ತು ಹಾಕುತ್ತಿತ್ತು.

## ವಾಸನೆಗಳನ್ನು ತ್ಯಜಿಸಿ

ಅವರು ಮತ್ತೆ ಹೇಳಿದರು.

"ಶ್ವಾಸ ತಡೆಯುವುದು ಸಮಾಧಿಯಲ್ಲ. ಮಡದಿ–ಮಕ್ಕಳು, ಮನೆ–ಮಠ ಮುಂತಾದವುಗಳ ಮಮಕಾರ ತೊರೆದು ಮನಸ್ಸನ್ನು ಸೋನ್ಮುಖಿಗೊಳಿಸುವುದೇ ಸಮಾಧಿ. ಎಲ್ಲಿ ಬಾಹ್ಯದ ವಿಷಯ ವಾಸನೆಗಳಿರುತ್ತವೆಯೋ ಅಲ್ಲಿರುತ್ತದೆ ಮನಸ್ಸು. ವಾಸನೆಗಳನ್ನು ಮೊದಲು ತ್ಯಜಿಸಿ. ಚಿತ್ತ ಸ್ಥಿರತೆ ತಾನಾಗಿಯೇ ಬರುತ್ತದೆ. ಚಿತ್ತ ಸ್ಥಿರತೆ ಬಂದರೆ ಸಮಾಧಿಗೆ ಹೆಚ್ಚು ಕಾಲ ಬೇಡ.

## ಚರಣ ಚಿನ್ಹೆ

"ಆಚಾರ್ಯಶ್ರೀಯವರ ಕಾಲಿನಡಿ ಧ್ವಜ ಚಿನ್ಹೆ ಇತ್ತು. ಆದ್ದರಿಂದ ಅವರು ಸದಾ ಧರ್ಮ ಧ್ವಜವನ್ನು ಎತ್ತಿ ಹಿಡಿದರು. ಅವರ ಕಾಲಿನಲ್ಲಿ ಚಂದ್ರ ಚಿನ್ಹೆ ಇತ್ತು. ಆದ್ದರಿಂದ ಸದಾ ಭ್ರಮಣೆ ಮಾಡುತ್ತಿದ್ದರು. ಅವರಲ್ಲಿ ಇನ್ನು ಅನೇಕ ಶುಭ ಚಿನ್ಹೆಗಳಿದ್ದವು. ಅವರ ಕೈಯ್ಯಲ್ಲಿದ್ದ ದಿವ್ಯದರ್ಶನ ರೇಖೆ ನೋಡಿ ಹಸ್ತ ಸಾಮುದ್ರಿಕರು ಆಶ್ಚರ್ಯಗೊಂಡಿದ್ದರು"

## ರೋಗದಲ್ಲೂ ದೃಢತೆ

ಒಮ್ಮೆ ನೇಮಿಸಾಗರರ ಶರೀರದಲ್ಲಿ ಒಂದು ರೋಗ ಕಾಣಿಸಿತು. ಔಷದೋಪಚಾರ ಮಾಡುವುದಾಗಿ ತಿಳಿಸಿದೆ. ಆಗ ಅವರೆಂದರು.

"ರೋಗ ಮನುಷ್ಯನಿಗೆ ಬರದೆ ಮರಕ್ಕೆ ಬರುತ್ತದೆಯೇ? ನಮ್ಮ ಶರೀರದಲ್ಲಿ ಎಷ್ಟೋ ರೋಗ ಉತ್ಪತ್ತಿಯಾಗುತ್ತವೆ. ಅದಕ್ಕೆ ನಾವು ಸೊಪ್ಪು ಹಾಕುವುದಿಲ್ಲ. ರೋಗ ಬರಲಿ ಹೋಗಲಿ ಭಯವೇನು? ಇಷ್ಟು ಸಣ್ಣ ರೋಗಕ್ಕೆ ಹೆದರಿದರೆ ಹೇಗೆ? ರೋಗ ಬಂದಾಗ ಆಹಾರ ಬಂದ್ ಮಾಡಿದರೆ ತೀರಿತು. ಅದು ಎಷ್ಟು ದಿನ ನಿಂತೀತು. ದುಡ್ಡು ಕೈಯ್ಯಲ್ಲಿ ಇಲ್ಲದಿದ್ದರೆ ಬೊಂಬಾಯಿ ಎಲ್ಲಿ? ಕಲಕತ್ತ ಎಲ್ಲಿ? ಶರೀರದ ಒಂದೊಂದು ಅಂಗುಲ ಕ್ಷೇತ್ರದಲ್ಲೂ ೯೬ ಸಾವಿರ ರೋಗಗಳನ್ನು ಹೇಳಿದೆ. ಆಗ ಯಾವ ಯಾವ ರೋಗಕ್ಕೆ ಚಿಂತೆ ಮಾಡುವುದು. ಆದ್ದರಿಂದ ನಾವು ರೋಗದ ಬಗ್ಗೆ ಚಿಂತಿಸುವುದಿಲ್ಲ."

## ನಿವೃತಿವೇತನ ಯಾವಾಗ?

ಉತ್ತರದೇಶದ ಒಬ್ಬ ಧಾರ್ಮಿಕ ಸೇಠ್ ಅವರ ಹತ್ತಿರ ಬಂದ. ಆಗ ಅವರು ಕೇಳದರು.

"ಸೇಠ್‌ಜಿ! ಬ್ರಿಟಿಷರು ಮುವ್ವತ್ತು ವರ್ಷಗಳ ನೌಕರಿಯ ನಂತರ ವಿಶ್ರಾಂತಿ ವೇತನ ಕೊಡುತ್ತಾರೆ. ನಿಮಗೀಗ ಎಪ್ಪತ್ತು ವರ್ಷಗಳಾಗಿ ಹೋಗಿವೆ. ಮನೆಯ ಜವಾಬ್ದಾರಿ ತ್ಯಜಿಸಿ ಯಾವಾಗ ಪೆನ್ಸನ್ ತೆಗೆದುಕೊಳ್ಳುತ್ತೀರಿ?" ಅವರ ಮಾತು ಸೇಠ್‌ಜೀಗೆ ನಾಟಿದವು.

## ಮಹತ್ಪೂರ್ಣ ಮಾತು

ಒಂದು ದಿನ ನೇಮಿಸಾಗರರು ಬಹಳ ಮಹತ್ಪೂರ್ಣ ಮಾತು ಹೇಳಿದರು.

"ಅನುಭವ, ಶಾಸ್ತ್ರ ಮತ್ತು ವ್ಯವಹಾರ ಇವುಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಕಾರ್ಯಮಾಡಬೇಕು."

ಅವರ ಈ ಮಾತು ಬಹಳ ಬೆಲೆಬಾಳುವಂತವು. ಅನುಭವ ಮತ್ತು ವ್ಯವಹಾರವಿಲ್ಲದೆ ಬರೀ ಶಾಸ್ತ್ರ ಕಂದಾಚಾರವಾಗಿ ಹೋಗುತ್ತದೆ. ಶಾಸ್ತ್ರಜ್ಞಾನವಿಲ್ಲದ ಅನುಭವ ಮತ್ತು ವ್ಯವಹಾರ ನಿಸ್ಸತ್ವವಾಗುತ್ತವೆ. ಅವೂ ಒಂದು ರೀತಿ ರತ್ನತ್ರಯ ಮೇಳವಿದ್ದಂತೆ!



## ವಿನಯದಿಂದಲೇ ವಿಕಾಶ

"ವ್ಯಕ್ತಿಗೆ ವಿನಯವೇ ಭೂಷಣ ಎಂದು ಹೇಳುತ್ತಿದ್ದರು. ತೀರ್ಥಂಕರ ಪ್ರಕೃತಿಬಂಧವೂ ವಿನಯದಿಂದಲೇ ಆರಂಭಗೊಳ್ಳುತ್ತದೆ. ಪ್ರಕೃತಿಯೂ ಫಲದಿಂದ ಭಾರಗೊಂಡಾಗ ವಿನಯದಿಂದ ಬಾಗುತ್ತದೆ. ಜ್ಞಾನಿಯೂ ಜ್ಞಾನಗುಣದಿಂದ ವಿನಯ ಭರಿತನಾಗುತ್ತಾನೆ. ವಿನಯಶೀಲರನ್ನು ಜಗತ್ತು ಪ್ರೀತಿಸುತ್ತದೆ. ಹೆಚ್ಚೇನು ವಿನಯಶೀಲನಿಗೆ ಮುಕ್ತಿ ಒಲಿಯುತ್ತದೆ. ಮನುಷ್ಯನ ಆತ್ಮ ಸರ್ವದೃಷ್ಟಿಯಿಂದಲೂ ವಿಕಸಿತವಾಗಿರುತ್ತದೆ. ಆಗ ಅದು ವಿನಯ ಗುಣದಿಂದಲೇ ಸಿದ್ಧ ಶಿಲೆಯವರೆಗೂ ಏರಬಲ್ಲದು. ವಿನಯವು ವಿದ್ಯೆಯೊಡನೆ ಸೇರಿದಾಗ ಸ್ವರ್ಗ ಮೋಕ್ಷಗಳು ಆಹ್ವಾನ ಕೊಡುತ್ತವೆ."

## ಭಾಷಣದ ಅಭ್ಯಾಸ

ಅವರು ಹೇಳಿದರು.

"ಮೊದಲು ನಮಗೆ ಮಾತಾಡಲು ಬರುತ್ತಿರಲಿಲ್ಲ. ಆಚಾರ್ಯ ಮಹರಾಜರು ನಮಗೂ ಪಾಯಸಾಗರರಿಗೂ ಭಾಷಣ ಮಾಡಲು ಹೇಳುತ್ತಿದ್ದರು. ಆದರೂ ಮಾತಾಡಲು ಸಾಧ್ಯವಾಗುತ್ತಿರಲಿಲ್ಲ. ಬಹಳ ದುಃಖವಾಗುತ್ತಿತ್ತು. ದುಃಖದಿಂದ ಕಾಡಿನಲ್ಲಿ ಒಬ್ಬರೇ ಕುಳಿತು ಸೂಕ್ಷ್ಮದೃಷ್ಟಿಯಿಂದ ಗಿಡ ಮರಗಳನ್ನು ದಿಟ್ಟಿಸುತ್ತಿದ್ದೆವು. ಅದರಿಂದ ಪ್ರಯೋಜನವೇನು? ಕೂಡಲೇ ಹತ್ತಿಪ್ಪತ್ತು ಪುಸ್ತಕಗಳನ್ನು ಕೂಡಿಹಾಕಿ ಅವುಗಳಿಂದ ಉಪಯುಕ್ತ ವಿಚಾರಗಳನ್ನು ಪುಸ್ತಕದಲ್ಲಿ ಗುರ್ತು ಹಾಕಿಟ್ಟುಕೊಳ್ಳತೊಡಗಿದೆ. ಅವುಗಳು ನಮಗೆ ಹೆಚ್ಚು ಸಹಾಯ ಮಾಡಿದವು. ಕ್ರಮೇಣ ಭಾಷಣ ಮಾಡುವುದನ್ನು ಕಲಿತೆವು."

ಒಂದು ದಿನ ಅವರು ಭಕ್ತಿ ಪಾಠ ಓದುತ್ತಿದ್ದರು. ನಂತರ ಪ್ರತಿಕ್ರಮಣ ಪಠಿಸುತ್ತಿರುವಾಗ ತಮ್ಮ ದೋಷಗಳ ಕ್ಷಮಾಯಾಚನೆ ಪಾಠ ಓದಿದರು.

ನಾನಾಗ ಕೇಳಿದೆ.

"ಮಹರಾಜ್! ನೀವು ದೊಡ್ಡವರು. ಚಿಕ್ಕವರಲ್ಲಿ ಕ್ಷಮಾಯಾಚನೆ ಮಾಡುವುದರಿಂದ ಆತ್ಮನಲ್ಲಿ ಲಘುತ್ವ ಉಂಟಾಗುವುದಿಲ್ಲವೇ?" ಆಗ ಅವರೆಂದರು–

"ಕ್ಷಮೆ ಕೇಳಿದರೆ ಪ್ರಣಾಮ ಮಾಡಿದಂತಾಗಲಿಲ್ಲ. ಮಾನಸಿಕ ನಿರ್ಮಲತೆ ಪ್ರಾಪ್ತಿಯಾದಾಗ ಕ್ಷಮಾಯಾಚನಾ ಭಾವ ಹುಟ್ಟುತ್ತದೆ. ತೀರ್ಥಂಕರ ಭಗವಾನರೂ ಏಕೇಂದ್ರಿಯಾದಿ ಜೀವಿಗಳಲ್ಲೂ ಕ್ಷಮಾಯಾಚಿಸುತ್ತಿದ್ದರು. ಮಲಿನ ಮನಸ್ಸು ಎಂದೂ

ಕ್ಷಮಾ ಯಾಚಿಸುವುದಿಲ್ಲ. ಅದು ಕ್ರೋಧವೆಬ್ಬಿಸುತ್ತದೆ. ಕ್ಷಮಾಯಾಚನೆಯಿಂದ ದೂಷಿತ ಭಾವ ದೂರವಾಗುತ್ತದೆ. ದೂಷಿತ ಭಾವಗಳಿಂದ ಕರ್ಮಬಂಧವಾಗುತ್ತದೆ. ಆದ್ದರಿಂದ ಕ್ಷಮಾಯಾಚನೆ ಮುಮುಕ್ಷುಗಳಿಗೆ ಭೂಷಣ ಪ್ರಾಯವಾಗಿದೆ."

## ಸಂಯಮಿ ಪರ್ಯಾಯಕ್ಕೆ ಪ್ರಣಾಮ

ನಾನು ಕೇಳಿದೆ.

"ಮಹರಾಜ್! ನೀವು ಮೊದಲು ಆಚಾರ್ಯ ಮಹರಾಜರಿಗೆ ಪ್ರಣಾಮ ಮಾಡುತ್ತಿದ್ದಿರಿ. ಆಗ ಅವರು ಮಹಾವ್ರತಿಯಾಗಿದ್ದರು. ಈಗ ಸುರರಾಜರಾಗಿದ್ದಾರೆ. ಈಗಲೂ ಪ್ರಣಾಮ ಮಾಡುವಿರೇನು?

ಉತ್ತರ: ನಾವು ಶಾಂತಿಸಾಗರ ಮಹರಾಜರ ಸಂಯಮಯುಕ್ತ ಮುನಿ ಪರ್ಯಾಯವನ್ನು ಧ್ಯಾನದಲ್ಲಿಟ್ಟುಕೊಂಡು ಪ್ರಣಾಮ ಮಾಡುತ್ತೇವೆ. ಅವರ ಸಂಯಮ ರಹಿತ ದೇವ ಪರ್ಯಾಯ ನಮ್ಮ ದೃಷ್ಟಿಯಲ್ಲಿ ಇಲ್ಲ. ನಾವು ಅವ್ರತಿ (ದೇವ) ಪರ್ಯಾಯದ ಆತ್ಮನಿಗೆ ಹೇಗೆ ಪ್ರಣಾಮ ಮಾಡುವುದು? ಆಗಮದ ಆಜ್ಞೆಯಂತೆ ನಾವು ನಡೆಯುತ್ತೇವೆ."

ನಾನು ಕೇಳಿದೆ: "ಒಂದು ವೇಳೆ ಆಚಾರ್ಯ ಮಹರಾಜರ ಜೀವ ನಿಮ್ಮ ಸಮಕ್ಷಮ ದೇವರೂಪದಲ್ಲಿ ದರ್ಶನಕೊಟ್ಟರೆ ಅವರಿಗೆ ನೀವು ನಮಸ್ಕರಿಸುವುದಿಲ್ಲವೇ?"

ಆಗ ಅವರು ಹೇಳಿದರು–

"ಇಲ್ಲ ನಾವು ನಮಸ್ಕರಿಸುವುದಿಲ್ಲ."

ಈಗ ಹೇಳಿ ಆ ಸುರರಾಜನಾಗಿರುವ ಆಚಾರ್ಯ ಮಹರಾಜರ ಆತ್ಮ ನಿಮಗೆ ನಮಸ್ಕರಿಸುವುದೋ ಇಲ್ಲವೋ?"

ಅವರು: "ಅವಶ್ಯವಾಗಿಯೂ ನಮಸ್ಕರಿಸುವುದು. ಆಗಮಾಜ್ಞೆಯಲ್ಲಿ ಅವರಿಗೆ ಸದಾ ವಿಶ್ವಾಸವಿತ್ತು. ಈ ಕಾರಣದಿಂದ ಆ ದೇವ ಪರ್ಯಾಯದ ಅವರ ಆತ್ಮ ಸಕಲ ಸಂಯಮಿ ಮುನಿಗೆ ಅವಶ್ಯ ವಂದಿಸುತ್ತದೆ."



## ಮುಸಲ್ಮಾನ ವರ್ಗದವರಿಂದ ಪ್ರೇಮ.

ಅವರ ಸುಂದರ ತರ್ಕಬದ್ಧ ವಿಮರ್ಶೆಯಿಂದ ಬಹಳ ಆನಂದವಾಯಿತು. ನಾನು ಒಮ್ಮೆ ಅವರ ಹತ್ತಿರ ಹೋದಾಗ ಒಬ್ಬ ತರುಣ ಮುಸಲ್ಮಾನ ಅವರಲ್ಲಿ ಏನೇನೋ ಕ್ಷಮಾ ಯಾಚಿಸುತ್ತಿದ್ದ.

"ಮಹರಾಜ್! ನೀವು ಕುಡಚಿ ಗ್ರಾಮದವರೇ ಆಗಿದ್ದೀರಿ. ಅಲ್ಲಿಯ ಜನ ತಮ್ಮ ಪವಿತ್ರ ದರ್ಶನಕ್ಕಾಗಿ ಹಾತೊರೆಯುತ್ತಿದ್ದಾರೆ." ಆಗ ಅವರೆಂದರು.

"ನೀವು ಮುಸುಲ್ಮಾನರು. ನಾವು ದಿಗಂಬರ ಸಾಧುಗಳು. ನಮ್ಮಿಂದ ನಿಮ್ಮ ಮನಸ್ಸಿಗೆ ದುಃಖವಾಗಬಹುದು. ಕ್ಷೋಭೆ ಉಂಟಾಗಬಹುದು." ಆಗ ಆ ಯುವಕ ಹೇಳಿದ.

"ನೀವು ನಮ್ಮೆಲ್ಲರಿಗೂ ಗುರುಗಳಾಗಿದ್ದೀರಿ. ನಿಮ್ಮ ದರ್ಶನದಿಂದ ನಮ್ಮೆಲ್ಲರಿಗೂ ಸಂತೋಷವಾಗುತ್ತದೆ"

ಈ ರೀತಿ ಅನೇಕರು ಅನೇಕ ಕಡೆಯಿಂದ ಬಂದು ವಿವಿಧ ಪ್ರಾರ್ಥನೆ ಮಾಡುತ್ತಿದ್ದರು.

## ಕಲ್ಯಾಣ ಭಾವನೆ

"ಶ್ರಾವಕ ಧರ್ಮ ಪಾಲನೆ ಮಾಡುತ್ತಾ ನಾನು ಎಂದು ಸಂಸಾರ ಸಾಗರದಿಂದ ಪಾರು ಆಗುವೆನೋ ಎಂದು ಸದಾ ಚಿಂತಿಸುತ್ತಿರಬೇಕು"ಅವರ ಈ ಮಾತು ವೈರಾಗ್ಯದ ಉದಯರಾಗದಂತಿತ್ತು.

೧೯೫೮ರ ವ್ರತಕ್ಕೆ ಸುಮಾರು ಹತ್ತು ಸಾವಿರ ಉಪವಾಸಗಳು ಪೂರ್ಣಗೊಂಡಿದ್ದವು. ಮತ್ತು ನವೀನ ಉಪವಾಸ ಪ್ರತಿಜ್ಞೆ ಕೈಗೊಂಡಿದ್ದರು. ಆಗ ನಾನು ಕೇಳಿದೆ.

"ಮಹರಾಜ್! ಹತ್ತುಸಾವಿರ ಉಪವಾಸಗಳಿಂದ ವಿಶುದ್ಧಗೊಂಡ ನಿಮ್ಮ ಆತ್ಮನ ದೃಷ್ಟಿಗೆ ಭಾರತದ ಭವಿಷ್ಯ ಹೇಗೆ ಕಾಣುತ್ತದೆ.

ಆಗ ಅವರೆಂದರು.

" ಭಾರತ ಪರಾಧೀನವಾಗಿದ್ದ ಕಾಲಕ್ಕಿಂತಲೂ ಈಗ ಜೀವಹಿಂಸೆ ಅಧಿಕಗೊಂಡಿದೆ. ಇದರ ದುಷ್ಪರಿಣಾಮದಿಂದ ಮಹಾಕಷ್ಟಗಳ ಪ್ರಹಾರ ಎದುರಿಸಬೇಕಾಗುತ್ತದೆ."



# ಪಾಯಸಾಗರರು ೧೭

೧೦೮ ಆಚಾರ್ಯ ಶ್ರೀ ಪಾಯಸಾಗರರ ದರ್ಶನಕ್ಕಾಗಿ ನಾನು ಕೊಲ್ಹಾಪುರದಿಂದ ಸ್ಥವನಿಧಿಗೆ ಹೊರಟೆ. ಆಚಾರ್ಯ ಶಾಂತಿಸಾಗರ ಮಹರಾಜರ ಬಗ್ಗೆ ವಿಚಾರ ತಿಳಿಸಲು ಅವರನ್ನು ಪ್ರಾರ್ಥಿಸಿದೆ.

ಅವರು ಹೇಳಲಾರಂಭಿಸಿದರು.

ಆಚಾರ್ಯ ಶಾಂತಿ ಸಾಗರರಿಗೆ ನನ್ನ ಮೇಲೆ ಅನಂತ ಕೃಪೆ ಇತ್ತು. ಅವರು ನನ್ನನ್ನು ಉದ್ಧಾರ ಮಾಡಿದರು. ಅವರು ಅನ್ಯ ಜ್ಞಾನಿ ಮತ್ತು ತಪಸ್ವಿಗಳ ಬಗ್ಗೆ ಯೋಗ್ಯ ಸದ್ಭಾವ ಹೊಂದಿದ್ದರು. ಒಮ್ಮೆ ನಾನು ಅವರ ದರ್ಶನಕ್ಕೆ ಹೋದೆ. ನಾನು ಅವರಿಗೆ ಭಕ್ತಿ ಮತ್ತು ವಿನಯಪೂರ್ವಕ ವಂದಿಸಿದೆ. ಮಹರಾಜರು ಪ್ರತಿವಂದನೆ ಮಾಡಿದರು. ಆಗ ನಾನೆಂದೆ "

"ಮಹರಾಜ್! ನಾನು ಪ್ರತಿವಂದನೆಗೆ ಯೋಗ್ಯನಲ್ಲ" ಆಗ ಅವರೆಂದರು- "ಪಾಯಸಾಗರ! ಸುಮ್ಮನಿರು. ನೀನು ಅಯೋಗ್ಯನೆಂದು ಯಾರು ಹೇಳುತ್ತಾರೆ? ನಾವು ನಿನ್ನ ಭಾವನೆಗಳನ್ನು ಚೆನ್ನಾಗಿ ತಿಳಿದಿದ್ದೇವೆ."ಈ ರೀತಿ ಹೇಳಿ ನನ್ನನ್ನು ಅಮೃತದಲ್ಲಿ ಅದ್ದಿದ್ದರು ಆ ಅಮೃತಾತ್ಮ! ಅವರ ಅಪಾರ ಪ್ರೇಮದ ಪನ್ನೀರಲ್ಲಿ ಮಿಂದು ನನ್ನ ಹೃದಯ ಪಾಪದ ಕೊಳೆ ತೊಳೆದು ಪಾವನವಾಗಿತ್ತು."

## ನಿಜವಾದ ಪ್ರಾಯಶ್ಚಿತ್ತ

ಅವರು ನನಗೆ ಭಾಷಣ ಮಾಡಲು ಆಜ್ಞೆ ಮಾಡಿದರು. ಮೊದಲು ಹೀಗೇ ಹೇಳುತ್ತಿದ್ದರು. ಆಗ ನಾನೆಂದೆ"ಬಹಳ ವರ್ಷಗಳ ನಂತರ ತಮ್ಮ ಚರಣ ದರ್ಶನವಾಗಿದೆ. ನಾನು ನನ್ನನ್ನು ದೋಷಿ ಎಂದು ತಿಳಿದಿದ್ದೇನೆ. ನಿಮ್ಮ ಚರಣ ಸನ್ನಿದಿಗೆ ಆತ್ಮ ಶುದ್ಧಿಗಾಗಿ ಬಂದಿದ್ದೇನೆ. ನಾನು ಅಜ್ಞಾನಿ. ಗುರುಚರಣದಲ್ಲಿ ಪ್ರಾಯಶ್ಚಿತ್ತಕ್ಕಾಗಿ ಪ್ರಾರ್ಥಿಸುತ್ತೇನೆ"

ಆಗ ಅವರೆಂದರು.

"ಪಾಯಸಾಗರ ಸುಮ್ಮನಿರು ನಮಗೆ ಎಲ್ಲಾ ಗೊತ್ತು. ನಿನಗೆ ಪ್ರಾಯಶ್ಚಿತ್ತ ಕೊಡುವ ಅಗತ್ಯವೇನೂ ಇಲ್ಲ. ಇಂದಿನ ಸಮಾಜ ವಿಪರೀತವಿದೆ. ನೀನು ಅಜ್ಞಾನಿಯೂ ಅಲ್ಲ. ನಿನ್ನನ್ನು ಅಯೋಗ್ಯನೆಂಧು ಯಾರು ಹೇಳುತ್ತಾರೆ? ನಾವು

ನಿನಗೆ ಯಾವ ಪ್ರಾಯಶ್ಚಿತ್ತವನ್ನೂ ಕೊಡುವುದಿಲ್ಲ. ಹಾಂ ! ಪ್ರಾಯಶ್ಚಿತ್ತವನ್ನೆಂದೂ ಮರೆಯಬೇಡ. ಇದೇ ನಾವು ಕೊಡುವ ಪ್ರಾಯಶ್ಚಿತ್ತ."

"ಅವರು ಮಹಾಕರುಣೆಯಿಂದ ಈ ಅಂತಿಮ ಉಪದೇಶ ಕೊಟ್ಟಿದ್ದರು."

"ಪಾಯಸಾಗರ! ಬಹಳ ಹುಷಾರಾಗಿ ನಡೆ. ಸ್ವಸ್ವರೂಪದಲ್ಲಿ ಸದಾ ಜಾಗ್ರತನಾಗಿರು. ಜನ ಏನಾದರೂ ಹೇಳುತ್ತಿರಲಿ. ನೀನು ಅದಾವುಗಳನ್ನೂ ಮನಸ್ಸಿಗೆ ಹಚ್ಚಿಕೊಳ್ಳಬೇಡ. ಸದಾ ಆತ್ಮ ಚಿಂತನೆಯಲ್ಲಿ ಲೀನನಾಗಿರು." ಆ ಅಮೃತವಾಣಿಯನ್ನು ಹೇಗೆ ಮರೆಯಲಿ? ಇಷ್ಟು ಹೇಳುತ್ತಾ ಅವರ ಕಣ್ಣುಗಳು ಒದ್ದೆಯಾದವು.

ಪಾಯಸಾಗರರ ಬಗ್ಗೆ ಅವರ ನಿಕಟವರ್ತಿಯೊಬ್ಬರು ಅವರ ಪೂರ್ವ ಜೀವನದ ಬಗ್ಗೆ ಹೇಳಿದರು–

"ಪಾಯಸಾಗರರು ಗೃಹಸ್ಥ ಜೀವನದಲ್ಲಿ ಜಿನಧರ್ಮದ ನಿಂದಕರಾಗಿದ್ದರು. ಅವರು ಆರೋಪ ಮಾಡುತ್ತಿದ್ದ ಪಟ್ಟಿ ಹೇಳತೊಡಗಿದರು. ಮುನಿ ಪಶು ಸಮಾನ ನಗ್ನವಾಗಿ ತಿರುಗುತ್ತಾನೆ. ಕಲ್ಲಿನ ಮೂರ್ತಿಗೆ ಹಾಲು ಎರೆಯುವುದು ಮೂರ್ಖತನ." ಇತ್ಯಾದಿ. ಅವರು ಮಿಥ್ಯಾ ಸನ್ಯಾಸಿಯೂ ಆಗಿ ಮುಗಿಸಿದ್ದರು. ಆದರೆ ಶಾಂತಿಸಾಗರರ ದರ್ಶನದಿಂದ ಅವರಲ್ಲಿ ಚಮತ್ಕಾರಿಕ ಪರಿವರ್ತನೆ ಆಗಿ ಬಿಟ್ಟಿತು."

ಒಮ್ಮೆ ಆದಿಸಾಗರರು ಪಾಯಸಾಗರರ ಬಗ್ಗೆ ಹೇಳಿದರು.

"ನಟನೆಯಲ್ಲಿ ಅವರೊಬ್ಬ ಸಿದ್ಧಪುರುಷ! ರಂಗಮಂಚದ ಮೇಲೆ ಅವರು ಸುಮ್ಮನೆ ಅತ್ತ ಇತ್ತ ಸುಳಿದರೆ ಸಾಕು. ಪ್ರೇಕ್ಷಕರು ನಕ್ಕುನಕ್ಕು ಸೋತು ಹೋಗುತ್ತಿದ್ದರು."

ಪಾಯಸಾಗರರಿಗೆ ಅಸಮಾನವಾದ ವಾಕ್ಚಾತುರ್ಯವಿತ್ತು. ಆದ್ದರಿಂದ ತಮ್ಮ ವಾಕ್ಜಾಲದಿಂದ ಜನಗಳನ್ನು ಮೋಡಿ ಮಾಡಿಬಿಡುತ್ತಿದ್ದರು. ಆದ್ದರಿಂದ ಅವರನ್ನು ಪ್ರವಚನ ಪರಮೇಷ್ಠಿ ಎಂಬ ಉಪಾದಿಯಿಂದ ಸನ್ಮಾನಿಸಿದರು

ಅವರು ಸಮಯೋಜಿತ ಮಾತು ಜನಗಳನ್ನು ದಂಗು ಬಡಿಸುತ್ತಿತ್ತು. ಆಚಾಯಶಾಂತಿಸಾಗರರ ಪಾಳೆಯದಲ್ಲಿ ಅವರೊಬ್ಬ ಉದ್ಭಟ ಉಪದೇಶಕರಾಗಿದ್ದರು. ಯಾರೋ ಒಮ್ಮೆ ಅವರನ್ನು ಹೀಗೆ ಕೇಳಿದರಂ ನಿಮ್ಮ ಗುರು ಹೆಚ್ಚು ಮಾತಾಡುವುದಿಲ್ಲ. ನೀವು ಬಹಳ ಮಾತಾಡುತ್ತೀರಿ ಅಲ್ಲವೇ ? ಆಗ ಪಾಯಸಾಗರರು ಅವರು ಸಿದ್ಧರು. ನಾವು ಅರ್ಹಂತರು ಅಂದರಂತೆ : ತಮ್ಮ



ಗುರುವಿಗೆ ತಮಗಿಂತ ಉನ್ನತಸ್ಥಾನ ಕೊಟ್ಟು ತಾವು ಹೆಚ್ಚು ಮಾತಾಡುವುದಕ್ಕೆ ಸಕಾರಣ ಜಾಣ್ಮೆಯ ಉತ್ತರ ಕೊಟ್ಟಿದ್ದರು.

ಪೂರ್ವಾಶ್ರಮದ ದುರ್ನಡತೆಗಳಿಂದ ಅವರ ಶರೀರ ರೋಗ ಮಂದಿರವಾಗಿತ್ತು. ಅದಕ್ಕೆ ಅವರು ಹೇಳಿದರು.

"ನಾನು ಏನು ಕರ್ಮ ಮಾಡಿದ್ದೇನೋ ಅದರ ಫಲವನ್ನು ನಾನೇ ಭೋಗಿಸಬೇಕು. ಅದಕ್ಕೆ ಬೇರೆ ಔಷಧಿಯೇ ಇಲ್ಲ."

ಅವರು ತಮ್ಮ ಅಂತಿಮ ದಿನಗಳಲ್ಲಿ ತಮ್ಮ ಆಚಾರ್ಯ ಪದವನ್ನು ಮುನಿ ಅನಂತ ಕೀರ್ತಿಗಳಿಗೆ ವಹಿಸಿಕೊಟ್ಟರು.

## ಪಾಪಕ್ಷಯದ ಉಪಾಯ

"ಪಾಪ ಕ್ಷಯವಾಗಬೇಕಾದರೆ ಆತ್ಮಸ್ವರೂಪದ ಚಿಂತನೆ ಮಾಡಬೇಕು. ಜಿನೇಂದ್ರ ಭಗವಂತನ ಭಕ್ತಿಮಾಡಬೇಕು. ಸೂರ್ಯೋದಯವಾದ ಕೂಡಲೇ ಅಂಧಕಾರ ದೂರಾಗುವಂತೆ ಜಿನೇಂದ್ರಭಕ್ತಿಯಿಂದ ಮೋಹ ಮತ್ತು ಅಜ್ಞಾನ ಅಂಧಕಾರ ದೂರಾಗುತ್ತದೆ. ಆತ್ಮಕಲ್ಯಾಣ ಚಿಂತನೆಯಲ್ಲಿ ಸದಾ ಜಾಗೃತವಾಗಿರತಕ್ಕದ್ದು."

## ಜೀವನದ ಸಂದ್ಯೆ

"ಈಗ ನನ್ನ ಸಮಯ ಬಹಳ ಸಮೀಪವಾಗಿದೆ. ನಾನು ಯಾವಾಗ ಹೋಗುವೆನೋ ನಿಮಗಾರಿಗೂ ತಿಳಿಯುವುದಿಲ್ಲ."

ಆದದ್ದೂ ಹಾಗೆಯೇ. ಬೆಳಗ್ಗೆ ಧ್ಯಾನ ಮಗ್ನರಾಗಿದ್ದರು. ಆಧ್ಯಾತ್ಮ ಪ್ರವಾದಿ ಮಹಾಯೋಗಿ ಪಾಯಸಾಗರರು ಇಹಲೋಕ ಯಾತ್ರೆ ಪೂರೈಸಿದ್ದರು. ಪಕ್ಷಿ ಪಂಜರದಿಂದ ಹಾರಿಹೋಗಿತ್ತು. ಆದರೆ ಎಲ್ಲರ ಹೃದಯದೊಳಗೆ ಕತ್ತಲು ಕವಿಯುತ್ತಿತ್ತು.

ಆಚಾರ್ಯ ಶಾಂತಿಸಾಗರರ ಸಮಾಧಿಯಾಗಿ ಹೋಗಿತ್ತು. ಅದರ ಬಗ್ಗೆ ಅವರನ್ನು ಕೇಳಲಾಗಿ ಅದ್ಭುತ ಭಾವನೆಗಳ ಶ್ರದ್ಧಾಂಜಲಿ ಅರ್ಪಿಸತೊಡಗಿದರು.

"ನನ್ನ ಗುರು ಹೋಗಿಬಿಟ್ಟರು. ನನ್ನ ಬೆಳಕೇ ಹೋಗಿಬಿಟ್ಟಿತು. ನನ್ನ ಆತ್ಮನಿಗೆ ಅಮೃತ ಕುಡಿಸಿದ ಅಮೃತಾತ್ಮ ಹೋಗಿಬಿಟ್ಟ. ನನ್ನ ಧರ್ಮಪಿತ ಹೊರಟುಹೋದ. ಪಾತಾಳದ ಪಾಪದ ಕುಂಡಕ್ಕೆ ಹಾರಲಿದ್ದ ಪಾಪಿಯನ್ನು ಕೈಹಿಡಿದು ಕಾಪಾಡಿದ ಕರುಣಾಳು ಪರಮಗುರು ಹೊರಟುಹೋದರು."

ಇಷ್ಟು ಹೇಳುವಾಗ ಅವರ ಕಣ್ಣುಗಳು ಗುರು ಸ್ಮರಣೆಯಿಂದ ಹನಿಗೂಡಿದ್ದವು. ಗಂಟಲಿನ ನಾಳ ಬಿಗಿದು ಧ್ವನಿ ಗದ್ಗದಗೊಂಡಿತ್ತು. ಸಂಸಾರದ ಅನಂತ ಯಾತನೆಯ ಜಾಲದಿಂದ ಬಿಡಿಸಿದ ಪರಮ ಗುರುವಿನ ಸ್ಮರಣೆಯಿಂದ ಆ ಸಂಯಮಿ ಜೀವಕ್ಕೂ ಕ್ಷಣಕಾಲ ಮೋಹ ಆವರಿಸಿ ಕಳವಳ ಮೂಡಿತ್ತು.

ಅವರ ಸಮಾಧಿಯ ಸ್ಮರಣೆಗಾಗಿ ಆಜೀವ ಪರ್ಯಂತ ಗೋದಿಯ ಖಾದ್ಯಗಳನ್ನು ತ್ಯಜಿಸಿಬಿಟ್ಟರು. ಅಲ್ಲಿಂದ ಅವರು ಕಾಡಿನಲ್ಲೇ ಹೆಚ್ಚು ವಾಸಿಸತೊಡಗಿದರು. ಅವರು ನಗರದಲ್ಲಿ ಐದು ದಿನಕ್ಕಿಂತ ಹೆಚ್ಚು ಇರುತ್ತಿರಲಿಲ್ಲ. ಹೆಚ್ಚು ಹೆಚ್ಚು ಅಂತರ್ಮುಖಿಯಾಗತೊಡಗಿದರು.

"ಇಲ್ಲಿಯವರೆಗೆ ಬಾಹ್ಯದಲ್ಲಿ ಪ್ರಭಾವನೆ ಸಾಕಷ್ಟು ಮಾಡಿಯೂ ಇದ್ದೇನೆ. ನೋಡಿಯೂ ಇದ್ದೇನೆ. ಆದರಿಂದ ನನಗೆ ಯಾವ ಆನಂದವೂ ಇಲ್ಲ. ನನಗೆ ನನ್ನಾತ್ಮನ ಪ್ರಭಾವನೆ ಮಾಡಿಕೊಳ್ಳಬೇಕಾಗಿದೆ. ಆತ್ಮನ ಪ್ರಭಾವನೆ ರತ್ನತ್ರಯಗಳಿಂದ ಆಗುತ್ತದೆ. ನನಗೀಗ ಏಕಾಂತ ಬೇಕಾಗಿದೆ."

ಅವರ ರಕ್ತದ ದಮನಿಗಳು ವೈರಾಗ್ಯದಿಂದ ತುಡಿಯುತ್ತಿದ್ದವು.

## ಆತ್ಮ ಪರಿವಾರ

"ನಾನು ನನ್ನ ಆತ್ಮ ಪರಿವಾರದೊಡನೆ ಇರಲು ಇಚ್ಛಿಸುತ್ತೇನೆ." ಶೀಲ, ಸಂಯಮ, ದಯೆ–ದಮೆ, ದರ್ಶನ ಜ್ಞಾನ ಚಾರಿತ್ರಗಳೇ ನನ್ನ ಆತ್ಮನ ಪರಿವಾರಗಳು. ಅವುಗಳ ಜೊತೆಯಲ್ಲಿ ಆಟವಾಡಲು ಇಚ್ಛಿಸುತ್ತೇನೆ. ಆತ್ಮನ ನಿಜವಾದ ಅಮೃತಪಾನ ಮಾಡಲು ಬಯಸುತ್ತೇನೆ."

"ನಾನು ಆತ್ಮಗುಣಗಳ ದಿವಾಲಿ ಆಚರಿಸಲು ಬಯಸುತ್ತೇನೆ. ಕರ್ಮಗಳ ಹೋಳಿಯಾಡಲು ಇಚ್ಛಿಸುತ್ತೇನೆ. ಕರ್ಮಗಳನ್ನು ಧ್ವಂಸಮಾಡಲು ನಾನು ಕೃತ ನಿಶ್ಚಯ ಮಾಡಿದ್ದೇನೆ."

ಅವರ ಮಾತು ದೃಢ ನಿಶ್ಚಯದಿಂದ ಕೂಡಿತ್ತು. ಆತ್ಮ ವಿಶುದ್ಧಿಯ ಸಂಕೇತವಾಗಿತ್ತು. ಅವರು ಅದೆಷ್ಟು ಎತ್ತರಕ್ಕೆ ಏರಿದ್ದರು ಎನ್ನುವ ಮಾನ ದಂಡವೇ ಅವರ ಈ ಮಾತುಗಳಾಗಿದ್ದವು. ನಿಜವಾಗಿಯೂ ಅವರೊಬ್ಬ ಅದ್ಭುತ ಸಾಧಕ. ಮಹಾಸಾಹಸಿಯೂ ಹೌದು! ಏಕೆಂದರೆ ಸಪ್ತವ್ಯಸನಗಳ ಮಡುವಿನಲ್ಲಿ ಮುಳುಗಿದ್ದ ಒಬ್ಬ ಆತ್ಮ ಸಾಧನೆಯ ಶೃಂಗಕ್ಕೆ ಹಾರಿ ಆತ್ಮಕಲ್ಯಾಣ ಸಾಧಿಸುವುದೆಂದರೇನು? ದುರ್ಗತಿಯ ಸುಳಿಗೆ ಸಿಕ್ಕಿ ಬಿದ್ದಿದ್ದರೂ ಅದರಿಂದ ತಪ್ಪಿಸಿಕೊಂಡು ಪಾರಾದ ಮಹಾಸಾಧಕ! ದುರ್ವ್ಯಸನಗಳ ದಾಸಪೀತಾಂಬರನೆಲ್ಲಿ? ತ್ರೈಲೋಕ್ಯ ವಂದ್ಯ ಮಹಾ



ಯೋಗಿ ಪಾಯಸಾಗರರೆಲ್ಲಿ? ಪಾಯಸಾಗರರಲ್ಲಿ ಪೀತಾಂಬರನೆಲ್ಲಿದ್ದ? ಅವನೆಂದೋ ಸತ್ತಿದ್ದ. ಪೀತಾಂಬರಸತ್ತು ಪಾಯಸಾಗರರಾಗಿ ಹುಟ್ಟಿ ಬಂದು ಲಕ್ಷೋಪಲಕ್ಷ ಜನಗಳ ಹೃದಯದಲ್ಲಿ ಪರಮಗುರುವಾಗಿ ನಿಂತಿದ್ದ. ಮುಕ್ತಿಮಾರ್ಗದ ವೈಜಯಂತಿಯಾಗಿ ಹಾರಾಡುತ್ತಿದ್ದ.

ಸಮಾಧಿಗಾಗಿ ಅವರು ತ್ವರೆಯಿಂದ ಸಿದ್ಧತೆ ನಡೆಸಿದ್ದರು. ಬದುಕಿನ ಸಾರ್ಥಕತೆಯೇ ಸಮಾಧಿ. ಸಮಾಧಿ ತಪ್ಪಿದರೆ ಜೀವನವಿಡೀ ಮಾಡಿದ ತಪಸ್ಸು ವ್ಯರ್ಥ.ಒಬ್ಬ ಸಾಧಕ ಸಾಧನೆಯ ಫಲವನ್ನು ಸಮಾಧಿ ಮೂಲಕವೇ ಪ್ರಾಪ್ತಿ ಮಾಡಿಕೊಳ್ಳಬಲ್ಲ. ಅವನ ಸಾಧನೆ ಎಂತಹದ್ದು. ಅವನ ಭಾವ ಹೇಗಿತ್ತು ಅನ್ನುವುದರ ಒಟ್ಟು ಫಲವೇ ಸಮಾಧಿ. ನಿಷ್ಠ ಸಾಧಕನಿಗೆ ಶ್ರೇಷ್ಠ ಸಮಾಧಿ ತೆರೆದ ತೋಳಿನಿಂದ ಆಹ್ವಾನಿಸುತ್ತದೆ. ಸಾಧನೆ ತಪ್ಪಿದವನಿಗೆ, ಮಾನಸಿಕ ಹತೋಟಿ ಕಳೆದುಕೊಂಡವನಿಗೆ, ವಿಷಯ ಕಷಾಯಗಳ ಮಂಪರಿನಲ್ಲಿ ಇನ್ನೂ ಕನವರಿಸುವವನಿಗೆ, ಬದುಕಿನಲ್ಲಿ ಇನ್ನೂ ಬಯಕೆ ಬುಸುಗುಟ್ಟುತ್ತಿದ್ದವನಿಗೆ ಸಮಾಧಿ ಒಂದು ಉಕ್ಕಿನ ಕೋಟೆ! ಅದನ್ನು ಭೇದಿಸಲು ಅವನಿಂದಾಗದು. ಅಂತವನಿಗೆ ಅಂತ್ಯವೇ ದೊಡ್ಡ ಚಿಂತೆ. ಅಂತಹ ದುರ್ಬಲ ಚೇತನಕ್ಕೆ ಸಾಯುವಾಗ ಜಗತ್ತೆ ರುದ್ರಭೂಮಿಯಂತೆ ಭಾಸವಾಗುತ್ತದೆ. ದಶದಿಕ್ಕುಗಳೂ ಬಾಯಿಬಿಟ್ಟು ನುಂಗುವಂತೆ ಕಾಣುತ್ತವೆ. ಸೂತ್ರ ಕಿತ್ತ ಗಾಳಿಪಟದಂತೆ ಮನಸ್ಸು ನಾನಾ ಭೀತಿಯಿಂದ ಕಂಪಿಸುತ್ತದೆ. ಇದು ಮಹಾ ಮೋಹಿಗಳ ಕಥೆ.

ಆದರೆ ನಿರ್ಮೋಹಿಗಳ ಮಾತೇ ಬೇರೆ. ಶ್ರೇಷ್ಠ ಸಾಧಕನ ಸ್ಥಿತಿಯೇ ಬೇರೆ. ಜೀವನವಿಡೀ ಶರೀರವನ್ನು ಆತ್ಮನಿಂದ ಬೇರ್ಪಡಿಸಿ ನೋಡುತ್ತಿರುವ ಮಹಾಯೋಗಿಗಳು ಮರಣವನ್ನು ಮಹಾನವಮಿಯಂತೆ ಸ್ವಾಗತಿಸುತ್ತಾರೆ. ಬದುಕಿನಲ್ಲಿ ಆಸೆ ಇದ್ದರೆ ಸಾವಿನಲ್ಲಿ ನಿರಾಸೆ ಹುಟ್ಟುತ್ತದೆ. ಬದುಕು ಸಾವನ್ನು ಸಾಮ್ಯದೃಷ್ಟಿಯಿಂದ ನೋಡುತ್ತಾ ಅವೆರಡೂ ಪುದ್ಗಲ ಪರ್ಯಾಯಗಳ ಅವಸ್ಥಾಂತರಗಳು. ಆತ್ಮನಿಗೆ ಹುಟ್ಟೂ ಇಲ್ಲ ಸಾವೂ ಇಲ್ಲ ಎಂದು ತನ್ನಲ್ಲಿ ತಾನು ಸ್ಥಿರಗೊಂಡಿರುವವನು ಸಾವಿಗೆ ಅಂಜಲೇಕೆ?

ಸಾವೆಂದರೆ ಯಾರಿಗೆ? ಆತ್ಮನಿಗೋ? ಇಲ್ಲ. ಆತ್ಮ ಅಮರ! ಸಾವು ಈ ಕ್ಷಣಿಕ ಬದುಕಿಗೆ. ಈ ನಶ್ವರ ಶರೀರಕ್ಕೆ. ಆತ್ಮನನ್ನು ಸೈತಾನನ್ನಾಗಿ ಮಾಡಿದ ಇಂದ್ರಿಯ ಭೋಗಕಾಂಕ್ಷೆಗೆ. ಆತ್ಮನನ್ನು ಸಂಸಾರದ ದೀರ್ಘಪರ್ಯಟನೆಗೆ ಹಚ್ಚಿದ ಬಾಹ್ಯ ಸಂಪರ್ಕಕ್ಕೆ. ಸಂಕಲ್ಪ–ವಿಕಲ್ಪಗಳಿಂದ ಬಳಸಿ ಪಾಪದ ಕೆಸರು ಮೆತ್ತುವ ಈ ನಶ್ವರ ಬದುಕಿಗೆ. ಮರಣವು ಇವೆಲ್ಲಾ ಅನಿಷ್ಟಗಳಿಂದ ಬಿಡಿಸುವ ಒಳ್ಳೆಯ ಸ್ನೇಹಿತ. ಆದ್ದರಿಂದ ಜ್ಞಾನಿಗಳು ಮರಣವನ್ನು ಮಹೋತ್ಸವದಂತೆ ಆಚರಿಸುತ್ತಾರೆ. ಜ್ಞಾನಿ

ಪುರುಷರು ಮರಣವನ್ನುಒಂದು ಸಾಧಾರಣ ಶಾರೀರ ಕ್ರೀಯೆಯೆಂದು ಭಾವಿಸುತ್ತಾರೆ. ಮರಣವು ಹೊಸತೇನು? ಈ ಜೀವ ಮರಣವನ್ನು ಎಂದೂ ಕಂಡಿಲ್ಲವೇ? ನಿಗೋದದಲ್ಲೂ ಒಂದು ಸ್ವಾಶದಲ್ಲಿ ಹದಿನೆಂಟು ಬಾರಿ ಹುಟ್ಟಿ ಸತ್ತು ಅನುಭವ ಮಾಡಿಕೊಂಡಿದ್ದಾನಲ್ಲ? ಸತ್ತು ಹುಟ್ಟಿದ್ದಕ್ಕೆ ಲೆಕ್ಕವೆಲ್ಲಿದೆ? ಮರಣವು ಒಂದು ಹಳೆಯ ರೋಗ. ಹುಟ್ಟು ಸಾವುಗಳು ನೆರಳಿದ್ದಂತೆ! ಸೂರ್ಯಾಸ್ತವಿದ್ದಂತೆ! ಶರೀರ ಇರುವವರೆಗೆ ಸಾವು ತಪ್ಪದು. ಸತ್ತ ಮೇಲೆ ಹುಟ್ಟು ನಿಲ್ಲದು. ಸಂಸಾರವೇ ಹುಟ್ಟು ಸಾವಿನ ಸಂತೆ! ಅದಕ್ಕೇಕೆ ಇಷ್ಟು ಚಿಂತೆ ಎಂದು ಮಹಾಯೋಗಿಗಳು ಮರಣದ ಬಗ್ಗೆ ಶಾಂತಿಯಿಂದ ನಿಶ್ಚಿಂತರಾಗಿರುತ್ತಾರೆ. ಮರಣ ಇಂದೇ ಬರಲಿ ಅಥವಾ ಈ ಜೀವ ನೂರ್ಕಾಲ ಇನ್ನೂ ಬದುಕಲಿ. ಯೋಗಿಗಳು ಜೀವನ ಮರಣವೆರಡಲ್ಲೂ ಸಮಚಿತ್ತರು. ಆತ್ಮನಂತೂ ಅಜರ ಅಮರ. ಅವನಿಗೆ ಮರಣವೆಲ್ಲಿ? ಮರಣದಿಂದ ಅವನಿಗೆ ಯಾವ ಚ್ಯುತಿ? ಜೀವನವಿಡೀ ತತ್ವ ಸಮಾರಾಧನೆಯಲ್ಲಿ ಸಮೃದ್ಧಗೊಂಡ ವೀರ ಯೋಗಿಗಳು ಹುಳಿತ ಹರಳು ಕಟ್ಟಿಗೆಯಂತೆ ನಾನಾ ರೋಗಗಳಿಂದ ಜರ್ಝರಿತ ಈ ಶರೀರವನ್ನು ನಂಬದೆ ನಿತ್ಯ ಸತ್ಯನಾದ ಆತ್ಮನನ್ನು ನಂಬುತ್ತಾರೆ. ಅಂತಹ ಯೋಗಿಗೆ ಮರಣ ಶರಣಾಗುತ್ತದೆ. ಅಂತಹ ಮರಣವನ್ನು ಪಂಡಿತ ಮರಣ ಎನ್ನುತ್ತಾರೆ. ಅಂತಹ ಪಂಡಿತ ಮರಣದ ಸಿದ್ಧತೆ ನಡೆಸಿದ್ದರು ಮಹಾಯೋಗಿ ಪಾಯಸಾಗರರು.

ಅವರು ಜೋಳದ ಗಂಜಿ ಮಾತ್ರ ಸೇವಿಸಲಾರಂಭಿಸಿದರು. ಹಾಲು, ಮೊಸರು ಮುಂತಾದ ರಸವಸ್ತು ತ್ಯಜಿಸಿದರು. ಶರೀರ ರೋಗಿಯಾದ್ದರಿಂದ ತುಪ್ಪವನ್ನು ಮಾತ್ರ ಇಟ್ಟುಕೊಂಡಿದ್ದರು. ಈ ಕ್ರಮ ೧೬ ತಿಂಗಳು ನಡೆದಿತ್ತು. ಆಗ ಅವರೆಷ್ಟುಆತ್ಮ ಜಾಗೃತರಾಗಿದ್ದರೆಂದರೆ ಅದು ಅವರ ಒಂದೊಂದು ಮಾತಿನಲ್ಲೂ ಕಾಣುತ್ತಿತ್ತು.

"ಈಗ ನನಗೆ ನನ್ನ ಜೀವನದ ಒಂದೊಂದು ಕ್ಷಣಗಳನ್ನೂ ಸಮಾಧಿ ಸಿದ್ಧಿಗಾಗಿ ಕ್ರೋಡಿಕರಿಸಿಕೊಳ್ಳಬೇಕಾಗಿದೆ."

ತಮ್ಮ ಅಂತ್ಯದ ಬಗ್ಗೆ ಅವರು ಹೀಗೆ ಹೇಳಿದರು.

"ಯಾರಿಗೂ ಸುಳಿವೇ ಹತ್ತದಂತೆ ನನ್ನ ಸಮಾಧಿ ಆಗಿ ಹೋಗುತ್ತದೆ." ಈ ಮಾತು ಸತ್ಯವಾಗಿ ಹೋಯಿತು. ೧೯೫೭ರಲ್ಲಿ ಅವರಿಗೆ ಸ್ವರ್ಗವಾಯಿತು.



## ಅಪೂರ್ವ ಚರ್ಯೆ

ಅವರ ಅಂತರ್ಮುಖತೆ ಅಪೂರ್ವವಾಗಿತ್ತು. ಹೋಗು ಹೋಗುತ್ತಲೇ ಇದ್ದಕ್ಕಿದ್ದಂತೆ ನಿಂತು ಧ್ಯಾನಮಗ್ನರಾಗಿಬಿಡುತ್ತಿದ್ದರು. ಶೌಚಕ್ಕಾಗಿ ಕಾಡಿಗೆ ಹೋಗುಹೋಗುತ್ತಾ ಎಲ್ಲಿಂದಲ್ಲಿ ಧ್ಯಾನಿಸುತ್ತ ನಿಲ್ಲುತ್ತಿದ್ದರು. ದೇಶ ಕಾಲ ಸ್ಥಿತಿಯ ಪರಿವೇ ಅವರಿಗಿರಲಿಲ್ಲ. ದರಿದ್ರ ಧನ ಪ್ರಾಪ್ತಿಯಾದ ಮೇಲೆ ಬಾರಿಬಾರಿಗೂ ಅದನ್ನು ಮುಟ್ಟಿ ನೋಡಿಕೊಳ್ಳುವಂತೆ; ಅದರ ರಕ್ಷಣೆಗೆ ಕ್ಷಣಕ್ಷಣವೂ ಚಿಂತಿಸುವಂತೆ ಆತ್ಮದರ್ಶನ ಹೀನನಾದ. ದರಿದ್ರ ಪೀತಾಂಬರ ಆತ್ಮಜ್ಞಾನ ನಿಧಿಯನ್ನು ಪೂರ್ವಾರ್ಜಿತ ಪುಣ್ಯದಿಂದ ಆಚಾರ್ಯ ಶಾಂತಿಸಾಗರರಿಂದ ಪಡೆದು ಲೋಕೋತ್ತರ ವಿಭೂತಿ ಆಚಾರ್ಯ ಪಾಯಸಾಗರರಾಗಿ ಎಲ್ಲೆಂದರಲ್ಲಿ ಅದನ್ನೇ ನೋಡುತ್ತಾ, ಸವಿಯುತ್ತಾ ಅದರಲ್ಲೇ ನಲಿಯುತ್ತಾ ಅದರ ರಕ್ಷಣೆಗಾಗಿ ಚಿಂತಿಸುತ್ತಾ ಅದರಲ್ಲೇ ಒಂದಾಗಿ ಹೋಗುತ್ತಾ ಈ ಲೋಕವನ್ನೇ ಮರೆಯುತ್ತಿದ್ದರು. ಜೀವನವಿಡೀ ತ್ರೈಲೋಕ್ಯ ದುರ್ಲಭ ಆತ್ಮ ಜಾಗೃತಿ ರತ್ನವನ್ನು ಕಾಪಾಡಿಕೊಂಡು ಬರುತ್ತಿದ್ದರು.

ಭೋಗಿಗಳ ಕಣ್ಮನಗಳೆದುರು ವಿಷಯ ಸುಖಗಳ ಭೈರವ ನೃತ್ಯ ನಡೆಯುತ್ತಿರುತ್ತದೆ. ಆತ್ಮ ಯೋಗಿಗೆ ಆತ್ಮಿಕ ಸುಖದ ಸೆಳೆಮಿಂಚು ಕೋರೈಸುತ್ತಿರುತ್ತದೆ. ಭೋಗಿಗಳ ಮನಸ್ಸು ಸದಾ ಕಂಪಾಯಮಾನವಾಗಿರುತ್ತದೆ. ಯೋಗಿಗಳು ಪ್ರಶಾಂತ ಸರೋವರದಂತಿರುತ್ತಾರೆ. ಪೀತಾಂಬರ ವಿಷಯ ಕಷಾಯಗಳ ಬೆನ್ನು ಹತ್ತಿ ಹುಚ್ಚು ಕುದುರೆಯಂತೆ ಓಡಿ ಸೋತಿದ್ದ. ಶಾಂತಿಯನ್ನು ಕಾಣದೆ ನಾನಾ ಬುಡುಬುಡಿಕೆ ವೇಷ ಕಟ್ಟಿ ಊರು ಊರು ಅಲೆದು ಕಂಗೆಟ್ಟಿದ್ದ. ನಡೆದು ಹೋಗುತ್ತಿದ್ದವನಿಗೆ ನಿಧಿ ಕಾಲಿಗೆ ತೊಡರಿಕೊಂಡಂತೆ ಶಾಂತಿಸಾಗರರು ಕಂಡಿದ್ದರು. ಶಾಂತಿಗಾಗಿ ಬಾಹ್ಯದಲ್ಲಿ ಅಲೆದಲೆದು ಕಸ್ತೂರಿ ಮೃಗದಂತೆ ಮೂರ್ಖನಾಗಿದ್ದವನಿಗೆ, ಶಾಂತಿ ಹೊರಗೆಲ್ಲೂ ಇಲ್ಲ. ತನ್ನಲ್ಲೇ ಇದೆ ಎಂದು ತಿಳಿದಕೂಡಲೇ ಬೆಟ್ಟದೆತ್ತರಕ್ಕೆ ಎದ್ದ ಅಲೆಗಳಿಂದ ಕೂಗಿ ಮೊರೆಯುತ್ತಿದ್ದ ಸಮುದ್ರದಂತಿದ್ದ ಪೀತಾಂಬರ ಒಂದೇ ಬಾರಿಗೆ ಪಾಯಸಾಗರರೆಂಬ ಶಾಂತ ಸಮುದ್ರವಾಗಿ ಬಿಟ್ಟ. ಇಂತಹ ವರ್ಣರಂಜಿತ ಜೀವನ ಇನ್ನೊಬ್ಬರದ್ದಿಲ್ಲ. ಕೋಟಿಕೊತ್ತಲ ಕಟ್ಟಿ ಮೆರೆದುರಿದು ಮಣ್ಣಲ್ಲಿ ಮಣ್ಣಾದವರಿದ್ದಾರೆ. ಹಂಸ ತೂಲಿಕ ತಲ್ಪದಲ್ಲಿ ನಲ್ಲೆಯ ತೋಳ ತೆಕ್ಕೆಯೇ ದಿಂಬಾಗಿ ಒರಗಿ ನೃತ್ಯ ನಾಟಕಗಳ ಸದಾ ಮೋಜಿನ ಜೀವನ ನಡೆಸಿದವರೆಷ್ಟು ಜನ ಕಾಡುಪಾಲಾಗಿಲ್ಲ. ಜಡದ ಹೋರಾಟದ ಬಾಳು ಏಕಮುಖವಾಗಿದ್ದರೂ ಪಾಯಸಾಗರರ ಬಾಳು ದ್ವಿಮುಖವಾಗಿತ್ತು. ಅವರು ಭೋಗಗಳ ಮಡಲಿಗೆ ಹಾರಿ ತಳ ಕಂಡಿದ್ದರು. ಅದರಿಂದ ಮೇಲಕ್ಕೇಳಲಾರದಷ್ಟು ತಳ ಕಂಡಿದ್ದರು. ಯಾವ ವೇಗದಲ್ಲಿ ಹಾರಿ ತಳಕಂಡಿದ್ದರೋ ಅದೇ ವೇಗದಿಂದ

ಆತ್ಮಕಲ್ಯಾಣದ ಶೃಂಗಕ್ಕೆ ಕುಪ್ಪಳಿಸಿದ್ದರು. ಭರತ ಚಕ್ರವರ್ತಿಯು ಮಹಾಭೋಗ ಭೋಗಿಸುತ್ತಿದ್ದರೂ ಭೋಗಗಳಲ್ಲಿ ಒಂದಾಗಿ ಹೋಗುತ್ತಿರಲಿಲ್ಲ. ಭೋಗದ ನಡುವೆಯೂ ಆತ್ಮ ಯೋಗದ ಪ್ರಶಾಂತ ನಿರ್ಝರಣ ಹರಿಯುತ್ತಿತ್ತು. ಆದ್ದರಿಂದ ಭರತ ಚಕ್ರವರ್ತಿ ಮಹಾಭೋಗಿಯಾಗಿದ್ದರೂ ನಿಸ್ಸೀಮ ಆತ್ಮಯೋಗಿಯೂ ಆಗಿದ್ದ. ಏಕೆಂದರೆ ಭೋಗಗಳ ನಡುವೆ ಆತ್ಮಯೋಗದ ಸಿದ್ಧತೆ ನಡೆಸಿದ್ದ ಭರತ ಚಕ್ರವರ್ತಿ. ಆದರೆ ಪೀತಾಂಬರನ ಮಾತೇ ಬೇರೆ. ಭರತೇಶನಂತೆ ಭೋಗಗಳನ್ನು ಅಂತರಂಗದಿಂದ ಬೇರ್ಪಡಿಸಿ ನೋಡುತ್ತಿದ್ದನೇನು? ಇಲ್ಲ. ಭೋಗಗಳಿಗೇ ತೆಕ್ಕೆಬಿದ್ದು ಪಾತಾಳಕ್ಕೆ ಜಾರಿ ಬಿದ್ದಿದ್ದ. ಅವುಗಳಲ್ಲೇ ಒಂದಾಗಿ ಬೆರೆತು ದುರ್ಗತಿಯ ಸುಳಿಯತ್ತ ಹೊರಟಿದ್ದ. ಜೀವನದ ಗೊತ್ತು ಗುರಿ ತಿಳಿಯದ, ಧರ್ಮವೆಂದರೇನು ಅರಿಯದ ಪಾಖಂಡಿಯಾಗಿ ಮೆರೆದು ಉರಿದಿದ್ದ. ವಿಷಯ ಕಷಾಯಗಳ ಮಡುವಿಗೆ ಹೆಬ್ಬಂಡೆಯಂತೆ ಬಿದ್ದುಹೋಗಿದ್ದ. ಅಂತಹ ಪೀತಾಂಬರ ದೀರ್ಘ ಸಂಸಾರದ ಮಡುವಿನಿಂದ ಮಹಾ ಉಲ್ಕೆಯಂತೆ ಭೋರ್ಗರೆಯುತ್ತಾ ಮೇಲೆದ್ದು ಬಂದನೆನ್ನುವುದು ಎಂತಹ ಸೋಜಿಗದ ಮಾತು? ಇದಕ್ಕೆ ಸರಿಗಟ್ಟುವ ಸಾಧನೆ ಇನ್ನೊಂದೆಲ್ಲಿದೆ?

ವ್ಯಕ್ತಿ ವ್ಯಕ್ತಿಗಳ ಏಳುಬೀಳು ಒಂದು ಜನ್ಮಕ್ಕೆ ಸೀಮಿತವಾಗಿರದೆ ಎಷ್ಟೋ ಭವಗಳಲ್ಲಿ ಹರವಿಕೊಂಡಿರುತ್ತದೆ. ಅದಃಪತನದ ಜಾಡು ಸೇರಿದ ಜೀವ ಪತನವಾಗುತ್ತಲೇ ನಡೆದು ಅವಧಿಸ್ಥಾನ ಸೇರುತ್ತದೆ. ಅದರ ಉನ್ನತಿಗೆ ಆ ಜೀವ ಅದೆಷ್ಟು ಭವ ಇನ್ನು ಸವೆಸಬೇಕಾಗುವುದೋ? ಧನ್ಯಕುಮಾರನ ಬದುಕು ಇಂತಹದ್ದೇ ಆಗಿತ್ತು. ಆದರೆ ಒಂದೇ ಭವನದಲ್ಲಿ ಉನ್ನತಿ ಅವನತಿಯ ಎರಡು ಶೃಂಗಗಳನ್ನು ಸ್ಪರ್ಶಿಸಿದ ರೋಚಕ ಜೀವನ ಪಾಯಸಾಗರರದು! ಎಷ್ಟೋ ಜೀವಗಳು ಸೋತು ಸೋಲುತ್ತಲೇ, ಎಡವಿ ಎಡವುತ್ತಲೇ ನಡೆದಿವೆ. ಪಾಯಸಾಗರರ ಬದುಕು ಅಂತಹದ್ದಲ್ಲ. ಅವರೇನೊ ಮೊದಮೊದಲು ಸೋತರು. ಅವರ ಸೋಲೇ ಗೆಲುವಾಯಿತು. ಎಡವಿಬಿದ್ದರೂ ಬೀಳುತ್ತಲೇ ಹೋಗಲಿಲ್ಲ. ಬಿರುಗಾಳಿಯಂತೆ ಮೇಲೆದ್ದು ಹೋದರು. ಇಂತಹ ಅದ್ಭುತ ಬದುಕಿನ ಇನ್ನೊಂದು ಉದಾಹರಣೆ ಎಲ್ಲಿದೆ?

## ನಿರಂತರ ಅಂತರ್ಮುಖಿ

ಬರುಬರುತ್ತಾ ಅವರ ಬಾಹ್ಯ ಚೇಷ್ಟೆಗಳು ನಿಂತುಹೋದವು. ಮಾತು ತೀರಾ ಕಡಿಮೆಯಾದವು. ನಿಂತರೆ ಕೂತರೆ ಸರ್ವತ್ರ ಆತ್ಮನತ್ತಲೇ ಲಕ್ಷ್ಯವಿತ್ತು. ಅವರಿಗೆ ಆಹಾರ ಚರ್ಯೆಯ ಬಗ್ಗೆಯೂ ಗಮನವಿರುತ್ತಿರಲಿಲ್ಲ. ಕಿಟಕಿಯ ಮೂಲಕ ವಿನಂತಿಸಿಕೊಳ್ಳಬೇಕಾಗಿತ್ತು. ಆಹಾರ ಮಾಡುಮಾಡುತ್ತಲೇ ಧ್ಯಾನಮಗ್ನರಾಗಿ ಬಿಡುತ್ತಿದ್ದರು. ಶ್ರಾವಕರ ಪ್ರಾರ್ಥನೆಯ ಮೇರೆಗೆ ಎಚ್ಚೆತ್ತುಆಹಾರ



ಮುಂದುವರೆಸುತ್ತಿದ್ದರು. ಇಂತಹ ಅಪೂರ್ವ ಆತ್ಮಚಿಂತಕರು ಇನ್ನೊಬ್ಬರಿಲ್ಲ. ಅವರು ನಂತರ ಹೇಳುತ್ತಿದ್ದರು.

"ನೀವು ನನ್ನ ಆತ್ಮ ಚಿಂತನೆಗೆ ಏಕೆ ವಿಘ್ನ ಒಡ್ಡುತ್ತೀರಿ? ನನಗೆ ಸ್ವಲ್ಪವೇ ಆಹಾರ ಕೊಟ್ಟು ನನ್ನನ್ನು ನನ್ನಾತ್ಮನಿಂದ ಏಕೆ ಕಿತ್ತುಕೊಳ್ಳುತ್ತೀರಿ? ನೀವು ನನಗೆ ಶಾಂತಿಯನ್ನುಂಟುಮಾಡದಿದ್ದರೆ ನೀವು ಕೊಡುವ ರೊಟ್ಟಿಯಿಂದ ನನಗೇನಾಗಬೇಕಾಗಿದೆ? ನನಗೆ ನನ್ನಾತ್ಮನ ಕಲ್ಯಾಣ ಮಾಡಿಕೊಳ್ಳಬೇಕಾಗಿದೆ. ನೆನಪಿಟ್ಟುಕೊಳ್ಳಿ, ನಾನು ಶರೀರದ ದಾಸನಲ್ಲ. ಅದರ ದಾಸನಾಗಿ ಸಂಸಾರದಲ್ಲಿ ಭ್ರಮಣೆ ಮಾಡುತ್ತಿರಲೇನು?"

ಅವರು ಆಚಾರ್ಯ ಪದವನ್ನು ತಮ್ಮ ಶಿಷ್ಯ ಅನಂತಕೀರ್ತಿಗಳಿಗೆ ವರ್ಗಾಯಿಸಿದ್ದರು. ಆಗ ಅವರಿಗೆ ಹೇಳಿದರು.

"ನೀನು ನಿನ್ನ ಕಲ್ಯಾಣವನ್ನು ಸ್ವಯಂ ಸಾಧಿಸಬೇಕು"

## ನನ್ನ ದೇವರು ನನ್ನಲ್ಲೇ ಇದ್ದಾನೆ

"ಇಷ್ಟರವರೆಗೇನೋ ಪರೋಪಕಾರ ಮಾಡಿದೆ. ಉಪದೇಶ ಕೊಟ್ಟೆ. ಧರ್ಮ ಪ್ರಭಾವನೆ ಮಾಡಿದೆ. ಇನ್ನು ಇದೆಲ್ಲವೂ ಸಾಕು. ನನಗೀಗ ಅನ್ಯಸ್ಥಳಕ್ಕೆ ಗಮನ ಮಾಡಬೇಕಾಗಿದೆ. ಅದಕ್ಕಾಗಿ ಸಿದ್ಧತೆ ನಡೆಸಬೇಕಾಗಿದೆ. ಈಗ ನಿಮ್ಮ ಬಗ್ಗೆ ಚಿಂತಿಸಲು ಸಮಯವಿಲ್ಲ. ನಿಮ್ಮನ್ನು ನಾನು ಸಮಾಧಾನ ಪಡಿಸುವುದಾದರೂ ಹೇಗೆ? ನೀವೇ ಸ್ವಯಂ ಪರಿಪೂರ್ಣರಾಗಬಲ್ಲಿರಿ. ನೀವೇ ನಿಮ್ಮಾತ್ಮನಿಗೆ ಬೆಳಕು ತೋರಿಸಬಲ್ಲಿರಿ. ಆ ಪ್ರಕಾಶ ನಿಮ್ಮಲ್ಲೇ ಇದೆ. ಬಾಹ್ಯದ ಪ್ರಕಾಶದ ನೆರವಿನ ಅಗತ್ಯವಿಲ್ಲ. ನನಗೂ ಬಾಹ್ಯದ ಬೆಳಕಿನ ಅಗತ್ಯವಿಲ್ಲ. ನನ್ನ ಹತ್ತಿರವೇ ನನ್ನ ನಿಧಿ ಇದೆ. ನನ್ನಲ್ಲೇ ಜ್ಞಾನದ ಭಂಡಾರವಿದೆ. ನಾನೇ ಸ್ವಯಂ ಪ್ರಕಾಶಕನಿದ್ದೇನೆ. ನನ್ನಲ್ಲೇ ನನ್ನ ಜೀವನದ ಸರ್ವಸ್ವವಿದೆ. ನನ್ನಲ್ಲೆ ನನ್ನ ದೇವರಿದ್ದಾನೆ."

ಈ ಮಾತು ಹೇಳುತ್ತಾ ಹೇಳುತ್ತಾ ಉದ್ವಿಗ್ನರಾಗಿ ಹೋಗುತ್ತಿದ್ದರು. ಅವರು ಪರಬ್ರಹ್ಮಸ್ವರೂಪದ ಪ್ರತೀಕವಾಗಿದ್ದರು. ಆಗ ಯಾರೋ ಒಬ್ಬರು ಕೇಳಿದರು.

"ಮಹರಾಜ್! ತಮ್ಮ ಶರೀರದ ಸ್ವಾಸ್ಥ್ಯ ಹೇಗಿದೆ?" ಆಗ ಅವರ ಉತ್ತರ ಚಮತ್ಕಾರಿಕವಾಗಿತ್ತು.

"ಈ ಚಿರರೋಗಿ ಶರೀರದ ಕಥೆಯನ್ನೇನು ಕೇಳುತ್ತಿದ್ದೀಯೋ? ನನ್ನಾತ್ಮನ ಸ್ವಾಸ್ಥ್ಯದ ಬಗ್ಗೆ ಏಕೆ ಕೇಳುತ್ತಿಲ್ಲ? ನಾನು ಸ್ವಾಸ್ಥ್ಯಪೂರ್ಣನಿದ್ದೇನೆ. ನಿರೋಗಿ ಇದ್ದೇನೆ.

ನಾನು ಆನಂದಮಯನಿದ್ದೇನೆ. ಶರೀರವು ಪುದ್ಗಲಪಿಂಡ. ನಾನಾ ರೋಗದ ಆವಾಸ. ಅದು ಅದರ ಗುಣ. ಅದು ತನ್ನ ಸ್ವಭಾವಕ್ಕೆ ತಕ್ಕಂತೆ ವರ್ತಿಸುತ್ತದೆ. ನಾನು ಈ ಶರೀರವಲ್ಲ. ನಾನು ಅದರ ಸೇವಕನಲ್ಲ. ನಾನು ನನ್ನ ಸ್ವರೂಪದ ಸ್ವಾಮಿಯಾಗಿದ್ದೇನೆ. ಈ ಕೆಟ್ಟ ಶರೀರದ ಗುಲಾಮನೇಕಾಗಲಿ?"

## ಆತ್ಮ ಧ್ಯಾನವೇ ಔಷಧಿ

"ನಾನು ಔಷಧಿಯನ್ನು ತ್ಯಜಿಸಿದ್ದೇನೆ. ಬಾಹ್ಯಾಭ್ಯಂತರ ಎಲ್ಲಾ ರೋಗಗಳಿಗ ಆತ್ಮ ಧ್ಯಾನವೇ ಸಿದ್ಧೌಷಧಿ. ಇದರಿಂದ ಆತ್ಮಸ್ವಾಸ್ಥ್ಯ ಉಂಟಾಗುತ್ತದೆ. ಅನಾದಿಕಾಲೀನ ಪಾಪ ಪುಣ್ಯ ರೂಪಿ ಕರ್ಮಗಳೂ ನಾಶವಾಗುತ್ತವೆ"

## ಯಾವುದು ಸಂಪತ್ತು?

"ನೀವು ಎಲ್ಲಾಬಿಟ್ಟು ಹಣಕ್ಕಾಗಿ ಕಷ್ಟಪಡುತ್ತಿದ್ದೀರಿ. ನೀವು ಗ್ರಾಹಕರು ಬಂದಾಗ ಶರೀರದ ಚಿಂತೆ ಬಿಟ್ಟು ಧನ ಸಂಪಾದನೆಯಲ್ಲಿ ತೊಡಗುತ್ತೀರಿ. ನನ್ನದೂ ವ್ಯಾಪಾರ. ಭವ್ಯ ಜೀವಿಗಳ ಕಲ್ಯಾಣವೇ ನನ್ನ ವ್ಯಾಪಾರ. ಮೋಕ್ಷ ಮಾರ್ಗದಲ್ಲಿ ಅವರನ್ನು ಹಚ್ಚುವುದೇ ನನ್ನ ಲಾಭ. ನನ್ನ ವ್ಯಾಪಾರದ ಬಗ್ಗೆ ನೀವೇಕೆ ಕಂಡು ಮೆಚ್ಚಿಕೊಳ್ಳುವುದಿಲ್ಲ. ಕಣ್ಣುಮುಚ್ಚಿದರೂ ಅಂತರಂಗದಲ್ಲಿ ಚಿಂತನೆ ಬಿಡುವುದಿಲ್ಲ. ಜಿನಂದ್ರ ಭಗವಾನರ ವಾಣಿಯ ಮಂಗಲಮಯ ರಸಪಾನ ಸಮಸ್ತ ಸಂಕಟಗಳನ್ನು ನಾಶ ಮಾಡುತ್ತದೆ."

## ಗುರುಸ್ಮರಣೆ

"ನಾನೆಂತಹ ಪಾಪವನ್ನು ಮಾಡಿಲ್ಲ? ಯಾವ ವ್ಯಸನಗಳಲ್ಲಿ ಮುಳುಗಿರಲಿಲ್ಲ? ನಾನು ಪಾಪ ಸಾಗರನಾಗಿದ್ದೆ. ನಾನೆಲ್ಲಿಗೆ ಹೋಗುತ್ತಿದ್ದೆನೋ ನಾಕಾಣೆ. ರಸಾತಲದಲ್ಲೂ ನನಗೆ ಸ್ಥಳವಿರಲಿಲ್ಲ. ನನ್ನ ಗುರು ನನ್ನಂತಹ ಪಾಪಸಾಗರನನ್ನು ಪಾಯಸಾಗರನನ್ನಾಗಿ ಮಾಡಿದರು."

ಹೀಗೆ ಹೇಳುತ್ತಿರುವಂತೆಯೆ ಅವರ ಕಣ್ಣಲ್ಲಿ ತಟ್ಟನೆ ಹನಿಗಳು ಉದುರಿ ಬಿದ್ದವು. ಅವುಗಳನ್ನು ಒರೆಸಿಕೊಂಡು ಗುರುಸ್ಮರಣೆಯ ಗುಂಗಿನಲ್ಲಿ ಆ ಜೀವ ಮತ್ತೆ ಮುಳುಗಿತು.



# ಆಚಾರ್ಯ ಧರ್ಮಸಾಗರರು ೧೮

ಆಚಾರ್ಯ ಧರ್ಮಸಾಗರರನ್ನು ಜಬ್ಬಲ್‌ಪುರದ ಹತ್ತಿರದ ಗ್ರಾಮದಲ್ಲಿ ಚಾತುರ್ಮಾಸ ಮಾಡುತ್ತಿದ್ದಾಗ ದರ್ಶನ ಮಾಡಿದೆ. ಅವರು ಆಚಾರ್ಯ ಶ್ರೀಯವರೊಡನೆ ದೀರ್ಘ ಕಾಲ ಇದ್ದರು. ನಾನು ೧೯೫೫ ನವೆಂಬರ್ ೨೪ರಂದು ಅವರಲ್ಲಿಗೆ ಹೋದೆ. ಆಗ ಅವರು ಸಾಮಾಯಿಕದಲ್ಲಿದ್ದರು. ಸಾಮಾಯಿಕವಾದನಂತರ ನಮೋಸ್ತುಮಾಡಿ ಅವರ ಪವಿತ್ರ ಆಶೀರ್ವಾದ ಪಡೆದುಕೊಂಡೆಸಾಮಾಯಿಕದ ರಹಸ್ಯ ತಿಳಿಯಲು ಹವಣಿಸಿದೆ.

ನಾನು ಕೇಳಿದೆ: "ಮಹರಾಜ್! ನೀವು ಸಾಮಾಯಿಕದಲ್ಲಿ ಏನನ್ನು ಚಿಂತಿಸುತ್ತೀರಿ?" ಅವರು: "ನಾವು ಏನೂ ಮಾಡುವುದಿಲ್ಲ. ರಾಗ ದ್ವೇಷಗಳನ್ನು ತ್ಯಜಿಸಿ ಸುಮ್ಮನೆ ಕೂತಿರುತ್ತೇವೆ. ಇದರ ಹೊರತು ಸಾಮಾಯಿಕವೆಂದರೆ ಮತ್ತಿನ್ನೇನು?" ವಾಸ್ತವವಾಗಿ ರಾಗ–ದ್ವೇಷಗಳಮೂಲಕ ಉಂಟಾಗುವ ಆರ್ತ ರೌದ್ರಧ್ಯಾನಗಳ ಪರಿತ್ಯಾಗವೇ ಸಾಮಾಯಿಕವೆಂದು ಪರಮಾಗಮದಲ್ಲಿ ಹೇಳಿದೆ. ಸ್ವರ್ಗೀಯ ಆಚಾರ್ಯ ಶಾಂತಿಸಾಗರ ಮಹರಾಜರೂ ಆತ್ಮಚಿಂತನೆಗೆ ವಚನಾಲಾಪ ತ್ಯಜಿಸಿ ಶಾಂತಚಿತ್ತರಾಗಿ ಸುಮ್ಮನೆ ಕುಳಿತಿರಲು ಹೇಳುತ್ತಿದ್ದರು.

## ಸ್ವರ್ಗವಾಸ ಸೂಚಕ ಸ್ವಪ್ನ

"ಆಚಾರ್ಯ ಮಹರಾಜರ ಸ್ವರ್ಗವಾಸ ೧೮-೯-೧೯೫೫ರ ಸುಪ್ರಭಾತದಲ್ಲಾಯಿತು. ಅದೇ ದಿನ ಪ್ರಭಾತದಲ್ಲಿ ನಮಗೊಂದು ಕನಸು ಬಿತ್ತು. ಆಗ ಮಹರಾಜರು ಸ್ವರ್ಗವಾಸಿ ಆಗಿ ಹೋಗಿರಬಹುದೆಂದು ಊಹಿಸಿದೆವು" ಆಗ್ರಹಪಡಿಸಿದ ಮೇಲೆ ಆ ಕನಸು ಹೇಳಿದರು–

"ಆ ರಾತ್ರಿಯ ಅಂತಿಮ ಪ್ರಹರದಲ್ಲಿ ನಮಗೆ ಒಂದು ಶವ ಕಣ್ಣಿಗೆ ಬಿತ್ತು. ಅದು ಆಕಾಶದಿಂದ ನಮ್ಮತ್ತ ಬರುತ್ತಿತ್ತು. ಅದು ನಮ್ಮ ಹತ್ತಿರ ಬರುತ್ತಿದ್ದಂತೆಯೇ ಅದಕ್ಕೆ "ಣಮೋ ಅರಹಂತಾಣಂ"ಎಂದು ಹೇಳು ಎಂದೆವು. ಣಮೋ ಅರಹಂತಾಣಂ ಎನ್ನುವ ಧ್ವನಿ ಆ ಶವದಿಂದ ಹೊರಬಂತು. ಸ್ವಲ್ಪ ಸಮಯದ ನಂತರ ಅದು ಅದೃಶ್ಯವಾಯಿತು"

"ಸ್ವರ್ಗ ವಾಸಕ್ಕೆ ಎಂಟುದಿನ ಮೊದಲು ಆಚಾರ್ಯ ಮಹರಾಜರು ಕಾಣಿಸಿಕೊಂಡಿದ್ದರು. ಅವರೊಡನೆ ವರ್ಧಮಾನಸಾಗರರು ಮತ್ತು ಪಾಯಸಾಗರರು ಇದ್ದರು."

## ಭಟ್ಟಾರಕ ಜಿನಸೇನರ ಕನಸು

ನಾನು ಕೇಳಿದೆ:– "ಭಟ್ಟಾರಕ ಜಿನಸೇನರಿಗೆ ೮.೮.೧೯೩೭ರಲ್ಲಿ ಸುಮಾರು ಬೆಳಗಿನಜಾವ ೫ ಗಂಟೆಗ ಒಂದು ಕನಸು ಬಿದ್ದು ಇಂದಿಗೆ ಮೂರನೇ ಭವದಲ್ಲಿ ಆಚಾರ್ಯ ಮಹರಾಜರು ತೀರ್ಥಂಕರರಾಗುವರೆಂದು ಹೇಳಿದಂತಾಗಿತ್ತು"

ಅವರು: ಭಟ್ಟಾರಕ ಜಿನಸೇನರ ಸ್ವಪ್ನ ಸತ್ಯವಾದುದು. ಆಚಾರ್ಯ ಮಹರಾಜರೂ ಈ ಸ್ವಪ್ನದ ಸತ್ಯತೆಯನ್ನು ಪ್ರಮಾಣೀಕರಿಸಿದ್ದಾರೆ.

ನಾನು: "ಹೊರದೇಶಕ್ಕೆ ಹೋದ ಭಾರತೀಯರು ಪರಿಸ್ಥಿತಿಯ ಒತ್ತಡಕ್ಕೆ ಸಿಕ್ಕಿ ಮಾಂಸಾಹಾರಿಗಳಾಗುತ್ತಾರೆ. ಇದು ಅನಿವಾರ್ಯ ಎಂದು ವಾದಿಸುತ್ತಾರೆ. ಈ ಬಗ್ಗೆ ನಿಮ್ಮ ಅಭಿಪ್ರಾಯವೇನು?"

ಅವರು:– "ಅಭಕ್ಷ್ಯ ತಿಂದು ಬದುಕುವುದಕ್ಕಿಂತ ಮರಣವೇ ಲೇಸು" ಅವರ ಉತ್ತರ ಚುರುಕಾಗಿತ್ತು. ಚುಟುಕಾಗಿತ್ತು.

ಆಚಾರ್ಯ ಶ್ರೀಯವರ ಬಗ್ಗೆ

"ನಾನಾಗ ಬಹಳ ಚಿಕ್ಕವನು. ಅವರನ್ನು ಎರನಾಲದಲ್ಲಿ ದರ್ಶನ ಮಾಡಿದ್ದೆ. ಆಗ ಅವರು ಐಲಕರು. ಅಲ್ಲಿಯೇ ಅವರ ಮುನಿದೀಕ್ಷೆ ಆಯಿತು. ಕೊಣ್ಣೂರಿನಲ್ಲಿ ಅವರ ಚಾತುರ್ಮಾಸ ಆಯಿತು. ಅದು ನಮ್ಮ ಊರು ಪಚ್ಚಾಪುರಕ್ಕೆ ೧೦ ಮೈಲು ದೂರವಿದೆ. ರವಿವಾರ ರಜಾ ಬಂದ ಕೂಡಲೇ ೧೦ ಮೈಲು ನಡೆದೇ ಅವರ ದರ್ಶನಕ್ಕೆ ಕೊಣ್ಣೂರಿಗೆ ಓಡಿ ಹೋಗುತ್ತಿದ್ದೆವು. ಸಾಯಂಕಾಲ ಮನೆಗೆ ಮರಳುತ್ತಿದ್ದೆವು. ದಿನಕ್ಕೆ ೧೦ ಮೈಲು ಹೋಗಿ ಬರುವುದು ಅವರ ದರ್ಶನದ ಮುಂದೆ ಕಷ್ಟಕರ ಅನ್ನಿಸುತ್ತಿರಲಿಲ್ಲ.

"ಅಲ್ಲಿ ಆಚಾರ್ಯಶ್ರೀಯವರು ಕನ್ನಡದಲ್ಲಿ ಚಾರಿತ್ರದ ಬಗ್ಗೆ ಉಪದೇಶ ಕೊಡುತ್ತಿದ್ದರು. ಶಾಸ್ತ್ರ ಸ್ವಾಧ್ಯಾಯ ಚೆನ್ನಾಗಿ ನಡೆಯುತ್ತಿತ್ತು. ಶುದ್ಧ ಚಾರಿತ್ರಧಾರಿ ನಿರ್ಗ್ರಂಥ ಮುನಿಯಾದ್ದರಿಂದ ಅವರ ಪ್ರಭಾವ ವೇಗವಾಗಿ ಹಬ್ಬಿತು.

"ಆಗ ನೇಮಿಸಾಗರರು ಗೃಹಸ್ಥರಾಗಿದ್ದರು. ಅವರು ಶಾಸ್ತ್ರ ಓದುತ್ತಿದ್ದರು. ಮಹರಾಜರು ಅದನ್ನು ಬಿಡಿಸಿ ಹೇಳುತ್ತಿದ್ದರು. ಆಗ ಅವರು ಅಷ್ಟಮಿ



ಚತುರ್ದಶಿಗಳಲ್ಲಿ ಮೌನವಿರುತ್ತಿದ್ದರು. ಈ ಮೌನದ ವೇಳೆಯಲ್ಲಿ ಒಂದು ಸರ್ಪ ಅವರನ್ನು ಬಳಸಿ ನಿಲ್ಲುತ್ತಿತ್ತು. ಆಗ ಅವರು ಬಹಳ ಸ್ಥಿರ ಚಿತ್ತರಾಗಿರುತ್ತಿದ್ದರು."

## ವೈಯಕ್ತಿಕ ವಿಚಾರ

ನಮಗೆ ಪ್ರಾರಂಭದಿಂದಲೂ ಬ್ರಹ್ಮಚಾರಿಯಾಗುವ ಭಾವವಿತ್ತು. ಆದ್ದರಿಂದಲೇ ಆಗಾಗ್ಗೆ ಅವರ ಹತ್ತಿರ ಬಂದು ಹೋಗುತ್ತಿದ್ದೆವು. ಮೊದಲು ಅವರು ಮದುವೆ ಆಗುವವರೆಗೆ ಎಂದು ಬ್ರಹ್ಮಚರ್ಯ ಕೊಟ್ಟಿದ್ದರು. ನಂತರ ೧೯೨೭ರಲ್ಲಿ ಶಿಖರಜಿಯಲ್ಲಿ ಆಜನ್ಮ ಬ್ರಹ್ಮಚರ್ಯ ಕೊಟ್ಟರು. ಅವರಿಂದಲೇ ಕ್ಷುಲ್ಲಕ ಐಲಕ ದೀಕ್ಷೆ ತೆಗೆದುಕೊಂಡೆ. ಅವರು ತಮ್ಮ ಸ್ವಹಸ್ತದಿಂದಲೇ ಮುನಿದೀಕ್ಷೆ ಕೊಟ್ಟರು.

## ಶ್ರವಣಬೆಳಗೊಳದ ಯಾತ್ರೆ

೧೯೩೪ರಲ್ಲಿ ಅವರು ಗೋಕಾಕದಿಂದ ಶ್ರವಣಬೆಳಗೊಳಕ್ಕೆ ಯಾತ್ರೆ ಹೊರಟಿದ್ದರು. ಆಗ ಅಲ್ಲಿ ೧೫ ದಿನಗಳಿದ್ದರು. ಅವರು ಮಠದ ಆಹಾರ ಸ್ವೀಕರಿಸುತ್ತಿರಲಿಲ್ಲ. "ಮಠದ ಅನ್ನ ಒಳ್ಳೆಯದಲ್ಲ. ಅಲ್ಲಿಯ ಹಣ ಪ್ರಾಯಶ್ಚಿತ್ತ ದಂಡ ಮುಂತಾದವುಗಳ ಮೂಲಕ ಬರುತ್ತದೆ. ನೈರ್ಮಲ್ಯಯುಕ್ತವಾದುದು ಸ್ವೀಕಾರಾರ್ಹವಲ್ಲ" ಎಂದು ಅವರು ಹೇಳುತ್ತಿದ್ದರು. ಪುರೋಹಿತರ ಮನೆಗೂ ಅವರು ಹೋಗುತ್ತಿರಲಿಲ್ಲ. ಚಂದ್ರಗಿರಿಯ ಒಂದು ಪ್ರಾಚೀನ ಮಂದಿರದಲ್ಲಿ ವಾಸವಾಗಿದ್ದರು.

## ಅಪೂರ್ವ ಧೈರ್ಯ

ಒಮ್ಮೆ ಧರ್ಮಸಾಗರರು ಒಂದು ಮರದ ಕೆಳಗೆ ಧ್ಯಾನಕ್ಕೆ ಕುಳಿತಿದ್ದರು. ಅವರ ನೆತ್ತಿಯ ಮೇಲೆ ಸ್ವಲ್ಪ ದೂರದಲ್ಲಿ ಕೊಂಬೆಯ ಮೇಲೆ ಎರಡು ಸರ್ಪಗಳು ಅತ್ತಿತ್ತ ಓಡಾಡುತ್ತಿದ್ದವು. ಒಬ್ಬ ಗ್ರಾಮೀಣ ವ್ಯಕ್ತಿ ಅಲ್ಲಿಯ ಶ್ರಾವಕರಿಗೆ ಅದನ್ನು ತೋರಿಸಿದ. ಶ್ರಾವಕರು ಗಾಬರಿಗೊಂಡರು. ಧ್ಯಾನವಾದ ಮೇಲೆ ಆ ಸ್ಥಳ ಬಿಡಲು ಪ್ರಾರ್ಥಿಸಿದರು. ಧರ್ಮಸಾಗರರು ೨ ಗಂಟೆವರೆಗೆ ಅಲ್ಲೇ ಕೂತಿದ್ದರು.

ನಾನು ಕೇಳಿದೆ– "ಮಹರಾಜ್! ನಿಮ್ಮ ನೆತ್ತಿಯ ಮೇಲೆ ಸಾಕ್ಷಾತ್ ಯಮರಾಜನೇ ನರ್ತಿಸುತ್ತಿದ್ದ. ಆದರೂ ನಿರ್ಭೀತರಾಗಿ ಅಲ್ಲಿಯೇ ಕೂತಿದ್ದೀರಿ. ಇದರ ರಹಸ್ಯವೇನು?" ಅವರೆಂದರು–"ಇಲ್ಲಿ ಭಯದ ಕಾರಣವೇನಿದೆ? ಹಾವು ನಮ್ಮ ತಲೆಯ ಮೇಲೆ ಬಂದಿದ್ದರೂ ನಮ್ಮಾತ್ಮನಿಗೇನು ಕೇಡಾದೀತು?" ಈ ಮಾತು ಕೇಳಿ ಚಕಿತನಾದೆ. ಎಷ್ಟೇ ಆದರೂ ಅವರು ಶಾಂತಿಸಾಗರ ಮಹರಾಜರ ಶಿಷ್ಯರಲ್ಲವೇ?

ಅವರು ಇನ್ನೊಂದು ವಿಚಾರ ಹೇಳಿದರು-

"ಬುದ್ಧಿ ಪೂರ್ವಕ ತ್ಯಾಗದಿಂದಲೇ ಫಲಪ್ರಾಪ್ತಿಯಾಗುತ್ತದೆ. ಮಂದಿರಕ್ಕೆ ಹೋಗುತ್ತೀರಿ. ಮನೆಗ ಬರುವವರೆಗೆ ಸರ್ವ ಪ್ರಕಾರದ ಆಹಾರ ತ್ಯಾಗವಿರಲಿ ಎಂದು ಸಂಕಲ್ಪ ಮಾಡಿಕೊಂಡರೆ, ಒಮ್ಮೆ ಮಾರ್ಗಮಧ್ಯದಲ್ಲಿ ಮರಣವಾದರೂ ಸದ್ಗತಿಯಾಗುತ್ತದೆ. ರಾತ್ರಿ ಆಹಾರ ತ್ಯಾಗದ ಸಂಕಲ್ಪ ಮಾಡಿ ಮಲಗಿರಿ. ಸರ್ಪ ಕಚ್ಚಿ ಸ್ಥಿರತೆಯಿಂದ ಸತ್ತರೆ ಸದ್ಗತಿಯಾಗುತ್ತದೆ. ಶರೀರವಂತೂ ನಾಶಶೀಲ. ಮೋಹವಿಟ್ಟು ಏಕೆ ಪೋಷಣೆ ಮಾಡುತ್ತೀರಿ. ಶರೀರದಲ್ಲಿ ಆಸಕ್ತಿ ಇಟ್ಟುಕೊಳ್ಳುವವರೆಗೆ ಉದ್ಧಾರವಿಲ್ಲ. ತ್ಯಾಗಭಾವನೆ ಬೆಳಸಿಕೊಳ್ಳಿ.

### ತ್ಯಾಗದ ಮಹತ್ವ

ತ್ಯಾಗದ ಬಗ್ಗೆ ಒಂದು ಕಥೆ ಹೇಳಿದರು.

ಒಬ್ಬ ಬ್ರಹ್ಮಚಾರಿ ಒಬ್ಬ ವಿದ್ವಾನ್ ಬಳಿ ಹೋದ. ಅಲ್ಲೇ ಪಂಜರದಲ್ಲಿ ಒಂದು ಗಿಳಿ ಇತ್ತು. ವಿದ್ವಾನ್ ಬ್ರಹ್ಮಚಾರಿಯಿಂದ ಉಪದೇಶ ಕೇಳ ಬಯಸಿದ. ತ್ಯಾಗದಿಂದ ಬಂಧನ ಹರಿದುಹೋಗುತ್ತದೆ ಎಂದು ಹೇಳಿದ ಬ್ರಹ್ಮಚಾರಿ. ಇದನ್ನು ಕೇಳಿದ ಗಿಳಿ ಸತ್ತಂತೆ ಬಿದ್ದುಕೊಂಡಿತು. ಅದು ಸತ್ತೇಹೋಯಿತೆಂದು ಹೊರತೆಗೆದು ಬಿಟ್ಟ. ಕೂಡಲೇ ಅದು ಹಾರಿಹೋಯಿತು. ಒಂದು ಗಂಟೆ ಅನ್ನ ನೀರು ತ್ಯಾಗ ಮಾಡಿದ್ದರಿಂದ ಆ ಗಿಳಿ ಪರಾಧೀನತೆಯಿಂದ ಪಾರಾಯಿತು. ನೀನೂ ನಿಜವಾದ ತ್ಯಾಗ ಮಾಡು. ನಿನಗೆ ಮುಕ್ತಿ ಸಿಗುತ್ತದೆ ಎಂದು ಬ್ರಹ್ಮಚಾರಿ ಉಪದೇಶಿಸಿದ." ಈ ಕಥೆ ಹೇಳಿ ಎಲ್ಲರ ಮುಖ ನೋಡಿದರು.



# ನೆಮಿಸಾಗರರು ೧೮

ಜೈನಧರ್ಮದ ಪ್ರಭಾವನಾರ್ಥ ಜಪಾನ್, ಹಾಂಕಾಂಗ್, ಸಿಂಗಪೂರ್, ಮುಂತಾದ ಹೊರದೇಶಗಳಿಗೆ ಹೋಗಿ ವಾಪಾಸದ ಮೇಲೆ ಆತ್ಮ ನಿರ್ಮಲತೆಯ ಉದ್ದೇಶದಿಂದ ೧೬ನೇ ಅಕ್ಟೋಬರ್ ೧೯೫೭ ರಂದು ಕಲಕತ್ತದಿಂದ ಇಸರಿಗೆ ಬಂದೆ. ತಾ.೧೮ರಂದು ಶಖರಜಿ ವಂದಿಸಿದೆ. ಅಪೂರ್ವ ಶಾಂತಿ ಸಿಕ್ಕಿತು. ಅಂದು ಚತುರ್ದಶಿಯ ಪುಣ್ಯದಿನ. ಆ ದಿನ ಉಪವಾಸವಿದ್ದೆ. ಸ್ವಲ್ಪವೂ ಕಷ್ಟವೆನಿಸಲಿಲ್ಲ. ಇಸರಿಯಲ್ಲಿ ಸಮಾಧಿ ಶಯ್ಯೆಯಲ್ಲಿದ್ದ ೧೦೮ ಶ್ರೀನೆಮಿಸಾಗರ ಮುನಿಗಳ ದರ್ಶನವಾಯಿತು.ಅಂದು ಅವರೊಡನೆ ಕೆಲವು ವಿಚಾರಗಳನ್ನು ಚರ್ಚಿಸಿದೆ. ಆದಾದ ಸ್ವಲ್ಪ ಕಾಲದಲ್ಲೇ ಅವರ ಸ್ವರ್ಗವಾಸವಾಯಿತು.

ಪ್ರಶ್ನೆ : " ಮಹರಾಜ್! ನಿಮ್ಮ ಶರೀರ ಅಸ್ಥಿ ಪಂಜರವಾಗಿದೆ. ನೀವು ಸಲ್ಲೇಖನ ಸಿದ್ದತೆ ನಡೆಸಿದ್ದೀರಿ. ಮಾನಸಿಕ ಅಶಾಂತಿ ಇಲ್ಲವಷ್ಟೆ.

ಉತ್ತರ : " ನಾನು ಆಚಾರ್ಯ ಶಾಂತಿಸಾಗರ ಮಹರಾಜರ ಶಿಷ್ಯ. ಅವರಂತೆಯೇ ಸಾಮಾಧಿಯ ಉದ್ಯೋಗ ಮಾಡುತ್ತಿದ್ದೇನೆ. ನನ್ನಲ್ಲಿ ಪೂರ್ಣಶಾಂತಿ ಇದೆ. ಶಾರೀರಿಕ ಬಾಧೆಯ ಬಗ್ಗೆ ಏನು ಕೇಳುವಿರಿ? ಶರೀರದ ಪೀಡೆ ಶರೀರದಲ್ಲಿ ಇದೆ. ನನ್ನ ಹತ್ತಿರವಿಲ್ಲ. ನನ್ನ ಹತ್ತಿರವಂತೂ ನನ್ನ ಆತ್ಮನ ಆನಂದವಿದೆ. ನನಗೆ ಯಾವ ಭಯವೂ ಇಲ್ಲ. ನಾನು ಸುಖಿ.

ಪ್ರ : ಈ ಸಲ್ಲೇಖನ ಸಂಕಲ್ಪದಿಂದ ನಿಮಗೆ ಆನಂದ ಮೊದಲಿಗಿಂತಲೂ ಹೆಚ್ಚಿದೆಯೋ ಕಡಿಮೆಯಾಗಿದೆಯೋ?

ಉ : ಅದರಿಂದ ನನ್ನ ಆನಂದ ವರ್ಧಿಸಿದೆ. ಮೋಕ್ಷಲಕ್ಷ್ಮಿಯ ಪ್ರಾಪ್ತಿಯ ಮಾರ್ಗ ಸಿಕ್ಕಿದೆ. ಮುಕ್ತಿ ರಮಣಿಯ ಉಪಲಬ್ಧಿ ಮುಂದೆ ಆದೀತು. ನಾನಂತೂ ಆನಂದವಾಗಿದ್ದೇನೆ.

### ಸ್ವಪ್ನದಲ್ಲಿ ಗುರುದರ್ಶನ

ಅವರು ಹೇಳಿದರು -

" ಸ್ವರ್ಗೀಯ ಆಚಾರ್ಯ ಮಹರಾಜರು ಸ್ವಪ್ನದಲ್ಲಿ ಕಾಣಿಸಿಕೊಂಡು ಹೀಗೆ ಹೇಳಿದರು. "ಧರ್ಮದಲ್ಲಿ ಸ್ಥಿರವಾಗಿರು. ಇಲ್ಲಿ ದೆಹಲಿಯ ಕಡೆ ಈಗ

ಇರಬೇಡ. ಇಲ್ಲಿಂದ ಹೋಗು. ನಿನ್ನ ದಿನಗಳು ಹತ್ತಿರ ಬಂದಿವೆ. ಅದರೂ ಸಾವಧಾನವಾಗಿರು"ನಂತರ ನನ್ನ ಪ್ರಶ್ನೆಗಳಿಗೆ ಉತ್ತರ ಹೇಳತೊಡಗಿದರು.

" ಅವರು ನಾಲ್ಕು ಬಾರಿ ಸ್ವಪ್ನದಲ್ಲಿ ಬಂದಿದ್ದರು. ಅವರ ಸಮಾಧಿಯಾದ ಮೇಲೆ ೨೪ ತೀರ್ಥಂಕರರಲ್ಲೂ ಅವರಂತಹ ಶ್ರೇಷ್ಠ ಸಮಾಧಿ ಅಗಲೆಂದು ಪ್ರಾರ್ಥಿಸುತ್ತಿದ್ದೆ. ಈಗ ಅದೇ ಅವಸರ ಉಂಟಾಗಿದೆ. ನಾನು ಆಚಾರ್ಯ ಮಹರಾಜರ ಶಿಷ್ಯ. ರತ್ನತ್ರಯ ಮಾರ್ಗದಿಂದ ಎಂದೆಂದೂ ವಿಚಲಿತನಾಗಲಾರೆ"

ಪ್ರ : ನೀವು ಈ ಸಂಸ್ತರದಲ್ಲಿದ್ದು ದಿನರಾತ್ರಿ ಏನು ಮಾಡುತ್ತೀರಿ?

ಉ : ಕರ್ಮಗಳನ್ನು ನಿರ್ದಯ ಪೂರ್ವಕ ನಾಶ ಮಾಡುತ್ತೇನೆ.

ಪ್ರ : ಆ ಕರ್ಮಗಳ ಮೇಲೆ ನಿಮಗೇಕಿಷ್ಟು ಆಕ್ರೋಷ. ಅವುಗಳ ಮೇಲೆ ದಯಾಭಾವವೇಕಿಲ್ಲ?

ಉ : ಯಾವ ಕರ್ಮಗಳು ನನ್ನ ಸಿದ್ಧ ಪರ್ಯಾಯವನ್ನು ಲೂಟಿ ಮಾಡಿರುವವೋ ಅವುಗಳ ಮೇಲೆ ದಯೆ ಏಕೆ? ಏಕೇಂದ್ರಿಯದಿಂದ ಪಂಚೇಂದ್ರಿಯಗಳವರೆಗೆ ಸರ್ವಪ್ರಾಣಿಗಳ ರಕ್ಷಣೆಯ ಪ್ರಯತ್ನದಲ್ಲಿದ್ದೇವೆ. ಆರ್ತರೌದ್ರಗಳನ್ನು ತ್ಯಜಿಸಿ ನಮ್ಮಾತ್ಮನನ್ನು ರಕ್ಷಿಸುತ್ತಿದ್ದೇವೆ.

ಪ್ರ : " ಮಹರಾಜ್!ನನಗೆ ನಿಮ್ಮ ಯಾವ ಅಜ್ಞೆ ಇದೆ?"

ಉ : ನೀನು ಚೆನ್ನಾಗಿ ಧರ್ಮ ಪ್ರಚಾರ ಮಾಡು. ಇದೇ ನಮ್ಮ ಆಜ್ಞೆ ಮತ್ತು ಆಶೀರ್ವಾದ.

ಪ್ರ : ಇಂದಿನ ಯುವಕರಿಗೆ ನಿಮ್ಮ ಉಪದೇಶವೇನು?

ಉ : ಯುವಕರು ಧರ್ಮದ ರಕ್ಷಣೆ ಮಾಡಬೇಕು. ಧರ್ಮದ ಅಳಿವು-ಉಳಿವು ಅವರ ಕೈಯ್ಯಲ್ಲಿದೆ. ಯಾರು ಎಷ್ಟೇ ದೊಡ್ಡವರಾದರೂ ಧರ್ಮವನ್ನೆಂದು ಮರೆಯಬಾರದು. ಮದ್ಯ ಮಧು ಮಾಂಸ ತ್ಯಾಗ ಮಾಡಬೇಕು. ಪ್ರತಿಯೊಬ್ಬರೂ ನೀರನ್ನು ಶೋಸಿ ಕುಡಿಯಬೇಕು.

ಪ್ರ : ಇಂದು ಜನ ಜೀವಾತ್ಮನನ್ನೇ ಭಗವಂತನೆನ್ನುತ್ತಾರೆ. ಇದರಿಂದ ಯಾವ ಹಾನಿ ಆಗಬಹುದು?

ಉ : "ಹಾಗೆ ತಿಳಿಯುವುದು ಒಳ್ಳೆಯದಲ್ಲ. ಯಾರು ತಮ್ಮನ್ನು ಸ್ವಯಂ ಭಗವಾನರೆಂದು ತಿಳಿಯುತ್ತಾರೋ ಅವರು ಸಂಸಾರದಲ್ಲಿ ಏಕೆ ಇದ್ದಾರೆ? "



ನೀವು ಸ್ವರ್ಗಯಾತ್ರೆ ಮಾಡುವವರು. ಆಕಸ್ಮಾತ್ ಶಾಂತಿಸಾಗರ ಮಹರಾಜರ ದರ್ಶನವಾದರೆ ನಮ್ಮ ಪ್ರಣಾಮ ಹೇಳಿಬಿಡಿ. ಜೈನದರ್ಮದ ರಕ್ಷಣೆಯ ಬಗ್ಗೆ ಅಲ್ಲಿ ಸ್ಮರಣೆ ಇರಲಿ ಎಂದು ಹೇಳಿ ಅವರಿಗೆ ವಂದಿಸಿದೆ.

# ಮುನಿ ಆದಿಸಾಗರರು

ಸೇಡಬಾಳದ ಶ್ರೀ ಬಾಲಗೊಂಡ ದೇವಗೊಂಡ ಪಾಟೀಲರೇ ಆದಿಸಾಗರ ಮುನಿಗಳು. ಶಿಖರಿಜಿಗೆ ಹೋಗುವ ಮಾರ್ಗದಲ್ಲಿ ಶಿವನಿಗೆ ಅವರ ಆಗಮನವಾಗಿತ್ತು. ನನ್ನ ಪ್ರಾರ್ಥನೆಯ ಮೇಲೆ ಆಚಾರ್ಯಶ್ರೀಯವರ ಬಗ್ಗೆ ಹೇಳಲಾರಂಭಿಸಿದರು.

ಚಿಕ್ಕೋಡಿ ತಾಲ್ಲೂಕು, ಬೆಳಗಾಂ ಜಿಲ್ಲೆಯಲ್ಲಿ ಮಹರಾಜರ ವಿಹಾರ ಸುಮಾರು ಹತ್ತು ವರ್ಷ ನಡೆದಿದೆ. ಆಗ ನಾನು ಸರ್ಕಾರಿ ನೌಕರ. ಅವರು ಸದಾ ಶಾಸ್ತ್ರ ಸ್ವಾಧ್ಯಾಯ ಮಾಡುತ್ತಿದ್ದರು. ಬಹಳ ಸರಳ ವಿವರಣೆ ಕೊಡುತ್ತಿದ್ದರು.

## ಫೋಟೋ ಪ್ರಕರಣ

"ಅವರು ಒಮ್ಮೆ ಮುನಿ ಅವಸ್ಥೆಯಲ್ಲಿದ್ದಾಗ ನಸಲಾಪುರದಲ್ಲಿ ನಾನು ಚಿಕ್ಕೋಡಿಯಿಂದ ಅನೇಕರೊಡನೆ ಅವರ ದರ್ಶನಕ್ಕೆ ಹೋಗಿದ್ದೆ. ನಮ್ಮೊಡನೆ ನೀವೂ ಫೋಟೊ ತೆಗಿಸಿಕೊಳ್ಳಬೇಕು. ಪರೋಕ್ಷ ದರ್ಶನ ಮಾಡಿಕೊಳ್ಳಲು ನಮಗೆ ಅನುಕೂಲವಾಗುತ್ತದೆ ಎಂದು ಪ್ರಾರ್ಥಿಸಿದೆವು. ಅವರು ಒಪ್ಪಿದರು. ಫೋಟೊ ತೆಗೆಯುವವ ಬಂದ.ಇಲ್ಲಿ ಕುಳಿತುಕೊಳ್ಳಿ. ಅಲ್ಲಿಂದ ಏಳಿ. ಇತ್ತಕಡೆ ನೋಡಿ ಎಂದು ಏನೇನೋ ಗಡಿಬಿಡಿ ಹಚ್ಚಿದ. ಮಹರಾಜರು ಒಲ್ಲೆ ಎನ್ನುವ ಸ್ಥಿತಿಯಲ್ಲಿರಲಿಲ್ಲ.ಅಗ ವಚನ ಬದ್ಧರಾಗಿದ್ದರು. ಫೋಟೊ ತೆಗೆಯಲ್ಪಟ್ಟಿತು"

"ಅಗ ಅವರು ಹಾಲು,ಅನ್ನ ಮತ್ತು ನೀರು ಇಷ್ಟನ್ನು ಮಾತ್ರ ತೆಗೆದುಕೊಳ್ಳುತ್ತಿದ್ದರು. ಫೋಟೊ ತೆಗಿಸಿಕೊಂಡನಂತರ ಹಾಲನ್ನೂ ಒಂದು ವಾರದವರೆಗೆ ನಿಯಮ ಮಾಡಿ ತ್ಯಜಿಸಿಬಿಟ್ಟರು. ಅಗ ಅದಕ್ಕೆ ಕಾರಣವನ್ನು ಹೇಳಿದರು. "ನಮ್ಮ ಮನಸ್ಸು ಫೋಟೊ ತೆಗೆಸಲು ಅನುಮತಿ ಕೊಟ್ಟಿತು.ಅದರಿಂದ ನಮಗೆ ನಾನಾ ಪರಾಧೀನತೆ ಉಂಟಾಯಿತು. ಫೋಟೋಗ್ರಾಫರನ ಆದೇಶಾನುಸಾರ ನಾವು ನಡೆಯಬೇಕಾಯಿತು. ಏಕೆಂದರೆ ನಾವು

ಆಗ ವಚನ ಬದ್ಧರಾಗಿದ್ದೆವು. ಈ ಕಾರಣ ನಾವು ಹಾಲನ್ನು ತ್ಯಾಗ ಮಾಡಿ ನಮ್ಮ ಮನಸ್ಸಿಗೆ ಶಿಕ್ಷೆ ವಿಧಿಸಿದ್ದೇವೆ. ಅದು ಮತ್ತಿನ್ನೆಂದೂ ಅಂತಹ ತಪ್ಪು ಮಾಡಬಾರದು''

## ರಸನೇಂದ್ರಿಯ ಜಯ

ನಸಲಾಪುರ ಚಾತುರ್ಮಾಸದಲ್ಲಿ ಈ ಚರ್ಚೆ ನಡೆದಿತ್ತು. ಅವರನ್ನು ಕೇಳಲಾಯಿತು.

" ಮಹರಾಜ್! ನೀವು ಹಾಲು ಅನ್ನ ಮತ್ತು ನೀರು ಇವಿಷ್ಟೇ ಏಕೆ ತೆಗೆದುಕೊಳ್ಳತ್ತಿದ್ದೀರಿ. ಅನ್ಯ ಪದಾರ್ಥಗಳು ಗ್ರಹಣಯೋಗ್ಯವಲ್ಲವೇ?''

ಆಗ ಅವರೆಂದರು-

ನೀವು ಏನನ್ನು ಕೊಡುತ್ತೀರೋ ಅಷ್ಟನ್ನು ಮಾತ್ರ ತೆಗೆದುಕೊಳ್ಳುತ್ತೇವೆ. ನೀವು ಅನ್ಯ ವಸ್ತು ಕೊಡಲಿಲ್ಲ.ನಾವು ತೆಗೆದುಕೊಳ್ಳಲಿಲ್ಲ.ಅನ್ಯ ವಸ್ತು ಕೊಡಲು ಹೇಳಲು ಬರುವುದಿಲ್ಲ'' ಈ ಮಾತು ಕೇಳಿಸಿಕೊಂಡ ಶ್ರಾವಕರ ಎದೆಗೆ ಕಲ್ಲು ಬಿದ್ದಂತಾಯಿತು. ಅಯ್ಯೋ ಪಾಪ ಎಷ್ಟು ಅನ್ಯಾಯ ಮಾಡಿದೆವು ಎಂದರು ಕೆಲವರು. ಮಾರನೆಯ ದಿನ ರೊಟ್ಟಿ ಚಪಾತಿಯಾದಿ ನಾನಾ ಭಕ್ಷ್ಯಗಳನ್ನು ತಯಾರಿಸಿಟ್ಟರು. ಆ ದಿನವೂ ಅವರು ಅನ್ನ ಹಾಲು ನೀರನ್ನಷ್ಟೇ ತೆಗೆದುಕೊಂಡರು. ಆಗ ಶ್ರಾವಕರಿಗೆ ಚಿಂತೆ ಹತ್ತಿತು. ಈ ಬಗ್ಗೆ ಕೇಳಿದರು. ಅವರು ಶಾಂತವಾಗಿ ಹಿಟ್ಟನ್ನು ಯಾವಾಗ ಬೀಸಿದಿರಿ ಎಂದರು. ರಾತ್ರಿಯೇ ಎಂದು ಉತ್ತರ ಬಂತು. ರಾತ್ರಿ ಬೀಸಿದ ಹಿಟ್ಟನ್ನು ತೆಗೆದುಕೊಳ್ಳಲು ಬರುವುದಿಲ್ಲ ಎಂದು ಹೇಳಿದರು. ಈ ರೀತಿ ಜನ ಶುದ್ಧಾಶುದ್ಧದ ಬಗ್ಗೆ ಚರ್ಚೆ ಮಾಡಲಾರಂಭಿಸಿದರು. ಹೀಗೆ ಒಂದೊಂದೇ ಹೊಸ ವಸ್ತುವನ್ನು ಆಹಾರದಲ್ಲಿ ಶಾಸ್ತ್ರೋಕ್ತ ತೆಗೆದು ಕೊಳ್ಳಲಾರಂಭಿಸಿದರು. ಶ್ರಾವಕರ ಜ್ಞಾನವೂ ಬೆಳೆಯಿತು.

## ಒಂದು ವಿಚಿತ್ರ ಕುರುಹು

ಅವರು ಕೋಣ್ಣೂರಿನಲ್ಲಿ ವೃತ್ತಿಪರಿಸಂಖ್ಯಾನ ತಪ ಆರಂಭಿಸಿದರು. ಅವರಿಗೆ ಒಮ್ಮೆ ೭ ದಿನಗಳಾದರೂ ವಿಧಿ ಸಿಗದೆ ನಿರಾಹಾರವಾಗಿಹೋಯಿತು. ಶ್ರಾವಕರು ಚಿಂತಕ್ರಾಂತವಾದರು. ಏಳನೆ ದಿನ ಒಬ್ಬ ಬಡವನ ಮನೆಯಲ್ಲಿ ವಿಧಿ ಸಿಕ್ಕಿತು.ದರಿದ್ರ ಭೀಮಪ್ಪನಿಗೆ ಮನೆಯಲ್ಲಿ ಏನೂ ಇರಲಿಲ್ಲ. ಒಂದು ಚೆಂಬು ಹೊಂದಿಸಲೂ ಅವನಿಂದ ಆಗುತ್ತಿರಲಿಲ್ಲ. ಕೊನೆಗೂ ಒಂದು ಮಣ್ಣಿನ ಮಡಿಕೆಯ ಮೇಲೆ ಒಂದು ತೆಂಗಿನಕಾಯಿಟ್ಟು ತಡೆದ. ಅವರು ನಿಂತುಬಿಟ್ಟರು ಅವನ ದಾರಿದ್ರ್ಯವೂ ಹರಿಯುವ ಕಾಲ ಬಂದಿತ್ತು. ಅಂದಿನ ಅವರ ಅಗಮನ ಯೋಗಯೋಗದಿಂದ ಕೂಡಿತ್ತು.



ಮಣ್ಣಿನ ಮಡಿಕೆ ಹಿಡಿದು ಯಾರು ನಿಲ್ಲುತ್ತಾರೋ ಅಲ್ಲಿ ಆಹಾರ ಮಾಡುತ್ತೇವೆ ಎಂದು ಸಂಕಲ್ಪವಿಟ್ಟುಕೊಂಡಿದ್ದರು. ಈ ಸಂಕಲ್ಪ ಬಡವ ಭೀಮಪ್ಪನಿಗೆ ಒಂದು ವರವಾಯಿತು. ಪುಣ್ಯೋದಯ ಯಾರಿಗೆ ಯಾವ ರೂಪದಲ್ಲಿ ಒದಗಿ ಬರುವುದೋ ಬಲ್ಲವರಾರು?''

## ಪ್ರತಿಭೆಯಿಂದ ಪ್ರಭಾವನೆ.

ಒಮ್ಮೆ ಆಚಾರ್ಯ ಮಹರಾಜರು ಹುಬ್ಬಳ್ಳಿಗೆ ಆಗಮಿಸಿದ್ದರು. ಅಲ್ಲಿ ಅನ್ಯ ಸಂಪ್ರದಾಯದ ಕೆಲವು ಸಾಧುಗಳಿದ್ದರು. ಲಿಂಗಾಯತ ಮತದ ಸಿದ್ಧಾರೂಢ ಸ್ವಾಮಿಗಳ ಮಠ ಅಲ್ಲಿ ಇತ್ತು. ಆಚಾರ್ಯ ಶ್ರೀಯವರ ಹೆಸರು ಅಲ್ಲಿಯ ಸ್ವಾಮಿಗಳ ಕಿವಿಗೂ ಬಿದ್ದಿತ್ತು. ಅವರನ್ನೊಮ್ಮೆ ನೋಡಬೇಕೆನ್ನುವ ಆಸೆ ಆ ಸ್ವಾಮಿಗೆ ಹುಟ್ಟಿತು. ತಮ್ಮ ಶಿಷ್ಯ ಸಮೂಹದೊಡನೆ ಪಾಲಕಿಯಲ್ಲಿ ಕೂತು ಭಾಜಾಬಜಂತ್ರಿಯಲ್ಲಿ ಬಿರುದು ಹೇಳಿಸಿಕೊಳ್ಳುತ್ತಾ ಬಂದರು. ಒಬ್ಬ ದಿಗಂಬರ ಸಾಧುವಿನ ದರ್ಶನಕ್ಕೆ ಅನ್ಯಮತದ ಸಾಧು ಒಬ್ಬರು ಇಷ್ಟು ಅರ್ಭಟ ಮಾಡುತ್ತಾ ಬರುವುದನ್ನು ನೋಡಿ ಜನಕ್ಕೆ ಮೋಜೆನಿಸಿತು. ಒಂದು ಕಡೆ ಭೋಗದಿಂದ ತ್ಯಾಗದತ್ತ ನಡೆದ ದಿಗಂಬರ ಮುನಿ! ಇನ್ನೊಂದು ಕಡೆ ತ್ಯಾಗ ಮಾಡಿಯೂ ಭೋಗಗಳಲ್ಲಿ ಮಗ್ನವಾಗಿರುವ ಸಾಧುವರ್ಗ! ಇಂತಹ ಸಾಧುಗಳಿಬ್ಬರ ಸಮಾಗಮ ಅಗುವುದರಲ್ಲಿತ್ತು. ಅವರು ಬಂದವರೆ ಜೈನಸಾಧುವಿನಲ್ಲಿ ವಿನಯ ತೋರದೆ ಉಪೇಕ್ಷಾಭಾವದಿಂದ ಕುಳಿತುಕೊಂಡರು.ಸ್ತುತಿ ನಿಂದೆಗಳಲ್ಲಿ ಸಮಚಿತ್ತರಾದ ಮುನಿಗಳಿಗೆ ಇದರಿಂದ ಯಾವ ಕ್ಲೇಶವಾದೀತು? ಶಾಂತಿಸಾಗರರಿಗೆ ಯಾವ ವಿಕಲ್ಪವೂ ಹುಟ್ಟಲಿಲ್ಲ. ಅಗ ಸಮ್ಯಕ್ತ್ವಪ್ರಕರಣ ನಡೆಯುತ್ತಿತ್ತು. ಸಮ್ಯಕ್ತ್ವ ಮಿಥ್ಯಾತ್ವ ಪದಗಳು ಮೇಲಿಂದ ಮೇಲೆ ಉಚ್ಚರಿಸಲ್ಪಟ್ಟವು. ಆ ಪದಗಳು ಆ ಸಾಧುವಿನ ಕುತೂಹಲ ಕೆರಳಿಸಿದವು. ಅವರು ಕೇಳಿಯೇ ಬಿಟ್ಟರು.

" ಮೇಲಿಂದ ಮೇಲೆ ಸಮ್ಯಕ್ತ್ವ – ಮಿಥ್ಯಾತ್ವ ಎಂದು ಹೇಳುತ್ತಿದ್ದೀರಲ್ಲ ಹಾಗೆಂದರೇನು?'' ನಮಗೂ ಬಿಡಿಸಿ ಹೇಳ್ರಲಾ ?''

ಸಮ್ಯಕ್ತ್ವ ಮಿಥ್ಯಾತ್ವದ ಬಗ್ಗೆ ಹೇಳುವುದೆಂದರೆ ಸಮಸ್ತ ತತ್ವಗಳ ತಿರುಳನ್ನೇ ಹೇಳಿದಂತೆ. ಸಮ್ಯಕ್ತ್ವ ಮತ್ತು ಮಿಥ್ಯಾತ್ವಗಳ ಮೂಲ ಅರ್ಥ ಗೊತ್ತಾಗಿಬಿಟ್ಟರೆ ಸಂಸಾರದ ಬೇರನ್ನೇ ಕಿತ್ತು ಎಸೆದಂತೆ! ಅವೆರಡರ ತಿಳುವಳಿಕೆಯೇ ಹುಟ್ಟು ಸಾವುಗಳಿಗೆ ದಿವ್ಯೌಷಧಿ. ಇಂತಹ ಗಹನ ತತ್ವವನ್ನು ಮಿಥ್ಯಾತ್ವ ರೋಗದಿಂದ ಗ್ರಸ್ತವಾದ ಜೀವಿಗೆ ತಿಳಿ ಹೇಳುವುದಾದರೂ ಹೇಗೆ? ಶ್ರಾವಕರ ಮನಸ್ಸಿನಲ್ಲಿ ಭಯ ಹೊಕ್ಕಿತು. ಅದು ಜೈನ ಧರ್ಮದ ಹೆಗ್ಗಳಿಕೆಯ ಮಾತಾಗಿತ್ತು. ತ್ಯಾಗ ಧರ್ಮದ ವಿಜಯದ ಪ್ರಶ್ನೆಯಾಗಿತ್ತು. ಏನು ಹೇಳುವರೋ, ಏನಾಗಿ ಬಿಡುವುದೋ ಎಂದು ಜನ ಕಣ್ಣು ಮಿಟುಕಿಸದೆ ಕಲ್ಲಾಗಿ ಕುಳಿತು ಬಿಟ್ಟರು.

ಆಚಾರ್ಯ ಶ್ರೀಯವರು ಮಹಾ ತಪಸ್ವಿಗಳು. ಜಿನವಾಣಿಯಲ್ಲಿ ಅಚಲ ಶ್ರದ್ಧೆ ಇಟ್ಟವರು. ಧೀರ್ಘಕಾಲ ಸ್ವಾಧ್ಯಾಯದಲ್ಲಿ ಕಾಲ ಕಳೆದವರು. ಅಂತವರಿಗೆ ಇದು ಯಾವ ಕಷ್ಟದ ಮಾತು? ಅವರು ಕ್ಷಣಕಾಲ ಕಣ್ಮುಚ್ಚಿ ಕುಳಿತರು. ಮಿಥ್ಯಾತ್ವದ ಅಮಲಿನಲ್ಲಿರುವ ಜೀವಕ್ಕೆ ತೃಪ್ತಿ ಉಂಟು ಮಾಡುವ ಯಾವ ಮಾತು ಹೇಳಬೇಕೆಂದು ಚಿಂತಿಸತೊಡಗಿದ್ದರೇನೋ. ಕೂಡಲೆ ಅವರ ಬಾಯಿಂದ ಸೂತ್ರರೂಪದ ಅಣಿ ಮುತ್ತುಗಳು ಹೊರಬಿದ್ದವು.

"ಅಂತರ್ದೃಷ್ಟಿ ಸಮ್ಯಕ್ತ್ವ ಬಹಿರ್ದೃಷ್ಟಿ ಮಿಥ್ಯಾತ್ವ"

ಮುಂಗಾರು ಮೇಘಗಳು ಧಾರಕಾರವಾಗಿ ಮಳೆ ಸುರಿಸುವಂತೆ ಅವರ ವಾಣಿ ಭೋರ್ಗರೆದು ಹೊರಹೊಮ್ಮಿ ಶಾಂತವಾಯಿತು. ಈ ಮಾತು ಕೇಳುತ್ತಲೇ ಆ ಸಾಧುಗಳು ಚಕಿತರಾಗಿ ಹೋದರು. ಅವರ ಹೃದಯದಲ್ಲಿ ಹೊಸ ಬೆಳಕು ಮೂಡಿದಂತಾಯಿತು. ಜೀವನದ ನೈಜ ತತ್ವ ತಿಳಿಸಿಕೊಟ್ಟಂತಾಯಿತು. ತತ್ವಜ್ಞಾನದ ಹೊಸ ಅರಿವು ಮೂಡಿದಂತಾಗಿತ್ತು. ಆಗ ಆ ಲಿಂಗಾಯಿತ ಗುರುವಿನ ಮುಖದಲ್ಲಿ ಅನುಪಮ ಭಕ್ತಿಭಾವ ಚಿಮ್ಮಿತು. ಇಂತಹ ಸದ್ಗುರು ವಾಣಿಗಾಗಿಯೇ ನಾನು ಹಗಲಿರುಳು ಪ್ರತೀಕ್ಷಿಸುತ್ತಿದ್ದೆ" ಎಂದು ಉದ್ಗಾರ ತೆಗೆದರು. ಇಂತವರನ್ನೇ ನನ್ನ ಗುರುವನ್ನಾಗಿ ಸ್ವೀಕರಿಸಲು ಬಯಸಿದ್ದೆ ಎಂದು ಬಾವಿಸಿದ ಅವರು ಆಚಾರ್ಯ ಶಾಂತಿಸಾಗರರಿಗೆ ಪ್ರಣಾಮ ಮಾಡಿದರು. ಕೂಡಲೆ ಅವರ ಎಲ್ಲಾ ಶಿಷ್ಯರೂ ಅವರಿಗೆ ವಂದಿಸಿದರು. ಜೈನಶ್ರಾವಕರ ಕಣ್ಣುಗಳಲ್ಲಿ ಆನಂದಾಶ್ರು ಹನಿಯುತ್ತಿದ್ದವು. ಜಯಜಯಾಕಾರ ಆಕಾಶ ಮುಟ್ಟಿತು. ನಿಜವಾದ ಸಾಧುವೆಂದರೆ ಅವರೇ ಎಂದು ಹೊಗಳತೊಡಗಿದರು"

ಇನ್ನೊಂದು ಘಟನೆ ನೆನಪು ಮಾಡಿಕೊಂಡು ಹೇಳಿದರು.

"ಒಮ್ಮೆ ಶ್ರವಣಬೆಳಗೊಳದಿಂದ ವಾಪಾಸಾಗುವಾಗ ದಾವಣಗೆರೆಯಲ್ಲಿ ಉಳಿದುಕೊಂಡರು. ಅನ್ಯ ಧರ್ಮೀಯರು ಭಕ್ತಿಪೂರ್ವಕ ಹಾಲು ಹಣ್ಣು ಸಮರ್ಪಿಸಲು ರಾತ್ರಿ ಅವರ ಕಡೆ ಬಂದರು. ಆಗ ಅಲ್ಲಿಯ ಶ್ರಾವಕರು ಮುನಿಗಳ ಆಹಾರ ಕ್ರಮ ತಿಳಿಸಿ ಹೇಳಿದರು. ಆದರೂ ಆ ಮೂಢ ಭಕ್ತರಿಗೆ ಅವರ ಮಾತು ರುಚಿಸಲಿಲ್ಲ. ಅವರಂತೂ ರಾತ್ರಿ ಮಾತಾಡುವಂತಿರಲಿಲ್ಲ. ಪರಮಾತ್ಮ ಭಕ್ತಪರಾಧೀನ ಭಕ್ತರಿಗಾಗಿ ಏನಾದರೂ ಮಾಡಬಲ್ಲನೆಂದು ಕೇಳಿದ್ದ ಆ ಜನರ ಭಾವನೆಗೆ ತಣ್ಣೀರು ಎರಚಿದಂತಾಯಿತು. ಸ್ವಲ್ಪ ಕೋಪ ಬೆರೆತ ಸ್ವರದಲ್ಲಿ ಕೇಳಿದರು.



"ಮಹರಾಜರು ಎಲ್ಲರ ಗುರುಗಳು. ಭಕ್ತರ ಇಚ್ಛೆ ಪೂರೈಸದ ಗುರು ಅದೆಂತಹ ಗುರು?" ಅಷ್ಟಕ್ಕೂ ಸುಮ್ಮನಾಗದೆ ತಾಳ ತಂಬೂರಿ ತಬಲ ಬಾರಿಸುತ್ತಾ ರಾತ್ರಿ ಎಲ್ಲಾ ಸದ್ಗುರುವಿನ ಹೆಸರಲ್ಲಿ ಭಜನೆ ಮಾಡತೊಡಗಿದರು.

" ಬೆಳಗಾಗುತ್ತಲೇ ಸಂಘದ ವಿಹಾರವಾಯಿತು. ಆ ಜನ ಹಿಂದೆ ಹಿಂದೆಯೇ ಬರತೊಡಗಿದರು. ಸ್ವಾಮೀ! ಕೊನೆಯ ಪಕ್ಷ ಒಂದಿಷ್ಟು ಉಪದೇಶವನ್ನಾದರೂ ಕೊಡಿ ಎಂದು ಬೇಡಿದರು. ಅವರ ಪ್ರಾರ್ಥನೆಗೆ ಮನಕರಗಿದ ಅವರು ಶಕ್ತಿ ಇದ್ದಷ್ಟು ಜೀವಿಗಳ ರಕ್ಷಣೆ ಮಾಡಿ. ಸದಾ ಮನಸ್ಸನ್ನು ಶಾಂತಾವಾಗಿಟ್ಟುಕೊಳ್ಳಿ. ಅತಿಕಾಂಕ್ಷೆ ತ್ಯಜಿಸಿ. ಅತಿಕಾಂಕ್ಷೆಯೇ ದುಃಖಕ್ಕೆ ಕಾರಣ" ಎಂದು ಸ್ವಲ್ಪದಲ್ಲಿಯೇ ಒಳ್ಳೆಯ ವಿಚಾರ ತಿಳಿಸಿ ಮುಂದಕ್ಕೆ ನಡೆದರು. ಈ ಮಾತುಗಳಿಂದ ಆ ಭಕ್ತರ ಹೃದಯ ಹೂವಿನಂತೆ ಅರಳಿತು."

" ಆ ಭಕ್ತರಿಗಂತೂ ಪೂಜ್ಯಶ್ರೀಯವರ ಆಕರ್ಷಣೆ ಹೆಚ್ಚತೊಡಗಿತ್ತು. ಅವರು ಅವರ ಬೆನ್ನು ಬಿಡಲೇ ಇಲ್ಲ. ಹಾಲು ತುಪ್ಪಗಳ ಗಡಿಗೆಗಳನ್ನು ತುಂಬಿಕೊಂಡು ಹತ್ತಾರು ಮೈಲುಗಳವರೆಗೆ ಗಾಡಿಯಲ್ಲಿ ಬರತೊಡಗಿದರು. ಅವರ ನಿಷ್ಕಲ್ಮಶ ಭಾವ ತಿಳಿದ ಆಚಾರ್ಯ ಶ್ರೀಯವರು, ಸಂಘಪತಿಯನ್ನು ಕರೆದು ಇವರ ಎಲ್ಲಾ ಸಾಮಾನುಗಳನ್ನು ತಿರಸ್ಕರಿಸಬಾರದು. ಅವರು ಹೃದಯಪೂರ್ವಕ ಸಮರ್ಪಿಸುತ್ತಿದ್ದಾರೆ. ಮುಂದಿನ ವಾಸ್ತವ್ಯದಲ್ಲಿ ಅವರೆಲ್ಲರಿಗೆ ಚೆನ್ನಾಗಿ ಭೋಜನ ಮಾಡಿಸಿ ಸತ್ಕರಿಸಿ ಕಳಿಸಿಕೊಡಿ ಎಂದು ಆಜ್ಞಾಪಿಸಿದರು. ನಂತರ ಆ ಎಲ್ಲಾ ಭಕ್ತರು ಸಂಘವನ್ನು ಒಲ್ಲದ ಮನಸ್ಸಿನಿಂದ ಬೀಳ್ಕೊಟ್ಟು ವಾಪಾಸಾದರು."

## ಗುರುವಿಗೇ ಗುರು

ಆಚಾರ್ಯ ಮಹರಾಜರು ದೇವಪ್ಪ ಸ್ವಾಮಿಗಳಿಂದ ಕ್ಷುಲ್ಲಕ ದೀಕ್ಷೆ ತೆಗೆದುಕೊಡಿದ್ದರು. ದೇವಪ್ಪಸ್ವಾಮಿ ೧೯೨೫ರಲ್ಲಿ ಶ್ರವಣಬೆಳಗೊಳದಲ್ಲಿದ್ದರು. ಆಚಾರ್ಯಶ್ರೀಯವರೂ ಅಲ್ಲಿಗೆ ಬಂದರು."

ದೇವಪ್ಪ ಸ್ವಾಮಿಗಳು ಆಚಾರ್ಯಶ್ರೀಯವರ ಶಾಸ್ತ್ರೋಕ್ತ ಜೀವನ ಗಮನಿಸಿದ್ದರು. ಮತ್ತು ತಮ್ಮ ಶಿಥಿಲಾಚಾರದ ಜೀವನವನ್ನೂ ಅವಲೋಕಿಸಿದ್ದರು. ತಮ್ಮ ಪ್ರವೃತ್ತಿ ಮುನಿಧರ್ಮಕ್ಕೆ ತಕ್ಕದ್ದಲ್ಲ ಎಂದು ಮನಗಂಡರು. ಅವರು ೧೦ ಗಜ ಉದ್ದದ ಬಟ್ಟೆ ಉಡುತ್ತಿದ್ದರು. ಉದ್ದಿಷ್ಟ ಆಹಾರ ತೆಗೆದುಕೊಳ್ಳುತ್ತಿದ್ದರು. ಆಹಾರದ ಸಮಯದಲ್ಲಿ ಮಾತ್ರ ದಿಗಂಬರರಾಗುತ್ತಿದ್ದರು.ಭೋಜನ ಮಾಡುವಾಗ ಗಂಟೆ ಭಾರಿಸಬೇಕಾಗಿತ್ತು. ಇದನ್ನೆಲ್ಲಾ ಸಾವಧಾನವಾಗಿ ಮನಸ್ಸಿನಲ್ಲಿ ಚಿಂತಿಸಿ ತಮ್ಮ ಶಿಥಿಲಾಚಾರಕ್ಕಾಗಿ ನೊಂದುಕೊಳ್ಳಲಾರಂಭಿಸಿದರು. ಆಚಾರ್ಯ ಶಾಂತಿಸಾಗರರ

ಶಾಸ್ತ್ರೋಕ್ತ ಜೀವನ ಅವರ ಕಣ್ಣು ತೆರೆಸಿತು. ದೇವಪ್ಪಸ್ವಾಮಿಯ ಆತ್ಮವೂ ಶ್ರೇಷ್ಠವಾಗಿತ್ತು. ಅದ್ದರಿಂದ ಅವರು ತಮ್ಮ ದೋಷಗಳನ್ನು ಶಿಷ್ಯ ಶಾಂತಿಸಾಗರರಲ್ಲಿ ನಿಸ್ಸಂಕೋಚವಾಗಿ ಹೇಳಿಕೊಂಡರು. ನನಗೆ ಛೇದೋಪಸ್ಥಾಪನಾ ಮಾಡಿರಿ ಎಂದು ಕೇಳಿಕೊಂಡರು. ಅಗ ಆಚಾರ್ಯ ಶ್ರೀಯವರು ದೇವಪ್ಪ ಸ್ವಾಮಿಗಳಿಗೆ ಯಥಾಯೋಗ್ಯ ಪ್ರಾಯಶ್ಚಿತ್ತ ಕೊಟ್ಟು ಪುನರ್ದೀಕ್ಷೆ ಕೊಟ್ಟರು. ಆಗ ಅವರು ಗುರುವಿಗೇ ಗುರುವಾದರು. ಗುರುವೇ ಗುರುತ್ವ ತ್ಯಜಿಸಿ ಶಿಷ್ಯತ್ವ ಸ್ವೀಕರಿಸಿಬಿಟ್ಟಿದ್ದರು.

## ಪಾತ್ರಯೋಗ ಪ್ರಾಯಶ್ಚಿತ್ತ

ಒಮ್ಮೆ ನಾವು ಬಲಗೊಂಡ ಮತ್ತು ದರಿಗೊಂಡಾರೊಡನೆ ದಿಗಂಬರ ಜೈನ ಮಹಾಸಭಾದ ಅಧಿವೇಶನಕ್ಕೆ ಹೋಗಿದ್ದೆವು. ನಾವು ಜೈನರ ಮನೆಯಲ್ಲಿ ಮಾತ್ರ ಆಹಾರ ತೆಗೆದುಕೊಳ್ಳುತ್ತಿದ್ದೆವು. ಆಗ ಒಬ್ಬ ಜೈನರೇ ನೀರು ಶೋಸಿ ಆಹಾರ ತಯಾರಿಸುತ್ತಾರೆ ಎಂದ ಅವನ ಮಾತು ನಂಬಿ ಅಲ್ಲೆ ಮೂರು ದಿನ ಆಹಾರ ತೆಗೆದುಕೊಳ್ಳುತ್ತಿದ್ದೆವು. ಕೊನೆಗೆ ಯಾರೋ ಬೇರೆ ಜಾತಿಯವನು ಬಂದು ನೀರು ತುಂಬಿಸಿ ಹೋಗುತ್ತಿದ್ದುದು ತಿಳಿದು ಬಂತು. ಬಹಳ ಖೇದವಾಯಿತು. ಮಾಡುವುದೇನು? ನಮ್ಮ ವ್ರತಗಳೇ ನಮ್ಮ ಪ್ರಾಣವಾಗಿದ್ದವು. ವ್ರತ ತ್ಯಜಿಸಿ ಬಾಳುವ ಬದುಕು ಬರೀ ಹಾಳು. ಚಿಂತಿಸುತ್ತಾ ವಾಪಸಾದೆವು. ಆಚಾರ್ಯ ಮಹರಾಜರನ್ನು ಕಂಡು ಪ್ರಾಯಶ್ಚಿತ ಕೊಡಬೇಕೆಂದು ಪ್ರಾರ್ಥಿಸಿದೆವು. ಅವರು ಕೂಡಲೆ ಪ್ರಾಯಶ್ಚಿತ್ತ ಗ್ರಂಥ ಕೈಗೆತ್ತಿಕೊಂಡು ಸುಮಾರು ಅರ್ಧ ಗಂಟೆ ಅಧ್ಯಯನ ಮಾಡಿ ಅಳೆದು ಸುರಿದು ನೋಡಿ ಪಂಚನಮಸ್ಕಾರ ಮಂತ್ರ ಜಾಪ್ಯರೂಪದ ಪ್ರಾಯಶ್ಚಿತ್ತವನ್ನಷ್ಟೇ ಕೊಟ್ಟರು. ಇಷ್ಟಕ್ಕೆ ನೀವೇಕೆ ಹೆಚ್ಚು ವೇಳೆ ತೆಗೆದುಕೊಂಡಿರಿ ಎಂದು ಕೇಳಿದೆವು. ಅದಕ್ಕೆ ಅವರು. ಹೀಗೆಂದರು. ಶಾಸ್ತ್ರದಲ್ಲಿ ಉಪವಾಸರೂಪದ ಪ್ರಾಯಶ್ಚಿತ್ತ ಅನೇಕ ಕಡೆ ಹೇಳಿದೆ. ನೀವು ಸರ್ಕಾರಿ ನೌಕರರು. ಕರ್ತವ್ಯದ ಮೇಲೆ ಅಗಾಗ್ಗೆ ತಿರಿಗಾಡುವುದಿರುತ್ತದೆ. ಈ ಕಾರಣದಿಂದ ಉಪವಾಸದ ಪ್ರಾಯಶ್ಚಿತ್ತದಿಂದ ಕ್ಲೆಷೋತ್ಪತ್ತಿ ಆಗಬಹುದು. ಇದನ್ನು ವಿಚಾರಿಸಿ ನಾವು ನಿಮಗೆ ಯೋಗ್ಯ ಪ್ರಾಯಶ್ಚಿತ್ತವನ್ನು ಮನಸ್ಸಿಗೆ ತಂದುಕೊಂಡು ಹೇಳಲು ಸ್ವಲ್ಪಕಾಲ ಬೇಕಾಯಿತು. ಪಂಚನಮಸ್ಕಾರ ಜಾಪ್ಯರೂಪ ಪ್ರಾಯಶ್ಚಿತ್ತವೇ ನಿಮ್ಮ ಪರಿಸ್ಥಿತಿಗೆ ಯೋಗ್ಯವೆಂದು ತೀರ್ಮಾನಿಸಿ ಅದನ್ನು ಕೊಟ್ಟಿರುತ್ತೇವೆ.

ಅವರು ಒಂದೊಂದು ವಿಚಾರವನ್ನು ಆಳವಾಗಿ ವಿಮರ್ಷಿಸಿ ಹೇಳುತ್ತಿದ್ದರು.



# ಆಚಾರ್ಯ ಅನಂತಕೀರ್ತಿಗಳು ೧೯

ಆಚಾರ್ಯ ಪಾಯಸಾಗರರು ತಮ್ಮ ಅಂತಿಮ ದಿನಗಳಲ್ಲಿ ತಮ್ಮ ಆಚಾರ್ಯ ಪದವನ್ನು ಆನಂತ ಕೀರ್ತಿಗಳಿಗೆ ವರ್ಗಾಯಿಸಿದ್ದರು.

ಅವರು ಹೇಳಿದರು

ಆಚಾರ್ಯ ಶಾಂತಿಸಾಗರರ ವ್ಯಕ್ತಿತ್ವ ಅಸಾಧಾರಣ ಅಧ್ಯಾತ್ಮಿಕ ಆಕರ್ಷಣೆಯ ಕೇಂದ್ರವಾಗಿತ್ತು. ಅವರು ಭವ್ಯ ಜೀವಿಗಳನ್ನು ಚುಂಬಕ ಲೋಹದಂತೆ ಸೆಳೆಯುತ್ತಿದ್ದರು.

ಆಚಾರ್ಯ ಶಾಂತಿಸಾಗರರು ಕೋಣ್ಣೂರು ಗುಹೆಯಲ್ಲಿ ಚಾತುರ್ಮಾಸ ಮಾಡುತ್ತಿದ್ದಾಗ ನಾವು ಆಗಾಗ್ಗೆ ಬಂದು ಹೋಗುತ್ತಿದ್ದೆವು. ನಾವೂ ಅವರಂತೆ ಆಗಬೇಕೆಂಬ ಭಾವವು ಮೇಲಿಂದ ಮೇಲೆ ಬರುತ್ತಿತ್ತು.

ಅವರಿಂದ ಪ್ರಭಾವಿತರಾಗಿ ನಾವು ಬ್ರಹ್ಮಚರ್ಯ ಪ್ರತಿಮೆ ತೆಗೆದುಕೊಂಡೆವು. ಇದಾದ ಒಂದು ವರ್ಷದಲ್ಲಿ ಕ್ಷುಲ್ಲಕರಾದೆವು. ನಂತರ ನಿಗ್ರಂಥ ದೀಕ್ಷೆ ಸ್ವೀಕರಿಸಿದೆವು. ನಾವು ಈ ಮೊದಲೇ ಕ್ಷುಲ್ಲಕ ದೀಕ್ಷೆ ತೆಗೆದುಕೊಂಡಿದ್ದೆ. ಆಚಾರ್ಯ ಮಹರಾಜರಿಂದ ನವೀನವಾಗಿ ಕ್ಷುಲ್ಲಕ ದೀಕ್ಷೆ ತೆಗೆದುಕೊಂಡೆವು . ಆಗ ನಾನು ಕೇಳಿದೆ.

"ನೀವು ಒಮ್ಮೆ ಕ್ಷುಲ್ಲಕ ದೀಕ್ಷೆಕೈಗೊಂಡಿದ್ದಿರಿ. ಮತ್ತೇಕೆ ಪುನಃ ಕ್ಷುಲ್ಲಕ ದೀಕ್ಷೆ ಕೈಗೊಂಡಿರಿ."

ಅವರೆಂದರು: "ದೀಕ್ಷೆಗೆ ಗುರುವಿನ ಅಗತ್ಯವಿದೆ. ಮೋಕ್ಷಮಾರ್ಗದಲ್ಲಿ ಗುರುವಿನ ಸ್ಥಾನ ದೊಡ್ಡದು. ಗುರು ನಡೆದ ದಾರಿಯಲ್ಲಿ ಶಿಷ್ಯ ನಡೆಯಬೇಕು"

ನಾನು : "ಮಹರಾಜ್ ನೀವು ದೊಡ್ಡ ಕುಟುಂಬದ ವ್ಯಕ್ತಿ. ದೀಕ್ಷೆ ತೆಗೆದುಕೊಳ್ಳುವಾಗ ಯಾರು ಅಡ್ಡಿಪಡಿಸಲಿಲ್ಲವೆ?"

ಅವರು ಖಂಡಿತ ಸ್ವರದಲ್ಲಿ ಹೇಳಲಾರಂಭಿಸಿದರು. "ಅಡ್ಡಿಅಡಚಣೆಗಳು ಬಾಹ್ಯದಿಂದ ಬರಲಾರವುನಮಗೆ ನಾವೇ ಮೊದಲು ಬಹುದೊಡ್ಡ ಅಡ್ಡಿಯಾಗಿದ್ದೆವೆ. ನಮ್ಮ ಮನಸ್ಸಿನಲ್ಲಿ ಬಾಹ್ಯದ ಮೋಹ ಕತ್ತರಿಸಿ ಹಾಕಿದ ಮೇಲೆ ಅನ್ಯರೇನು ಮಾಡಿಯಾರು? "

ಮೋಹವನ್ನು ಗೆಲ್ಲುವ ಸಾಧನೆ ಮೊದಲು ಅಂತರಂಗದಿಂದ ಆರಂಭವಾಗಬೇಕು. ನಂತರ ಬಹಿರಂಗಕ್ಕೆ ವಿಸ್ತರಿಸಬೇಕು. ಆಗ ಮಾತ್ರ ಅದು ಶಾಶ್ವತ ತ್ಯಾಗವಾಗುತ್ತದೆ. ಬಾಹ್ಯವಸ್ತುಗಳು ಮೋಹ ಹುಟ್ಟಿಸುವುದಿಲ್ಲ. ನಮ್ಮ ಮನಸ್ಸೇ ಅವುಗಳಲ್ಲಿ ಮೋಹಗೊಂಡಿರುತ್ತದೆ. ಅನ್ಯ ವಸ್ತುಗಳಲ್ಲಿ ರಾಗಗೊಂಡು, ದ್ವೇಷಗೊಂಡು ನಾವು ಸಂಸಾರದಲ್ಲಿ ಉಳಿದಿದ್ದೇವೆ. ಆದರೆ ಅಜ್ಞಾನದಿಂದ ಅನ್ಯ ವಸ್ತುಗಳು ಅಡ್ಡಿಯೆಂದು ಭಾವಿಸುತ್ತೇವೆ.

"ಮುನಿಪದ ಕಠಿಣವೇ" ನಾನು ಪ್ರಶ್ನೆಹಾಕಿದೆ.

" ಮುನಿಜೀವನ ಕಠಿಣವಲ್ಲ. ವಾಸ್ತವಿಕವಾಗಿ ಆತ್ಮಕಲ್ಯಾಣ ಮಾರ್ಗ ಬಹಳ ಸುಲಭ. ಅಜ್ಞಾನದಿಂದಷ್ಟೆ ಕಠಿಣವೆಂದು ಕಾಣುತ್ತದೆ. ಪಂಡಿತರೇ ನಿಮಗೆ ಬಟ್ಟೆ ಉಟ್ಟು ಎಷ್ಟು ಛಳಿ ಆಗುವುದೋ ಅಷ್ಟೆ ನಮಗೂ ಆಗುವುದು. ಅದ್ದರಿಂದ ವಿಶೇಷ ಕಷ್ಟವೇನು?"

ಆಶ್ಚರ್ಯದಿಂದ ಇದರ ಬಗ್ಗೆ ಇನ್ನಷ್ಟು ವಿವರಿಸಿ ಹೇಳಿ ಎಂದೆ.

"ನಾವು ಅಂತರಂಗದಲ್ಲಿ ಧೈರ್ಯವನ್ನು ನಂಬಿ ಕೂತಿರುತ್ತೇವೆ. ಎಷ್ಟೋ ಶೀತ ಋತುಗಳು ಆನಂದವಾಗಿ ಕಳೆದು ಹೋದವು. ನೀವು ವ್ಯಾಪಾರ ಮಾಡುವಾಗ ಬಹಳ ಸೆಕೆಯಿಂದ ಬೆವರಿಳಿಯುತ್ತಿದ್ದರೂ ವ್ಯಪಾರ ಚೆನ್ನಾಗಿ ಅಗುತ್ತಿದ್ದರೆ ಆ ಕಡೆ ಗಮನ ಇರುವುದೇನು? ಆಗ ಹಣ ಗಳಿಕೆಯತ್ತ ಮನಸ್ಸು ಮಗ್ನವಾಗಿರುತ್ತದೆ. ಬಾಹ್ಯದ ಶೆಖೆಯ ಅನುಭವವಾಗುವುದಿಲ್ಲ. ಅದೇ ರೀತಿ ದಿಗಂಬರ ಮುನಿಯು ಅತ್ಮ ಕಲ್ಯಾಣದಲ್ಲಿ ಮಗ್ನವಾಗಿರುವುದರಿಂದ ಶೀತೋಷ್ಣಗಳ ಬಾಧೆ ಅಷ್ಟಾಗಿ ಕಾಣಬರುವುದಿಲ್ಲ."

## ಅದ್ಭುತ ಯೋಗಿ

" ಅವರೊಬ್ಬರು ಅದ್ಭುತ ಯೋಗಿ. ಬೇಕೆನಿಸಿದಾಗ ಕಣ್ಮುಚ್ಚಿ ತಮ್ಮಲ್ಲಿ ತಾವೇ ತಲ್ಲೀನರಾಗುತ್ತಿದ್ದರು." ಅವರು ಇನ್ನೊಂದು ವಿಚಾರ ನೆನೆಸಿಕೊಂಡರು.

" ಒಮ್ಮೆ ಅವರು ಕುಂಭೋಜದಲ್ಲಿದ್ದರು. ಒಬ್ಬ ವ್ಯಕ್ತಿ ಧರ್ಮ ಮಾರ್ಗ ಬಿಟ್ಟು ಅಡ್ಡಹಾದಿ ಹಿಡಿದ್ದಿದ್ದ. ಅವನನ್ನು ಸುಧಾರಿಸಲು ಬರಹೇಳಿದರು. ಅಗ ಚಂದ್ರಸಾಗರರು ಹೇಳಿದರು."ನಿಮ್ಮ ಮಾತಿಗೆ ಬೆಲೆಕೊಟ್ಟು ಬಂದರೆ ಸರಿ. ಬರದಿದ್ದರೆ ನಿಮ್ಮ ಮಾನ ಹೋಗುತ್ತದೆ" ಆಗ ಅವರು " ನಮ್ಮ ಹತ್ತಿರ ಮಾನವೇ ಇಲ್ಲ. ಇನ್ನು ಅಪಮಾನವೆಲ್ಲಿ ಹೋಗುತ್ತದೆ" ಎಂದರು. ಇದಾದ ಮೇಲೆ ಆ ವ್ಯಕ್ತಿ ಬಂದೇ



ಬಂದ. ಅವರ ತಪ್ಪೋಮಯ ವ್ಯಕ್ತಿತ್ವ ಆ ಪಾಪಿಯಲ್ಲೂ ಪರಿವರ್ತನೆ ಮಾಡಿಸಿತು. ಆ ವ್ಯಕ್ತಿ ಮತ್ತೆ ಸುಧಾರಣೆಗೊಂಡ."

ಅನಂತ ಕೀರ್ತಿ ಮಹರಾಜರಿಗೆ ಶಾಂತಿಪೂರ್ವಕ ಸಮಾಧಿ ಆಯಿತು.

# ಭಾರತ ಗೌರವ ಆಚಾರ್ಯ ದೇಶಭೂಷಣರು ೨೦

೧೯೫೭ರಲ್ಲಿ ಆಚಾರ್ಯ ದೇಶಭೂಷಣರ ಚಾತುರ್ಮಾಸ ದೆಹಲಿಯಲ್ಲಾಗಿತ್ತು. ಆಚಾರ್ಯ ಶಾಂತಿಸಾಗರರ ಬಗ್ಗೆ ಕೆಲವು ಸಂಸ್ಮರಣೆ ಕೇಳಿದೆ.

ಅಗ ಅವರು ಹೇಳಲಾರಂಭಿಸಿದರು.

ಸ್ವರ್ಗೀಯ ಆಚಾರ್ಯ ಮಹರಾಜರ ಸ್ಥಿತೀಕರಣಾಂಗ, ಉಪಗೂಹನಾಂಗ ಅಪೂರ್ವವಾಗಿತ್ತು. ಯಾವುದೇ ಸಾಧುವಿನ ದೋಷದ ಬಗ್ಗೆ ಚರ್ಚೆ ಬಂದರೆ ಮೌನವಾಗಿರುತ್ತಿದ್ದರು. ಏಕಾಂತದಲ್ಲಿ ಸಾಧುವಿನ ದೋಷ ವಿಮರ್ಷಿಸಿ ತಿಳಿಹೇಳುತ್ತಿದ್ದರು. ಅವರ ದಿವ್ಯ ಆತ್ಮಶಕ್ತಿಯ ಎದುರು ಅಪರಾಧಿ ತನ್ನ ಅಪರಾಧ ಒಪ್ಪಿಕೊಳ್ಳುತ್ತಿದ್ದ.

ಅಗ ನಾವು ನವ ದೀಕ್ಷಿತರು. ಚಿಕ್ಕ ವಯಸ್ಸಿನ ಮುನಿ. ನಾಂದ್ರೆಗೆ ಆಚಾರ್ಯ ಶ್ರೀಯವರ ದರ್ಶನಾರ್ಥ ಹೋದೆ. ನಾವು ವಂದಿಸಿದೆವು. ಅವರು ವಂದನೆಯನ್ನು ದಯಾಪೂರ್ಣ ದೃಷ್ಟಿಯಿಂದ ಸ್ವೀಕರಿಸಿ ಪ್ರತಿವಂದನೆ ಮಾಡಿದರು. ಅವರು ನಮ್ಮ ಮೇಲೆ ಅಪಾರ ಪ್ರೇಮ ವ್ಯಕ್ತ ಮಾಡುತ್ತಾ ಹೇಳಿದರು.

" ನೀನು ನನ್ನ ಸಹೋದರ. ಸದಾ ಆಗಮಾನುಕೂಲ ನಡೆಯಬೇಕು. ನೀನಿನ್ನೂ ಚಿಕ್ಕವನು. ಎಚ್ಚರಿಕೆಯಿಂದ ಕಾರ್ಯ ಸಾಧಿಸು. ಧರ್ಮದ ಪ್ರಭಾವನೆಯನ್ನು ಚೆನ್ನಾಗಿ ಮಾಡು"

## ಸಂಯಮದ ಚಿಂತೆ

ಅವರು ಕೇಳಿದರು– " ನೀನು ಎಷ್ಟು ಪ್ರತಿಕ್ರಮಣ ಮಾಡಿದ್ದೀಯ? ದ್ವೈವಾರ್ಷಿಕ, ರಾತ್ರಿಕ, ಪಾಕ್ಷಿಕ, ಮುಂತಾದವಗಳನ್ನು ಎಷ್ಟೆಷ್ಟು ಮಾಡಿದ್ದೀಯ?

ಅಗ ನಾವು ಹೇಳಿದೆವು.

" ಸ್ವಾಮಿ! ನಿಮ್ಮ ಚರಣಗಳಲ್ಲಿ ಆತ್ಮ ನಿರ್ಮಲತೆಯ ಕಾರಣ ಸಿಕ್ಕಿತು. ನಿಮ್ಮ ಆಜ್ಞೆ ಶಿರೋದಾರ್ಯ" ಎಂದು ವಂದಿಸಿದೆ.

ಅಗ ಜನಗಳಿಗೆ ಹೀಗೆ ಹೇಳಿದರು.



" ನಮ್ಮ ತಮ್ಮ ಬಂದಿದ್ದಾನೆ. ಅವನ ಉಪದೇಶ ಆದೀತು" ನಮ್ಮ ಉಪದೇಶ ಕೇಳಿ ಅವರು ಸಂತುಷ್ಟರಾದರು. ಏಕಾಂತದಲ್ಲಿ ನಮಗೂ ತಿಳಿ ಹೇಳಲಾರಂಭಿಸಿದರು.

" ನೀನು ಚತುರ್ಥನೊ, ಪಂಚಮನೋ ಎಂದು ಜನಗಳಲ್ಲಿ ಭೇದ ಭಾವ ಎಣಿಸಬೇಡ. ಅದರಿಂದ ಜನಗಳಲ್ಲಿ ಗೊಂದಲ ಹುಟ್ಟುತ್ತದೆ. ಶತ್ರುವಿನಲ್ಲಿ ಶಾಂತಿ ಪ್ರಕಟಿಸು, ಒಂದು ವೇಳೆ ಶತ್ರುವು ತ್ಯಾಗಿಯೇ ಆದರೂ ಜೊತೆಯಲ್ಲಿ ಇಟ್ಟುಕೊ. ಒಂಟಿ ವಿಹಾರ ಮಾಡಬಾರದು. ನಿನ್ನ ಕಲ್ಯಾಣವಾದೀತು"

ಆಚಾರ್ಯ ದೇಶಭೂಷಣರು ಹೇಳಿದರು.

" ಪ್ರತಿವರ್ಷ ಪತ್ರ ಬರೆದು ಅವರಿಂದ ಪ್ರಾಯಶ್ಚಿತ್ತ ತೆಗೆದುಕೊಳ್ಳುತ್ತಿದ್ದೆವು" ತನ್ನ ಶಾಂತಿಗಾಗಿ ಸಮಯಸಾರವನ್ನು ಏಕಾಂತದಲ್ಲಿ ಓದಿಕೊಳ್ಳಬೇಕು. ಸಾರ್ವಜನಿಕವಾಗಿ ಓದಬಾರದು ಎಂದು ಹೇಳುತ್ತಿದ್ದರು.

## ಪ್ರಪಿತಾಮಹ

ಮುನಿಶ್ರೀ ಜಯಕೀರ್ತಿ ಮಹರಾಜರು ಅವರ ದೀಕ್ಷಾಗುರು. ಜಯಕೀರ್ತಿಗೆ ಗುರು ಪಾಯಸಾಗರರು. ಪಾಯಸಾಗರರ ಗುರು ಶಾಂತಿಸಾಗರರು ಈ ಕಾರಣದಿಂದ ಶಾಂತಿಸಾಗರರು ದೇಶ ಭೂಷಣರಿಗೆ ಪ್ರಪಿತಾಮಹರಾದರು. ಸಂಯಮದ ದೃಷ್ಟಿಯಿಂದ ಶಾಂತಿಸಾಗರರಿಗೆ ಪ್ರಪೌತ್ರರಿದ್ದಂತೆ. ಅಲ್ಲವೇ? ನಾನು ಕೇಳಿದೆ.

" ನಿಜವಾದ ಮಾತು ಹೇಳಿದಿರಿ.ಇನ್ನರೆಕ್ಷಣದಲ್ಲಿ ಅವರು ನಿಶ್ಚಯದ ಭಾವ ತಂದುಕೊಂಡು, ಪಂಡಿತರೆ! ಯಾರಿಗೆ ಯಾರು ಮಗ, ತಂದೆ, ಅಜ್ಜ? ಜಗತ್ತಿನ ಜೀವಿಗಳೆಲ್ಲಾ ಸಮಾನವಾಗಿವೆ" ಎಂದು ಹೇಳಿದರು.

## ಆಚಾರ್ಯ ಶ್ರೀಯವರ ಅಪೂರ್ವ ವಿವೇಕ

ಅವರು ಒಂದು ಘಟನೆ ನೆನಪಿಗೆ ತಂದುಕೊಂಡು ಹೇಳಿದರು.

"ಒಬ್ಬ ದರಿದ್ರ ಶ್ರಾವಕನಿದ್ದ. ಮಹರಾಜರಿಗೆ ಆಹಾರ ಕೊಡಲಾರದಷ್ಟು ದರಿದ್ರ, ಅವನು. ಒಂದು ದಿನ ಶಾಂತಿಸಾಗರ ಮಹರಾಜರು ವಿಧಿ ಸಿಕ್ಕಿ ಆ ಮನುಷ್ಯನ ಮನೆಯಲ್ಲಿ ನಿಂತು ಬಿಟ್ಟರು. ಅವನಲ್ಲಿ ಕೇವಲ ನಾಲ್ಕು ಜೋಳದ ರೊಟ್ಟಿಗಳು ಮಾತ್ರ ಇದ್ದವು. ಆಗ ಮಹರಾಜರು ಇವೆಲ್ಲವನ್ನು ನಾವು ಗ್ರಹಣ ಮಾಡಿದರೆ ಪಾಪ ಆ ಬಡವ ಏನು ತಿಂದಾನು ಎಂದು ಯೋಚಿಸಿ ಸ್ವಲ್ಪವೇ ಸ್ವೀಕರಿಸಿ

ಬಂದರು. ಆಗ ಆ ಬಡವನ ಆನಂದಕ್ಕೆ ಪಾರವೇ ಇರಲಿಲ್ಲ. ಅವರಿಗೆ ಅಂದಿನ ಸಾಮಾಯಿಕದಲ್ಲಿ ಮನಸ್ಸು ಬಹಳ ಪ್ರಸನ್ನವಾಯಿತು. ಬಹಳಕಾಲದವರೆಗೆ ಸಾಮಾಯಿಕ ಮಾಡಿಕೊಂಡರು. ಅವನ ಆಹಾರವೂ ಶುದ್ಧವಿತ್ತು. ಮನಸ್ಸಿನಲ್ಲೂ ಭಕ್ತಿ ಇತ್ತು. ಅಂತಹ ಆಹಾರದಿಂದ ಭಾವಶುದ್ಧಿ ಆಗಿ ಹೆಚ್ಚು ಧ್ಯಾನ ಸಿದ್ಧಿ ಆಗುತ್ತದೆ.



# ಅನ್ಯ ಭಕ್ತರ ಸಂಸ್ಮರಣೆ ೨೧

## ಶ್ರೀ ಶಾಂತಿನಾಥ ಭುಜಬಲಿ, ವೈದ್ಯ ಬಾರಮತಿ

ಶ್ರೀ ಶಾಂತಿನಾಥ ಭುಜಬಲಿಯು ಬಾರಾಮತಿಯ ವೈದ್ಯರು. ಅವರು ಶಾಂತಿಸಾಗರರ ಹತ್ತಿರ ಆಗಾಗ್ಗೆ ಹೋಗುತ್ತಿದ್ದರು. ಅವರ ಸ್ವಾಸ್ಥದ ಬಗ್ಗೆ ವಿಶೇಷ ಆಸಕ್ತಿವಹಿಸುತ್ತಿದ್ದರು. ಮಹರಾಜರು ಅವರಿಗೆ ಹೇಳಿದ್ದನ್ನು ನನಗೆ ತಿಳಿಸಿದರು.

"ನೀನು ಸಾವಿರಾರು ರೋಗಿಗಳಿಗೆ ಔಷಧ ಕೊಟ್ಟಿದ್ದೀಯ. ಅದಕ್ಕಿಂತಲೂ ಅಧಿಕ ಫಲ ನಿಗ್ರಂಥ ಸಾಧು ವ್ರತಿಕರಿಗೆ ಕೊಡುವುದರಿಂದ ಪ್ರಾಪ್ತವಾಗುತ್ತದೆ. ನೀನು ಸಾಧು ಸೇವೆಯಲ್ಲಿ ಮಗ್ನನಾಗಿದ್ದೀಯೆ. ಇದರಿಂದ ನಿನಗೆ ಮುಂದೆ ಬಹಳ ಮಧುರ ಫಲ ಪ್ರಾಪ್ತಿಯಾಗುತ್ತದೆ. ಇದೇ ರೀತಿ ಪರೋಪಕಾರ ಮಾಡುತ್ತಾ ನಿನ್ನ ಜನ್ಮ ಸಾರ್ಥಕಪಡಿಸಿಕೋ.

## ಹಣ ಜೊತೆಯಲ್ಲಿ ಬಾರದು

ಮಹರಾಜರು ನನಗೆ ಅತ್ಯಂತ ಉಪಯುಕ್ತ ವಿಚಾರ ತಿಳಿಸಿದರು.

"ಹಣವನ್ನು ಎಷ್ಟೇ ಸಂಗ್ರಹಿಸಿದರೂ ಅದು ನಿನ್ನ ಜೊತೆಯಲ್ಲಿ ಬರುವುದಿಲ್ಲ. ಧರ್ಮ ಮಾತ್ರ ನಿನ್ನ ಜೊತೆ ಬರಬಲ್ಲದು. ರೋಗಿ ಪ್ರಸನ್ನ ಚಿತ್ತನಾಗಿ ಎಷ್ಟು ಕೊಡುವನೊ ಅಷ್ಟೇ ಪಡೆ. ಬಲವಂತಪಡಿಸಿ ವಸೂಲಿ ಮಾಡಬೇಡ. ಇದನ್ನು ಅವಶ್ಯ ಧ್ಯಾನದಲ್ಲಿಟ್ಟುಕೋ"

## ಸ್ವರ್ಗವಾಸದ ರಾತ್ರಿಯ ವರ್ಣನೆ

ಆಚಾರ್ಯ ಶ್ರೀಯವರ ಸ್ವರ್ಗವಾಸ ಬೆಳಗ್ಗೆ ೬:೫೦ಕ್ಕೆ ಆಯಿತು. ಆ ದಿನ ವೈದ್ಯರು ರಾತ್ರಿಯೆಲ್ಲ ಅವರ ಬಳಿ ಇದ್ದರು. ಅಂತಿಮ ಕ್ಷಣಗಳು ಹೀಗಿದ್ದವು.

"ಎರಡು ಗಂಟೆ ರಾತ್ರಿ ಮಹರಾಜರ ನಾಡಿ ನೋಡಿದೆವು. ಪರಿಸ್ಥಿತಿ ತೀರಾ ವಿಷಮಿಸಿತ್ತು. ಮೂರು ನಾಲ್ಕು ಮಿಡಿತಗಳ ನಂತರ ನಾಡಿ ನಿಂತು ಮತ್ತೆ ಮಿಡಿಯುತ್ತಿತ್ತು. ಬೆಳಗಿನ ಜಾವ ಶ್ವಾಸ ಸ್ವಲ್ಪ ಬಿರುಸಿನಿಂದ ನಡೆಯಲಾರಂಭಿಸಿತು. ಆಗ ನಾನು ಅವರ ಕಿವಿಯಲ್ಲಿ ಉಸರಿಸಿದೆ " ಮಹರಾಜ್! ಈಗ ಅತ್ಯಂತ ಸಾವಧಾನವಾಗಿರಿ. ಅಂತ್ಯ ಸಮೀಪಿಸುತ್ತಿದೆ" ಬೆಳಗ್ಗೆ ೬ಕ್ಕೆ ಸಂಸ್ತರದಿಂದ ಎಬ್ಬಿಸುವ ವಿಚಾರವನ್ನು ಕ್ಷು ಸಿದ್ಧಸಾಗರರು (ಭರಮಪ್ಪ) ಮಾಡಿದರು. ಮಹರಾಜರು ತಲೆ

ಅಲ್ಲಾಡಿಸಿ ತಮ್ಮ ಅಸಮ್ಮತಿ ಸೂಚಿಸಿದರು. ಅಲ್ಲಿಯವರೆಗೆ ಅವರು ಸಾವಧಾನವಾಗಿದ್ದರು. ಆಗ ಶ್ವಾಸ ಜೋರು ಜೋರಾಗಿ ನಡೆಯುತ್ತಿತ್ತು. ಆಗ ಭಟ್ಟಾರಕ ಲಕ್ಷ್ಮೀ ಸೇನರು ಕಿವಿಯಲ್ಲಿ ಓಂ ನಮಃ ಸಿದ್ಧೇಭ್ಯಃ ಮತ್ತು ಣಮೋಕಾರ ಮಂತ್ರ ಹೇಳುತ್ತಿದ್ದರು. ಓಳಂಕ್ಕೆ ನಾನು ಹೇಳಿದಂತೆ ಅವರನ್ನು ಕೂಡಿಸಲಾಯಿತು. ಏಕೆಂದರೆ ಆಗ ಪ್ರಾಣೋತ್ಕ್ರಮಣಕ್ಕೆ ವಿಳಂಬವಿರಲಿಲ್ಲ. ಶ್ವಾಸ ಮಂದವಾಗುತ್ತಾ ಬಂದಿತು. ಒಂದು ದೀರ್ಘ ಶ್ವಾಸ ಎಳೆದರು. ಕೂಡಲೇ ನಮ್ಮೆಲ್ಲರ ಸೌಭಾಗ್ಯ ಸೂರ್ಯ ಅಸ್ತಂಗತನಾದನು. ಕೂಡಲೇ ಅವರ ಬಾಯಿಂದ ಮಂದ ಧ್ವನಿಯಲ್ಲಿ ಆದರೂ ಸ್ಪಷ್ಟವಾಗಿ ಓಂ ನಮಃ ಸಿದ್ಧೇಭ್ಯಃ ಎನ್ನುವ ಶಬ್ದ ಹೊರಬಿತ್ತು. ಆದರೊಡನೆ ಅವರ ಆತ್ಮವು ಜರ್ಝರಿತ ಶರೀರದಿಂದ ಹೊರಬಿದ್ದಿತು. ರಾತ್ರಿ ೨ ಗಂಟೆಯ ಹೊತ್ತಿಗಾಗಲೇ ಕೈ ಕಾಲುಗಳು ತಣ್ಣಗಾಗುತ್ತಾ ಬಂದಿದ್ದವು. ಅವರ ಪ್ರಾಣ ನೇತ್ರದ ಮೂಲಕ ಹೋಗಿರಬೇಕೆಂದು ನನ್ನ ಭಾವನೆ. ಏಕೆಂದರೆ ಮುಖದಲ್ಲಿ ಜೀವಿತ ಸಮಾನ ತೇಜಸ್ಸಿತ್ತು.



# ಕ್ಷು. ಸಿದ್ಧಸಾಗರರು ೨೨

ಪೂಜ್ಯ ಆಚಾರ್ಯ ಶ್ರೀಯವರ ನೆರಳಾಗಿ ಜೀವನವಿಡೀ ಅವರನ್ನು ಅನುಸರಿಸುತ್ತಾ ವೈಯಾವೃತ ಮಾಡಿದ ಜೀವ ಬ್ರ. ಭರಮಪ್ಪ. ಅವರು ದೀಕ್ಷೆಗೊಂಡು ಕ್ಷು. ಸಿದ್ಧಸಾಗರರಾಗಿದ್ದರು. ಅವರು ಆಚಾರ್ಯ ಶ್ರೀಯವರನ್ನು ಹತ್ತಿರದಿಂದ ಕಂಡವರು. ಅವರು ಆಚಾರ್ಯಶ್ರೀ ಎಂಬ ಚಂದನ ವೃಕ್ಷಕ್ಕೆ ಹಬ್ಬಿದ ಮಲ್ಲಿಗೆ ಹಂಬಿನಂತಿದ್ದರು.ಅವರ ಬಾಯಿಂದ ಹೊರಬಿದ್ದ ಭಕ್ತಿ ಕುಸುಮಾಂಜಲಿಗಳಿವು.

"ಆಚಾರ್ಯ ಮಹರಾಜರು ನನಗೆ ಕೈಕಾಲು ಒತ್ತುವುದು ಬೇಡ ಅಂದರು. ಏಕೆಂದರೆ ಹಾಗೆ ವೈಯಾವೃತ್ತಿ ಮಾಡಿಸಿಕೊಳ್ಳುವುದನ್ನೂ ವ್ರತಮಾಡಿ ತ್ಯಜಿಸಿದ್ದೇವೆ. ಮೊದಲು ನೀನು ಬಲವಂತವಾಗಿ ಸೇವೆ ಮಾಡುತ್ತಿದ್ದೆ. ಈಗ ಹಾಗೆ ಮಾಡಬಾರದು ಎಂದು ಶಾಂತಾವಾಗಿ ಹೇಳಿದರು.

## ಜ್ಞಾನಾರಾಧಕರು

ಅವರು ಉತ್ಕೃಷ್ಟ ಜ್ಞಾನಾರಾಧಕರಾಗಿದ್ದರು. ಅವರು ಹೇಳುತ್ತಿದ್ದರು "ಜ್ಞಾನವಿಲ್ಲದೆ ಸಮಾಜದಲ್ಲಿ ಧರ್ಮನಿಲ್ಲದು. ಜ್ಞಾನದ ಪ್ರಸಾರ ಜೈನ ಮಂದಿರದಲ್ಲಿ ಗ್ರಂಥಗಳನ್ನಿಡುವುದರ ಮೂಲಕ ಆಗುತ್ತದೆ. ಗ್ರಂಥಗಳನ್ನು ಮೂಲ್ಯಕ್ಕೆ ಮಾರುವುದರಿಂದ ಹೆಚ್ಚು ಜನಕ್ಕೆ ಪ್ರಸಾರವಾಗುವುದಿಲ್ಲ. ಏಕೆಂದರೆ ಬಡವರು ತ್ಯಾಗಿಗಳು ಕೊಂಡು ಸ್ವಾಧ್ಯಾಯ ಮಾಡಲಾರರು."

## ಇಂದ್ರಿಯ ನಿಗ್ರಹದ ಉಪಾಯ

"ಒಂದು ದಿನ ನಾನು ಕೇಳಿದೆ "ಮಹರಾಜ್! ಇಂದ್ರಿಯ ನಿಗ್ರಹ ಹೇಗೆ ಮಾಡುವುದು?"ಕೂಡಲೇ ಅವರೆಂದರು

"ಕುದುರೆಗೆ ಮೇವು ನೀರು ಬಂದ್ ಮಾಡು. ತನ್ನಷ್ಟಕ್ಕೆ ತಾನೇ ವಶವಾಗುತ್ತದೆ" ಈ ಮಾತು ಅರ್ತಗರ್ಭಿತವಾಗಿತ್ತು.

ಒಮ್ಮೆ ಅವರಲ್ಲಿ ಕೇಳಲಾಯಿತು."ನೀವು ಶ್ರೀಮಂತರ ಮಹರಾಜರೋ, ಬಡವರ ಮಹರಾಜರೋ?" ಆಗ ಅವರೆಂದರು

"ನಮ್ಮ ದೃಷ್ಟಿಯಲ್ಲಿ ಶ್ರೀಮಂತರು ಬಡವರು ಎನ್ನುವ ಭೇದವೇ ಇಲ್ಲ. ಹಣದ ದೃಷ್ಟಿಯಿಂದ ವ್ಯಕ್ತಿಗಳನ್ನು ನೀವು ವ್ಯತ್ಯಾಸವಾಗಿ ತಿಳಿಯುತ್ತೀರಿ. ಆಕಿಂಚನ್ಯದ ಭಾವನೆಯಲ್ಲಿ ಅದಕ್ಕೆ ಯಾವ ಮೌಲ್ಯವೂ ಇಲ್ಲ."

## ಸೂಕ್ಷ್ಮಗ್ರಾಹಿ

"ಮಹರಾಜ್! ನಿಮ್ಮ ಹತ್ತಿರ ಬರುವವರೆಲ್ಲ ಭಕ್ತರೇ" ಈ ಪ್ರಶ್ನೆಗೆ ಅವರೆಂದರು.

"ಯಾರು ಸಾಚಾ, ಯಾರು ಕೋಟಾ ನಮಗೆ ಗೊತ್ತು. ನಾವು ಅವರ ಕಣ್ಣುಗಳನ್ನು ನೋಡುತ್ತಲೆ ಗೊತ್ತುಹಚ್ಚಿ ಬಿಡುತ್ತೇವೆ."

## ದೀಕ್ಷೆ ಮತ್ತು ಆಹಾರ

ಪ್ರ : ಮಹರಾಜ್! ಒಂದು ವೇಳೆ ನೀವು ಎಲ್ಲರಿಗೂ ದೀಕ್ಷೆ ಕೊಟ್ಟರೆ ಅವರಿಗೆಲ್ಲಾ ಆಹಾರ ಹೇಗೆ ಸಿಕ್ಕೀತು.

ಉತ್ತರ : "ಆಹಾರಕ್ಕಾಗಿ ದೀಕ್ಷೆ ತೆಗೆದುಕೊಳ್ಳಬೇಡ. ದೀಕ್ಷಾನಂತರ ಆಹಾರ ತನ್ನಿಂದ ತಾನೇ ಆಗುತ್ತದೆ" ಅವರ ಮಾತು ಬಹಳ ಅರ್ಥಪೂರ್ಣವಾಗಿತ್ತು.

ವೇಷಭೂಷಣ ಭೋಗದ ಸಂಕೇತ. ದೀಕ್ಷೆ ತ್ಯಾಗದ ಸಂಕೇತ. ಎಲ್ಲದರ ತ್ಯಾಗದಿಂದ ದೀಕ್ಷೆ ಆಗಬೇಕು. ದೀಕ್ಷೆಯಾದ ನಂತರ ಎಲ್ಲದರ ತ್ಯಾಗ ಆಗುವಂತಿರಬಾರದು. ದೀಕ್ಷೆ ಶರೀರಕ್ಕಲ್ಲ. ಆತ್ಮನ ವಿಕಾರಗಳಿಗೆ! ಅನಾದಿ ಕಾಲದಿಂದಲೂ ನೆರಳಿನಂತೆ ಹಿಂಬಾಲಿಸುತ್ತಾ ಹುಟ್ಟು ಸಾವುಗಳ ಸುಳಿಗೆ ಜೀವವನ್ನು ಸಿಕ್ಕಿಸಿರುವ ವಿಷಯ ಕಷಾಯಗಳಿಗೆ ಈ ವಿಕಾರಗಳಿಗೆ ಮೊದಲು ಕೊಡಬೇಕು ದೀಕ್ಷೆ. ಅನಂತರ ಶರೀರ ತೊಟ್ಟ ದೀಕ್ಷೆಗೆ ಅರ್ಥವಿದೆ. ಸಾರ್ಥಕತೆ ಇದೆ. ಇಲ್ಲವಾದರೆ ಅಂತಹ ದೀಕ್ಷೆ ಬರೆ ಎಳೆಸಿಕೊಡ ಕತ್ತೆಯಂತೇ ಸರಿ! ಅದೆಂದೂ ಹುಲಿಯಾಗದು. ದೀಕ್ಷೆಯೆಂದರೆ ಆತ್ಮನಿಗೆ ಮೆತ್ತಿಕೊಂಡಿರುವ ಹದಿನೆಂಟು ದೋಷಗಳ ಕೆಸರನ್ನು ಸ್ವಚಿಂತನೆಯ ತಿಳಿ ನೀರಿನಿಂದ ತೊಳೆಯುವ ಕಾಯಕ. ಆಗ ದೀಕ್ಷಿತನ ಮನ ಸರ್ವೇಂದ್ರಿಯಗಳೆಲ್ಲಾ ಒಳ ಸೇರುತ್ತವೆ. ತಿಂಗಳ ಬೆಳಕಿನ ಚಿನ್ಮಯ ರೂಪವನ್ನು ಕಂಡು ಅದರಲ್ಲಿ ಮುಳುಗುತ್ತವೆ. ಅದರಲ್ಲೇ ಸಂತೃಪ್ತನಾಗುತ್ತಾನೆ. ಆಗ ಈ ಶರೀರಕ್ಕೆ ಆಹಾರ ಚಿಂತೆ ಎಕೆ? ತಪಸ್ಸಿಗೆ ಶರೀರ ಬೇಕು. ಶರೀರಕ್ಕೆ ಆಹಾರ ಬೇಕು. ಅದಕ್ಕಾಗಿ ಮಾತ್ರ ಆಹಾರ. ಸಿಕ್ಕರೂ ಸಂತೋಷವಿಲ್ಲ. ಸಿಗದಿದ್ದರೂ ದುಃಖವಿಲ್ಲ. ಬಾಹ್ಯದ ಲಾಭಲಾಭಗಳೆಲ್ಲಾ ಕರ್ಮದಾಟ. ಅದರಲ್ಲಿ ಮನಸ್ಸಿಟ್ಟು ನೋಡುವುದೇ ಮರುಳಾಟ.



ಅಂತಹ ತ್ಯಾಗಿಗೆ ಆಹಾರದ ಚಿಂತೆ ಎಲ್ಲಿ ಬಂದೀತು? ಆಹಾರದ ಚಿಂತೆ ಹುಟ್ಟುವುದು ಯಾವಾಗ? ಶರೀರದಲ್ಲಿ ಮೋಹ ಇರುವಾಗ. ಶರೀರವೇ ಸರ್ವಸ್ವವೆಂದು ತಿಳಿದಾಗ. ಬದುಕಿನಲ್ಲಿ ನಾನಾಕಾಂಕ್ಷೆ ತುಂಬಿಕೊಂಡಾಗ. ಇಂದ್ರಿಯ ಚಪಲತೆಯ ಹುಚ್ಚು ಕುದುರೆ ಏರಿಹೋದಾಗ. ಇವೆಲ್ಲವೂ ಒಟ್ಟಿಗೆ ಸೇರಿದಾಗ ಮನಸ್ಸು ನಾನಾ ಬಯಕೆಯ ಅಗ್ನಿ ಪರ್ವತ! ಜೀವನ ಒಂದು ಬಡವಾನಲ! ಆಗ ಬದುಕು ಯಾತನೆಯ ದುಳ್ಳುರಿ! ಸಂಸಾರದ ಈ ನಾನಾ ಮುಖ ಯಾತನೆಯಿಂದ ಪಾರಗಲು ತಾನೇ ದೀಕ್ಷೆ?

ಒಂದು ವೇಳೆ ಮೇಲಿನ ಎಲ್ಲ ವಿಕಾರಗಳನ್ನು ಹೊಟ್ಟೆಯಲ್ಲಿ ತುಂಬಿಕೊಂಡು ದೀಕ್ಷೆ ತೆಗೆದುಕೊಂಡರೆ ಅದು ಮಹಾಮಾಯಾಚಾರದ ವೇಷವಾಗುತ್ತದೆ. ಕಷ್ಟಗಳು ಎದುರಾದಾಗ ನಾನೇಕಾದರೂ ದೀಕ್ಷೆ ತೆಗೆದುಕೊಂಡು ಬಿಟ್ಟೆ ಎನ್ನುವ ಹತಾಶಭಾವ ಹೊರಬಿದ್ದರೆ ದೀಕ್ಷೆ ಅದೊಂದು ಹೊರೆ. ಅದ್ದರಿಂದ ದ್ರವ್ಯ ದೀಕ್ಷೆಗಿಂತ ಮುನ್ನ ಭಾವ ದೀಕ್ಷೆ ಬೇಕು. ಭಾವ ದೀಕ್ಷೆ ಆಗದೆ ದ್ರವ್ಯ ದೀಕ್ಷೆ ಸ್ವೀಕರಿಸುವವರ ಪಾಡು ಇದಾಗುತ್ತದೆ. ಸ್ವಸ್ವಾದೀನದಲ್ಲಿ ಮನಸ್ಸನ್ನು ಹಿಡಿದು ಕೂಡಿಸುವ ಕಲೆ ಕಲಿತಿರುವುದಿಲ್ಲ. ಹೊರ ಹೊರಗೆ ಓಡಿ ಹೋಗುವ ಮನಸ್ಸನ್ನು ಹಿಡಿದು ಕೂಡಿಸುವ ಕಲೆ ಕಲಿತಿರುವುದಿಲ್ಲ. ಹೊರ ಹೊರಗೆ ಓಡಿ ಹೋಗುವ ಮನಸ್ಸನ್ನು ಹಿಡಿದು ಒಳಗೆ ಕೂಡಿಸುವ ಕಲೆಯು ಎಲ್ಲಿಯವರೆಗೆ ಬರುವುದಿಲ್ಲವೋ, ಅನಾದಿ ಕುಸಂಸ್ಕಾರದಿಂದ ಅದು ಹೊರ ಹೊರಗೆ ಭೋಗಗಳ ಕಡೆ ಹರಿದು ಹೋಗುತ್ತಲೇ ಇರುತ್ತದೆ. ಕೊನೆಗೆ ಅಂತಹ ದೀಕ್ಷೆಗೆ ಸೋಲೇ ಗತಿ! ಅಂತಹ ಗತಿ ವೃಷಭ ತೀರ್ಥಂಕರರ ಮೋಹದಿಂದ ದೀಕ್ಷೆ ತೆಗೆದುಕೊಂಡ ಸಾವಿರಾರು ರಾಜರಿಗೂ ಬಂದಿತ್ತು. ಇಂದೂ ಬಂದರೆ ಆಶ್ಚರ್ಯವಿಲ್ಲ.

ದೀಕ್ಷೆ ಒಂದು ಸಂಕೇತ. ಮನಸ್ಸನ್ನು ನಿಯಂತ್ರಿಸಿದ್ದೇನೆ. ಶರೀರ ಮೋಹ ತ್ಯಜಿಸಿದ್ದೇನೆ. ವಿಷಯ ಕಷಾಯಗಳನ್ನು ಬಿಟ್ಟಿದ್ದೇನೆ ಎನ್ನುವುದರ ಸಂಕೇತ. ಮಹಾಮೋಹವನ್ನು ಮೆಟ್ಟಿಹಾಕಿದ್ದೇನೆ ಎನ್ನುವುದರ ಸಂಕೇತ. ಸಂಸಾರ ಬಂಧನ ಕತ್ತರಿಸಿ ಹಾಕಲು ಜಿನೋಕ್ತ ಮಾರ್ಗದಲ್ಲಿ ನಡೆದು ಹೋಗುತ್ತೇನೆ ಎನ್ನುವುದರ ಸಂಕೇತ. ಇವೆಲ್ಲವುಗಳ ಸಮಷ್ಟಿರೂಪವೇ ಬಾಹ್ಯದ ದೀಕ್ಷೆ.

ದೀಕ್ಷೆಗೆ ಮುನ್ನ ಭಾವಗಳು ಪರಭಾವದಿಂದ ಕೂಡಿತ್ತು. ಸಂಸಾರವೃದ್ಧಿಯಲ್ಲಿ ತೊಡಗಿತ್ತು. ದೀಕ್ಷೆಗೊಂಡ ಕೂಡಲೇ ಜೀವದ ಭಾವ ಒಮ್ಮೆಗೆ ಪರಸಮಯದಿಂದ ಸ್ವಸಮಯದತ್ತ ಸಂಕ್ರಮಣಗೊಳ್ಳುತ್ತದೆ. ವಿಷಯ ಕಷಾಯಗಳ ಕೆಸರಿನಿಂದ ಮೇಲೇಳುತ್ತದೆ. ಹುಟ್ಟು ಸಾವುಗಳ ಚಕ್ರಗಳಿಂದ ಸಿಡಿದು ಹೊರ ಬರಲು ಹವಣಿಸುತ್ತದೆ. ರಾಗ-ದ್ವೇಷಗಳ ವಿಕಾರಗಳನ್ನು ಹತ್ತಿ ತುಳಿದು ಮೇಲೇರುತ್ತದೆ. ಹುಟ್ಟು ಸಾವುಗಳ ನೇಣನ್ನು ಕಿತ್ತು ಹಾಕಲು ಹೋರಾಡುತ್ತದೆ. ಆತ್ಮ ಸ್ವತಂತ್ರದ

ದಿಗಂತದಲ್ಲಿ ಹಾರಿ ಮುಕ್ತಿ ಸೀಮೆ ಸೇರಲು ಚಿಂತಿಸುತ್ತದೆ. ಇಂತಹ ಕೋಟಿ ಕೋಟಿ ಮಧುರ ಭಾವಗಳು ದೀಕ್ಷೆಗೊಂಡ ಆತ್ಮನಿಗೆ ತರಂಗಿತವಾಗಿ ಹೊರಹೊಮ್ಮುತ್ತಿರಲು ದುರ್ಗಂಧಮಯ ಕ್ಷುದ್ರ ಶರೀರದ ಪೋಷಣೆಗಾಗಿ ಆಹಾರ ಚಿಂತೆ ಎಲ್ಲಿ ಹುಟ್ಟೀತು? ದೀಕ್ಷೆ ಗೊಂಡ ತ್ಯಾಗಿ ಶರೀರಕ್ಕೆ ಇಂದನದ ರೂಪದಲ್ಲಿ ಅನ್ನ ಹಾಕುತ್ತಿದ್ದರೂ ಉಣ್ಣುವುದು ಶರೀರ, ಮೂಸುವುದು ಶರೀರ, ಈ ಅನ್ನ ನನಗಲ್ಲ ಶರೀರಕ್ಕೆ ಎಂದು ಚಿಂತಿಸುತ್ತಾ ಆತ್ಮ ಚಿಂತನೆ ಮಾಡುತ್ತಾ ಚಿದಾನ್ನ ಉಣ್ಣುತ್ತಿರುತ್ತಾನೆ.

ಚಾರಿತ್ರ ಮೋಹದ ತೀವ್ರೋದಯದಿಂದ ನಾನು ನಿರಾಹಾರಿಯಾಗಿದ್ದು ಸ್ವಸಮಯದಲ್ಲಿ ಸ್ಥಿರನಾಗಿರಲಾರೆ. ಇಲ್ಲಾವಾದರೆ ಪಕ್ಷೋಪವಾಸ, ಮಾಸೋಪವಾಸಾದಿಗಳಿಂದ ನಾನು ನನ್ನಲ್ಲಿ ಶಿಲಾ ಸ್ತಂಬದಂತೆ ಧ್ಯಾನರೂಡನಾಗಿ ನಿಲ್ಲುತ್ತಿದ್ದೆನಲ್ಲ ಎಂದು ಶರೀರಕ್ಕೆ ಅನ್ನವನ್ನು ಉಣ್ಣಿಸುತ್ತಿದ್ದರೂ, ಊರ್ಧ್ವಕ್ಕೆ ಏರುತ್ತಾನೆ. ಅಂತಹ ಮಾಹಾಯೋಗಿಯ ಬಗ್ಗೆ ದೇವತೆಗಳು ಪ್ರಶಂಸೆ ಮಾಡುತ್ತಾರೆ. ಶರೀರವನ್ನು ಒಂದು ಹುಲ್ಲುಕಡ್ಡಿಗೂ ಕಡೆಯಾಗಿ ಕಾಣುವ ಅಂತಹ ಯೋಗಿಗಳಿಗೆ ಆಹಾರ ಚಿಂತೆ ಹುಟ್ಟಬಲ್ಲದೇ?

ನಿಜವಾದ ತ್ಯಾಗಿ ಉಪಾವಾಸಕ್ಕೆ ಹೆದರುವುದಿಲ್ಲ. ಜಿನೋಪದಿಷ್ಟ ಮಾರ್ಗದಿಂದ ತಪ್ಪಿ ನಡೆದರೆ ಏನಾದೀತೆಂದು ಹೆದರುವನು. ನಿಜವಾದ ತ್ಯಾಗಿ ಆಹಾರಕ್ಕಾಗಿ ತ್ಯಾಗಿಯಾಗುವುದಿಲ್ಲ. ಕ್ಷುದಾದಿ ಹದಿನೆಂಟು ದೋಷಗಳನ್ನು ನಾಶಮಾಡುವುದಕ್ಕಾಗಿ ತ್ಯಾಗಿ. ಅವೆಲ್ಲವೂ ಇದ್ದರೆ, ಅವುಗಳ ಜೊತೆ ಒಂದಾಗಿ ಬೆರೆತು ಸಾಯುವಂತಾದಾರೆ ಒಳಗೊಳಗೆ ನುಗ್ಗಿ ಬರುವ ಅವುಗಳನ್ನು ಹೊಡೆದೋಡಿಸದೇ ಅವುಗಳ ಜೊತೆಯಲ್ಲೇ ಒಂದಾಗಿ ಬೆರೆತು ಹೋಗುವಾಂತಾದರೆ ಅವನೆಂತ ತ್ಯಾಗಿ. ಅವನು ಭವರೋಗಿ! ಆಗ ಅಂತಹ ತ್ಯಾಗಿಗೆ ಆಹಾರದ ಚಿಂತೆ ಹುಟ್ಟೀತು. ನಿಜವಾದ ವೈರಾಗ್ಯವಿಲ್ಲದೆ ದೀಕ್ಷೆಗೊಂಡವನಿಗೆ ಆಹಾರದ ಚಿಂತೆ ಏನು ಎಲ್ಲ ಚಿಂತೆಗಳೂ ಕಳ್ಳ ಹೆಜ್ಜೆ ಇಡುತ್ತಾ ಒಂದೊಂದಾಗಿ ಹೊರಬರುತ್ತವೆ. ಅಂತವರು ಎಲ್ಲಿದ್ದರೂ ಒಂದೇ. ಹೇಗಿದ್ದರೂ ಒಂದೇ. ಬಟ್ಟೆ ಹಾಕಿಕೊಂಡಿದ್ದರೂ ಒಂದೇ. ಬಟ್ಟೆ ಕಳಚಿದ್ದರೂ ಒಂದೇ. ಮೈಯ್ಯನ್ನು ಒಣಗಿಸಿ ಮನಸ್ಸನ್ನು ಹಸಿಹಸಿ ವಿಕಾರಗಳಿಂದ ತುಂಬಿಕೊಂಡರೆ ಹುಟ್ಟುಸಾವುಗಳ ದಾವಗ್ನಿ ಹೆಚ್ಚುತ್ತಲೇ ಹೋಗುತ್ತದೆ.

ನಿಶ್ಚಿಂತೆಯೆ ನಿಜವಾದ ತ್ಯಾಗದ ಲಕ್ಷಣ. ದೀಕ್ಷೆಯೇ ಆ ತ್ಯಾಗದ ಮೊದಲ ಹೆಜ್ಜೆ!

ಸಿದ್ಧಸಾಗರರು ಮತ್ತೆ ಹೇಳಿದರು.



ಅವರು ತಮ್ಮ ಜೀವನದಲ್ಲಿ ಮೊಟ್ಟಮೊದಲು ಭಕ್ತಾಮರ ಓದಿದ್ದರೆಂದು ಹೇಳಿದರು. ದೀಕ್ಷೆ ಕೊಟ್ಟಾಗ ನನಗೆ ಹೇಳಿದರು. "ನಿನಗೆ ಏನೂ ಶಾಸ್ತ್ರ ಜ್ಞಾನವಿಲ್ಲ. ಆದ್ದರಿಂದ ಣಮೋಕಾರ ಮಂತ್ರ ಜಪಿಸುತ್ತಾ ಮಂದಿರದಲ್ಲಿರು.

ಒಂದು ದಿನ ನಾತೆಪುತೆಯ ಬಾಯಿಚಂದ್ರ, ನೇಮಿಚಂದ್ರ, ಗಾಂಧಿ ಬಂದು ವ್ರತಗಳನ್ನು ಕೇಳಿದರು. ಆಗ ಅವರು ಆ ವ್ಯಕ್ತಿಯ ಪಾತ್ರಾಪಾತ್ರತೆಯ ಬಗ್ಗೆ ವಿಚಾರಮಾಡಿ ಹೀಗೆ ಹೇಳಿದರು.

"ನೀನು ಪಾಪ ಭೀರು. ಆದ್ದರಿಂದ ವ್ರತಗಳು ಕೊಡಲ್ಪಡುತ್ತವೆ. ಆದರೆ ನಿನ್ನಲ್ಲಿ ವೈರಾಗ್ಯವಿಲ್ಲ. ಆದ್ದರಿಂದ ಪ್ರತಿಮಾರೂಪಿ ವ್ರತಗಳನ್ನು ಕೊಡಲಾರೆವು.

## ನಾಲ್ಕು ಸ್ವಪ್ನಗಳು

೧ನೇ ಸ್ವಪ್ನ

ಲೋಣಂದಾ ಚಾತುರ್ಮಾಸದ ಅಂತ್ಯದಲ್ಲಿ ಅವರಿಗೆ ಈ ಸ್ವಪ್ನ ಕಾಣಿಸಿಕೊಂಡವು.

ಅವರ ಸುತ್ತ ಸುಮಾರು ೫೦೦ ಜನ ಕೂತಿದ್ದರು. ಆಗ ೧೨ ಅಡಿ ಉದ್ದವಿರುವ ಒಂದು ಘಟಸರ್ಪ ಸುರುಳಿಸುತ್ತಿ ಕೂತಿತ್ತು. ಕೂಡಲೇ ಅದು ಅವರ ಮಸ್ತಕವೇರಿ ಹೊಯ್ದಾಡತೊಡಗಿತು. ಮಹರಾಜರು ಸುಮ್ಮನಿರಲು ಎಲ್ಲರಿಗೂ ಸಂಜ್ಞೆ ಮಾಡಿದರು. ಸರ್ಪ ಸುಮ್ಮನೆ ಹೊರಟುಹೋಯಿತು.

ಅದು ಜೀವನದ ಅಂತ್ಯದ ಪ್ರತೀಕ. ಅದು ಏನೂ ಮಾಡದೆ ಸುಮ್ಮನೆ ಹೊರಟು ಹೋದ್ದರಿಂದ ಗಂಡಾಂತರ ತಪ್ಪಿ ಹೋಯಿತು.

ಸ್ವಪ್ನ ೨ : ಈ ಸ್ವಪ್ನ ಪಲ್‌ಟನ್ ಚಾತುರ್ಮಾಸದಲ್ಲಿ ೧೯೫೪ ಕಾರ್ತೀಕ ಮಾಸದಲ್ಲಿ ಕಾಣಿಸಿಕೊಂಡಿತು.

'ಒಂದು ಶಾಸನದೇವತೆ ಕಾಣಿಸಿಕೊಂಡು ನಾಳೆ ಅನ್ನ ತ್ಯಾಗ ಮಾಡಿರಿ ಎಂದಿತು. ಮರುದಿನ ಅವರು ಅನ್ನತ್ಯಾಗ ಮಾಡಿದರು

ಸ್ವಪ್ನ೩: ಮೂರನೆಯ ಸ್ವಪ್ನ ಬಾರಸಿಯಲ್ಲಿ ಅರ್ಧಜಾಗ್ರತಾವಸ್ಥೆಯಲ್ಲಿ ಬಿದ್ದಿತ್ತು.

ಒಂದು ಭಯಂಕರ ಸಿಂಹ ಕಂಡಿತು. ಅದು ಒಂದು ಆನೆಯಷ್ಟು ದೊಡ್ಡದಿತ್ತು. ಅದರ ಬಾಯಲ್ಲಿ ಒಬ್ಬ ಮನುಷ್ಯ ತೂರಬಹುದಿತ್ತು. ಅದು ಅವರನ್ನು

ಬಾಯಲ್ಲಿ ಕಚ್ಚಿ ಹಿಡಿಯಿತು. ಆದರ ಹಲ್ಲುಗಳು ನಾಟಲಿಲ್ಲ. ಅವರು ಶಾಂತ ಭಾವದಿಂದ ಸಿದ್ಧ ಭಗವಾನರನ್ನು ಸ್ಮರಿಸುತ್ತಿದ್ದರು. ಆಗ ಅವರು ಸಿಂಹದ ಕಿವಿ ಹಿಡಿದಿದ್ದರು. ಕೂಡಲೇ ಎಚ್ಚರವಾಯಿತು. ಇದರರ್ಥ ತಮ್ಮ ಕಷ್ಟ ಕಳೆಯಿತು ಎಂದರು.

ಸ್ವಪ್ನ೪: ನಾಲ್ಕನೆಯ ಸ್ವಪ್ನ ಕುಂಥಲಗಿರಿಯಲ್ಲಿ ಬಿದ್ದಿತ್ತು.

ಒಮ್ಮೆ ಅವರು ಒಂದು ಕಾಡಿನಲ್ಲಿ ಒಬ್ಬರೇ ನಿಂತಿದ್ದರು. ಒಂದು ಭಾರಿ ಶರೀರದ ಕಾಡು ಕೋಣ ಕಾಣಿಸಿತು. ಸಿಟ್ಟಿನಿಂದ ಓಡಿ ಬಂದು ಅವರ ಮೇಲೆ ಬಿದ್ದಿತು. ಆಗ ಒಬ್ಬ ಮುನಿ ಹತ್ತು ಅಡಿ ದೂರದಲ್ಲಿ ಕಾಣಿಸಿಕೊಂಡರು. ಅವರ ಕೈಯ್ಯಲ್ಲಿ ಪಿಂಛವಿತ್ತು. ಅವರ ಇನ್ನೊಂದು ಕೈಯಲ್ಲಿ ಮೂರು ಹಸ್ತ ಉದ್ದನೆಯ ದಂಡವಿತ್ತು. ಆ ಮುನಿ ಆ ಕೋಣವನ್ನು ಚೆನ್ನಾಗಿ ಥಳಿಸಿದ. ಅದು ಸೋತು ಕೆಳಗೆ ಬಿದ್ದಿತು. ಆಗ ಮಹರಾಜರು ಸಿದ್ಧ ಭಗವಂತರನ್ನು ಧ್ಯಾನಿಸುತ್ತಿದ್ದರು. ನೀವು ಸಂಕಟ ಮುಕ್ತರಾದಿರಿ. ಇನ್ನು ಇಲ್ಲಿಂದ ಹೊರಟು ಹೋಗಿರಿ ಎಂದು ಹೇಳಿದರು ಆ ಮುನಿ. ಆಗ ಅವರು ಮುನಿಯಾಗಿಯೂ ಇಂತಹ ಹಿಂಸೆ ಹೇಗೆ ಮಾಡಿದಿರಿ. ಇಲ್ಲಿಂದ ಹೊರಟು ಹೋಗಿರಿ ಎಂದು ಹೇಳಿದರು. ಆ ಮುನಿ ಹೋದರು. ಅವರಿಗೆ ಎಚ್ಚರವಾಯಿತು.

ಇದರರ್ಥ ಹೀಗೆ ಯೋಚಿಸಿದರು. ವಿಪತ್ತು ದೂರವಾಯಿತು. ಆದರೆ ಪ್ರಶಾಂತ ಸ್ವಭಾವದ ಮುನಿಗಳು ಮುಂದೆ ದುರ್ಲಭವಾಗುವರು. ಮಹರಾಜರು ಮೌನಪೂರ್ವಕ ಐದು ಉಪವಾಸ ನಿಯಮ ಸ್ವೀಕರಿಸಿದರು.



# ಪಾರ್ಶ್ವನಾಥ ಉಪಾಧ್ಯೆ ೨೩

ವಯೋವೃದ್ಧ ಶ್ರೀಉಪಾಧ್ಯೆಯವರಿಗೆ ಆಚಾರ್ಯ ಶಾಂತಿಸಾಗರರ ಸತ್ಸಂಗ ಸಿಕ್ಕಿತ್ತು. ಅವರು ಅಮೂಲ್ಯ ವಿಚಾರ ತಿಳಿಸಲಾರಂಭಿಸಿದರು.–

"ಆಗ ಅವರಿನ್ನೂ ಗೃಹತ್ಯಾಗ ಮಾಡಿರಲಿಲ್ಲ. ಅವರನ್ನು ಬ್ರಹ್ಮಚಾರಿ ಸಾತಗೌಡ ಎಂದು ಕರೆಯುತ್ತಿದ್ದರು. ಅವರು ನಮ್ಮ ನಗರಕ್ಕೆ ಬಂದಾಗ ಪದ್ಮನಂದಿ ಪಂಚವಿಂಶತಿಯನ್ನು ಒಂದು ಗಂಟೆ ಓದಿ ಹೇಳುತ್ತಿದ್ದೆ. ಶಾಸ್ತ್ರ ಸ್ವಾಧ್ಯಾಯವಿಲ್ಲದೆ ಆಹಾರ ತೆಗೆದುಕೊಳ್ಳುವುದಿಲ್ಲ ಎನ್ನುವ ನಿಯಮ ಇಟ್ಟುಕೊಂಡಿದ್ದರು. ಶಾಸ್ತ್ರ ಪ್ರೇಮ ಮೊದಲಿನಿಂದಲೂ ಅದ್ವಿತೀಯವಾಗಿತ್ತು. ದಿಗಂಬರ ಮುದ್ರೆ ಧಾರಣೆ ಮಾಡುವವರ ಮನಸ್ಸು ಉನ್ನತವಾಗಿರುತ್ತದೆ ಎಂದು ಅವರು ನನಗೆ ಹೇಳಿದರು.

"ಉಪಾಧ್ಯಾಯರೇ! ಶೀಘ್ರವಾಗಿ ಸ್ವಾಮಿ(ಮುನಿ)ಯಾಗುವ ಭಾವ ನನಗೆ ಉಂಟಾಗಿದೆ"

ದಕ್ಷಿಣದಲ್ಲಿ ತ್ಯಾಗಿಗೆ ಸ್ವಾಮಿ ಎಂದೂ ಉತ್ತರದಲ್ಲಿ ಮಹರಾಜ್ ಎಂದೂ ಕರೆಯುವ ವಾಡಿಕೆ ಇದೆ.

ಶಾಂತಿಸಾಗರರು ಮತ್ತೆ ಹೇಳಿದರು.

'ನಾನು ನನ್ನ ಮನಸ್ಸಿನಲ್ಲಿ ಕೃತನಿಶ್ಚಯ ಮಾಡಿದ್ದೇನೆ. ಆದರಿಂದ ಹಿಂದಕ್ಕೆ ಸರಿಯಲಾರೆ' ಅವರ ಮನಸ್ಸಿನಲ್ಲಿ ದೃಢ ನಿರ್ಧಾರವಿತ್ತು. ಅವರು ವೈರಾಗ್ಯದ ಮೂರ್ತಿಯಂತೆ ಕಂಡರು.

## ವರ್ಧಮಾನಸಾಗರರ ಬಗ್ಗೆ

ವರ್ಧಮಾನಸಾಗರರೂ ಮಹಾವ್ಯಕ್ತಿ. ಆಚಾರ್ಯ ಮಹರಾಜರಷ್ಟೇ ಅವರ ಪರಿಚಯವೂ ನನಗಿತ್ತು. ಇಬ್ಬರೂ ಮಹಾಪುರುಷರೇ. ಅವರು ಒಮ್ಮೆ ನನಗೆ ಹೇಳಿದ್ದರು. "ಉಪಾಧ್ಯಾಯರೆ! ನೀವು ಮುನಿ ಧರ್ಮದ ಬಗ್ಗೆ ಇಷ್ಟು ರಸವತ್ತಾಗಿ ಹೇಳುತ್ತೀರಿ. ಬಹಳ ಸ್ವಾರಸ್ಯವಾಗಿ ಚರ್ಚೆ ಮಾಡುತ್ತೀರಿ. ಆದರ ಗುಣ ಕಥನ ಮಾಡುತ್ತೀರಿ. ಅಂದರೆ ನೀವು ಮುನಿಯಾದರೆ ಸರಿಯಾದೀತು ನೋಡಿ!"

ಆಗ ನಾನೆಂದೆ.

'ನನ್ನ ಚಾರಿತ್ರ ಮೋಹ ತೀವ್ರವಾಗಿದೆ. ಆದ್ದರಿಂದ ಮಹಾವ್ರತ ಧಾರಣೆ ಮಾಡುವ ಪಾತ್ರತೆ ಇನ್ನೂ ನನಗೆ ಬಂದಿಲ್ಲ' ಅವರ ದರ್ಶನ ಮಾತ್ರದಿಂದಲೇ ನಾನು ಕೃತಾರ್ಥನಾಗಿದ್ದೇನೆ. ನನ್ನ ಜನ್ಮ ಸಫಲವಾಗಿದೆ.

## ಸೇಠ್ ರಾಮಚಂದ್ ಧನಜಿ.ದಾವಡ ನಾತೆಪುತೆ

ಧನಜಿ ಹೇಳತೊಡಗಿದರು.

ನಾನು ಮೊದಲು ಅವರನ್ನು ನೋಡಲು ಕೋಣ್ಣೂರಿಗೆ ಹೋಗಿದ್ದೆ. ಅಲ್ಲಿ ಐನೂರಕ್ಕೂ ಹೆಚ್ಚು ಗುಹೆಗಳಿವೆ. ಅವರು ಊರಿನ ಹೊರಗಿನ ಗುಹೆಯಲ್ಲಿರುತ್ತಿದ್ದರು. ಮಧ್ಯಾನ್ಹದ ಸಾಮಾಯಿಕವನ್ನು ಗುಹೆಯಲ್ಲೇ ಮಾಡಿಕೊಳ್ಳುತ್ತಿದ್ದರು. ಗುಹೆಗಳು ಐದು ಅಡಿಗಳಿಗೂ ದೊಡ್ಡವಿದೆ. ಸುಮಾರು ೨ ಮೊಳ ಉದ್ದನೆಯ ಸರ್ಪ ಗುಹೆಯ ಒಳಗೆ ಬಂದಿತು. ಅವರ ಶರೀರ ಏರಿ ಐದು ನಿಮಿಷವಿತ್ತು. ಆಗ ಅವರು ಧ್ಯಾನದಲ್ಲಿದ್ದರು. ಅವರಿಗೆ ಸ್ವಲ್ಪವೂ ಭಯಹುಟ್ಟಿರಲಿಲ್ಲ. ಅವರ ದೃಢತೆ ನೋಡಿ ನಾನು ಬಹಳ ಪ್ರಭಾವಿತನಾದೆ. ನಾನೆಷ್ಟು ಆಕರ್ಷಿತನಾದೆನೆಂದರೆ ಸುಮಾರು ಮುವತ್ತು ವರ್ಷಗಳಿಂದ ನಾನು ಅವರ ಹತ್ತಿರ ಬಂದು ಹೋಗಿ ಮಾಡುತ್ತಿದ್ದೇನೆ.

ಅವರೇನೋ ಹೋಗಿ ಬಿಟ್ಟರು. ಅವರು ಹೋದ ದಾರಿಯಲ್ಲಿ ಹೋಗಿ ನಮ್ಮನ್ನು ನಾವು ಕೃತಾರ್ಥರನ್ನಾಗಿ ಮಾಡಿಕೊಳ್ಳಬೇಕಾಗಿದೆ. ಅವರು ಧನ್ಯಾತ್ಮರು.



# ಅಮರ ಸಂದೇಶ ೨೪

ಓಂ ಜಿನಾಯನಮಃ ಓಂ ಸಿದ್ಧಾಯನಮಃ ಓಂ ಅರ್ಹಂಸಿದ್ಧಾಯನಮಃ ಭರತ ಐರಾವತ ಕ್ಷೇತ್ರಸ್ಯ ತ್ರಿಕಾಲವರ್ತಿ ತೀಸ್ ಚೌಬೀಸ್ (೭೨೦)ಭಗವಾನ್ ನಮೋನಮಃ. ಶ್ರೀಮಂಧರಾದಿ ಬೀಸ್(೨೦) ವಿಹಾರಮಾನ್ ತೀರ್ಥಂಕರ ಭಗವಾನ್ ನಮೋನಮಃ ಋಷಭಾದಿ ವರ್ಧಮಾನ ಪರ್ಯಂತ ಚೌದಹಸ್ ಬಾವನ್‌ಗಣಧರದೇವೇಭ್ಯೋ ನಮೋನಮಃ ಚೌಸಠ್ ಋದ್ಧಿಧಾರಿ ಮುನೀಶ್ವರಾಯ ನಮೋನಮಃ ಅಂತಕೃತ ಕೇವಲಿ ಮುನೀಶ್ವರಾಯ ನಮೋನಮಃ. ಪ್ರತ್ಯೇಕ ತೀರ್ಥಕಾಲೀನ ದಶದಶ ಘೋರೋಪಸರ್ಗ ವಿಜಯಿ ಮುನೀಶ್ವರಾಯ ನಮೋ ನಮಃ.

ಹನ್ನೊಂದು ಅಂಗ ಹದಿನಾಲ್ಕು ಪೂರ್ವಶಾಸ್ತ್ರ ಮಹಾಸಮುದ್ರದಂತಿವೆ. ಅದರ ವರ್ಣನೆ ಮಾಡಲು ಈಗ ಯಾರೂ ಶೃತಕೇವಲಿಗಳಿಲ್ಲ. ನನ್ನಂತಹ ಕ್ಷುದ್ರ ಮನುಷ್ಯನೇನು ವರ್ಣನೆ ಮಾಡಬಲ್ಲೆ? ಅದು ಸರ್ವಜೀವ ಕಲ್ಯಾಣಕಾರಿಯಾಗಿದೆ. ಜಿನವಾಣಿ ಸರಸ್ವತಿ ಅನಂತ ಸಮುದ್ರ ಪ್ರಮಾಣ ಇದೆ. ಇನ್ನು ಅದನ್ನು ಯಾರು ಧಾರಣೆ ಮಾಡುವರೋ ಅವರ ಕಲ್ಯಾಣ ಅವಶ್ಯ ಆಗುತ್ತದೆ. ಅಂತವರು ಅನಂತ ಸುಖವನ್ನು ಪ್ರಾಪ್ತಿ ಮಾಡಿಕೊಂಡು ಮೋಕ್ಷ ಪಡೆಯುತ್ತಾರೆ. ಅನಂತ ಆಗಮಗಳಲ್ಲಿ ಒಂದು "ಓಂ" ಅಕ್ಷರವನ್ನು ಮಾತ್ರ ಯಾವ ಜೀವ ಧಾರಣೆ ಮಾಡುತ್ತದೆ ಅಂತಹ ಜೀವದ ಕಲ್ಯಾಣವಾಗುತ್ತದೆ. ಸಮ್ಮೇದಶಿಖರದಲ್ಲಿ ಎರಡು ಕೋತಿಗಳು ಹೋರಾಡುತ್ತಿದ್ದವು. ಣಮೋಕಾರ ಮಂತ್ರ ಪ್ರಭಾವದಿಂಧ ಕಂಠಗತ ಪ್ರಾಣವಾಗಿದ್ದ ಒಂದು ಕೋತಿ ಸ್ವರ್ಗಕ್ಕೆ ಹೋಯಿತು. ಸುದರ್ಶನ ಶ್ರೇಷ್ಠಿಯಿಂದ ಬೋಧಿಸಲ್ಪಟ್ಟ ಎತ್ತು ಸ್ವರ್ಗಕ್ಕೇರಿತು. ಸಪ್ತವ್ಯಸನಧಾರಿ ಅಂಜನ ಚೋರನಿಗೆ ಮಂತ್ರೋಪದೇಶದಿಂದ ಉಚ್ಚಗತಿಯಾಯಿತು. ಇದು ಹೋಗಲಿ ಬಿಡಿ. ನೀಚಗತಿಯ ಜೀವ ನಾಯಿ, ಜೀವಂಧರನಿಂದ ಉಪದೇಶ ಹೊಂದಿ ಸ್ವರ್ಗದಲ್ಲಿ ದೇವನಾಯಿತು. ಇಂತಹ ಮಹಿಮೆ ಜಿನಧರ್ಮದಲ್ಲಿದೆ. ಆದಾಗ್ಯೂ ಯಾರೂ ಧಾರಣೆ ಮಾಡುವುದಿಲ್ಲ.

ಜೈನನಾಗಿದ್ದರೂ ಜಿನಧರ್ಮದಲ್ಲಿ ವಿಶ್ವಾಸವಿಲ್ಲ. ಅನಂತ ಕಾಲದಿಂದಲೂ ಜೀವ ಪುದ್ಗಲಗಳು ಭಿನ್ನ ಭಿನ್ನವಾಗಿವೆ. ಇದನ್ನು ಜಗತ್ತೇ ತಿಳಿಯುತ್ತದೆ. ಆದರೂ ವಿಶ್ವಾಸವಿಡುವುದಿಲ್ಲ. ಪುದ್ಗಲ ಬೇರೆ, ಜೀವ ಬೇರೆ. ಎರಡೂ ಬೇರೆ ಬೇರೆಯಾಗಿದ್ದರೂ ನಾನು ಜೀವವೋ, ಪುದ್ಗಲವೋ ವಿಚಾರ ಮಾಡಬೇಕು. ನಾನು ಜೀವವಿದ್ದೇನೆ. ಪುದ್ಗಲವಲ್ಲ.

ಪುದ್ಗಲ ಬೇರೆಯೇ ಇದೆ. ಜಡ ಇದೆ. ಅದರಲ್ಲಿ ಜ್ಞಾನ ಇಲ್ಲ. ಜ್ಞಾನ ಮತ್ತು ಚೇತನ ಜೀವದ ಗುಣ. ಸ್ಪರ್ಷ, ರಸ, ಗಂಧ, ಇವು ಪುದ್ಗಲದ ಗುಣ. ಎರಡರ ಗುಣಧರ್ಮ ಬೇರೆ ಬೇರೆ ಇದೆ. ಆದ್ದರಿಂದ ಅವೆರಡೂ ಬೇರೆ ಬೇರೆ ಇವೆ.

ನಾನು ಜೀವವೋ, ಪುದ್ಗಲವೋ? ನಾನು ಜೀವದ್ರವ್ಯನಿದ್ದೇನೆ. ಪುದ್ಗಲ ಪಕ್ಷದಲ್ಲಿ ಬಿದ್ದಿದ್ದರಿಂದ ನನ್ನನ್ನು ಈ ಮೋಹನೀಯ ಕರ್ಮ ತನ್ನ ಜಾಲದಲ್ಲಿ ಮುಳುಗಿಸಿದೆ. ಮೋಹನೀಯ ಕರ್ಮ ಜೀವದ ಘಾತ ಮಾಡುತ್ತದೆ. ಪುದ್ಗಲದ ಪಕ್ಷ ಹಿಡಿದರೆ ಜೀವದ ಘಾತ ಆಗುತ್ತದೆ. ಜೀವದ ಪಕ್ಷ ಹಿಡಿದರೆ ಪುದ್ಗಲದ ಘಾತವಾಗುತ್ತದೆ. ನಾನು ಜೀವ ದ್ರವ್ಯನಿದ್ದೇನೆ. ಜೀವದ ಕಲ್ಯಾಣ ಆಗಬೇಕಾಗಿದೆ. ಜೀವಕ್ಕೆ ಅನಂತ ಸುಖ ಸಿಗಬೇಕಾಗಿದೆ. ಜೀವಕ್ಕೆ ಮೋಕ್ಷ ಸಿಗಬೇಕಾಗಿದೆ. ಈ ಸಾಮರ್ಥ್ಯ ಎಲ್ಲಾ ಜೀವಗಳಲ್ಲೂ ಇದೆ. ಪುದ್ಗಲ ಮೋಕ್ಷಕ್ಕೆ ಹೋಗುವುದಿಲ್ಲ.

ಇಷ್ಟೆಲ್ಲಾ ಹೇಳಿದರೂ ಈ ಜಗತ್ತು ಜಂಝುಟದಲ್ಲಿ ಮುಳುಗಿದೆ. ಪಂಚ ಪಾಪಗಳಲ್ಲಿ ಮುಳುಗಿದೆ. ದರ್ಶನಮೋಹನೀಯ ಕರ್ಮ ಸಮ್ಯಕ್ತ್ವದ ಘಾತ ಮಾಡಿದೆ. ಚಾರತ್ರಮೋಹನೀಯ ಕರ್ಮ ಸಂಯಮದ ಘಾತ ಮಾಡಿದೆ. ಈ ಪ್ರಕಾರ ಈ ಎರಡೂ ಕರ್ಮಗಳು ಅನಂತ ಕಾಲದಿಂದಲೂ ಜೀವದ ಘಾತ ಮಾಡಿವೆ. ಆದ್ದರಿಂದ ತನಗಾಗಿ ಏನು ಮಾಡಬೇಕಾಗಿದೆ?

## ಆದೇಶ ಮತ್ತು ಉಪದೇಶ

ಸುಖ ಪ್ರಾಪ್ತಿ ಮಾಡಿಕೊಳ್ಳಬಯಸುವ ಜೀವಕ್ಕೆ ನಮ್ಮ ಆದೇಶವೇನೆಂದರೆ ದರ್ಶನ ಮೋಹನೀಯ ಕರ್ಮ ನಾಶಗೊಳಿಸಲು ಸಮ್ಯಕ್ತ್ವ ಧಾರಣೆ ಮಾಡಿರಿ. ಚಾರಿತ್ರ ಮೋಹನೀಯ ಕರ್ಮ ನಾಶಗೊಳಿಸಲು ಸಂಯಮಧಾರಣೆ ಮಾಡಿರಿ. ಈ ಎರಡೂ ಮೋಹನೀಯ ಕರ್ಮ ನಾಶಗೊಳಿಸಿ ನಿಮ್ಮಾತ್ಮ ಕಲ್ಯಾಣ ಮಾಡಿಕೊಳ್ಳಿರಿ. ಇದೇ ನಮ್ಮ ಆದೇಶ ಮತ್ತು ಉಪದೇಶ. ಅನಂತಕಾಲದಿಂದಲೂ ಈ ಜೀವ ಸಂಸಾರದಲ್ಲಿ ಪರಿಭ್ರಮಣ ಮಾಡುತ್ತಿದೆ. ಯಾವ ಕಾರಣದಿಂದ? ಮಿಥ್ಯಾತ್ವ ಕರ್ಮದ ಉದಯದಿಂದ. ತನ್ನ ಕಲ್ಯಾಣ ಯಾವುದರಿಂದ ಆಗುತ್ತದೆ? ಈ ಮಿಥ್ಯಾತ್ವ ಕರ್ಮದ ನಾಶದಿಂದ ಆಗುತ್ತದೆ. ಅದನ್ನು ನಾಶಮಾಡಲಲು ಸಮ್ಯಕ್ತ್ವಧಾರಣೆ ಮಾಡಿರಿ

ಯಾವುದನ್ನು ಸಮ್ಯಕ್ತ್ವವೆಂದು ಕರೆಯುತ್ತಾರೆ? ಕುಂದಕುಂದರ ಸಮಯಸಾರ, ಪ್ರವಚನಸಾರ ನಿಯಮಸಾರ, ಪಂಚಾಸ್ತಿಕಾಯ ಅಷ್ಟಪಾಹುಡಗಳಲ್ಲಿ ಮತ್ತು ಗೋಮಟಸಾರಾದಿ ದೊಡ್ಡದೊಡ್ಡ ಗ್ರಂಥಗಳಲ್ಲಿ ಸಮ್ಯಕ್ತ್ವದ ಬಗ್ಗೆ ವರ್ಣನೆ ಮಾಡಿದ್ದಾರೆ. ಇದನ್ನು ಯಾರು ಶ್ರದ್ದೆ ಮಾಡುತ್ತಾರೆ? ಆತ್ಮ ಕಲ್ಯಾಣ



ಮಾಡಿಕೊಳ್ಳಬಯಸುವವರು ಶ್ರದ್ದೆ ಇಡಬೇಕು. ಜೀವ ಸಂಸಾರದಲ್ಲಿ ಭ್ರಮಣ ಮಾಡುತ್ತಾ ಬರುತ್ತದೆ. ಓಂ ಸಿದ್ಧಾಯ ನಮಃ

## ಕರ್ತವ್ಯ

ಪುನಃ ತಮಗಾಗಿ ಏನು ಮಾಡಬೇಕಾಗಿದೆ? ದರ್ಶನ ಮೋಹನೀಯ ಕರ್ಮದ ಕ್ಷಯ ಮಾಡಬೇಕಾಗಿದೆ. ಯಾವುದರದಿಂದ ಅದರ ಕ್ಷಯ ಆಗುತ್ತದೆ? ಅದು ಆತ್ಮ ಚಿಂತನೆಯಿಂದ ಆಗುತ್ತದೆ. ಕರ್ಮ ನಿರ್ಜರೆಯೂ ಆತ್ಮ ಚಿಂತನೆಯಿಂದ ಆಗುತ್ತದೆ. ತೀರ್ಥಯಾತ್ರೆಯಿಂದ ಪುಣ್ಯಬಂಧ ಆಗುತ್ತದೆ. ಪ್ರತ್ಯೇಕ ಧರ್ಮಕಾರ್ಯದಿಂದ ಪುಣ್ಯಬಂಧ ಆಗುತ್ತದೆ. ಕರ್ಮ ನಿರ್ಜರೆ ಮಾಡಲು ಆತ್ಮ ಚಿಂತನೆ ಮಾಡಬೇಕು. ಅನಂತ ಕರ್ಮನಿರ್ಜರೆಗೂ ಆತ್ಮ ಚಿಂತನೆಯೇ ಸಾಧನ. ಆತ್ಮಚಿಂತನೆ ಇಲ್ಲದೆ ಕರ್ಮ ನಿರ್ಜರೆ ಇಲ್ಲ. ಕರ್ಮನಿರ್ಜರೆ ಇಲ್ಲದೆ ಕೇವಲ ಜ್ಞಾನ ಇಲ್ಲ. ಕೇವಲ ಜ್ಞಾನ ಇಲ್ಲದೆ ಮೋಕ್ಷ ಇಲ್ಲ.

ಇನ್ನು ತನಗಾಗಿ ಏನು ಮಾಡಬೇಕು? ಆತ್ಮಧ್ಯಾನ ಮಾಡಬೇಕು. ಆತ್ಮಧ್ಯಾನ ಮಾಡಲು ೨೪ ಗಂಟಗಳಲ್ಲಿ ೬ ಗಂಟೆ ಉತ್ಕೃಷ್ಟ ಕಾಲ ಎಂದು ಹೇಳಿದೆ. ಸಮಯವೆಷ್ಟು ಸಿಗುತ್ತದೋ ಅಷ್ಟುಕಾಲ ಆತ್ಮ ಚಿಂತನೆ ಮಾಡಿರಿ. ಕೊನೆಯಪಕ್ಷ ೧೦-೧೫ ನಿಮಿಷಗಳಾದರೂ ಮಾಡಿರಿ. ಕನಿಷ್ಟ ಐದು ನಿಮಿಷವಾದರೂ ಮಾಡಿರಿ. ಆತ್ಮ ಚಿಂತನೆ ಇಲ್ಲದೆ ಸಮ್ಯಕ್ತ್ವ ಉತ್ಪನ್ನ ಆಗದು. ಸಮ್ಯಕ್ತ್ವವಿಲ್ಲದೆ ಸಂಸಾರ ಬಂಧನ ದೂರ ಆಗುವದಿಲ್ಲ. ಜನ್ಮ-ಮರಣ ದೂರವಾಗುವುದಿಲ್ಲ. ಸಮ್ಯಕ್ತ್ವ ಪ್ರಾಪ್ತಿ ಮಾಡಿಕೊಂಡು ಸಂಯಮದತ್ತ ಹೊರಳಿರಿ. ಚಾರಿತ್ರ ಮೋಹನೀಯ ಕರ್ಮ ಉದಯವಾಗುವುದರಿಂದ ಜೀವಕ್ಕೆ ಸಮ್ಯಕ್ತ್ವ ಪ್ರಾಪ್ತವಾದರೂ ೬೬ ಸಾಗರ ಪ್ರಮಾಣಕಾಲ ಜೀವ ಸಂಸಾರದಲ್ಲಿ ಮತ್ತೂ ಉಳಿದೀತು.

## ಸಂಯಮ ಪಾಲನೆ

ಚಾರಿತ್ರ ಮೋಹನೀಯ, ಕ್ಷಯ ಮಾಡಲು ಸಂಯಮ ಧಾರಣೆ ಮಾಡಿರಿ. ಸಂಯಮವಿಲ್ಲದೆ ಚಾರಿತ್ರಮೋಹನೀಯಕರ್ಮ ನಾಶ ಆಗದು. ಹೆದರಬೇಡಿರಿ! ಸಂಯಮ ಧಾರಣೆ ಮಾಡಲು ಹೆದರಬೇಡಿರಿ!! ಸಂಯಮ ಧಾರಣೆ ಮಾಡದೆ ಏಳನೆ ಗುಣಸ್ಥಾನ ಆಗದು. ಏಳನೆ ಗುಣಸ್ಥಾನ ಆಗದೆ ಆತ್ಮಾನುಭವ ಆಗದು. ಆತ್ಮಾನುಭವವಿಲ್ಲದೆ ಕರ್ಮ ನಿರ್ಜರೆ ಆಗದು. ಕರ್ಮನಿರ್ಜರೆ ಇಲ್ಲದೆ ಕೇವಲ ಜ್ಞಾನ ಆಗದು. ಓಂ ಸಿದ್ಧಾಯ ನಮಃ

## ಸಮಾಧಿ

ನಿರ್ವಿಕಲ್ಪ ಸಮಾಧಿ, ಸವಿಕಲ್ಪ ಸಮಾಧಿ ಎಂದು ಸಮಾಧಿಯಲ್ಲಿ ಎರಡು ವಿಧಗಳಿವೆ. ಬಟ್ಟೆ ಧರಿಸಿದ ಗೃಹಸ್ಥ ಸವಿಕಲ್ಪ ಸಮಾಧಿ ಮಾಡಿಕೊಳ್ಳಬಲ್ಲ. ಸಂಯಮಿ ಮುನಿಗೆ ನಿರ್ವಿಕಲ್ಪ ಸಮಾಧಿ ಆಗುತ್ತದೆ. ವಸ್ತ್ರತ್ಯಾಗ ಮಾಡದೆ ಮುನಿಪದ ಆಗದು. ಈ ರೀತಿ ಸಮಯಸಾರದಲ್ಲಿ ಕುಂದಕುಂದರು ಹೇಳಿದ್ದಾರೆ. ಆತ್ಮಾನುಭವ ಆಗದೆ ಸಮ್ಯಕ್ತ್ವ ಆಗದು. ವ್ಯವಹಾರ ಸಮ್ಯಕ್ತ್ವ ಉಪಚಾರದಿಂದ ಸಮ್ಯಕ್ತ್ವ ಮಾತ್ರವೆಂದು ಹೇಳಿದ್ದಾರೆ. ಇದು ಯಥಾರ್ಥ ಸಮ್ಯಕ್ತ್ವವಲ್ಲ. ಇದು ಸಾಧನವಾಗಿದೆ. ಸಾಧ್ಯವಲ್ಲ .ಫಲ ಬರಲು ಹೂವು ಕಾರಣವಿರುವಂತೆ ವ್ಯವಹಾರ ಸಮ್ಯಕ್ತ್ವವಿದೆ.

ಯಥಾರ್ಥ ಸಮ್ಯಕ್ತ್ವ ಯಾವಾಗ ಉಂಟಾಗುತ್ತದೆ? ಆತ್ಮಾನುಭವ ಆದ ಮೇಲೆ ಆಗುತ್ತದೆ. ಆತ್ಮಾನುಭವ ಯಾವಾಗ ಆಗುತ್ತದೆ? ಆತ್ಮಾನುಭವ ನಿರ್ವಿಕಲ್ಪ ಸಮಾಧಿಯಾದ ನಂತರ ಆಗುತ್ತದೆ. ನಿರ್ವಿಕಲ್ಪ ಸಮಾಧಿ ಮುನಿಪದ ಧಾರಣೆ ಮಾಡಿದ ಮೇಲೆಯೇ ಆಗುತ್ತದೆ.

ನಿರ್ವಿಕಲ್ಪ ಸಮಾಧಿಯ ಪ್ರಾರಂಭ ಯಾವಾಗ ಆಗುತ್ತದೆ? ಏಳನೆ ಗುಣಸ್ಥಾನದಿಂದ ಆಗುತ್ತದೆ. ಮತ್ತು ಹನ್ನೆರಡನೆ ಗುಣಸ್ಥಾನದಲ್ಲಿ ಪೂರ್ಣವಾಗುತ್ತದೆ. ಹದಿಮೂರನೆ ಗುಣಸ್ಥಾನದಲ್ಲಿ ಕೇವಲ ಜ್ಞಾನವಾಗುತ್ತದೆ. ಈ ರೀತಿ ನಿಯಮವಿದೆ. ಇದೆಲ್ಲಾ ಶಾಸ್ತ್ರದಲ್ಲಿ ಬರೆದಿದ್ದಾರೆ. ಆದ್ದರಿಂದ ಹೆದರಬೇಡರಿ ಸಂಯಮ ಧಾರಣೆ ಮಾಡಿರಿ. ಸಮ್ಯಕ್ತ್ವ ಧಾರಣೆ ಮಾಡಿರಿ. ಇವುಗಳಿಂದ ನಿಮಗೆ ಕಲ್ಯಾಣವಾಗುತ್ತದೆ. ಇವುಗಳಿಲ್ಲದೆ ನಿಮಗೆ ಕಲ್ಯಾಣವಿಲ್ಲ. ಸಂಯಮವಿಲ್ಲದೆ ಕಲ್ಯಾಣವಿಲ್ಲ. ಆತ್ಮಚಿಂತನೆ ಇಲ್ಲದೆ ಕಲ್ಯಾಣವಿಲ್ಲ.

ಪುದ್ಗಲ ಮತ್ತು ಜೀವ ಬೇರೆ ಬೇರೆಯಾಗಿಯೇ ಇವೆ. ಇದನ್ನು ಸರಿಯಾಗಿ ತಿಳಿದುಕೊಳ್ಳಿರಿ. ಇದನ್ನು ಮೇಲೆ ಮೇಲೆ ತಿಳಿದುಕೊಂಡಿದ್ದಿರಿ. ಯಥಾರ್ಥ ತಿಳುವಳಿಕೆ ನಿಮಗಿನ್ನೂ ಆಗೇ ಇಲ್ಲ. ಹಾಗೊಮ್ಮೆ ಆಗಿದ್ದರೆ ನೀವೇಕೆ ಪುದ್ಗಲದ ಮೋಹದಲ್ಲಿ ಬಿದ್ದಿರುತ್ತಿದ್ದಿರಿ? ಈ ಸಂಸಾರದಲ್ಲಿ ಮಕ್ಕಳು–ಮರಿ, ಅಣ್ಣ–ತಮ್ಮ , ತಂದೆ–ತಾಯಿ ಈ ಎಲ್ಲಾ ಬಂಧುಗಳು ಪುದ್ಗಲ ಸಂಬಂಧಿಗಳು. ಇವರು ಯಾರೂ ಜೀವದ ಸಂಬಂಧಿಗಳಲ್ಲ. ಅರೆ ತಮ್ಮಾ ಜೀವ ಒಂಟಿಯಾಗಿಯೇ ಬಂದಿದೆ. ಒಂಟಿಯಾಗಿಯೇ ಹೋಗುತ್ತದೆ. ದೇವಪೂಜಾ, ಗುರೂಪಾಸ್ತಿ ಸ್ವಾಧ್ಯಾಯ ಸಂಯಮ ತಪ ಮತ್ತು ದಾನ ಇವು ಆರು ಕ್ರಿಯೆ ಹೇಳಿದೆ. ಅಸಿಮಸಿ ಕೃಷಿ ವಾಣಿಜ್ಯ ಶಿಲ್ಪ ವಿದ್ಯೆ ಇವು ಆರು ಆರಂಭ ಕ್ರೀಯೆ ಹೇಳಿದೆ. ಈ ಆರು ಆರಂಭ ಕಾರ್ಯಗಳಿಂದ ಉಂಟಾಗುವ ಪಾಪ, ಕ್ಷಯಿಸಲು ಆರು ಕ್ರಿಯೆ ಆಚರಿಸುವುದು ಅವಶ್ಯಕತೆ ಇದೆ. ಇದು



ವ್ಯವಹಾರದ ಮಾತಾಯಿತು. ಯಥಾರ್ಥವಾಗಿ ಇದರಿಂದ ಮೋಕ್ಷವಿಲ್ಲ. ಇವುಗಳಿಂದ ಐಹಿಕ ಸುಖ ಸಿಕ್ಕೀತು. ಪಂಚೇಂದ್ರಿಯ ಸುಖ ಸಿಕ್ಕೀತು. ಆದರೆ ಮೋಕ್ಷ ಸಿಗದು. ಮೋಕ್ಷ ಯಾವುದರಿಂದ ಸಿಗಬಲ್ಲದು? ಮೋಕ್ಷ ಕೇವಲ ಆತ್ಮ ಚಿಂತನೆಯಿಂದಲೇ ಸಿಗಬಲ್ಲದು. ಉಳಿದ ಯಾವುದೇ ಕಾರ್ಯದಿಂದ, ಯಾವುದೇ ಕ್ರೀಯೆಯಿಂದ, ಯಾವುದೇ ಕಾರಣದಿಂದ ಸಿಗದು.

## ಜಿನವಾಣಿಯ ಮೇಲೆ ಶ್ರದ್ಧೆ

ನಯ, ಶಾಸ್ತ್ರ, ಅನುಭವ ಈ ಮೂರನ್ನು ಸೇರಿಸಿ ಯಾವುದರಿಂದ ಮೋಕ್ಷವಾದೀತೆಂದು ವಿಚಾರಿಸಿರಿ. ತನ್ನ ಅನುಭವ ಏನು? ಭಗವಂತನ ವಾಣಿಯ ಎದುರು ಅದಕ್ಕೆ ಯಾವ ಮೂಲ್ಯವೂ ಇಲ್ಲ. ಭಗವಂತನ ವಾಣಿ ಸತ್ಯವಿದೆ. ಅದರ ಮೇಲೆ ಪೂರ್ಣ ವಿಶ್ವಾಸವಿರಬೇಕು. ಆ ವಾಣಿಯ ಒಂದು ಶಬ್ದವನ್ನು ಗ್ರಹಣ ಮಾಡುವುದರಿಂದಲೇ ಜೀವ ಮುಕ್ತಿಗೆ ಹೋದೀತೆಂದು ಹೇಳಿದೆ.

ಆತ್ಮಚಿಂತನೆಯಿಂದ ಸರ್ವಕಾರ್ಯ ಸಿದ್ಧಿಯಾಗುತ್ತದೆ. ಅದರ ಹೊರತು ಏನೂ ಆಗದು. ಅರೆ ತಮ್ಮಾ! ಬಾಕಿ ಯಾವುದೇ ಕೆಲಸ ಮಾಡಿದರೂ ಪುಣ್ಯಬಂಧ ಆಗುತ್ತದೆ. ಸ್ವರ್ಗ ಸುಖ ಸಿಗುತ್ತದೆ. ಸುಖ ಸಂಪತ್ತು ಎಲ್ಲವೂ ಸಿಗುತ್ತದೆ. ಆದರೆ ಮೋಕ್ಷ ಸಿಗದು. ಮೋಕ್ಷ ಸಿಗಬೇಕಾದರೆ ಆತ್ಮಚಿಂತನೆ ಒಂದೇ ಮಾಡಬೇಕು.

ಸಾರಾಂಶ: ಧರ್ಮಸ್ಯಮೂಲಂ ದಯಾ ಜಿನಧರ್ಮದ ಮೂಲ ಯಾವುದು? ಸತ್ಯ ಮತ್ತು ಅಹಿಂಸೆ. ಬಾಯಿಂದ ಎಲ್ಲರೂ ಸತ್ಯ ಅಹಿಂಸೆ ಎಂದು ಹೇಳುತ್ತಾರೆ. ಪಾಲಿಸುವುದಿಲ್ಲ. ಹಾಗೆ ಹೇಳುವುದರಿಂದ ಹೊಟ್ಟೆ ತುಂಬುತ್ತದೋ? ಭೋಜನ ಮಾಡದೆ ಹೊಟ್ಟೆ ತುಂಬುವುದಿಲ್ಲ. ಈ ಕಾರಣದಿಂದ ಕ್ರಿಯೆ ಮಾಡುವ ಅವಶ್ಯಕತೆ ಇದೆ.

ಎಲ್ಲಾ ಕಾರ್ಯ ಬಿಡು. ಸತ್ಯ ಅಹಿಂಸೆಯನ್ನು ಪಾಲಿಸು. ಸತ್ಯದಲ್ಲಿ ಸಮ್ಯಕ್ತ್ವ ಬರುತ್ತದೆ. ಅಹಿಂಸೆಯಿಂದ ಯಾವ ಜೀವಕ್ಕೂ ದು:ಖ ಉಂಟಾಗುವುದಿಲ್ಲ. ಸಂಯಮ ವ್ಯವಹಾರದ ಮಾತು. ಈ ವ್ಯವಹಾರವನ್ನು ಪಾಲಿಸು. ಸಮ್ಯಕ್ತ್ವ ಧಾರಣೆ ಮಾಡಿರಿ. ಸಂಯಮ ಧಾರಣೆ ಮಾಡಿರಿ. ಆಗ ನಿಮ್ಮ ಕಲ್ಯಾಣ ಆದೀತು. ಇದರ ಹೊರತು ಕಲ್ಯಾಣವಿಲ್ಲ.

ದಿನಾಂಕ ೮–೯–೯೫೫ ಸಂಜೆ ೫–೦೦ ರಿಂದ ೫–೩೦ರವರೆಗೆ.

ಓಂ ಸಿದ್ಧಾಯ ನಮಃ